ಚೋಮನದುಡಿ ಮತ್ತು ಕೆಂಪುಮೀನು (ಚೆಮ್ಮೀನು)
ಒಂದು ತೌಲನಿಕ ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕರು:
ಎಂ.ಎನ್. ನಂದೀಶ

ಮಾರ್ಗದರ್ಶಕರು:
ಡಾ|| ರಾಮೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯ, ಹಂಪಿ. ಮಾನ್ಯತೆ ಪಡೆದಿದೆ)
೨೦೦೭-೦೮

ಚೋಮನದುಡಿ ಮತ್ತು ಕೆಂಪುಮೀನು (ಚೆಮ್ಮೀನು) ಒಂದು ತೌಲನಿಕ ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕರು:

ಎಂ.ಎನ್. ನಂದೀಶ

ಮಾರ್ಗದರ್ಶಕರು:

ಡಾ|| ರಾಮೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯ, ಹಂಪಿ. ಮಾನ್ಯತೆ ಪಡೆದಿದೆ)

೨೦೦೭-೦೮

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೭–೦೮ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಚೋಮನದುಡಿ ಮತ್ತು ಕೆಂಪುಮೀನು (ಚೆಮ್ಮೀನು) ಒಂದು ತೌಲನಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥ ರಾಮೇಗೌಡರವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾಲಯವು ನೀಡುವ ಎ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ದಿನಾಂಕ: 12/9/08

ಎಂ.ಎನ್.ಸತೀಶ

ಅಭ್ಯರ್ಥಿಯ ಸಹಿ

ಪ್ರಮಾಣ ಪತ್ರ

ನಂದೀಶ .ಎಂ.ಎನ್ ಅವರು ಕನ್ನಡ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ "ಚೋಮನದುಡಿ ಮತ್ತು ಕೆಂಪುಮೀನು (ಚೆಮ್ಮೀನು) ಒಂದು ತೌಲನಿಕ ಅಧ್ಯಯನ" ಎಂಬ ನಿಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೧೨-೯-೨೦೦೮

ಮಾರ್ಗದರ್ಶಕರು
ಡಾ॥ ರಾಮೇಗೌಡ
೧೪೪, ಕಾಳೀದಾಸ ರಸ್ತೆ
ಜಯಲಕ್ಷ್ಮೀಪುರಂ
ಮೈಸೂರು-೦೨.

ಚೋಮನದುಡಿ ಮತ್ತು ಕೆಂಪು ಮೀನು (ಚೆಮ್ಮೀನ್)
ಒಂದು ತೌಲನಿಕ ಅಧ್ಯಯನ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಮಾನವ ಸಮಾಜ ಪ್ರಾದೇಶಿಕತೆ, ಭಾಷೆ, ಸಂಸ್ಕೃತಿ, ಧರ್ಮ, ಮುಂತಾದ ಸಂಗತಿಗಳಿಂದ ಛಿದ್ರಗೊಂಡಿದೆ. ಆದರೆ ಮಾನವನ ಮೂಲಭೂತ ಪ್ರವೃತ್ತಿಗಳು ಮತ್ತು ಸಮಸ್ಯೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವೆಂದು ಗೋಚರಿಸಿದರೂ, ಅವು ಆತ್ಯಂತಿಕವಾಗಿ ಸಮಾನತೆಯಿಂದ ಕೂಡಿವೆ. ಈ ಭಿನ್ನತೆಯು ಗೋಚರಿಸುವುದಕ್ಕೆ ಮೇಲೆ ಹೇಳಿದ ಸಂಗತಿಗಳೇ ಮೂಲ ಕಾರಣ. ಮಾನವನ ಇಂತಹ ಮೂಲಭೂತ ಪ್ರವೃತ್ತಿಗಳು ಹಾಗೂ ಸಮಸ್ಯೆಗಳನ್ನು ಅಭಿವ್ಯಕ್ತಿಸುವ ಸಮರ್ಥ ಸಾಧನೆಗಳಲ್ಲಿ ಸಾಹಿತ್ಯವೂ ಒಂದು. ಸಾಹಿತ್ಯಕೃತಿಯೊಂದು ವಿಶಿಷ್ಟ ಸಂದರ್ಭದಲ್ಲಿ, ಒಂದು ದೇಶ, ಕಾಲ, ಸಮಾಜ, ಸಂಸ್ಕೃತಿ, ಮುಂತಾದ ಅಂಶಗಳಿಂದ ರೂಪುಗೊಂಡಿರುತ್ತದೆ. ಅರ್ಥಾತ್ ಕೃತಿಯೊಂದನ್ನು ದೇಶ–ಕಾಲವಿಲ್ಲದೆ ಶೂನ್ಯದಲ್ಲಿ ರಚಿಸಲು ಸಾಧ್ಯವಾಗುವುದಿಲ್ಲ. ಇಂತಹ ವಿಶಿಷ್ಟ ಸಂದರ್ಭದ ಒತ್ತಡವನ್ನು ಮೀರಲಾರದೆ ಹೋದರೆ, ಕಾಲಾಂತರದಲ್ಲಿ ಕೃತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಇಂತಹ ಒತ್ತಡಗಳಲ್ಲಿ ಅಂದರೆ ಸಮಕಾಲೀನತೆಯನ್ನು ಒಳಗೊಂಡೂ ಅದನ್ನು ಮೀರಿ ಮಾನವನ ಮೂಲಭೂತ ಸಮಸ್ಯೆಯ ಗೃಹೀತಗಳನ್ನು ಅಂದರೆ ಸಾರ್ವಕಾಲಿಕೆಯನ್ನು ಅಭಿವ್ಯಕ್ತಿಸುವ ಕೃತಿ, ದೇಶಕಾಲದ ಚೌಕಟ್ಟನ್ನು ಮೀರುತ್ತದೆ. ಇಂತಹ ತತ್ಕಾಲೀನತೆಯನ್ನು, ಸಾಂದರ್ಭಿಕ ವಿಶಿಷ್ಟತೆಯನ್ನು ಜಿಗಿಯುವ ಕೃತಿ ಶ್ರೇಷ್ಠ ಕೃತಿಯಾಗಿರುತ್ತದೆ. ಸಾರ್ವಕಾಲಿಕ ಸತ್ಯವನ್ನು ಪ್ರತಿಬಿಂಬಿಸುತ್ತದೆ. ಇಂತಹ ಕೃತಿ ಬರೆದ ಕರ್ತೃ ಶ್ರೇಷ್ಠ ಲೇಖಕನಾಗುತ್ತಾನೆ.

ಒಂದು ಕೃತಿ ತನಗೆ ತಾನೇ ಶ್ರೇಷ್ಠತೆಯನ್ನೋ ಅಥವಾ ಅಶ್ರೇಷ್ಠತೆಯನೋ ಪಡೆದುಕೊಳ್ಳುವುದಿಲ್ಲ. ಕೃತಿ ತನಗಿಂತ ಹಿಂದೆ ಬಂದ ಒಂದು ಸಾಹಿತ್ಯ ಪರಂಪರೆಯನ್ನು ಗಣಿಸುತ್ತಲೇ, ತನ್ನ ಅಸ್ಮಿತೆಯನ್ನು ಪ್ರಕಟಪಡಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರವೀಂದ್ರನಾಥ ಟಾಗೋರ್ ಅವರು ಹೇಳಿದ ಮಾತು ಪ್ರಸ್ತುತವೆನಿಸುತ್ತದೆ. "ಸಾಹಿತ್ಯವೆಂದರೆ ಭಿನ್ನ ಭಿನ್ನ ಕೃತಿಗಳ ಒಂದು ಮೊತ್ತದಲ್ಲಿ... ಸೀಮಿತ ದೇಶೀಯತೆಯ ಚೌಕಟ್ಟಿನಿಂದ ನಾವೂ ಹೊರಬಂದು ಪ್ರತಿಯೊಬ್ಬ ಲೇಖಕನ ಕೃತಿಯನ್ನು ಅಖಂಡತೆಯ ಒಂದು ಭಾಗವೆಂದು ಆ ಅಖಂಡತೆಯನ್ನು ಮಾನವನ ವಿಶ್ವವ್ಯಾಪ್ತಿ ಸೃಜಲಶೀಲತೆಯ ಒಂದು ರೂಪವೆಂದು ಮತ್ತು ವಿಶ್ವಶಕ್ತಿಯು ವಿಶ್ವಸಾಹಿತ್ಯದ ಮೂಲಕ ಪ್ರಕಟವಾಗುತ್ತದೆಂದೂ ಗ್ರಹಿಸಲು ನಾವು ಸದಾ ಪ್ರಯತ್ನಿಸಬೇಕು".[೧] ಒಂದು ಕೃತಿ ಸಾಹಿತ್ಯ ಎಲ್ಲಾ ಕ್ಷೇತ್ರಕ್ಕೆ ಪ್ರವೇಶವಾಗುತ್ತಿದ್ದಂತೆ ಅದಕ್ಕಿಂತ ಹಿಂದಿನ ಎಲ್ಲಾ ಪರಂಪರೆಯಿಂದ ಈ ಕೃತಿ ವ್ಯಾಖ್ಯಾನಗೊಳ್ಳುತ್ತದೆ. ಹೀಗೆ ಬಂದ ಕೃತಿ ನಿಂತನೀರನ್ನು ಕದಡಬಲ್ಲದು.

ಬೇರೆ ಬೇರೆ ಭಾಷೆಗಳ ಕೃತಿಗಳ ಮೂಲಕವೂ ಒಂದು ಕೃತಿಯನ್ನು ನೋಡಬಹುದು. ಇಲ್ಲಿ ಗಮನಿಸಬೇಕಾಗಿರುವ ಅಂಶವೆಂದರೆ ದೇಶಕಾಲದ ಮೀರುವಿಕೆ. ಈ ದೇಶ, ಕಾಲ ಎಂದರೆ ಒಂದೇ ಭಾಷೆಯ ಸಾಹಿತ್ಯವಲಯಕ್ಕೆ ಸೀಮಿತವಲ್ಲವೆಂಬುದು ನನ್ನ ಅನಿಸಿಕೆ. ಇಂತಹ ದೇಶಕಾಲತೀತವಾದ ಕೃತಿಗಳನ್ನು ಪರಸ್ಪರ ತುಲನೆ ಮಾಡಿದಾ ಒಂದು ಶ್ರೇಷ್ಠ ಸಾರ್ವಕಾಲಿಕತೆಯನ್ನು ಪಡೆದುಕೊಂಡ ಕನ್ನಡದ ಶ್ರೇಷ್ಠ ಕೃತಿ

---

೧. (ಪ್ರವೇಶ : ತೌಲನಿಕ ಅಧ್ಯಯನ : ಸಿ.ಎನ್. ರಾಮಚಂದ್ರ : ಪುಟ ೦೭, ತೌಲನಿಕ ಸಾಹಿತ್ಯಧ್ಯಾಯನ : ಸಂ. ಮಲ್ಲೇಪುರಂ ಜಿ. ವೆಂಕಟೇಶ)

[illegible]

[illegible]

[illegible]

[illegible]

[illegible]

ಕಾರಂತರ 'ಚೋಮನದುಡಿ'. ಚೋಮನದುಡಿ ಒಟ್ಟು ಕನ್ನಡ ಸಾಹಿತ್ಯ ಪರಂಪರೆಯನ್ನು ಮರುವಿಮರ್ಶೆಗೆ ಒಳಪಡಿಸಿದಂತೆ ತಾನೂ ಒಳಪಟ್ಟು ತನ್ನ ವಿಶಿಷ್ಟ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಡಾ. ರಾಗೌ ಅವರು ಈ ಕೃತಿಯನ್ನು "ದಲಿತ ಮಹಾಭಾರತ" ಎಂದು ಕರೆದಿರುವುದು ಚೋಮನದುಡಿಯ ಸಾರ್ವಕಾಲಿಕತೆ ಹಾಗೂ ಶ್ರೇಷ್ಠತೆಗೆ ತೋರ್ಗನ್ನಡಿಯಾಗಿದೆ. ಅಪವರ್ಗದವರು ಈ ಕೃತಿಯ ಕೇಂದ್ರದಲ್ಲಿರುವುದನ್ನು ಗಮನಿಸಬೇಕು. ಅಷ್ಟೇ ಅಲ್ಲ ಚೋಮನದುಡಿಗೆ ಮೊದಲು ಕೆಳವರ್ಗದ ಪಾತ್ರವೊಂದು ಕೇಂದ್ರೀಕೃತವಾದ ಕಾದಂಬರಿ ಕನ್ನಡದಲ್ಲಿ ಇಲ್ಲ.

ಇಂತಹ ಕೃತಿಯ ಅನನ್ಯತೆಯನ್ನು ಈ ಕೃತಿಯ ಅಧ್ಯಯನದಿಂದಲೇ ನೋಡಬಹುದು. ಆದರೆ ಒಟ್ಟು ಪರಂಪರೆಯ ಹಿನ್ನೆಲೆಯಲ್ಲಿ ಕೃತಿಯ ಶ್ರೇಷ್ಠತೆಯನ್ನು ನೋಡುವುದೂ ಒಂದು ವಿಶಿಷ್ಟ ಪ್ರಕ್ರಿಯೆ, ಈ ಕಾರಣದಿಂದ ಈ ಕೃತಿಯನ್ನು ಹೀಗೆ ಬೇರೆ ಭಾಷೆಯ ಕೃತಿಯೊಡನೆ ತುಲನೆ ಮಾಡಿ ನೋಡುವುದು ನನ್ನ ಉದ್ದೇಶ

ನನ್ನ ಗಮನ ಸೆಳೆದ ಮಲೆಯಾಳಂನ 'ತಕಳ್ಳಿ ಶಿವಶಂಕರ ಪಿಳ್ಳೆ' ಅವರ 'ಚೆಮ್ಮೀನು' ಕೃತಿ ನನ್ನ ಕುತೂಹಲದ ಕೇಂದ್ರವಾಯಿತು. ಕನ್ನಡದ ಚೋಮನದುಡಿಯನ್ನು ಅನೇಕ ಬಾರಿ ಓದಿದ್ದ ನನಗೆ ಇವೆರಡೂ ಕೃತಿಗಳನ್ನು ಕುರಿತು ಇನ್ನೂ ವಿಸ್ತೃತ ಅಧ್ಯಯನ ಮಾಡಬೇಕೆನ್ನಿಸಿತು. ಹೀಗೆ ಭಿನ್ನ ಭಾಷೆಗೆ ಸೇರಿದ ಈ ಕೃತಿಗಳು ಮೊದಲಬಾರಿಗೆ ಅಧ್ಯಯನಗೊಳ್ಳುತ್ತಿವೆ ಎಂಬುದು ನನ್ನ ಅನಿಸಿಕೆ.

ಹೀಗೆ ಈ ಎರಡು ಕೃತಿಗಳನ್ನು ಆಯ್ದುಕೊಳ್ಳುವಾಗ ನನಗೆ ಕೆಲವು ಬೇರೆಯ ಕುತೂಹಲದ ಸಂಗತಿಗಳು ಗಮನಸೆಳೆದವು. ಮೊದಲನೆಯದಾಗಿ ತೀರ ಭಿನ್ನ ಭಿನ್ನ ಪರಿಸರ ಭೌಗೋಳಿಕತೆಗೆ ಸೇರಿದ ಈ ಎರಡು ಕೃತಿಗಳ ತುಲನಾತ್ಮಕ ಅಧ್ಯಯನಕ್ಕಿಂತ, ಒಂದೇ ಮೂಲ ಭಾಷಾ ಪರಿವಾರಕ್ಕೆ ಸೇರಿದ ಕೃತಿಗಳನ್ನು ನೋಡುವುದು ತುಂಬಾ ಮುಖ್ಯವಾಗಿ ನನಗೆ ಕಂಡಿತು, ಜೊತೆಗೆ ಆಡಳಿತಾತ್ಮಕವಾಗಿ ಬೇರೆಯ ಪ್ರಭುತ್ವಕ್ಕೆ ಒಳಪಟ್ಟಿದ್ದರೂ, ಒಂದೇ ಪ್ರಾದೇಶಿಕ ಸಾಮ್ಯತೆಯನ್ನು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಸಾಹಿತ್ಯಕವಾಗಿ ಹೊಂದಿರುವ, ಕೇರಳ ಹಾಗೂ ದಕ್ಷಿಣ ಕನ್ನಡದ ಸಂಬಂಧ ಗಮನ ಸೆಳೆಯಿತು. ಕನ್ನಡದಲ್ಲಿ ಮೊದಲ ಕಾದಂಬರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದವು ಎಂಬುದರ ಜೊತೆಗೆ ಕರ್ನಾಟಕದ ಈ ಭಾಗ ಹಾಗೂ ಕೇರಳದ ಭಾಗಗಳು ಸಮುದ್ರತೀರದಿಂದ ಆವರಿಸಲ್ಪಟ್ಟಿದ್ದು ಹಾಗೂ ಬ್ರಿಟಿಷರ ಕಾರಣದಿಂದ ಹೊಸ ಪ್ರಜ್ಞೆಯೊಂದು ಜಾಗೃತವಾಗಿದ್ದು ನನ್ನ ಗಮನ ಸೆಳೆಯಿತು. ತುಳು ಮತ್ತು ಮಲೆಯಾಳಂ ನಡುವಿನ ಭಾಷಿಕ ಸಾಹಿತ್ಯಕ ಸಂಬಂಧ ಆಧುನಿಕ ಭಾಷಾ ವಿಜ್ಞಾನದ ಆಸಕ್ತಿ ವಿಷಯವಾಗಿದೆ. ಕುತೂಹಲಕ್ಕೆ ಯಾರೋ ಒಮ್ಮೆ ಕಾರಂತರನ್ನು ಚೋಮ ಏಕೆ ಈ ರೀತಿ ಗ್ರಾಂಥಿಕ ಕನ್ನಡದಲ್ಲಿ ಮಾತನಾಡುವ ಹಾಗೆ ಬರೆದಿದ್ದೀರಿ ? ಎಂದು ಕೇಳಿದಾಗ ಕಾರಂತರು "ದಕ್ಷಿಣ ಕನ್ನಡದ

ಅಪವರ್ಗದವರು ತುಳು ಅಥವಾ ಕೊಂಕಣಿಯಲ್ಲಿ ಮಾತನಾಡುತ್ತಾರೆ. ನಾನು ಚೋಮನ ಭಾಷೆಯಲ್ಲಿ ಅವನ ನೋವನ್ನು ಅಭಿವ್ಯಕ್ತಿಸಬೇಕೆಂದರೆ, ತುಳುವಿನಲ್ಲಿ ಬರೆಯಬೇಕಾಗಿತ್ತು" ಎಂದಿದ್ದರು.

ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ ವಿಶಿಷ್ಟ ಸಾಮ್ಯತೆಯನ್ನು ಹೊಂದಿರುವ ಈ ಪ್ರದೇಶಗಳ ಇಬ್ಬರು ಲೇಖಕರು ತಮ್ಮ ವಿಶಿಷ್ಟ ಪ್ರತಿಭೆಯ ಹಿನ್ನೆಲೆಯಲ್ಲಿ ತಮ್ಮ ಪ್ರದೇಶದ ಗಾಢ ಸಮಸ್ಯೆಗಳನ್ನು ನೋಡುವ ದೃಷ್ಟಿಕೋನದ ಬಗೆಗಿನ ನನ್ನ ಕುತೂಹಲ ಮತ್ತೊಂದು ಅಂಶ ಪರಸ್ಪರ ಪ್ರಭಾವವಿಲ್ಲದೆಯೂ ಮನುಷ್ಯನ ಮೂಲಭೂತ ಸಾಮಾಜಿಕ ಗ್ರಹಿಕೆಗಳನ್ನು ಅಭಿವ್ಯಕ್ತಿಸುವ ಎರಡು ಶ್ರೇಷ್ಠ ಮನಸ್ಸುಗಳ ಆಲೋಚನೆಯನ್ನು ಈ ಕೃತಿಗಳ ಹಿನ್ನೆಲೆಯಲ್ಲಿ ನೋಡಬಹುದಾಗಿದೆ. ಕೆಲವೊಮ್ಮೆ ಈ ಸಾಹಿತ್ಯಿಕ / ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳು ಅನೇಕ ನೆಲೆಗಳಲ್ಲಿ ಹೆಚ್ಚಾಗಿ ಅಪ್ರಜ್ಞಾಪೂರ್ವಕವಾಗಿ ಆಗುವ ಸಾಧ್ಯತೆ ಇರುತ್ತದೆ. ಇದೊಂದು ಸೂಕ್ಷ್ಮ ಪ್ರಕ್ರಿಯೆ. ಚೋಮನಿಗೆ ಭೂಮಿ ಮುಖ್ಯವಾದರೆ, ಚಂಪನ್‌ಕುಞ್ಞವಿಗೆ ದೋಣಿ ಮುಖ್ಯವಾಗುತ್ತದೆ. ಆದರೆ ಮೇಲುನೋಟಕ್ಕೆ ಕಾಣುವ ಈ ಸಂಗತಿಗಳು ಕಾದಂಬರಿಯ ಸೂಕ್ಷ್ಮ ಅಧ್ಯಯನದಿಂದ ಗೌಣವೆಂದು ಕಂಡುಬರುತ್ತದೆ. ಇದಕ್ಕಿಂತ ಮಿಗಿಲಾಗಿ ಪ್ರಚಲಿತ ಮುಖ್ಯ ಸಮಸ್ಯೆಯೊಂದರ ಮೂಲಕ, ಅಂದಿನ ಸಮಾಜದ ಸ್ವರೂಪವನ್ನು, ಗೃಹೀತಗಳನ್ನು ತೋರಿಸುವುದು ಈ ಕಾದಂಬರಿಗಳ ಸಂಗತಿ ಎಂದು ತೋರಿತು. ಈ ಕಾರಣದಿಂದ ಈ ಎರಡು ಕಾದಂಬರಿಗಳನ್ನು ತೌಲನಿಕ ಅಧ್ಯಯನಕ್ಕೆ ಆರಿಸಿಕೊಂಡೆ.

ಮತ್ತೊಂದು ಉದ್ದೇಶವೆಂದರೆ ಒಂದು ಸಾಹಿತ್ಯ ಕೃತಿ ಒಂದು ಪ್ರಾದೇಶಿಕ ಹಿನ್ನೆಲೆಯಲ್ಲಿಯೇ ರಚನೆಯಾಗುತ್ತದೆ. ಆದರೆ ಆ ಪ್ರಾದೇಶಿಕತೆಯೇ ಕೃತಿಯ ಆತ್ಯಂತಿಕ ಸಂಗತಿಯಲ್ಲ. ಅದು ಪ್ರಾದೇಶಿಕತೆಯನ್ನು ಮೀರಿ ರಾಷ್ಟ್ರೀಯತೆಯನ್ನು, ರಾಷ್ಟ್ರೀಯ ಸಂಸ್ಕೃತಿಯನ್ನು ವ್ಯಾಪ್ತಿಸಲು ಪ್ರಯತ್ನಿಸುತ್ತದೆ. ಇದೊಂದು ಮುಖ್ಯವಾದ ಸಂಗತಿ. ಇಂದು ಸಮಾಜದ ಕೇಂದ್ರ ಪ್ರಜ್ಞೆಯ ಜನ ಸಮಾಜದ ಅಂಚಿನ ಸಂಸ್ಕೃತಿಯನ್ನು ನೋಡುವ ದೃಷ್ಟಿಕೋನ ಇದೆ. ಬಹುಮುಖಿ ಸಂಸ್ಕೃತಿಯನ್ನು ಒಪ್ಪಿಕೊಳ್ಳುತ್ತಲೇ ರಾಷ್ಟ್ರೀಯ ಕೇಂದ್ರ ಪ್ರಜ್ಞೆಯನ್ನು, ಸಮಾಜದ ನಿಯಮದ, ಚೌಕಟ್ಟನ್ನು ನಿರ್ವಹಿಸುವ ಲೇಖಕನ ಪ್ರಜ್ಞೆ ಬೇರೆ ; ಕೇಂದ್ರ ಪ್ರಜ್ಞೆಯ ಹಿನ್ನೆಲೆಯಲ್ಲಿ ಅಂಚಿನ ಸಂಸ್ಕೃತಿಯನ್ನು ಅರ್ಥೈಸುವ ಲೇಖಕನ ಪ್ರಜ್ಞೆ ಬೇರೆ. ಈ ಕೃತಿಗಳಲ್ಲೂ ಇಂಥ ಅಂಶಗಳನ್ನು ಕಾಣಬಹುದು. ಈ ಎರಡು ಕಾದಂಬರಿಗಳಲ್ಲೂ ಇರುವ ಇಂತಹ ಅಂಶಗಳನ್ನು ನೋಡುವುದು ನನ್ನ ಮತ್ತೊಂದು ಉದ್ದೇಶ. ಏಕೆಂದರೆ ಕೇಂದ್ರ ಪ್ರಜ್ಞೆಯ ಮಹಾನ್ ಲೇಖಕರಾದ ಕಾರಂತರು ಹಾಗು ಶಿವಶಂಕರ್ ಪಿಳ್ಳೆಯವರು ಬಹುಮುಖಿ ಸಂಸ್ಕೃತಿಯನ್ನು ನೋಡುವ ರೀತಿ ಕುತೂಹಲ ಭರಿತವಾದುದು. ಈ ಹಿನ್ನೆಲೆಯಲ್ಲಿ '**ದೇಜಗೌ**' ಅವರ ಈ ಹೇಳಿಕೆಯನ್ನು ನೋಡಬಹುದು. "**ಯಾವ ಸಾಹಿತ್ಯ ಪ್ರಕಾರವೇ ಆಗಲಿ, ಭರತಖಂಡದ ಸಂದರ್ಭದಲ್ಲಿ ಎರಡು ಸಂಸ್ಕೃತಿ ಅಥವಾ ತತ್ವಗಳನ್ನು ಪ್ರತಿನಿಧಿಸುತ್ತದೆ. ಒಂದು ಪ್ರಾದೇಶಿಕ ಸಂಸ್ಕೃತಿ ಮತ್ತೊಂದು ಭಾರತೀಯ ಸಂಸ್ಕೃತಿ, ಪ್ರಾದೇಶಿಕ ಸಂಸ್ಕೃತಿ ಭಾರತೀಯ ಸಂಸ್ಕೃತಿ ಒಂದು ಬಾಹುವಷ್ಟೆ**"[೧] ಇಲ್ಲಿ ಅಂಚಿನ ಸಂಸ್ಕೃತಿಯ

ಲೇಖಕರು ಹೇಗೆ ಕೇಂದ್ರ ಪ್ರಜ್ಞೆಯಿಂದ ಪ್ರಾದೇಶಿಕತೆಯನ್ನು ಗ್ರಹಿಸುತ್ತಾರೆ ಎಂಬುದು ಗೊತ್ತಾಗುತ್ತದೆ. ಜೊತೆಗೆ ಹೇಗೆ ಕೃತಿಯಲ್ಲಿ ಪ್ರಾದೇಶಿಕತೆ ಮತ್ತು ರಾಷ್ಟ್ರೀಯತೆ ಇರುತ್ತದೆ ಎಂಬುದು ವಿಶದವಾಗುತ್ತದೆ.

ನನ್ನ ಕುತೂಹಲಕ್ಕೆ ಕಾರಣವಾದ ಮತ್ತೊಂದು ಅಂಶವೆಂದರೆ ಈ ಎರಡು ಕೃತಿಗಳ ರಚನೆಯ ಕಾಲ. ಚೋಮನದುಡಿ ೧೯೩೩ರಲ್ಲಿ, ಚೆಮ್ಮೀನು ೧೯೫೫ರಲ್ಲಿ ರಚನೆಯಾಗಿವೆ. ಈ ಕೃತಿಗಳ ನಡುವೆ ಸುಮಾರು ೨೨ ವರ್ಷಗಳ ಅಂತರವಿದೆ. ಒಂದು ಕೃತಿ ಸ್ವತಂತ್ರ ಪೂರ್ವದಲ್ಲಿ ರಚನೆಗೊಂಡಿದ್ದರೆ ಇನ್ನೊಂದು ಸ್ವಾತಂತ್ರೋತ್ತರದಲ್ಲಿ ರಚನೆಗೊಂಡಿದೆ. ಆದರೆ ಈ ಅಂತರದಲ್ಲಿ ನಮ್ಮ ಸಮಾಜದಲ್ಲಿ ಆಗಿರುವ ಮೂಲಭೂತ ಸಮಸ್ಯೆಗಳ, ಗ್ರಹಿಕೆಗಳ ವ್ಯತ್ಯಾಸವನ್ನು ತೌಲನಿಕವಾಗಿ ಗುರುತಿಸುವುದು ಈ ಪ್ರಬಂಧದ ಮತ್ತೊಂದು ಉದ್ದೇಶವಾಗಿದೆ.

ಯಾವುದೇ ಎರಡು ಭಾಷೆಯ ಎರಡು ಕೃತಿಗಳನ್ನು ತೌಲನಿಕ ಅಧ್ಯಯನ ಮಾಡಲು ಆಯ್ದುಕೊಂಡಾಗ ಆ ಕೃತಿಯ ಕರ್ತೃವಿನ ಜೀವನ ಚರಿತ್ರೆಯು ಮುಖ್ಯವಾಗಿರುತ್ತದೆ. ಆ ಇಬ್ಬರು ಲೇಖಕರು ತಮ್ಮ ಪರಂಪರೆಯನ್ನು ನೋಡುವ ರೀತಿ, ಅವರ ಜೀವನ ವಿಧಾನ, ಸಮಕಾಲೀನ ಸಮಸ್ಯೆಗಳನ್ನು ಅವರು ನೋಡುವ ರೀತಿ, ಅವರ ವೈಚಾರಿಕ ನಿಲುವು, ತಾತ್ವಿಕತೆ ಮುಂತಾದವು ಒಂದು ಕೃತಿಯನ್ನು ಅಧ್ಯಯನ ಮಾಡುವಾಗ ಬಹಳ ಮುಖ್ಯವಾಗುತ್ತದೆ. ಆ ಹಿನ್ನೆಲೆಯಲ್ಲಿ ಇಬ್ಬರು ಲೇಖಕರನ್ನು ಪ್ರತ್ಯೇಕವಾಗಿ ಪರಿಚಯಿಸಲಾಗಿದೆ.

ಎರಡು ಕೃತಿಗಳ ಕಥಾವಲೋಕನವನ್ನು ಸಂಕ್ಷಿಪ್ತವಾಗಿ ಮಾಡಲಾಗಿದೆ. ಇದು ಕೇವಲ ಕತೆಯನ್ನು ಸರಳವಾಗಿ ನೋಡುವ ರೀತಿಯಾಗಿರದೆ ಕಾದಂಬರಿಗಳ ಸಮಗ್ರವಾದ ಹಿನ್ನೆಲೆಯಲ್ಲಿ ಕಥೆಯನ್ನು ಸಂಗ್ರಹಿಸಿ ನೋಡುವ ಒಂದು ಪ್ರಯತ್ನವಾಗಿದೆ. ಇದರಲ್ಲಿ ಕಾರಂತರ ಕೆಲವು ಮುಖ್ಯ ತತ್ವಗಳಿಗೆ ಒತ್ತು ಕೊಡಲಾಗಿದೆ. ಇದನ್ನು ಅಧ್ಯಾಯ ಮೂರರಲ್ಲಿ ನೋಡಲಾಗಿದೆ.

ಎರಡು ಕೃತಿಗಳ ವಸ್ತುವನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಅಲಿಗರಿಯ ಮಟ್ಟದಲ್ಲಿ ಎರಡು ಕಾದಂಬರಿಗಳ ವಸ್ತುವಿನ್ಯಾಸ ಬೇರೆ ಬೇರೆ ಎಂಬಂತೆ ಕಂಡುಬರುತ್ತವೆ. ಆದರೆ ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಕೃತಿ ಸಾರ್ವಕಾಲಿಕವಾದ ಮೌಲ್ಯವನ್ನು ವಸ್ತುವಾಗಿ ಒಳಗೊಂಡಿರುವುದು ಕಂಡುಬರುತ್ತದೆ.

ಒಂದು ಸಮಾನವಾದ ವಸ್ತುವನ್ನು ವಿವಿಧ ಸಮಾಜಗಳು ನೋಡುವ ದೃಷ್ಟಿಕೋನ ಬೇರೆ ಬೇರೆಯಾಗಿರುತ್ತದೆ. ಆ ಸಮಾಜದ ಪ್ರಬಲ ಪ್ರವೃತ್ತಿಯ ಹಿನ್ನೆಲೆಯಲ್ಲಿ ಆ ದೃಷ್ಟಿಕೋನ ರೂಪಿತಗೊಳ್ಳುತ್ತದೆ. ಉದಾ : ಚೋಮನದುಡಿಯಲ್ಲಿ ಚೋಮನಿಗೆ ಭೂಮಿ ಎಂಬುದು ದೊಡ್ಡದಾದರೆ ಚೆಮ್ಮೀನು ಕೃತಿಯಲ್ಲಿ ಚಾಂಪನ್‌ಕುಞ್ಞುವಿಗೆ ದೋಣಿಯ ಒಡೆಯನಾಗುವುದೇ ದೊಡ್ಡದಾಗಿದೆ. ಈ ಕಾರಣದಿಂದ ಸಂಪೂರ್ಣವಾದ ಬಹುಮುಖಿಯಾದ ಅರಿವು ನಮಗೂ ಉಂಟಾಗುತ್ತದೆ. ಹಾಗೆಯೇ ಸಮಾನ ವಸ್ತುಗಳನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಭಿನ್ನ ಸಮಾಜ ವಿಶ್ಲೇಷಿಸುವುದರಿಂದ ಹಾಗೂ ಅಭಿವ್ಯಕ್ತಿಸುವುದರಿಂದ ಆಯಾ ಲೇಖಕನ

---

೧ (ತೌಲನಿಕ ಅಧ್ಯಾಯನ ಅಲ್ಲಿ – ಇಲ್ಲಿ ; ದೇಜಗೌ : ಪುಟ–೨೯ : ತೌಲನಿಕ ಸಾಹಿತ್ಯಧ್ಯಾಯನ ಸಂ : ಮಲ್ಲೇಪುರಂ ಜಿ. ವೆಂಕಟೇಶ)

ಸಂಸ್ಕೃತಿ, ರಾಜಕೀಯ ಕಾಳಜಿಗಳು ನಮ್ಮ ಅರಿವಿಗೆ ಬರುತ್ತವೆ. ಹೀಗೆ ರೂಪಿಸಲಾದ ಕೃತಿಗಳು ಸಹಜವಾಗಿಯೇ ಭಿನ್ನ ತಾತ್ವಿಕತೆಯೊಡನೆ ಬೆಳೆಯುತ್ತವೆ. ಈ ಕೃಯಲ್ಲಿನ ಇಂತಹ ಸಾದೃಶ್ಯ ವೈದೃಶ್ಯಗಳನ್ನು ಅಧ್ಯಾಯ ನಾಲ್ಕರಲ್ಲಿ ವಿಶ್ಲೇಷಿಸಲಾಗಿದೆ.

ಸನ್ನಿವೇಶದಿಂದಲೇ ಒಂದು ಪಾತ್ರದ, ಕಥೆಯ ರೂಪ ನಿರ್ಧಾರವಾಗುತ್ತದೆ. ಸರಿ ತಪ್ಪುಗಳ ವ್ಯಾಖ್ಯಾನ ರೂಪಗೊಳ್ಳಬೇಕಾಗಿರುತ್ತದೆ. ಏಕೆಂದರೆ ಸತ್ಯವೆಂಬುದು ಪ್ರತ್ಯೇಕವಾದುದು. ಈ ಹಿನ್ನೆಲೆಯಲ್ಲಿ ಪಾತ್ರವೊಂದರ ನಡವಳಿ, ಸನ್ನಿವೇಶದಿಂದ ವ್ಯಾಖ್ಯಾನಗೊಳ್ಳುವುದರಿಂದ ಎರಡು ಕಾದಂಬರಿಗಳಲ್ಲಿ ಇರುವ ಸನ್ನಿವೇಶಗಳ ಸಾದೃಶ್ಯ ಮತ್ತು ವೈದೃಶ್ಯಗಳನ್ನು ಅಧ್ಯಯನ ಮಾಡಲಾಗಿದೆ.

ಒಂದು ಅಧ್ಯಾಯದಲ್ಲಿ ಕಾದಾಂಬರಿಯಲ್ಲಿ ಬರುವ ಮುಖ್ಯಪಾತ್ರಗಳನ್ನು ಕುರಿತು ಚರ್ಚಿಸಲಾಗಿದೆ. ಎರಡು ಕಾದಂಬರಿಗಳಲ್ಲಿನ ಸಮಾಜ ಸ್ತ್ರೀಯನ್ನು ಹೇಗೆ ಗ್ರಹಿಸುತ್ತದೆ ? ಈ ಸಮಾಜದ ಸ್ತ್ರೀಕುರಿತ ಗ್ರಹಿಕೆಗಳು ಏನು ? ಎರಡು ಕೃತಿಗಳಲ್ಲಿ ಭಿನ್ನ ಭಿನ್ನ ತಾತ್ವಿಕ ಧ್ವನಿಯೊಡನೆ ಬೆಳೆಯುವ ಪಾತ್ರಗಳ ಆಂತರ್ಯದಲ್ಲಿ ಇರುವ ಸಾಮ್ಯತೆ, ಭಿನ್ನತೆ ಏನು ? "ತೌಲನಿಕ ಸಾಹಿತ್ಯ ಅಧ್ಯಯನದಲ್ಲಿ ಸ್ಥೂಲವಾಗಿ ಸಮಾನವಾಗಿರುವ ವಸ್ತು ವಿಷಯಗಳ ಚಿತ್ರಣಗಳಲ್ಲಿ ಕಂಡುಬರುವ ಭಿನ್ನತೆಗಳೆ ತುಂಬಾ ಮುಖ್ಯ ಹಾಗೂ ಅರ್ಥಪೂರ್ಣ" ಈ ಉಲ್ಲೇಖ ಗಮನಾರ್ಹವಾದುದು. ಅವಿವಾಹಿತೆಯಾದ ಬೆಳ್ಳಿಗೂ ವಿವಾಹಿತೆಯಾದ ಕರುತ್ತಮ್ಮಳಿಗೂ ಮೂಲಭೂತ ವ್ಯತ್ಯಾಸವಿಲ್ಲವೆ ? ದೈಹಿಕ ಮತ್ತು ಮಾನಸಿಕತೆಯ ನಡುವೆ ಶ್ರೇಷ್ಠತೆ ಯಾವುದು ? ಆ ಶ್ರೇಷ್ಠತೆಯ ಮಾನದಂಡ ಯಾವುದು ? ಬೆಳ್ಳಿ ದೈಹಿಕವಾಗಿ ಮನ್ವೇಲ, ಮಿಂಗೇಲರ ಸಂಬಂಧವನ್ನು ಏಕ ಕಾಲದಲ್ಲಿ ಇಷ್ಟ ಪಟ್ಟವಳಲ್ಲವೇ ? ಇದರಲ್ಲಿ ಆಕೆಗೆ ಮಾನಸಿಕ ಜಿಜ್ಞಾಸೆ ಇತ್ತೇ ? ದೈಹಿಕ ಸುಖವೇ ಮುಖ್ಯವಾಗಿದ್ದರೆ ಮರಳಿ ತಂದೆ ಮನೆಗೆ ಯಾಕೆ ಬಂದಳು ? ಗುರುವನಂತೆ ಅಲ್ಲಿಯೇ ಇರಲು ಇದ್ದ ತೊಂದರೆಗಳೇನು ? ಇಂತಹ ದ್ವಂದ್ವಗಳನ್ನು ಗುರುತಿಸುವುದರೊಂದಿಗೆ ಅನನ್ಯತೆಯನ್ನು ನೋಡಲು ಪ್ರಯತ್ನಿಸಲಾಗಿದೆ.

ಅಧ್ಯಾಯ ೬ ರಲ್ಲಿ ಕಾದಂಬರಿ ಭಾಷೆ, ತಂತ್ರ ಮುಂತಾದ ಎಲ್ಲ ಅಭಿವ್ಯಕ್ತಿಗಳನ್ನು ಅಭಿವ್ಯಕ್ತಿ ವಿಧಾನವೆಂದು ನೋಡಲಾಗಿದೆ. ಕಾರಂತರು ಯಾಕೆ ಗ್ರಾಂಥಿಕ ಕನ್ನಡದಲ್ಲಿ ಕಾದಂಬರಿ ಬರೆದರು ? ಅದು ಚೋಮನ ಭಾಷೆಯೇ ? ಕಾದಂಬರಿಯ ತಂತ್ರ ತೀರ ಸರಳವಾಗಿದೆಯಲ್ಲವೇ ? ಸರಳತೆ ಕಾದಂಬರಿಯ ಅವಗುಣವೇ ? ಚೆಮ್ಮೀನಿನಲ್ಲಿ ಲೇಖಕ ಕೇಂದ್ರಿತ ಪ್ರಜ್ಞೆ ಕಾದಂಬರಿಯ ನಡೆಯನ್ನು ನಿಯಂತ್ರಿಸುತ್ತದೆಯೇ ? ಕಾದಂಬರಿಯ ಬೆನ್ನಿಗಿರುವ ಐತಿಹ್ಯದ ಧೃಡೀಕರಣಕ್ಕೆ ಕಾದಂಬರಿ ರೂಪುಗೊಂಡಿದೆಯೇ ? ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಕಾದಂಬರಿಯ ಧೋರಣೆಯೇನು ? ಮತ್ತು ಕಾದಂಬರಿಯ ಹಿನ್ನೆಲೆಯಲ್ಲಿ ಲೇಖಕರ ಧೋರಣೆ ಏನು ? ಕಾರಂತರ ಧೋರಣೆ ವಾಸ್ತವಿಕವಾಗಿದೆಯೇ ? ಮುಂತಾದ ಸಂಗತಿಗಳನ್ನು ಚರ್ಚಿಸಲಾಗಿದೆ.

---

೧ (ಸಿ.ಎನ್. ರಾಮಚಂದ್ರ ; ತೌಲನಿಕ ಸಾಹಿತ್ಯ ಅಧ್ಯಯನ : ಪುಟ ೮: ತೌಲಾನಿಕ ಸಾಹಿತ್ಯಾ ಅಧ್ಯಯನ ಸಂ. ಮಲ್ಲೇಪುರಂ ಜಿ. ವೆಂಕಟೇಶ)

ಒಟ್ಟಾರೆ ಈ ಮೇಲೆ ಹೇಳಲಾದ ಎಲ್ಲ ಅಂಶಗಳನ್ನು ಕುರಿತು ಚೋಮನದುಡಿ ಮತ್ತು ಚೆಮ್ಮೀನು ಕೃತಿಗಳನ್ನು ತುಲನಾತ್ಮಕವಾಗಿ ಅಧ್ಯಾಯನ ಮಾಡಿ ಕಂಡುಬರುವ ಸಾದೃಶ್ಯ ಮತ್ತು ವೈದೃಶ್ಯಗಳು ಏನು ಎನ್ನುವುದು ಈ ನಿಬಂಧದ ಮುಖ್ಯ ವಿಷಯವಾಗಿದೆ.

✦✦✦✦✦✦✦

ಅಧ್ಯಾಯ – ೨

ಲೇಖಕರ ಪರಿಚಯ

ಶಿವರಾಮ ಕಾರಂತ

ಕನ್ನಡ ಸಾಹಿತ್ಯಲೋಕ ಕಂಡ ಅಪ್ರತಿಮ ವೈಚಾರಿಕ, ವಾಸ್ತವಿಕ, ಬರಹಗಾರರೆಂದರೆ, ಕಾರಂತರು. ಅದಮ್ಯ ಉತ್ಸಾಹ, ವಿಶಿಷ್ಟ ಪ್ರತಿಭೆ, ದಣಿವರಿಯದ ಹಂಬಲ, ಸಾಮಾಜಿಕ ಸಮಾನತೆಯ ಅವರ ವ್ಯಕ್ತಿತ್ವದ ತಿರುಳು ಬದುಕಿನ ಎಲ್ಲ ಕ್ಷೇತ್ರಗಳಲ್ಲೂ ಕ್ರಿಯಾಶೀಲರಾಗಿದ್ದವರು.

ಜೀವಿತ ಅವಧಿಯಲ್ಲಿ ಒಬ್ಬ ವ್ಯಕ್ತಿ ಸಾಧಿಸಲು ಸಾಧ್ಯವಿಲ್ಲದನ್ನು ಸಾಧಿಸಿದ ವಿಸ್ಮಯ ವ್ಯಕ್ತಿತ್ವ ಅವರದು. ಆಡು ಮುಟ್ಟದ ಸೊಪ್ಪಿಲ್ಲ ಕಾರಂತರು ಬರೆಯದ ವಿಷಯವಿಲ್ಲ. ಶಿವರಾಮ ಕಾರಂತರೇ ಒಂದು ವಿಶ್ವವಿದ್ಯಾನಿಲಯ ಇವು ಅವರ ಎತ್ತರ – ಬಿತ್ತರಗಳನ್ನು ತೋರಿಸುತ್ತವೆ. ಇಂತಹ ಕಾರಂತರು ಹುಟ್ಟಿದ್ದು ಉಡುಪಿ ಜಿಲ್ಲೆಯ ಕೋಟಾ ಎಂಬ ಊರಿನಲ್ಲಿ. ಅಕ್ಟೋಬರ್ ೧೦, ೧೯೦೨ ರಂದು. 'ಕೋಟಾ' ದ ಪಶ್ಚಿಮಕ್ಕೆ ಸ್ವಲ್ಪದೂರದಲ್ಲೇ ಅರಬ್ಬಿ ಸಮುದ್ರ ಪೂರ್ವಕ್ಕೆ ಪಶ್ಚಿಮ ಘಟ್ಟ ಸಾಲು ಆದರೆ ಕೋಟಾ ಮಾತ್ರ ಸಮತಟ್ಟಾದ ಭೂ ಪ್ರದೇಶ. ಅಲ್ಲಿ ಅಡಿಕೆ ತೋಟ, ಹೊಲ, ಗದ್ದೆ, ಹಾಡಿಗಳು, ಮನೆಗಳು (ಊರೆಂಬ ಈ ಕಲ್ಪನೆ ಅಲ್ಲಿಗೆ ಸಲ್ಲ) ಇವೆ. ಹಂಗಾರ ಕಟ್ಟೆ ಕೋಡಿಯಿಂದ ಕುಂದಾಪುರ ಕೋಡಿಯ ತನಕ ಹನ್ನೆರಡು ಮೈಲುಗಳು ಉದ್ದಕ್ಕೂ ಹಾಸಿರುವ ಸುಂದರವಾದ ಕಡಲಿನ ದಂಡೆಯಿದೆ. ಸಾರಿಗೆ ಸಂಪರ್ಕ ಸಾಧನದ ಕೊರತೆಯಿಂದ ನಿಷ್ಕ್ರಿಯಗೊಂಡಿದ್ದ ಅಲ್ಲಿನ ಜನಜೀವನ ಬ್ರಿಟಿಷರ ಆಳ್ವಿಕೆಯಿಂದ ಕೇವಲ ೨೦ ರಿಂದ ೩೦ ವರ್ಷಗಳ ಅವಧಿಯಲ್ಲಿ ಒಮ್ಮಿದೊಮ್ಮೆಗೆ ಕ್ರಿಯಾಶೀಲವಾಗಿಬಿಟ್ಟಿತು. ಕಾರಂತರ ತಂದೆ ಹೆಸರು ಶೇಷ ಕಾರಂತರು, ತಾಯಿ ಲಕ್ಷ್ಮಿ ಕಾರಂತರ ತಂದೆ–ತಾಯಿಗಳು ಸನಾತನಿಗಳು, ಅಪಾರ ಧರ್ಮಶ್ರದ್ಧೆ ಇದ್ದವರು. ಶೇಷಕಾರಂತ ದಂಪತಿಗಳಿಗೆ ಒಟ್ಟು ೧೪ ಜನ ಮಕ್ಕಳು. ಅವರಲ್ಲಿ ನಾಲ್ಕು ಜನ ಮಕ್ಕಳು ಬಾಲ್ಯದಲ್ಲಿಯೇ ಸಾವನ್ನಪ್ಪಿದರು ಉಳಿದವರಲ್ಲಿ ೮ ಜನ ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಕಾರಂತರ ಪೂರ್ವಿಕರು ತುಂಬಾ ಬಡತನದಲ್ಲಿ ಬೆಳೆದವರು. ಕಾರಂತರು ಜನಿಸುವ ಹೊತ್ತಿಗೆ ಅವರ ಮನೆಯಲ್ಲಿ ಸ್ವಲ್ಪ ಅನುಕೂಲಕರವಾದ

ಸ್ಥಿತಿ ನೆಲೆಸಿತ್ತು. "ಶೇಷ ಕಾರಂತರಿಗೆ ಮಕ್ಕಳೊಡನೆ ಅಂತಹ ಸಲುಗೆಯೇನು ಇರಲಿಲ್ಲ. ಮಕ್ಕಳು ತಾಯಿ ಮತ್ತು ಅಜ್ಜಿಯರ ಮೂಲಕ ತಮ್ಮ ತಂದೆಗೆ ಬೇಡಿಕೆ ಸಲ್ಲಿಸಬೇಕಾಗುತ್ತಿತ್ತು."[೧] ತಾಯಿ, ಅಜ್ಜಿ ತುಂಬಾ ಕಷ್ಟದಲ್ಲಿ ಬೆಳೆದವರು. ಅಪಾರ ಶ್ರದ್ಧೆ ಭಕ್ತಿಗಳ ಜೀವನ ಅವರದು. ಮಕ್ಕಳ ತುಂಟತನ, ಹಿಂಸೆಗಳಿಗೆ ತಾಯಿ ಮತ್ತು ಅಜ್ಜಿ ತಮ್ಮ ಜಪತಪಗಳನ್ನು ಅರ್ಧರ್ಧ ತಾಸು ಹೆಚ್ಚಿಸಿ, ಮಕ್ಕಳ ತಪ್ಪಿಗೆ ಕ್ಷಮೆಯಾಚಿಸುತ್ತಿದ್ದರು. ಈ ಕಾರಣದಿಂದಲೇ ಅವರ ಬಹುತೇಕ ಕಾದಂಬರಿಗಳಲ್ಲಿಯ ಸ್ತ್ರೀಯ ಈ ಶ್ರದ್ಧೆ, ನಂಬಿಕೆಯಲ್ಲಿ ನಿಂತಿರುತ್ತಾರೆ.

ಕಾರಂತರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕಲಿತಿದ್ದು 'ಐ'ಗಳ ಮಠದಲ್ಲಲ್ಲ. ಸರ್ಕಾರಿ ಶಾಲೆಯಲ್ಲಿ, ಎರಡು ಮೂರು ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರು. ತದನಂತರ ಉಡುಪಿ ತಾಲ್ಲೂಕು ಬೋರ್ಡಿನಲ್ಲಿ ಸ್ವತಂತ್ರ ಶಾಲಾ ಕಟ್ಟಡದಲ್ಲಿ ಶಿಕ್ಷಣವನ್ನು ಮುಂದುವರೆಸಿದರು.

ಸುತ್ತಲಿನ ನಿಸರ್ಗದೊಂದಿಗೆ ಬೆರೆತು ಬಾಲ್ಯ ಹಾಗೂ ಪ್ರಾಥಮಿಕ ಶಿಕ್ಷಣ ಮುಗಿಯಿತು. ೧೯೨೧ರಲ್ಲಿ ಪ್ರೌಢಶಾಲೆಯ ಓದಿಗೆ ಕೋಟದಿಂದ ಎರಡು ಮೈಲಿ ದೂರದ ಕುಂದಾಪುರಕ್ಕೆ ತೆರಳಿದರು. ಅಲ್ಲಿ ಎಂಟು ವರ್ಷ ಕಾಲ ಅಭ್ಯಾಸ ಮಾಡಿದರು. ಕಾರಂತರು ಹುಟ್ಟಿ ಬೆಳೆದ ಬ್ರಾಹ್ಮಣ ಸಮಾಜದ ನಂಬಿಕೆಗಳು, ಆಚಾರಗಳು ಕಾರಂತರ ಮೇಲೆ ಪ್ರಭಾವ ಬೀರಿದ್ದವು. ಕಾರಂತರ ಬಾಲ್ಯದ ನಂಬಿಕೆಗಳು ಇದರಿಂದ ಪ್ರಭಾವಿತವಾಗಿದ್ದವು. ಆದರೆ ಮನೆಯ ಪರಿಸರದಿಂದ ದೂರದ ಕುಂದಾಪುರದಲ್ಲಿನ ಪ್ರೌಢಶಾಲಾಶಿಕ್ಷಣ ಅವರಲ್ಲಿ ಮಹತ್ತರ ಬದಲಾವಣೆಯನ್ನುಂಟುಮಾಡಿತು. ಅಲ್ಲಿಯ ವಿಭಿನ್ನ ಜಾತಿಯ ಗೆಳೆಯರ ಕಾರಣದಿಂದಲೇ ಕೋಟದ ಮಹಾಮಾನಸಿಕ ಜಗತ್ತಿನ ಆವರಣ ಬದಲಾಗುತ್ತಾ ಬಂತು. ಎಂಟು ವರ್ಷಗಳ ಕಾಲ ಕುಂದಾಪುರದಲ್ಲಿ ನೆಲೆಸಿದ್ದ ಕಾರಂತರಿಗೆ ಅಷ್ಟರಲ್ಲಿ ಜಾತಿ ವಿಚಾರದಲ್ಲಿ ಅವರ ಮನಸ್ಸಿನಲ್ಲಿ ಸಂಕೋಚಭಾವ ಕಳಚಿತು.

೧೯೨೦ ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಗೊಂಡ ಕಾರಂತರು ಅನಂತರ ಮಂಗಳೂರು ಸರ್ಕಾರಿ ಕಾಲೇಜನ್ನು ಸೇರಿದರು. ವಿಜ್ಞಾನ ಮತ್ತು ಗಣಿತಗಳನ್ನು ಐಚ್ಛಿಕವಾಗಿ ತೆಗೆದುಕೊಂಡರು. ೧೯೨೧ ರ ಫೆಬ್ರವರಿಯಲ್ಲಿ ಓದನ್ನು ನಿಲ್ಲಿಸಿ ಅಸಹಕಾರ ಚಳುವಳಿಗೆ ದುಮುಕಿದರು. ಆಗ ಕಾರಂತರಿಗೆ ೯ ವರ್ಷ ವಯಸ್ಸು. ಮಹಾತ್ಮ ಗಾಂಧೀಜಿಯವರ ಬೋಧನೆ ಪ್ರೇರಣೆಯಾಯಿತು.

ಕಾರಂತರು ಗಾಂಧಿ ತತ್ವದಿಂದ ಪ್ರಭಾವಿತರಾದರೆಂದರೆ ಅದರಲ್ಲಿ ತೀರ 'ರ್‍ಯಾಷಿನಲಿಸ್ಟ' ಧೋರಣೆ ಹೇಗೆ ಬಂತೆಂದು ಅನುಮಾನ ಹುಟ್ಟಬಹುದು. ಆದರೆ ಕಾರಂತರು ಅಪ್ಪ ಹಾಕಿದ ಆಲದ ಮರಕ್ಕೆ ಎಂದೂ ಜೋತುಬಿದ್ದವರಲ್ಲ. ಅವರ ಇಡೀ ಬದುಕು ಪ್ರಯೋಗಗಳಿಂದ ಕೂಡಿದೆ. ಅನುಭವ ಬೆಳೆದಂತೆಲ್ಲ ಅವರು ಹಲವು ಬಾರಿ ತಮ್ಮ ಹಿಂದಿನ ನಿಲುವುಗಳನ್ನು ಬದಲಾಯಿಸಿಕೊಂಡಿದ್ದಾರೆ. ಒಮ್ಮೆ ಕಣ್ಣು ಮುಂದೆ ಅವರ ಚಿತ್ರವನ್ನು ತಂದುಕೊಂಡರೆ ಗೊತ್ತಾಗುತ್ತದೆ. ಮೇಲ್ನೋಟಕ್ಕೆ ತೀರ ಸಂಪ್ರದಾಯಸ್ಥ ಭಾರತೀಯರಾದ ಜುಬ್ಬ

ಕಚ್ಚೆ ಧರಿಸುತ್ತಿದ್ದ ಕಾರಂತರ ಆಲೋಚನೆ ಮಾತ್ರ ಕ್ರಾಂತಿಕಾರಿಯಾಗಿರುತ್ತಿತ್ತು. ಆ ಕ್ರಾಂತಿಕಾರತ್ವವು ಸಮಸ್ಥಿತಿಯದ್ದಾಗಿರುತ್ತಿತ್ತು. ಎಂಬುದು ಅವರ ಬರವಣಿಗೆಗಳನ್ನು ನೋಡಿದರೆ ತಿಳಿಯುತ್ತದೆ.

"ಲಭ್ಯವಿರುವ ಮಾಹಿತಿಯ ಪ್ರಕಾರ ಕಾರಂತರು ಮೊದಲು ೧೯೨೧ರಲ್ಲಿ ಮರಾಠಿಯ ಪ್ರಸಿದ್ಧ ನಾಟಕಕಾರ ರಾಮಗಣೇಶ ಗಡಗರಿಯವರ **ಏಕಚ್ ಪ್ಯಾಲರ್** ನಾಟಕವನ್ನು ಕನ್ನಡಕ್ಕೆ **ನಿಶಾಮಹಿಮ** ಎಂದು ರೂಪಾಂತರ ಮಾಡಿದರು. ಅದು ಕುಂದಾಪುರದಲ್ಲಿ ೧೯೨೧ ರಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ರಾಷ್ಟ್ರೀಯ ಪರಿಷತ್ತಿನ ಸಮಾವೇಶದಲ್ಲಿ ಅಭಿನಯಿಸಲೋಸ್ಕರ ಬರೆದ ರೂಪಾಂತರವಾಗಿತ್ತು."[೧]

ಕಾರಂತರು ಸುಮಾರು ೪೨೧ ಕೃತಿಗಳನ್ನು ಬರದಿದ್ದಾರೆ. ಎಂದು ಬಿ. ಮಾಲಿನಿಮಲ್ಯ ಅವರು ಹೇಳಿದ್ದಾರೆ. ಈ ವಿಸ್ತೃತ ಸಂಖ್ಯೆಯ ಬರವಣಿಗೆಯಲ್ಲಿ ಎಲ್ಲಾ ಕ್ಷೇತ್ರಗಳನ್ನು ಕುರಿತು ಬರವಣಿಗೆಗೆಳು ಇವೆ. ಸುಮಾರು ಎಪ್ಪತ್ತಕ್ಕೂ ಹೆಚ್ಚು ನಾಟಕಗಳು, ಯಕ್ಷಗಾನ, ಶಿಲ್ಪಕಲೆ, ಚಿತ್ರ ಕಲೆಗೆ ಸಂಬಂಧಿಸಿದಂತೆಯೂ ಬರೆದಿದ್ದಾರೆ.

೧ (ಶಿವರಾಮಕಾರಂತ ; ಮಾಲಿನಿಮಲ್ಯ ; ಪುಟ ೩೦)

ಆದರೆ [illegible] ನಾಡಿನಲ್ಲಿ ಮಿಕ್ಕೆಲ್ಲ ಬರಹಗಳಿಗಿಂತ ಕಾದಂಬರಿ ಬರಹವೇ ನಾಡಿನ ಸಾಮಾನ್ಯ ಓದುಗನಿಂದ, ವಿಮರ್ಶಕರವರೆಗೆ ಆಕರ್ಷಿಸಿದ್ದು. ಕಾರಂತರು ಸುಮಾರು ೪೫ ಕಾದಂಬರಿಗಳನ್ನು ಬರೆದಿದ್ದಾರೆ. ಇಷ್ಟೊಂದು ಪ್ರಮಾಣದಲ್ಲಿ ಗಂಭೀರವಾಗಿ ಕಾದಂಬರಿ ಬರೆಯಬಹುದು ಎಂಬುದು ಅನೇಕರಿಗೆ ಅನುಮಾನ, ಆದರೆ ಕಾರಂತರ ಬದುಕಿನ ಅನುಭವ ವಿಸ್ತಾರ.

ಕನ್ನಡ ಕಾದಂಬರಿ ಪ್ರಕಾರಕ್ಕೆ ಮೊದಲ ಸ್ವತಂತ್ರ & ಮಹತ್ವ ಪೂರ್ಣ ಕಾದಂಬರಿ ಇಂದಿರ ಬಾಯಿಯನ್ನು ಬರೆದ ಕಾದಂಬರಿಕಾರ ಗುಲ್ವಾಡಿ ವೆಂಕಟರಾಯರು ದಕ್ಷಿಣ ಕನ್ನಡ ಜಿಲ್ಲೆಯವರು. ರೋಹಿಣಿ ಮತ್ತು ವಾಗ್ದೇವಿ ಮುಂತಾದ ಕಾದಂಬರಿ ಬರೆದ ಅಣ್ಣಾಜಿರಾಯರು ಮತ್ತು ಬೋಳಾರ ಬಾಬೂರಾಯರು ದಕ್ಷಿಣ ಕನ್ನಡದವರೆ ಸ್ತ್ರೀಪರ ನಿಷ್ಠೆಯಿಂದ ಕೂಡಿರುವ ಸಾಮಾಜಿಕ ಕಾದಂಬರಿಗಳು ಹಾಗೂ ತಮ್ಮ ಮನೆಯಲ್ಲಿ ಮತ್ತು ಸುತ್ತಲಿನ ಪರಿಸರದಲ್ಲಿ ಅವರು ಕಂಡ ಶ್ರದ್ಧಾ ನಿಷ್ಠ ಸ್ತ್ರೀಯರ ಬದುಕು ಕಾರಂತರನ್ನು ತುಂಬಾ ಆಕರ್ಷಿಸಿದ್ದು ಸಹವಾಗಿಯೇ ಇದೆ. ಆ ಕಾರಣದಿಂದಲೇ ಮೇಲ್ಕಂಡ ಧೋರಣೆಗೆ ಸಂಬಂಧಿಸಿದ ವಸ್ತುಗಳನ್ನು ಅವರ ಆರಂಭದ ಕಾದಂಬರಿಗಳಾದ **ನಿರ್ಭಾಗ್ಯ ಜನ್ಮ** (೧೯೨೫) **ಕನ್ಯಾಬಲಿ** ಅಥವಾ **ಸೂಳೆಯ ಸಂಸಾರ** (೧೯೨೯–೩೦)ಗಳು ಒಳಗೊಂಡಿವೆ. ಇವುಗಳನ್ನು ಕಾರಂತರು ತಮ್ಮ ಪತ್ರಿಕೆ **ವಸಂತ**ದಲ್ಲಿ ಪ್ರಕಟಿಸಿದರು.

ಕನ್ನಡದಲ್ಲಿ ಅನುವಾದಗೊಂಡಿದ್ದ ಆ ಕಾಲದ ಬಂಗಾಲಿ ಕಾದಂಬರಿಗಳು ಕಾರಂತರ ಮೇಲೆ ತುಂಬ ಪರಿಣಾಮವನ್ನು ಉಂಟು ಮಾಡಿದವು. ಅಲ್ಲಿನ ಕಥನದ ರೀತಿ, ರಮಣೀಯತೆ, ಅದ್ಭುತವೆನ್ನಬಹುದಾದ ರಂಜನೆಗಳು, ಕಾರಂತರನ್ನು ಆಕರ್ಷಿಸಿದವು. ತತ್ಪರಿಣಾಮವಾಗಿ **ವಸಂತ** ಪತ್ರಿಕೆಯಲ್ಲಿ **ವಿಚಿತ್ರಕೂಟ** (೧೯೨೪) ಹಾಗು **ಭೂತ** (೧೯೨೧) ಪತ್ತೇದಾರಿ ಕಾದಂಬರಿಗಳನ್ನು ಪ್ರಕಟಿಸಿದರು. ಕಾರಂತರ ಮೊಟ್ಟ ಮೊದಲ ಕಾದಂಬರಿ **ವಿಚಿತ್ರ ಕೂಟ** ವಸ್ತುವಿನ ದೃಷ್ಟಿಯಲ್ಲಿ ಅಂತಹ ಮಹತ್ತರ ಕಾದಂಬರಿಯಲ್ಲದಿದ್ದರೂ ಕಾರಂತರ ಕಥನ ಶೈಲಿ ತುಂಬ ಸೊಗಸಾಗಿದೆ. ಪತ್ತೇದಾರಿ ಕಾದಂಬರಿಯೊಂದರ ಸಿದ್ಧಮಾದರಿಯಂತೆ ಈ ಕಾದಂಬರಿ

[illegible]

ಇದೆ. ಜನರಂಜನೆಗಾಗಿ ಪತ್ರಿಕೆಯ ಜನಪ್ರಿಯತೆಗಾಗಿ ಇಂಥದೊಂದು ಕಾದಂಬರಿಯನ್ನು ಪ್ರಕಟಿಸಿದೆ ಎನ್ನುವ ಕಾರಂತರ ಸ್ವತಃ ಹೇಳಿಕೆಯನ್ನು ಬದಿಗೊತ್ತಿ ನೋಡಿದರೆ ಕಾದಂಬರಿಕಾರರ ಒಳಮನಸ್ಸು ಗಂಭೀರವಾಗಿಯೇ ಚಿಂತನೆಯೊಂದನ್ನು ಹೇಳಲು ಹೊರಟಿರುವುದು ಗುಪ್ತವಾಗಿಯೇನೂ ಉಳಿದಿಲ್ಲ. ಕಾದಂಬರಿಯ ಕೊನೆಯಲ್ಲಿ 'ಕಠೋರ :– "ನೆರೆದಿರುವ ಮಿತ್ರರೇ ಇಂದು ನಿಮ್ಮೆಲ್ಲರ ಪ್ರತಿಜ್ಞೆಯ ಅವಧಿ ಮುಗಿಯಿತು. ವಿದ್ಯಾವಂತರಾದ ನೀವೆಲ್ಲರೂ ಧನದಾಸೆಗೆ ಮರುಳಾಗಿ ನನ್ನ ಅಜ್ಞಾನುವರ್ತಿಗಳಾಗಿದ್ದು. ಯಾವ ಕೆಲಸವನ್ನು ಮಾಡಲು ಅಂಜದವರಾಗಿದ್ದರಿ..... ನಿಮ್ಮಿಂದ ತಪ್ಪು ಮಾಡಿಸಿದ ಪಾಪವು ನನ್ನ ಪಾಲಿಗೆ ಸೇರುವುದು.' ಇದು ಜಗತ್ತಿನಾದ್ಯಾಂತ ಹುಟ್ಟಿಕೊಂಡಿರುವ ಇಂಥ ವಿಚಿತ್ರವೂ ವಿಲಕ್ಷಣವೂ ಆಗಿರುವ ಭಯೋತ್ಪಾದಕ ಕೂಟಗಳ ನೆನಪನ್ನು ತರುತ್ತದೆ. ಕಾದಂಬರಿಯ ನಾಯಕನಾದ 'ಕಠೋರನಿಗೆ ಆದಂತೆ ಭಯೋತ್ಪಾದಕರಿಗೆ ಜ್ಞಾನೋದಯುವಾಗಬಾರದೆ ಎನಿಸುತ್ತದೆ.

ಮೊದಲೇ ಉಲ್ಲೇಖಿಸಿದ ಹಾಗೆ ಕಾರಂತರು ಸುಮಾರು ೪೫ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಅತ್ಯಂತ ಪ್ರಸಿದ್ಧವಾದ ಅನೇಕ ಕಾದಂಬರಿಗಳು ಅವರಿಗೆ ಕೀರ್ತಿ, ಪ್ರಶಂಸೆಗಳನ್ನು ತಂದು ಕೊಟ್ಟವು. ಅವುಗಳು ಕನ್ನಡ ಸಾಹಿತ್ಯದಲ್ಲಿ ಇನ್ನು ಚರ್ಚಿತ ವಿಷಯವಾಗಿರುವುದೇ ಅವುಗಳ ಶ್ರೇಷ್ಟತೆಗೊಂದು ಮಾನದಂಡ. ಕಾರಂತರಿಗೆ ಕಾದಂಬರಿ ಲೋಕದಲ್ಲಿ ವಿಶಿಷ್ಟಸ್ಥಾನ ಕಲ್ಪಿಸಿದ ಕೃತಿಯೆಂದರೆ **ಚೋಮನದುಡಿ**.

ಕಾರಂತರ ತುಂಬ ಪ್ರಸಿದ್ಧ ಮತ್ತೊಂದು ಕೃತಿಯೆಂದರೆ ೧೯೪೧ ರಲ್ಲಿ ಪ್ರಕಟವಾದ **'ಮರಳಿಮಣ್ಣಿಗೆ'**, ಆಂಗ್ಲ ಕಾದಂಬರಿಕಾರ್ತಿ **'ಫರ್ಲ್‌ಬಕ್ ಎಂಬಾಕೆಯ ಗುಡರ್ಥ್'** ಕಾದಂಬರಿಯಿಂದ ಪ್ರಭಾವಿತರಾಗಿ ರಚಿಸಿದ್ದುದಾಗಿದೆ. ಆದರೆ ಈ ಕೃತಿ ಅದರ ರೂಪಾಂತರವಲ್ಲ. ಕಳೆದ ಒಂದು ಶತಮಾನದಲ್ಲಿ ನಮಗೆ ದೊರಕಿದ ಆಧುನಿಕತೆ, ನಾಗರೀಕತೆಯಿಂದ ಜೀವನದಲ್ಲಿ ಆಗುವ ಪಲ್ಲಟಗಳ ಅದ್ಭುತ ಸಮಾವೇಶ ಈ ಕೃತಿಯ ವಸ್ತು ಮೂರು ತಲೆಮಾರಿನ ಕತೆಯನ್ನು ಒಳಗೊಂಡ ಈ ಕಾದಂಬರಿಯಲ್ಲಿ ಶಿವರಾಮ ಐತಾಳರ ಮಗ 'ಲಚ್ಚ' ತನಗೆ ತೀರ ಹೊರತಾದ ಆಗ ತಾನೆ ಆಗಮಿಸಿದ ಆಧುನಿಕತೆಗೆ ಬಲಿಯಾಗುತ್ತಾನೆ. ಆಧುನಿಕತೆಯನ್ನು ಅರಗಿಸಿಕೊಳ್ಳುವುದು ಅವನಿಗೆ ಕಷ್ಟವಾಗುತ್ತದೆ. ಆದರೆ 'ಲಚ್ಚ'ನ ಮಗ ರಾಮನಿಗೆ ಅದು ಅರಗಿಸಿಕೊಳ್ಳುಬಲ್ಲ ವಿಷಯ ಯಾಕೆಂದರೆ ಆಧುನಿಕತೆ ರಾಮ ಹುಟ್ಟುವ ಮೊದಲೇ ಬಂದಿದೆ. ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಮಾತ್ರ ಆಧುನಿಕತೆಗೆ ತಮ್ಮನ್ನು ತೆರೆದುಕೊಳ್ಳದೆ, ತೆರೆದುಕೊಂಡರೂ ಮುಕ್ತವಾಗಿರದೆ, ಗುಪ್ತವಾಗಿ ಹರಿಯುವ ಸಂಸ್ಕೃತಿಯ ಸ್ಥೂಲ ರೂಪಗಳಾಗಿ ಕಾಣಿಸಿಕೊಳ್ಳುತ್ತಾರೆ. ಪಾರೋತಿ, ಸರಸೋತಿ, ನಾಗವೇಣಿಯವರು ಅಂತಹ ಪಾತ್ರಗಳು, ಅರ್ಥಪೂರ್ಣವಾದ ಪ್ರಕೃತಿವರ್ಣನೆ, ಸಂಯಮಯುಕ್ತವಾದ ವಿಸ್ತಾರ, ಅಗಾಧ ಪಾತ್ರಪೋಷಣೆ, ಕಾದಂಬರಿಯ ಪ್ರಮುಖ ಗುಣವಾಗಿದೆ. ಒಂದರ್ಥದಲ್ಲಿ ಈ ಕಾದಂಬರಿ ಕಾರಂತರ ಪ್ರಾತಿನಿಧಿಕ ಕಾದಂಬರಿ ಎಂದು ಹೇಳಬಹುದು. ಅವರ ಚಿಗುರಿದ

ಕನಸು, ಕರುಳಿನ ಕರೆ, ಮುಂತಾದ ಬಹುತೇಕ ಕಾದಂಬರಿಗಳಲ್ಲಿ ಅವರಿಗೆ ವಾಪಸ್ಸು ಮಣ್ಣಿನ ಸೆಳೆತವೇ ಪ್ರಮುಖವಾಗಿದೆ ಎನ್ನುವುದು.

೧೯೪೩ರಲ್ಲಿ ಪ್ರಕಟವಾದ **ಬೆಟ್ಟದಜೀವ** ಕಾರಂತರ ಇನ್ನೊಂದು ಪ್ರಮುಖ ಕೃತಿ, ಮನುಷ್ಯ ಮತ್ತು ನಿಸರ್ಗದೊಡನೆ ನಿರಂತರ ಹೋರಾಟದ ಅತ್ಯುತ್ತಮ ಮಾದರಿ ಈ ಕೃತಿ. ಕೃತಿಯಲ್ಲಿ ಕಾರಂತರೇ ನಿರೂಪಕನ ಹಾಗೂ ವೀಕ್ಷಕನ ಪಾತ್ರವಾಗಿರುವುದು ವಿಶೇಷ. ಕಾರಂತರ ಕಾದಂಬರಿಗಳಲ್ಲಿ ತಂತ್ರಕ್ಕೆ ಅಂತಹ ಪ್ರಾಮುಖ್ಯತೆಯೇನು ಇಲ್ಲ ಎನ್ನುವರಿಗೂ ಕೂಡ ತುಂಬ ಇಷ್ಟವಾದ ಕೃತಿಯೆಂದರೆ ೧೯೬೦ ರಲ್ಲಿ ಪ್ರಕಟವಾದ **ಅಳಿದ ಮೇಲೆ** ಅವರ ಪ್ರಸಿದ್ಧ ಕೃತಿಗಳಲ್ಲಿ ಇದು ಒಂದು. ಜೀವನದ ಹೋರಾಟದಲ್ಲಿ ಸೋಲು ಮತ್ತು ಗೆಲುವಿನ ಲೆಕ್ಕಚಾರವೇನು ? ಎಂಬ ಪ್ರಶ್ನೆ ನಮ್ಮನ್ನು ಬಲವಾಗಿ ಕಾಡುತ್ತದೆ. ಕಾದಂಬರಿಯ ಫ್ಲಾಶ್‌ಬ್ಯಾಕ್ ತಂತ್ರ ತುಂಬಾ ಯಶಸ್ವಿಯಾಗಿದೆ.

ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ **'ಮೂಕಜ್ಜಿಯ ಕನಸು' ಸ್ವಪ್ನದ ಹೊಳೆ, ಕಣ್ಣಿದ್ದೂ ಕಾಣರೂ, ಕನ್ನಡಿಯಲ್ಲಿ ಕಂಡಾತ, ಧರ್ಮರಾಯಸಂಸಾರ, ಅಂಜಿದ ಅಪರಂಜಿ, ಔದಾರ್ಯದಉರುಳಲ್ಲಿ, ಕುಡಿಯರಕೂಸು ಎಂಬಂತಹ ಉತ್ತಮ ಕಾದಂಬರಿಗಳು, ಹಸಿವು, ಹಾವು ಮುಂತಾದ ಸಣ್ಣ ಕಥಾ ಸಂಕಲನಗಳು, ಸಾವಿರ ಮಿಲಿಯ, ಗರ್ಭಗುಡಿ, ಮುಕ್ತದ್ವಾರ,** ದಂತಹ ನಾಟಕಗಳು, ರಾಷ್ಟ್ರಗೀತ ಸುಧಾರಕ ಎಂಬ ಕವನ ಸಂಕಲನ ಹೀಗೆ ಸಮೃದ್ಧ ಸಾಹಿತ್ಯ ಕೃಷಿಯನ್ನು ಕಾರಂತರು ಮಾಡಿದ್ದಾರೆ. ಅವು ಒಳಗೊಂಡಿರುವ ಜೀವನ ಪರ ಮೌಲ್ಯ, ವೈಚಾರಿಕತೆ, ಆಳ, ವಿಸ್ತಾರಗಳು, ಕಾರಂತರಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಅನನ್ಯತೆಯನ್ನು ಕಲ್ಪಿಸಿವೆ.

ತಕಳೀ ಶಿವಶಂಕರ ಪಿಳ್ಳೆ

ಭಾರತದ ೧೯–೨೦ನೇ ಶತಮಾನದ ಸಾಹಿತ್ಯಲೋಕದ ಗಣ್ಯಾತಿಗಣ್ಯರಲ್ಲಿ ತಕಳೀ ಶಿವಶಂಕರ ಪಿಳ್ಳೆ ಅವರದು ಎದ್ದು ಕಾಣುವ ಹೆಸರು. ಭಾರತದಲ್ಲಿ ಮೊದಲು ಆಧುನಿಕ ಪ್ರಕಾರ ತನ್ನರೂಪ ಪಡೆದುಕೊಳ್ಳತೊಡಗಿದ್ದು ಪಶ್ಚಿಮ ಬಂಗಾಳದಲ್ಲಿ ಅದು ಆಧುನಿಕ ಭಾರತದ ಕ್ರಿಯಾಶೀಲ ಕೇಂದ್ರವಾಗಿತ್ತೆಂದರೆ ಅತಿಶಯೋಕ್ತಿಯೇನಲ್ಲ. ಅದಕ್ಕೆ ಕಾರಣವೂ ಇದೆ. ಪಶ್ಚಿಮಬಂಗಾಳವೇ ಆಂಗ್ಲರ ಮುಖ್ಯ ಪ್ರಥಮ ನೆಲೆಯಾಗಿತ್ತು. ಮುಂದೆ ಅಲ್ಲಿ ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಮಹತ್ತರ ವಿಪ್ಲವಗಳು ಜರುಗಿದವು. ಭಾರತದಲ್ಲಿ ಪಶ್ಚಿಮ ಬಂಗಾಳ ಭಾರತದ ಎಲ್ಲ ಪ್ರದೇಶ ಮತ್ತು ಜನತೆಯ ಮೇಲೆ ವಿವಿಧ ರೀತಿಯ ಮಹತ್ವದ ಪ್ರಭಾವ ಬೀರಿದೆ. ಒಂದು ಅರ್ಥದಲ್ಲಿ ಕೇರಳ ರಾಜಕೀಯ ಪ್ರಭುತ್ವದ ದೃಷ್ಟಿಯಿಂದ ಪಶ್ಚಿಮ ಬಂಗಾಳವನ್ನೇ ಅನುಸರಿಸುತ್ತಿದೆ. ಈ ಹಿಂದೆ ಹೇಳಿದಂತೆ ಇಡೀ ಭಾರತದಲ್ಲಿ ಪಶ್ಚಿಮ ಬಂಗಾಲದಲ್ಲಿ ನಿರ್ಮಾಣಗೊಂಡ ಆಧುನಿಕ ಸಾಹಿತ್ಯ ಪ್ರಕಾರ ಗಮನಾರ್ಹವಾದುದು. ಅಂತೆಯೇ ಕೇರಳದಲ್ಲಿ ಕೂಡ ೧೯ನೇ ಶತಮಾನದ ಹೊಸ್ತಿಲಲ್ಲಿ ಆಧುನಿಕ

ಸಾಹಿತ್ಯದ ಮಜಲುಗಳು ಕಾಣಿಸಿಕೊಂಡವು. ತನ್ನ ತೀರ ನಿಕಟ ಭಾಷಾಪರಿವಾರಕವಾದ ತಮಿಳಿಗಿಂತ ಮಲೆಯಾಳಂ ಆಧುನಿಕ ಸಾಹಿತ್ಯ ಪ್ರಕಾರದಲ್ಲಿ ಕ್ರಾಂತಿಕಾರಕವಾಗಿಯೆ ಭಿನ್ನವಾಯಿತೆಂದು ಹೇಳಬಹುದು.

ತಕಳಿ ಶಿವಶಂಕರ ಪಿಳ್ಳೆಯವರು ಇಂತಹ ಸನ್ನಿವೇಶದಲ್ಲಿ ಬರಹ ಮಾಡಿದವರು. ೧೯೩೩ರಲ್ಲಿ ಪ್ರಕಟವಾದ ಏಕಾಂತಪಥಿಕನ್ ಎಂಬುದರ ಪೀಠಿಕೆಯಲ್ಲಿ ತಮ್ಮ ಲೇಖನದ ಬಗ್ಗೆ ಆತ್ಮ ವಿಶ್ಲೇಷಣೆ ಮಾಡುತ್ತ ತಕಳ್ಳಿಯವರು ಬಂಗಾಳದ ಪ್ರೇಮಚಂದರು ಹಾಗೂ ಅಲ್ಲಿನ ಸಾಹಿತ್ಯ ವಿಚಾರಧಾರೆಯ ಪ್ರಭಾವವನ್ನು ಸುಧೀರ್ಘವಾಗಿ ಉಲ್ಲೇಖಿಸಿದ್ದಾರೆ.

ಒಂದು ಸಣ್ಣಹಳ್ಳಿ 'ತಕಳೀ' ಶಿವಶಂಕರ ಪಿಳ್ಳೈಯವರ ಹುಟ್ಟೂರು. ೧೯೧೨ರ ಏಪ್ರಿಲ್ ತಿಂಗಳಲ್ಲಿ ಜನಿಸಿದರು. ಭಾರತದ ಪ್ರಸಿದ್ಧ ಬರಹಗಾರರನ್ನು ಗುರುತಿಸುವ ಹಾಗೇ ಪಿಳ್ಳೆಯವರನ್ನು ಅವರ ಊರಿನ ಹೆಸರಿನಿಂದಲೆ ಗುರುತಿಸುವುದು ರೂಢಿ. ತಕಳ್ಳಿ ಶಿವಶಂಕರ ಪಿಳ್ಳೆ ಎಂದು ಆ ರೂಢಿ ಎಷ್ಟು ರೂಢಿಯಾಗಿದೆ ಎಂದರೆ ಶಿವಶಂಕರ ಪಿಳ್ಳೆ ಹೋಗಿ ಕೇವಲ **ತಕಳೀ** ಎಂದು ಅವರನ್ನು ಎಲ್ಲರೂ ಗುರುತಿಸುತ್ತಾರೆ.

ತಕಳೀ ತಂದೆಗೆ ವ್ಯವಸಾಯವೇ ಮುಖ್ಯ ಕಸುಬು. ಅವರು ದೊಡ್ಡ ವಿದ್ವಾಂಸರು. ಕಥಕಳಿ ಎಂಬ ಕೇರಳದ ಹೆಸರಾಂತ ನೃತ್ಯ-ನಾಟಕದಲ್ಲಿ ಅವರಿಗೆ ಅತಿಯಾದ ಆಸಕ್ತಿ. ತಕಳೀ ಶಿವಶಂಕರಪಿಳ್ಳೆ ಬೆಳೆದ ಮನೆಯ ವಾತಾವರಣದಲ್ಲಿ ಸಂಸ್ಕೃತಾಭ್ಯಾಸದಿಂದ ಪೋಷಿತವಾದ ಪುರಾತನ ಸಂಸ್ಕೃತಿಯೂ ಕೇರಳದ ಜನಪದ ಕಲೆಯ ಅಭಿರುಚಿಯೂ ಬೆರೆತಿತ್ತು. ತಕಳ್ಳಿಯವರೆ ಸ್ವತಃ ಹೇಳಿರುವಂತೆ ಅವರಿಗೆ ಕಥೆ ಬರೆಯಲು ದೊರೆತ ಪ್ರೇರಣೆಯು ಅವರ ಬಾಲ್ಯದ್ದಾಗಿತ್ತು. ಆಗ ಪ್ರತಿದಿನವೂ ಸಂಜೆ ಹೊತ್ತು ತಕಳ್ಳಿಯವರ ತಂದೆ ತಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ ರಾಮಾಯಣ ಮಹಾಭಾರತ ಮತ್ತು ಇತರ ಪುರಾಣಗಳ ಕಥೆಗಳನ್ನು ಹೇಳುತ್ತಿದ್ದರು. **ಎಂಡೇ ಬಾಲ್ಯಾ ಕಾಲಾ ಕಥಾ** (ನನ್ನ ಬಾಲ್ಯ ಕಾಲದ ಕಥೆ) ಎಂಬುದರಲ್ಲಿ "ಒಂದಂತೂ ನಿಶ್ಚಿತ ಆಗ ನಾನು ಯಾವ ಕಥೆ ಕೇಳುತ್ತಿದ್ದೆನೋ, ಪುರಾಣಗಳನ್ನು ಓದಿದ್ದೆನೋ, ಅವುಗಳ ಒಳ್ಳೆಯ ಪ್ರಭಾವ ನನ್ನ ಮೇಲೆ ಆಗಿತ್ತು" ಎಂದು ಬರೆದಿದ್ದಾರೆ.

ತಕಳೀಯವರ ವಿದ್ಯಾಭ್ಯಾಸ ಕೆಲವು ವರ್ಷಗಳು ತಕಳ್ಳಿ ಗ್ರಾಮದಲ್ಲಿಯೇ ನಡೆಯಿತು. ಅನಂತರ ಅಲಿಪ್ಪುಳ ಪಟ್ಟಣದ ಮಿಡ್ಲ್‌ಸ್ಕೂಲಿಗೆ ದಾಖಲಾದರು. ಆ ಶಾಲೆಯು ಸಮುದ್ರ ತೀರದಲ್ಲಿ ಬೆಸ್ತರ ಗುಡಿಸಲುಗಳ ನಡುವೆ ಇತ್ತು. ಬೆಸ್ತರ ಗಂಡು-ಹೆಣ್ಣುಗಳ ಬಾಳಿನ ವಿವಿಧ ಮುಖಗಳನ್ನು ಅರಿತಿದ್ದು ಅಲ್ಲೇ. ಮುಂದೆ ಇದೇ ಅವರ ಪ್ರಸಿದ್ಧ **ಚೆಮ್ಮೀನು** ಕಾದಂಬರಿಗೆ ವಸ್ತುವಾಯಿತು. ಅನಂತರ ಹೈಸ್ಕೂಲ್ ಓದಿಗಾಗಿ ಅವರು ವೈಕೋಂ ಮತ್ತು ಕುರುವತ್ತಕ್ಕೆ ಹೋದರು. ಕುರುವತ್ತದ ಹೈಸ್ಕೂಲಿನಲ್ಲಿಯೇ ಅವರು ಸಾಹಿತ್ಯದ ಸೃಜನಾತ್ಮಕತೆಯನ್ನು ಪ್ರಕಟಿಸಿದ್ದರು. ಅದು ಶ್ರೀ ಗಣೇಶವು ಕವಿತೆಯಿಂದ ಆರಂಭವಾಯಿತು. ಆದರೆ ಶಾಲೆಯಲ್ಲಿದ್ದ ಒಬ್ಬ ಸಾಹಿತ್ಯದ ಅಭಿರುಚಿಯ ಮಾಸ್ತರರಾದ ಶ್ರೀ ಕುಮಾರ ಪಿಳ್ಳೆಯವರ ಸೂಚನೆಯಂತೆ ತಕಳೀ ಗದ್ಯದ ಕಡೆ ಆಕರ್ಷಿತರಾಗಿ ಕಥೆಗಳನ್ನು ಬರೆಯತೊಡಗಿದರು.

ಹೈಸ್ಕೂಲ್ ಆದ ಮೇಲೆ ತಕಳೀಯವರು ಎರಡು ವರ್ಷಗಳವರೆಗೆ ತಮ್ಮ ಹಳ್ಳಿಯಲ್ಲಿದ್ದರು. ಅನಂತರ ಹಳ್ಳಿಯ ಏಕಾಂತ ಬದುಕು ಸಾಕಾಗಿ, ತಿರುವನಂತಪುರಕ್ಕೆ ಹೋಗಿ ಓದು ಮುಂದುವರೆಸಲು ನಿರ್ಧರಿಸಿದರು. ಪ್ಲೀಡರ್ ಆಗ ಬೇಕೆಂಬ ಬಯಕೆಯಿಂದ ಅಲ್ಲಿ 'ಲಾ' ಕಾಲೇಜಿಗೆ ಸೇರಿದರು. ತಿರುವನಂತಪುರಂ ಆಗ ಜಾಗೃತಗೊಂಡ ನಗರವಾಗಿತ್ತು. ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಹೋರಾಟಗಳು ಹುಟ್ಟಿಕೊಂಡು ಉತ್ಸಾಹದ ಸಮರ ನಡೆಯುತ್ತಿದ್ದ ದಿನಗಳವು. ತಕಳ್ಳಿಯವರಿಗೆ ತಿರುವನಂತಪುರದಲ್ಲಿ ಯುಗಾಂತರಕಾರಕ ಪತ್ರಿಕೆ **"ಕೇಸರಿ"ಯ** ಸಂಪಾದಕರಾಗಿದ್ದ ಬಾಲಕೃಷ್ಣ ಪಿಳ್ಳೆಯವರ ಸಂಪರ್ಕ ಒದಗಿತ್ತು ಪಿಳ್ಳೆಯವರು ತಿರುವನಂತಪುರ ಬುದ್ಧಿಜೀವಿ ಸಮುದಾಯದ ಮುಖ್ಯಸ್ಥರೂ ಆಗಿದ್ದರು. ಈ ಸಮೂಹದಲ್ಲಿ "ಮಾತೃಭೂಮಿ" ಪತ್ರಿಕೆಯ ಸಂಪಾದಕರಾಗಿದ್ದ ದಾಮೋದರ ಮೆನನ್ ಮುಂತಾದವರು ಇರುತ್ತಿದ್ದರು. ತಕಳೀಯವರ ಶಂಕರ ಮೆನನ್, ಏಲಾಯಥೂ, ಗೋವಿಂದನ್‌ನಾಯರ್, ನಾರಾಯಣ ಪಿಳ್ಳೈಯರಂತಹ ಪ್ರಸಿದ್ಧ ಲೇಖಕರು ರಾಜನೀತಿಜ್ಞರ ಒಡನಾಟದಿಂದ ತುಂಬ ಪ್ರಭಾವಿತರಾದರು. ಬಾಲಕೃಷ್ಣ ಪಿಳ್ಳೆಯವರಂತು ತಕಳ್ಳಿಯ ಲೇಖನದಲ್ಲಿ ವಿಶೇಷ ಆಸಕ್ತಿ ವಹಿಸತೊಡಗಿದರು. ತಕಳೀಯವರ ಎಲ್ಲ ಬರಹಗಳ ಮೊದಲ ಓದುಗರು, ವಿಶ್ಲೇಷಕರು, ವಿಮರ್ಶಕರು ಪಿಳ್ಳೆಯವರೇ ಆಗಿದ್ದರು. ಆ ಕಾಲದ 'ಕೇಸರಿ' ಪತ್ರಿಕೆಯಲ್ಲಿ ತಕಳೀಯವರ ಅನೇಕ ಕಥೆಗಳು ಪ್ರಕಟಗೊಂಡವು. ಪಿಳ್ಳೆಯವರು ತಕಳೀಯವರಿಗೆ ಯೂರೋಪಿಯನ್ ಸಾಹಿತ್ಯ ಬರ್ಟ್ರಾಂಡ್ ರಸಲ್‌ನ ದರ್ಶನಶಾಸ್ತ್ರ ಮತ್ತು ಫ್ರಾಯ್ಡ್‌ನ ಮನೋವಿಜ್ಞಾನ, ಮಾರ್ಕ್ಸ್ ಸಿದ್ಧಾಂತ, ಟಾಲ್‌ಸ್ಟಾಯ್, ಮೊದಲಾದ ಸುಪ್ರಸಿದ್ಧ ಲೇಖಕರ ಪರಿಚಯ ಮಾಡಿಸಿದರು. ಇವೆಲ್ಲವುಗಳ ಪ್ರಭಾವ ಸ್ವಾಭಾವಿಕವಾಗಿಯೇ ತಕಳೀಯವರ ಮೇಲಾಯಿತು.

ಭಾರತದಲ್ಲಿ ಆಗ ಒಂದು ಹೊಸ ರಾಜಕೀಯ ವಾತಾವರಣ ನಿರ್ಮಾಣವಾಗುತ್ತಿತ್ತು. ಗಾಂಧೀಜಿಯವರ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಜನಾಂದೋಲನ ಬೃಹತ್ ಸ್ವರೂಪ ಪಡೆದಿತ್ತು. ಈ ಆಂದೋಲನ ಒಟ್ಟು ಭಾರತೀಯ ಜೀವನ ಕ್ರಮವನ್ನು ತುಂಬ ಪ್ರಭಾವಿಸಿತ್ತು. ಇದು ಕೂಡ ತಕಳ್ಳಿಯವರ ಮೇಲೆ ಪ್ರಭಾವ ಬೀರಿತು. ಹಳ್ಳಿಗಳ ಬಗೆಗಿನ ಅವರ ಆಸ್ಥೆ ಮತ್ತು ಅಲ್ಲಿಯೇ ಬದುಕು ಸಾಗಿಸಬೇಕೆಂಬ ಅವರ ನಿಲುವು ಗಾಂಧೀಜಿಯ ಗ್ರಾಮಭಾರತ ಕಲ್ಪನೆಯಿಂದ ಪ್ರಭಾವಿತವಾದುದ್ದಾಗಿತ್ತು. ಏಕಕಾಲದಲ್ಲಿ ಮಾರ್ಕ್ಸ್‌ವಾದ, ಯುರೋಪಿಯನ್ ಸಾಹಿತ್ಯ, ಗಾಂಧೀಜಿಯ ಪ್ರಭಾವ ಎಲ್ಲವೂ ಸೇರಿ ಸಂಕೀರ್ಣ ವ್ಯಕ್ತಿತ್ವ ಹಾಗೂ ಒಂದು ಸಂಕೀರ್ಣ ಸಾಹಿತ್ಯಾಭಿವ್ಯಕ್ತಿಯನ್ನು ತಕಳೀಯವರಲ್ಲಿ ಕಾಣಬಹುದು.

ಪತ್ರಿಕೆಯಲ್ಲಿ ಪ್ರಕಟಗೊಂಡ ಕಥೆಗಳೇ ಅಲ್ಲದೆ ಆ ಕಾಲದ ಕೆಲವು ಕಥೆಗಳು ತಕಳೀಯವರ ಮೊದಲನೆ ಕಥಾ ಸಂಕಲನವಾದ'**ಪ್ರಥುಮಲಾರ್** (ಹೊಸಹೂವು)ದಲ್ಲಿ ಪ್ರಕಟಗೊಂಡವು. ಈ ಸಂಗ್ರಹವು ಎರಡು ಕಾದಂಬರಿಗಳಾದ **ಪ್ರತಿಫಲಮ್** (ಪುರಸ್ಕಾರ) ಮತ್ತು **ಪತಿತ ಪಂಕಜಮ್** (ಕೆಳಗೆ ಬಿದ್ದ ಕಮಲ) ಗಳ ಪ್ರಕಾಶನದ ನಂತರ ೧೯೩೪ರಲ್ಲಿ ಹೊರಬಂತು. ಈ ಚಿಕ್ಕ ಪುಸ್ತಕದಲ್ಲಿ ಏಳು ಕಥೆಗಳಿದ್ದವು. ಇವುಗಳಿಂದ

ತಕಳೀಯವರ ಕಲಾತ್ಮಕ ದೃಷ್ಟಿಯ ಕ್ಷೇತ್ರದ ಬಗ್ಗೆ ನಿಜವಾದ ಅಂದಾಜು ತಿಳಿಯುತ್ತದೆ. ಈ ಸಂಕಲನದ ಒಂದು ಕಥೆ **ಹೆಸರು ತಾರೀಖು ಇಲ್ಲದ ಒಂದು ಪತ್ರ** ವೆಂಬುದರಲ್ಲಿ ಒಬ್ಬ ಸ್ತ್ರೀಯು ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ತನ್ನ ಪ್ರಿಯತಮನಿಗೆ ಬರೆದ ಪತ್ರದ ಕಥೆ. ಆದರೆ ಕಥೆಯ ಕೊನೆಯಲ್ಲಿ ಸಾಯುವವನು ಕಥಾನಾಯಕಿ ಮತ್ತು ನಾಯಕರ ಹನ್ನೊಂದು ವರ್ಷದ ಮಗ. ಈ ಕತೆಯ ಮೇಲೆ ಸ್ಟೀಫನ್ ಜ್ವೇಗ್ ಅವರ **ಲಾಸ್ಟ್‌ಲೈಯರ್** ಕತೆಯ ಛಾಯೆಯಿದೆ ಎಂದು ವಿಮರ್ಶಕರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಈ ಸಂಕಲನದಲ್ಲಿ ಎಲ್ಲಕ್ಕಿಂತ ತುಂಬ ಮನೋಜ್ಞವಾದ ಕತೆಯೆಂದರೆ **ಬಾಡ್‌ಮೇ** (ಪ್ರವಾಹದಲ್ಲಿ) ಎಂಬುದು. ಇದರಲ್ಲಿ ತಕಳೀಯವರ ಲೇಖನದ ಸಕಲ ತತ್ವಗಳೂ ಕೂಡಿವೆ. ಇದೇ ಅವರನ್ನು ಮುಂದೆ ಮಹಾನ್ ಲೇಖಕರನ್ನಾಗಿಸಿದೆ ಎಂದು ವಿಮರ್ಶಕರು ಗುರುತಿಸಿದ್ದಾರೆ.

ತಕಳೀಯವರ ಮೊದಲ ರಚನೆಯೆಂದರೆ ಕಾದಂಬರಿಯೆ ೧೯೩೪ರಲ್ಲಿ **ಪ್ರತಿಫಲಮ್** (ಪುರಸ್ಕಾರ) ೧೯೩೫ರಲ್ಲಿ **ಪತಿತ ಪಂಕಜನ್** ಕೆಳಗೆ (ಬಿದ್ದ ಕಮಲಗಳು) ೧೯೩೬ರಲ್ಲಿ **ಪರಮಾರ್ಥಂಗಳ್** ಪ್ರಕಟಗೊಂಡವು. ಪ್ರತಿಫಲಮ್ ಪ್ರಕಾಶಗೊಂಡೊಡನೆ ವಿವಾದಕ್ಕೆ ಎಡೆಮಾಡಿಕೊಟ್ಟಿತು. **ಪ್ರತಿಫಲಮ್** ಒಂದು ಹುಡುಗಿ ಕಥೆ. ಅವಳು ತನ್ನ ಸಹೋದರನ ವಿದ್ಯಾಭ್ಯಾಸಕ್ಕಾಗಿ ತನ್ನ ದೇಹವನ್ನು ಮಾರುತ್ತಾಳೆ. **ಪತಿತ ಪಂಕಜಮ್** ಕೂಡ **ಗುಣವತಿ** ಎಂಬ ಹುಡುಗಿಯ ಕಥೆ. ಅವಳು ತನ್ನ ಹನ್ನೆರಡನೆ ವಯಸ್ಸಿನಿಂದಲೇ ಕಂಟ್ರಾಕ್ಟರುಗಳ ಮೂಲಕ ವೇಶ್ಯಾವೃತ್ತಿಯನ್ನು ಹಿಡಿಯಲು ಬಾಧ್ಯಳಾಗುತ್ತಾಳೆ. ಪರಮಾರ್ಥಂಗಳ್ ಎಂಬುದರಲ್ಲಿನ ನಾರಿಯ ವ್ಯಥೆಯು ಎರಡು ರೀತಿಯಲ್ಲಿ ಮಕ್ಕಳಿಗೆ ತಾಯಿಯಾಗಿದ್ದನ್ನು ತೋರಿಸುತ್ತದೆ. ಒಂದು ವಿವಾಹಕ್ಕೆ ಮುಂಚಿನ ಬಲತ್ಕಾರದ ಫಲ ಸ್ವರೂಪದ್ದು. ಎರಡನೆಯದು ವಿವಾಹ ನಂತರದ್ದು. ಈ ಕಾದಂಬರಿಗಳು ಮಧ್ಯಮ ವರ್ಗದ ನೈತಿಕತೆಯ ಮೇಲೆ ಆಳವಾದ ಆಘಾತವನ್ನು ಮಾಡಿದ್ದರ ಬಗೆಗಿನ ಚಿಂತನೆಯನ್ನು ಸ್ವಾಭಾವಿಕವಾಗಿಯೆ ತಿಳಿಸಿದೆ.

೧೯೪೫ರಲ್ಲಿ **ತೋಟ್ಟಿಯುಡೆ ಮಗನ್** (ಭಂಗಿಯಮಗ), **ರಂಟಟೆಂಡ್‌ಷಿ** (ಎರಡುಸೇರುಧಾನ್ಯ ೧೯೪೮) **ತಲೆಯೋಡು** (ಕಪಾಲ ೧೯೪೮), ೧೯೫೦ರಲ್ಲಿ **ತೈಂಡೀವನರ್ಗಮ್** (ಬಿಕಾರಿವರ್ಗ) ಜೊತೆಗೆ ಕಥಾಸಂಗ್ರಹಗಳು ೧೯೪೫ರಲ್ಲಿ **ಅತಿಯೀಳುಕ್ಕುಳ್** (ಅಂತರ್ಧಾರೆ), ೧೯೪೫ರಲ್ಲಿ **ನಿತ್ಯ ಕನ್ನಿಕಾ** (ಅವಿವಾಹಿತೆ) ೧೯೪೫ರಲ್ಲಿ ಚಗಾನಿಕಲ್ (ಮಿತ್ರ), ೧೯೫೦ರಲ್ಲಿ **ಇಂಕ್‌ಲಾಬ್** ಮುಂತಾದವು ತಕಳೀಯವರ ಎರಡನೆ ಘಟ್ಟದ ಮುಖ್ಯ ಬರಹಗಳು.

ಅವರ ಆರಂಭದ ಬರಹಗಳಲ್ಲಿ ಪುರೋಗಾಮಿ ಸಾಹಿತ್ಯ ಪ್ರಭಾವ ಹೆಚ್ಚಿತ್ತು. ಆದರೆ ಮುಂದೆ ಬದಲಾದ ರಾಜಕೀಯ, ಆರ್ಥಿಕ, ಸಾಮಾಜಿಕ, ಪರಿಸ್ಥಿತಿಗಳು ಅವರ ಬರಹವನ್ನು ಪ್ರಭಾವಿಸಿದವು. ವಿದೇಶಿ ಸಾಹಿತ್ಯದ ಪ್ರಭಾವ ಕೂಡ ಅಧಿಕವಾಗಿ ತಕಳೀಯವರ ಮೇಲೆ ಆಗಿತ್ತು. ಇವುಗಳು ಈ ಎರಡನೇ ಕಾಲಘಟ್ಟದ ಕೃತಿಗಳಲ್ಲಿ ವ್ಯಾಪಕವಾಗಿ ಅಭಿವ್ಯಕ್ತಗೊಂಡಿದೆ.

ಈ ಮೇಲಿನ ಕಾದಂಬರಿಗಳಲ್ಲಿ ತುಂಬಾ ಚರ್ಚಿತವಾದ ಕಾದಂಬರಿಯೆಂದರೆ **ತೋಟಿಯುಡೆಮಗನ್** ಅಲೆಪ್ಪೀ ಪಟ್ಟಣದ ಭಂಗಿಗಳ ಶೋಚನೀಯ ಕಥೆ. ಅದರ ಮುಖ್ಯ ಪಾತ್ರ ಓರ್ವ ನವಯುವಕ ಭಂಗಿ ಚುದಲಮೂಥಲವಿನದು ಅವನು ಜೀವನದ ಅತ್ಯಂತ ನಿಕೃಷ್ಟ ಸ್ತರದ ಕಷ್ಟಗಳನ್ನು ಅನುಭವಿಸುತ್ತಾನೆ. ತನ್ನ ಮಗ ಮೋಹನನನ್ನು ಈ ದಾರುಣ ಜೀವನ ಚಿತ್ರಣಗಳಿಂದ ದೂರವಿರಿಸಲು ತುಂಬ ಆಸೆ. ಆದರೆ "ಭಂಗಿಗಳನ್ನು ಜೊತೆಗೂಡಿಸದೆ ಈ ಮುಕ್ತಿ ಅಸಾಧ್ಯ' ಅನಿಸುತ್ತದೆ. ಈ ಸ್ವಾರ್ಥ ಸಾಧನೆಗಾಗಿ ತನ್ನನ್ನು ನಂಬಿದವರಿಗೆ ಮೋಸಮಾಡುತ್ತಾನೆ. ಇದರಿಂದ ಅವನು ತಾನು ಸಂಪಾದಿಸಿದ್ದ ಮರ್ಯಾದೆ ಮತ್ತು ಸಾಧನೆಗಳನ್ನು ಉಳಿಸಿಕೊಳ್ಳಲಾರದೆ ಹೋಗುತ್ತಾನೆ. ತನ್ನ ಮಗನನ್ನು ಶಾಲೆಗೆ ಸೇರಿಸುತ್ತಾನೆ. ಆದರೆ ಮೋಹನನು ಶಾಲೆ ಮತ್ತು ಸಹಪಾಠಿಗಳಿಂದ ಬಹಿಷ್ಕೃತನಾಗುತ್ತಾನೆ. ಅವನ ತಂದೆ–ತಾಯಿಯರು ಕಾಲರದಿಂದ ಸತ್ತು ಹೋಗುತ್ತಾರೆ. ಅನಂತರ ಮೋಹನ ತನ್ನ ವ್ಯಕ್ತಿತ್ವವನ್ನೇ ಭಂಗಿಯಾಗಿ ನಿರ್ವಹಿಸಬೇಕಾಗುತ್ತದೆ. ಅದರ ಚಿತ್ರಣವನ್ನು ಎಷ್ಟು ನಂಬಿಕೆಯಿಂದ ಮಾಡಲಾಗಿದೆ ಎಂದರೆ ಓದುಗನನ್ನು ಕಥೆಯ ಒಳಗಿನಿಂದಲೇ ಕೊರೆಯುತ್ತಾ ಹೋಗುತ್ತದೆ.

ತಕಳೀಯವರ ಪ್ರಸಿದ್ಧಿಗೆ, ಚರ್ಚೆಗೆ ಗ್ರಾಸವಾದ ಮತ್ತೊಂದು ಕೃತಿಯೆಂದರೆ ಅವರ **ಇಂಕಿಲಾಬ್** ಕಥಾ ಸಂಕಲನ. ಈ ಕಥಾ ಸಂಕಲನದಲ್ಲಿ ಒಟ್ಟು ೮ ಕಥೆಗಳಿವೆ. ಎಲ್ಲವೂ ರಾಜಕೀಯವಾದ ಕತೆಗಳೇ. **ಕ್ರಾಂತಿಕಾರಿ ಹುಚ್ಚುತನ; ಬಂಡವಾಳಶಾಹಿ ಸಮಾಜದ ಪೋಲೀಸ್; ಮಹಾತ್ಮಗಾಂಧಿಯವರ ಹತ್ಯೆ; ಭಾರತದ ವಿಭಜನೆ,** ಇತ್ಯಾದಿಗಳು ಸ್ವಾತಂತ್ರ್ಯ ಸಂಗ್ರಾಮದ ಸಾಮಾಜಿಕ ಸಮಸ್ಯೆಗಳ ಕಡೆಗೆ ಹೆಚ್ಚು ಗಮನ ಸೆಳೆಯುತ್ತಾರೆ. ಅವುಗಳನ್ನು ವಿಷಯ ವಸ್ತುಗಳನ್ನಾಗಿ ಮಾಡಿಕೊಂಡಿದ್ದಾರೆ. ತಕಳೀಯವರು, ಸಮಾಜದಲ್ಲಿ ತಿರಸ್ಕೃತ, ಬಹಿಷ್ಕೃತ ಹಾಗೂ ಶೋಷಿತ ವರ್ಗದ ವ್ಯಕ್ತಿಯ ಕಥೆಯನ್ನು ಅವರು ಅತ್ಯಂತ ಸಹಾನುಭೂತಿಯಿಂದ ಪ್ರಸ್ತುತಗೊಳಿಸಿದ್ದಾರೆ.

೧೯೫೬ರಲ್ಲಿ ಅವರ ಪ್ರಸಿದ್ಧ ಕೃತಿ **'ಚೆಮ್ಮೀನು'** ಪ್ರಕಟಗೊಂಡಿತು. ಇದರೊಂದಿಗೆ ಅವರ ಮೂರನೆ ಕಾಲ ಘಟ್ಟದ ಕೃತಿಗಳು ರಚನೆಯಾಗತೊಡಗಿದ್ದವು. ಒಬ್ಬ ಲೇಖಕ ಬದಲಾದ ಕಾಲಗತಿಯೊಳಗಿನ ಸಮಸ್ಯೆಯನ್ನು ಗುರುತಿಸಬೇಕಾಗುತ್ತದೆ. ಆ ಕೆಲಸವನ್ನು ತಕಳೀಯವರ ಈ ಪರಿವರ್ತನ ಕಾಲಘಟ್ಟದಲ್ಲಿ ಗುರುತಿಸಬಹುದು. ಮುಂದೆ ಒಂದು ಅಧ್ಯಾಯ ಚೆಮ್ಮೀನು ಬಗ್ಗೆಯೇ ಇರುವುದರಿಂದ ಇಲ್ಲಿ ಅದರ ಪ್ರಸ್ತಾಪ ಬೆಳೆಸಲು ಇಚ್ಛಿಸುವುದಿಲ್ಲ. ಚೆಮ್ಮೀನು ನಂತರ **ಕಯರ್** ಎಂಬ ಕೃತಿ ತುಂಬ ಮಹತ್ವದ ಕೃತಿ. ತಕಳ್ಳಿಯವರೆ ಹೇಳಿಕೊಂಡಿರುವಂತೆ ನಾನು ಬಹಳ ಸಮಯದಿಂದ ನಮ್ಮ ಕೇರಳದ ಎಲ್ಲಾ ಅಂಶಗಳನ್ನು ಸೇರಿಸುವಂಥದ್ದೊಂದು ಕಾದಂಬರಿಯನ್ನು ಬರೆಯಬೇಕೆಂದು ಯೋಚಿಸುತ್ತಿದ್ದೆ. ಆದರೆ ನಡುವೆ ಮೂರು ಕಾದಂಬರಿಯನ್ನು ಬರೆದೆ. ನಾನು ಈ ಕಾದಂಬರಿಗಳನ್ನು ಹೊಸ ರಚನಾವಿನ್ಯಾಸ ಮತ್ತು ಕಥಾವಸ್ತುವನ್ನು ಹುಡುಕುವ ಪ್ರಯತ್ನಗಳ ಪ್ರಯೋಗಮಾತ್ರ ಎಂದು ಕೊಂಡಿದ್ದೇನೆ ಎಂದು ಒಪ್ಪಿಕೊಳ್ಳುತ್ತೇನೆ. ನಾನು

ಬರೆಯಲಿರುವ ಕಯರ್ ಎನ್ನುವ ಹೊಸ ಕಾದಂಬರಿ ಈ ಹಿನ್ನೆಲೆಯಲ್ಲಿ ವಿಶಿಷ್ಟವಾದುದು. ಒಂದು ವರ್ಷದಲ್ಲಿ ನಾನು ಅದನ್ನು ಬರೆದು ಮುಗಿಸುತ್ತೇನೆ ಎಂದು ಬರೆದಿದ್ದರು. ಆದರೆ ಅದು ೧೬ ವರ್ಷಗಳನ್ನು ಹಿಡಿಯಿತು ಎಂಬುದು ಸತ್ಯಸಂಗತಿ. ಆದರೆ ಕೃತಿಯನ್ನು ಗಮನಿಸಿದರೆ ನಿಜಕ್ಕೂ ಅದೊಂದು ಶ್ರೇಷ್ಠಕೃತಿ. ಇಡೀ ಒಂದು ಜೀವನದ ಕಾಲಕೃತಿ. ಇದೊಂದು ಗದ್ಯ ಮಹಾಕಾವ್ಯವೆಂದು ವಿಮರ್ಶಕರು ಗುರುತಿಸುವ ಮಾತು ಅತಿಶಯೋಕ್ತಿಯಲ್ಲ. **ಕಯರ್** ಒಂದು ಹಳ್ಳಿಯ ೨೫೦ ವರ್ಷಗಳಲ್ಲಿ ಹರಡಿಕೊಂಡಿದ್ದ ಎಂಟು ತಲೆಮಾರಿನ ಕಥೆಯಾಗಿದೆ. ಇದರಲ್ಲಿ ನಾಯಕ ನಾಯಕಿಯರು ಇಲ್ಲ. ಮೂರು ಸಾವಿರ ಪಾತ್ರಗಳಿವೆಯಂತೆ.

ತಕಳ್ಳಿಯವರ ಸೃಜನಾತ್ಮಕತೆಯ ಸ್ಮರಣಶಕ್ತಿ ಶುದ್ಧ ಮಾನವತಾವಾದದ್ದು ಅವರು ಬದಲಾದ ಕಾಲಗತಿಯಾಚೆಗೆ ನಿಂತು ಹಿಂದು ಮುಂದನೆಲ್ಲ ಏಕೀಭವಿಸಿ ಚಿಂತಿಸಿದ ಚಿಂತಕ. ಅವರ ಗದ್ಯಶೈಲಿ ಸರಳವಾದುದು. ಹಾಗೆಂದ ಮಾತ್ರಕ್ಕೆ ಅದೊಂದು ದೋಷವಲ್ಲ. ಸುಮಾರು ೩೨ ಕಾದಂಬರಿ ೨೦ ಕಥಾಸಂಕಲನ, ೩ ಆತ್ಮಕಥೆ ಬರೆದು ಸಮಕಾಲೀನ ಭಾರತದ ಅಗ್ರಗಣ್ಯ ಸಾಹಿತಿಯಾಗಿದ್ದಾರೆ.

✧✧✧✧✧✧✧

ಅಧ್ಯಾಯ – ೩

ಕಾದಂಬರಿಗಳ ಕಥಾವಲೋಕನ

ಚೋಮನ ದುಡಿ :

ಪ್ರಕೃತಿಯ ಮಡಿಲಲ್ಲಿದ್ದರೂ, ಯಾವ ಚೈತನ್ಯದ ಚಿಹ್ನೆಯೂ ಇಲ್ಲದೇ ಕೊನೆಯ ಪಕ್ಷ "ನೆಲದ ಮೇಲೆ ರಾಶಿರಾಶಿಯಾಗಿ ಬಿದ್ದಿದ್ದರೂ ಒಂದು ಹುಳುವಿನ ಹರೆದಾಟವು ಇಲ್ಲದೆ. ಒಂದಿಷ್ಟು ಧ್ವನಿಯೂ ಕೇಳಿಸುತ್ತಲಿಲ್ಲ. ಗಾಳಿ ಬೀಸುವಿಕೆಯು ಮೊದಲೇ ಇಲ್ಲ. ಬಿದಿರಿನ ದಿಂಡುಗಳು ಒಂದು ಇನ್ನೊಂದನ್ನು ತಿಕ್ಕಿ 'ಚೀರಿಂ' ಎಂಬ ಸಚೇತನ ಪ್ರಾಣಿಗಳ ಕಿರಿಚಾಟವನ್ನು ಅಣಕಿಸುತ್ತಲೂ ಇಲ್ಲ"[೧] ಇಷ್ಟೊಂದು ಜಡವಾದ". ಆ ಊರಿನ ಹೆಸರು ಭೋಗನಹಳ್ಳಿ, ಭೋಗನಹಳ್ಳೀ ತೀರ ಕಾಡು ಪ್ರದೇಶದಲ್ಲಿರುವ ಹಳ್ಳಿ, ಆ "ಇಡೀ ಹಳ್ಳಿಯಲ್ಲಿ ಹತ್ತೈವತ್ತು ಮನೆಗಳಿವೆ. ನೂರಿನ್ನೂರು ಜನರಿದ್ದಾರೆ. ಆದರೆ ಒಂದು ಜೀವಂತ ಸಂಕೇತವಾದ ಸಣ್ಣ ದೀಪದ ಬೆಳಕು ಕಾಣಿಸುವುದಿಲ್ಲ".[೨] ಅಷ್ಟು ನಿಶ್ಚಲವಾಗಿರುವ ಆ ಹಳ್ಳಿಯ ನೀರವ ಮೌನವನ್ನು ಒಮ್ಮೆಗೆ ಎಚ್ಚರಿಸಲು ಒಂದು ಧ್ವನಿ ಕೇಳಿಸುತ್ತದೆ. ಅದು ಭೋಗನ ಹಳ್ಳಿಯ ಕೊಪ್ಪದಿಂದ ಬಂದಿದ್ದು. ಕೊಪ್ಪವೆಂದರೆ ನೂರಾರು ಮನೆಗಳಿಲ್ಲ ಒಂದೆ ಮನೆ, ಅದು ಮನೆ ಅಲ್ಲ ಗುಡಿಸಲು. ಆ ಗುಡಿಸಲಿಂದ ಕೇಳುಸುವ, ಎಚ್ಚರಿಸುವ ಆ ವಿಚಿತ್ರವಾದ ಧ್ವನಿ 'ಢಮ ಢಮ ಢಕ್ಕ ಢಕ್ಕ'. ಈ ಹಳ್ಳಿಯ ಹಾದಿಯಲ್ಲಿ ಬರುವ ಅಪರಿಚಿತ ದಾರಿಹೊಕ ಈ ಧ್ವನಿಯನ್ನೆನಾದರೂ ಕೇಳಿದರೆ ದಿಕ್ಕುದೆಸೆಗಳನ್ನು ಬಿಟ್ಟು ಓಡಬೇಕು.

ಈ ದುಡಿಯ ಸದ್ದು "ಈ ಸ್ವರಗತ ಆವೇಗ ಜೋರಾಗುತ್ತ ಸರಿದು ಧಾವಿಸಿಪ್ರಾಣ ಬಿಡಲಿರುವ ಪ್ರಾಣಿಯೊಂದರ ಎದೆಯ ಮಿಡಿತಗಳಂತೆ ಕೇಳುತ್ತದೆ. ಕೆಲವು ಬಾರಿ ಅದು ಮಂದಗತಿಯಿಂದ ಸರಿಯುವಾಗ ಚಂಬು ಕುಟಿಗನೊಬ್ಬನ ಲಯಬದ್ಧವಾದ ಸುತ್ತಿಗೆಯ ಏಟುಗಳಂತೆ ಕೇಳಿಸುತ್ತದೆ. ಮರುಧ್ವನಿಯೊಂದಿಗೆ ಅದು ಮುರಿದು ಬಿದ್ದರೆ, ಪ್ರಳಯಕ್ಕೆ ಇನ್ನು ಒಂದು ಗಳಿಗೆಯೂ ಉಳಿದಿಲ್ಲವೆನಿಸುತ್ತದೆ. ಅದು ಬರಿಯ ಸದ್ದಿನಂತಿಲ್ಲ, ಯಾಂತ್ರಿಕವಾಗಿ ಕೇವಲ ಜಡವಾದನವೇನೋ ನಿಜ ! ಅದರ ಧ್ವನಿಯನ್ನು ಮೊಳಗಿಸುವ ಒಂದು ಅದ್ಭುತ ಶಕ್ತಿಯೇ ಇರುವಂತೆ ಕಾಣಿಸುತ್ತದೆ".[೩]

ಆ ಧ್ವನಿಯನ್ನು ಮೊಳಗಿಸುವ ಅದ್ಭುತ ಶಕ್ತಿಯೇ ಚೋಮ, ಚೋಮನದುಡಿ ಬೇರೆಯವರಿಗೆ ಹೇಗೆ ಒಂದು ಅದ್ಭುತವೋ ಹಾಗೆ ಭೋಗನಹಳ್ಳಿಯವರಿಗೆ ಅದೋಂದು ವಿಶೇಷವಲ್ಲ. ಚೋಮನ ಬಾಳ್ವೆಯಲ್ಲಿ ವಿಶೇಷವಿದ್ದರಲ್ಲವೆ ಅವನ ದುಡಿಯಲ್ಲಿರುವುದು. ಚೋಮ ಹೊಲೆಯರವ, ಜಾತಿಯಲ್ಲಿ ಹಿಂದುಳಿದವ. ಅಂದರೆ ಹೊಲೆಯಜಾತಿಯಲ್ಲಿ ಮೇರ, ಬೈರ, ಅಜಿಲ, ಮಾರಿ ಎಂಬ ನಾಲ್ಕು ಬೇರೆ ಬೇರೆ ಒಳಪಂಗಡಗಳಿವೆ. ಇವರಲ್ಲಿ ಮೇರರು ಬೇಸಾಯಮಾಡಿಕೊಂಡಿರಬಹುದು. ಆದರೆ ಮಾರಿ ಹೊಲೆಯರಿಗೆ ಆ ಭಾಗ್ಯವಿಲ್ಲ. ಚೋಮ ಮಾರಿ ಹೊಲೆಯರಿಗೆ ಸೇರಿದವನು. ಅವನಿಗೆ ಐದು ಮಂದಿ ಮಕ್ಕಳು ಚನಿಯ, ಗುರುವ, ಬೆಳ್ಳಿ, ಕಾಳ, ನೀಲ, ಬೆಳ್ಳಿಯಂದರೆ ಚೋಮನಿಗೆ ಜೀವ. ಚೋಮನ ಸಂಸಾರದಲ್ಲಿ ಇನ್ನು ಎರಡು ಮುಖ್ಯವಾದ ಜೀವಗಳಿವೆ. ಒಂದು ಅವನ ಕರಿಯ ನಾಯಿ 'ಬಾಡು' ಮತ್ತೊಂದು ಕಾಡಿನಲ್ಲಿ ಸಿಕ್ಕು ಸಾಕಿದ

---

೧. ಚೋಮನದುಡಿ ; ಪುಟ ೧

೨. ಅದೇ ಪುಟ : ೨

೩. ಅದೇ ಪುಟ : ೩

[illegible]

[illegible]

[illegible]

[illegible]

ಎರಡು ಹಸುವಿನ ಕರುಗಳು. ಚೋಮನ ಕುಟುಂಬದವರಲ್ಲಿ ಒಂದು ಹೂವಿನ ಎಸಳುಗಳಲ್ಲಿನ ಅನ್ಯೋನ್ಯವಿತ್ತು. ಚೋಮನಿಗೆ ಹೆಂಡತಿ ಇಲ್ಲ. ಅವಳು ಬಹಳ ಹಿಂದೆಯೇ ತೀರಿಹೋಗಿದ್ದಳು.

ಇಂತಹ ಚೋಮ ಆ ಊರಿನ ಪ್ರಮುಖ ಜಮೀನ್ದಾರರಲ್ಲಿ ಒಬ್ಬರಾದ ಸಂಕಪ್ಪಯ್ಯನವರ ಮೂಲದ ಹೊಲೆಯ "ಮೂಲದವನೆಂದರೆ ಅವರ ಅನುಮತಿಯಿಲ್ಲದೆ ಇನ್ನೊಬ್ಬ ಧನಿಯರ ಆಶ್ರಯವನ್ನು ಲಾಭಕ್ಕಾಗಲಿ, ನಷ್ಟಕ್ಕಾಗಲಿ, ಇವನಾಗಲಿ ಇವರ ಪರಂಪರೆಯವರಾಗಲಿ ಬಿಡುವಂತಿಲ್ಲ. ಅವರ ಧನಿಯಾದರೂ ಸರಿಯೆ. ಸಾಲವಿರಲಿ, ಮೂಲವಿರಲಿ ಚೋಮನ ಸಂತತಿಯವರನ್ನು ನಡೆಯಿಸಿಕೊಂಡು ಹೋಗಬೇಕು".[೧]

ಚೋಮನಿಗೆ ಅಪಾರ ಬಡತನ, ಅವನ ಇಬ್ಬರುಮಕ್ಕಳು ನೀಲ, ಕಾಳ ಯಾವಾಗಲು ಹಾಸಿಗೆಯಲ್ಲಿಯೇ ಮಲಗಿರುತ್ತಾರೆ. ಇನ್ನು ಉಳಿದವರೆಲ್ಲರೂ ಸದಾ ದುಡಿಯುವವರೆ. ಹೀಗೆ ಸಂಕಪ್ಪಯ್ಯನವರ ಮನೆಯಲ್ಲಿ ಇಡೀ ಕುಟುಂಬ ದುಡಿದರೆ ದಿನವೊಂದಕ್ಕೆ ಬರುವ ಆದಾಯ ಎರಡು ಪಾವು ಅಕ್ಕಿ, ಐದುಪಾವು ಭತ್ತ ಐದು ಪಾವು ಭತ್ತ ಕುಟ್ಟಿದರೆ ಎರಡು ಪಾವು ಅಕ್ಕಿ ಬರುತ್ತಿತ್ತು. ಅಂದರೆ ದಿನವೊಂದರ ಕೂಲಿ ಒಂದು ಸೇರು ಅಕ್ಕಿ, ಇದರಲ್ಲಿ ಚೋಮ ತನ್ನ ಪಾಲಿನ ಎರಡು ಪಾವು ಅಕ್ಕಿಯನ್ನು ಬಿರುಮ ಪೂಜಾರಿ ಅಂಗಡಿಗೆ ಮಾರಿ ಒಂದು ಸೀಸ ಹೆಂಡ ಕುಡಿಯುತ್ತಿದ್ದ. ಅವನಿಗೆ ಕುಡಿತ ಬದುಕಿನ ಅವಿಭಾಜ್ಯ ಅಂಗ. ನಿತ್ಯವೂ ಕುಡಿಯುತ್ತಾನೆ. "ಕುಡಿತ ಕೆಟ್ಟುದೆಂದು ಚೋಮ ಒಪ್ಪದ ಮಾತು, ಕೆಲಸ ಮಾಡಿ ದಣಿದ ಜೀವಕ್ಕೆ ಒಂದೇ ಒಂದು ತೊಟ್ಟಾದರೂ ಹೆಂಡವಿಲ್ಲದಿದ್ದರೆ ವ್ಯರ್ಥವೆಂದು ಅವನ ತಿಳಿವು."[೨] ಆದರೆ ಬೇರೆ ಹೊಲೆಯರಂತೆ ಚೋಮ ಮಕ್ಕಳನ್ನು ಕುಡಿಯಲು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿರಲಿಲ್ಲ. ಅದಕ್ಕೆ ಕಾರಣ ಅವರು ಕುಡಿಯಲು ಕಲಿತರೆ ಮನೆಯಲ್ಲಿ ಎಲ್ಲರೂ ಉಪವಾಸವಿರಬೇಕಾಗುತ್ತದೆ ಎಂಬುದು ಅವನ ಎಣಿಕೆ. ಆದರೆ ತಾನು ಕುಡಿಯುವದನ್ನು ನಿಲ್ಲಿಸಿದರೆ ಮನೆ ಇನ್ನಷ್ಟು ಸುಧಾರಿಸಬಹುದು ಎಂದು ಮಾತ್ರ ಅವನಿಗೆ ಹೊಳೆಯದೆ ಹೋದುದು ವಿಚಿತ್ರ. ಬೆಳ್ಳಿ ಬಿಡುವಿನ ವೇಳೆಯಲ್ಲಿ "ತನಗೆ ಅವಕಾಶವಿದ್ದಾಗ, ಅನುಕೂಲತೆ ದೊರಕಿದಾಗ ಒಂದೆರಡು ಬುಟ್ಟಿಗಳನ್ನು ಹೆಣೆದಿರಿಸಿದರೆ ಅದನ್ನು ನೇರವಾಗಿ ಒಯ್ದು,"[೩] ಬಿರುಮನಿಗೆ ಕೊಟ್ಟು ಇಷ್ಟು ಹೆಂಡ ಕುಡಿಯುವುದು ಅವನ ನಿತ್ಯ ಕ್ರಿಯೆ.

"ಇಂತಹ ಚೋಮನಿಗೆ ತಾನು ನೆಲವನ್ನು ಉತ್ತು ಬೆಳೆಯ ಬೇಕೆಂದು ಬೇಸಾಯಗಾರನಾಗಬೇಕೆಂಬ ಬಯಕೆ ಕುತ್ತಿಗೆವರೆಗಿದೆ" ಆದರೆ ಅವನ ಜಾತಿಯವರಿಗೆ ಇದು ಈಡೇರದ ಬಯಕೆ, ಮೊದಲಿನಿಂದಲೂ ಚೋಮನಿಗೆ ಇದ್ದ ಈ ಬಯಕೆ ಕಾಡಿನಲ್ಲಿ ಆ ಹಸುವಿನ ಕರುಗಳು ಸಿಕ್ಕಮೇಲೆ ಇನ್ನೂ ಬೆಳೆಯತೊಡಗಿತ್ತು. ಈಗ ಸರಿಯಾದ ಸಮಯವೆಂದು ತಮ್ಮ ಧನಿ ಸಂಕಪ್ಪಯ್ಯನವರಲ್ಲಿ ಒಂದು ಮುಡಿ ಗದ್ದೆಯನ್ನಾದರೂ ತನಗೆ ಗೇಣಿಗೆ ಕೊಡಬೇಕೆಂದು ಕೇಳುವುದು ಎಂದು ನಿಶ್ಚಯಿಸಿದ. ಅದನ್ನು ಆತ ತನ್ನ ಮಗಳು ಬೆಳ್ಳಿಗೆ ಹೇಳಿದ. ಬೆಳ್ಳಿ ಪರಿಪರಿಯಾಗಿ ಹೇಳಿದರೂ ಅದನ್ನು ಆತ ಕೇಳುವ ಸ್ಥಿತಿಯಲ್ಲಿಲ್ಲ. ಯಾರೋ ಒಬ್ಬ ದೂರದಲ್ಲಿ ಸರ್ಕಾರಿ

---

೧. ಚೋಮನದುಡಿ ; ಪುಟ ೬

೨. ಅದೇ ಪುಟ : ೧೦

೩. ಅದೇ ಪುಟ : ೯

[illegible]

ನೆಲವನ್ನು ದರಕಾಸ್ತಿಗೆ ಪಡೆದು ಬೇಸಾಯಗಾರನಾದನೆಂದು ಸಂಗತಿ ತಿಳಿದು ಮತ್ತಷ್ಟು ಉತ್ತೇಜಿತನಾದ ಚೋಮ, ಮಗಳು ತನ್ನ ಬೇಡಿಕೆಯನ್ನು ತಿರಸ್ಕರಿಸಿದ್ದರಿಂದ ದುಃಖದಿಂದ ದುಡಿಯನ್ನು ಬಾರಿಸತೊಡಗಿದ. ಈ ದುಡಿಯ ಬಡಿದರೆ ಮೊದಲ ಧ್ವನಿ ಸಂಕಪ್ಪಯ್ಯನವರಿಗೆ ಕೇಳಿಸಿತೇ ಹೊರತು ಅದೊರೊಳಗಿನ ಸಂಕಟವೋ ಆರ್ತತೆಯೋ ಅಲ್ಲ.

ಚೋಮ ತನ್ನ ಹೆಂಡತಿ ಸಾಯುವ ವರ್ಷ ಕಳಸದ ಸಮೀಪದ ಕಾಫಿತೋಟವೊಂದಕ್ಕೆ ಕೂಲಿಯಾಗಿ ಹೋಗಿದ್ದ. (ಆಗ ಅವನು ತನ್ನ ಮನೆಯ ಯಜಮಾನನ ಅನುಮತಿ ಪಡೆದಿದ್ದನೋ, ಇಲ್ಲವೋ ಕಾದಂಬರಿ ಹೇಳುವುದಿಲ್ಲ. ತನಗೆ ಎಷ್ಟು ಕಷ್ಟವಾದರೂ ತನ್ನ ಮೂಲದ ಆಳನ್ನು ಉಳಿಸಿಕೊಳ್ಳಬೇಕಾದ ಸಂಕಪ್ಪಯ್ಯನವರು ಉಳಿಸಿಕೊಂಡಂತೆ ಕಾಣುವುದಿಲ್ಲ) ಆಗ ಅವನು ಕೊನೆಯಬಾರಿ ಬರುವಾಗ ಸ್ವಲ್ಪ ಸಾಲಮಾಡಿ ಬಂದಿದ್ದು, ಸುಮಾರು ೪-೫ ರೂಪಾಯಿಯಾಗಿರಬಹುದು. ಅನಂತರ ಅವನು ಕಳಸಕ್ಕೆ ಹಿಂತಿರುಗಿ ಹೋಗಿರಲಿಲ್ಲ, ಈಗ ಆ ಕಳಸದ ತೋಟದ ಸೇರೆಗಾರ ಮನ್ವೇಲ್ ಸೋಜರು ಹೀಗೆ ನೋವಿನಿಂದ ದುಡಿ ಬಡಿಯುತ್ತಿದ್ದ ಚೋಮನ ಮುಂದೆ ನಿಂತಿದ್ದಾನೆ.

"ಮನ್ವೇಲ ತೋಟದ ದೊರೆಗಳು ಇಪ್ಪತ್ತು ರೂಪಾಯಿಗಳನ್ನು ನಿನಗೆ ದಾನವಾಗಿ ಬಿಟ್ಟಿದ್ದರೇನು ?" ಎಂದು ಗದರಿಸಿದ. ಚೋಮನಿಗೆ ಮಾತನಾಡಲು ಅವಕಾಶವಿಲ್ಲದೆ. ಮುಂದಿನ ಶನಿವಾರ ಬರುತ್ತೇನೆ ಹೊರಡಲು ತಯಾರಿರು ಎಂದು ಆಜ್ಞಾಪಿಸಿ ಹೋದ. ಸಾಲ ತೀರಿಸಲು ಧನಿಗಳ ಹತ್ತಿರ ಕೇಳೋಣವೆಂದರೆ ಅವರಿಗೆ ಆಗಲೇ ಸಾಲ ತೀರಿಸಿದ್ದೇನೆ ಎಂದು ಹೇಳಿದ್ದ ಚೋಮ. ಆದುದರಿಂದ ಮತ್ತೆ ಅವರ ಬಳಿ ಹೇಳುವಂತೆ ಇಲ್ಲ. ಅದೇ ಕ್ಷಣದಲ್ಲಿ ಮೇಯಲು ಹೋಗಿದ್ದ ಎತ್ತುಗಳು ಬಂದವು. ಚೋಮನಿಗೆ ಧೈರ್ಯಬಂದು ಅವುಗಳನ್ನು ಮಾರಿ ಸಾಲ ತೀರಿಸಬಹುದೆಂದು ಎಣಿಸಿದ. ಆದರೆ ಹಾಗೇ ಮಾಡಿದರೆ ತಾನು ಬೇಸಾಯಗಾರನಾಗುವ ಆಸೆ ಸತ್ತಂತೆಯೇ ಸರಿ ಎಂದು ಅನ್ನಿಸಿ ದುಡಿಬಡಿಯಲು ತೊಡಗಿದ.

ಮಕ್ಕಳು ಎತ್ತುಗಳನ್ನು ಮಾರಲು ಬಹಳವಾಗಿ ಹೇಳಿದರು. ಧನಿಯರಲ್ಲಿ ಇರಿಸಿ ಇಪ್ಪತ್ತು ರೂಪಾಯಿ ಸಾಲ ತರಬಹುದೆಂದು ಬೆಳ್ಳಿ ಹೇಳಿದಳು. ಆದರೆ ಚೋಮ ಅದಕ್ಕೆ ಒಪ್ಪಲಿಲ್ಲ. ತಾನೇ ಕಳಸದ ಕಾಫಿತೋಟಕ್ಕೆ ಹೋಗಲು ನಿಶ್ಚಯಿಸುತ್ತಾನೆ. "ಬೆಳ್ಳಿ ನಾನು ಸುಮ್ಮನೆ ಯಾಕೆ ಯೋಚನೆ ಮಾಡುವುದು ಹೋಗಿ ನಾಲ್ಕು ತಿಂಗಳಿದ್ದು ಬರುತ್ತೇನ" ಎಂದ.[೧] ಬೆಳ್ಳಿ ಮುಪ್ಪಿನ ತಂದೆ ಕೆಲಸಕ್ಕೆ ಹೋಗುವುದು ಸರಿ ಇಲ್ಲವೆಂದು ನಿರ್ಧರಿಸಿ, ಗುರುವ ಮತ್ತು ಚನಿಯರನ್ನು ತೋಟದ ಕೆಲಸಕ್ಕೆ ಕಳುಹಿಸಲು ನಿಶ್ಚಯಿಸಿದರು. ಹಿರಿಯ ಮಗ ಚನಿಯ ಪ್ರಾಯಕ್ಕೆ ಬಂದಿದ್ದ. ಅವನ ಪ್ರಾಯದ ಸಂಕಪ್ಪಯ್ಯನವರಿಗೆ ಮದುವೆಯಾಗಿ ನಾಲ್ಕು ವರ್ಷವಾಗಿತ್ತು. ಕೊನೆಗೆ ಚನಿಯನಿಗೆ ತೋಟದಿಂದ ಬಂದ ಮೇಲೆ ಮದುವೆ ಮಾಡುವುದೆಂದು ನಿರ್ಧರಿಸಿದ. ಸಂಕಪ್ಪಯ್ಯನವರ ಮನೆಯಲ್ಲಿ ಎಂದಿನಂತೆ ಕೆಲಸವನ್ನೆಲ್ಲ ಮಾಡಿದ ಮೇಲೆ ಅವರ ಹತ್ತಿರ "ಇನ್ನೇನಿಲ್ಲ, ಧನಿಗಳಿಗೆ ಇಷ್ಟೆಲ್ಲ ಒಕ್ಕಲು

---

೧. ಚೋಮನದುಡಿ ; ಪುಟ ೧೬

ಮಕ್ಕಳಿದ್ದಾರೆ. ಈ ಚೋಮನಿಗೂ ಒಂದು ಹಾಳು ಕೊಂಪೆಯನ್ನು ಗೇಣಿ ಕೊಟ್ಟಿದ್ದರೆ, ನಿಮ್ಮ ಹೆಸರು ಹೇಳಿ ಬದುಕುತ್ತಿದ್ದ". ಸಂಕಪ್ಪಯ್ಯನವರಿಗೆ ಆಶ್ಚರ್ಯವಾಯಿತು."[೧] ಆದರೂ ತಮ್ಮ ಬಳಿ ಬಂಜರುಬಿದ್ದ ಎಷ್ಟೋ ಜಮೀನಿದೆಯಲ್ಲ ಎಂದು ಚಿಂತಿಸಿ, ತಾಯಿಯನ್ನು ಒಂದು ಮಾತು ಕೇಳಿ ಕೊಡೋಣವೆಂದು ನಿರ್ಧರಿಸಿ, ತಾಯಿಯನ್ನು ಕೇಳಿದರೆ, ಆಕೆ ಸುತಾರಂ ಒಪ್ಪಲಿಲ್ಲ. ಅದನ್ನು ಸಂಕಪ್ಪಯ್ಯ ಚೋಮನಿಗೆ ಹೇಳಿದರು. ಅದೇ ಸಮಯಕ್ಕೆ ಅಲ್ಲಿಗೆ ಬಂದ ಮನ್ವೇಲ ಚೋಮನ ಸಾಲದ ವಿಚಾರವನ್ನು ಹೇಳಿದ. ಸಂಕಪ್ಪಯ್ಯ "ಚೋಮ ನನ್ನ ಹತ್ತಿರ ನೀನು ಸಾಲ ನನಗಿಲ್ಲ ಎಂದಿರಲಿಲ್ಲವೇ" ಎಂದು ಗದರಿಸಿದರು. ಚೋಮ ತಲೆತಗ್ಗಿಸಿ ಮನೆಗೆ ಹೋಗುವ ಬದಲು ಬಿರುಮ ಪೂಜಾರಿ ಅಂಗಡಿಗೆ ಹೋದ ಇತ್ತ ಸಂಕಪ್ಪಯ್ಯ ಮನ್ವೇಲನ ಸಾಲ ತೀರಿಸಲು ಒಡಂಬಡಲಿಲ್ಲ. ಕಡೆಗೆ ಚನಿಯ, ಗುರುವರು ಮನ್ವೇಲನ ಜೊತೆ ಕಳಸಕ್ಕೆ ತೆರಳಿದರು.

ಇತ್ತ ಚೋಮ ತಾನು ಬೇಸಾಯಗಾರನಾಗಬೇಕೆಂಬ ಆಸೆಯಲ್ಲಿ ತಲ್ಲೀನನಾಗಿ, ಇನ್ನು ಮುಂದೆ ಸಂಕಪ್ಪಯ್ಯನವರ ಮನೆಗೆ ಕೆಲಸಕ್ಕೆ ಹೋಗಬಾರದು, ಬದಲಿಗೆ ಸರ್ಕಾರಿ ಜಮೀನಿನಲ್ಲಿ ಬೇಸಾಯಗಾರನಾಗುವುದು ಇಲ್ಲ ಕಟ್ಟಿಗೆ ಕಡಿದಾದರೂ ಬದುಕುವುದೆಂದು ಯೋಚಿಸತೊಡಗಿದ. ಅಷ್ಟಕ್ಕೆ ಅಲ್ಲಿಗೆ ಬಂದ ಸಂಕಪ್ಪಯ್ಯನವರನ್ನು ಕಂಡು ಮತ್ತೆ ಕೆಲಸಕ್ಕೆ ಬಾ ಎಂಬ ಅವರ ಮಾತಿಗೆ ಒಡಂಬಟ್ಟು ಕೆಲಸಕ್ಕೆ ಹೋದ, ಮತ್ತೆ ಒಂದು ದಿನ ಎರಡನೇ ಬಾರಿ ಸಂಕಪ್ಪಯನವರ ಹತ್ತಿರ ತನ್ನ ಬೇಸಾಯದ ಆಸೆಯನ್ನು ತೋಡಿಕೊಂಡ. ಸಂಕಪ್ಪಯ್ಯನವರಿಗೆ ಜಮೀನು ಕೊಡಲು ಆಸೆ, ಆದರೆ ಅವರ ತಾಯಿ ಒಪ್ಪಲಿಲ್ಲ. ಇದನ್ನು ಕೇಳಿ ಚೋಮ ಅಂತರಂಗದಲ್ಲಿ ಮತ್ಸರಪಟ್ಟು ತನ್ನನ್ನು ಜೀವಿತದ ಕೂಲಿಯಾಗಿರಿಸಿ ತಾವು ಬೇಸಾಯಗಾರರಾಗಿದ್ದಕ್ಕೆ. ಪಕ್ಕದ ಹಳ್ಳಿಗೆ ಹೋಗಿದ್ದಾಗ ಅಲ್ಲಿನ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದರೆ ಜಮೀನು ಕೊಡುವುದಾಗಿ ಪಾದ್ರಿ ಹೇಳಿದರು ಆದರೆ ಚೋಮ ಸಿಟ್ಟಿನಿಂದ ಕಿಡಿಕಿಡಿಯಾಗಿ ಅಲ್ಲಿಂದ ಹೊರಡುತ್ತಾನೆ.

ಈ ಕಡೆ ಕಳಸದ ಕಾಫಿತೋಟದಲ್ಲಿ ಕೆಲಸ ಮಾಡುವಾಗ ಗುರುವ ಮತ್ತು ಚನಿಯರು ಉಳಿದಿದ್ದ ಬಲಮಗ್ಗುಲಲ್ಲಿ ಕೊಕ್ಕಡದ ದಲಿತ ತಂದೆ ತಾಯಿ ಮಗಳು ಈಗ ಕ್ರಿಶ್ಚಿಯನ್ನರಾಗಿ ಮಾರ್ಪಟ್ಟಿದ್ದಾರೆ. ಗುರುವ ಆ ಹುಡುಗಿ ಮಾರಿ (ಮೇರಿ)ಯನ್ನು ಪ್ರೀತಿಸಿದ, ಕೊನೆಗೆ ಹೇಳದೆ ಕೇಳದೆ ಅವರ ಜೊತೆ ಹೊರಟುಹೋದ. ಕೆಲಸಕ್ಕೆ ರಜಾಕೊಟ್ಟಿದ್ದರಿಂದ ತಮ್ಮನನ್ನು ಕಾಣದೆ ಚನಿಯ ಊರಿಗೆ ಮರಳಿದ. ಊರಿಗೆ ಬಂದು ನಡೆದ ಸಂಗತಿಯನ್ನು ತಂದೆಗೆ ತಿಳಿಸಿದ. ತಂದೆ ಆತನ ಮಾತನ್ನು ನಂಬದೆ ಕೊಕ್ಕಡಕ್ಕೆ ಗುರುವನನ್ನು ಕರೆದು ತರುವುದಾಗಿ ಹೋದನು. ಆದರೆ ಅವನು ಹೋಗವಷ್ಟರಲ್ಲಿ ಮದುವೆಯಾಗಿದ್ದಿತು. ಇತ್ತ ಕೊಪ್ಪದಲ್ಲಿ ಚನಿಯನಿಗೆ ಜ್ವರಬಂದು ಅಜಿಲಚೆನ್ನ ಯಾವ ಮಾಟಮಂತ್ರವೂ ಫಲಿಸದೆ, ಮೌಢ್ಯದ ಪರಾಕಾಷ್ಠೆಯ

---

೧ ಚೋಮನದುಡಿ ; ಪುಟ ೨೦

ದ್ಯೋತಕದಂತೆ ಇರುವ ಆ ಸನ್ನಿವೇಶದಲ್ಲಿಯೇ ಚನಿಯ ಮರಣ ಹೊಂದಿ, ಅಲ್ಲಿಗೆ ಅದೇ ಸಮಯಕ್ಕೆ ಬಂದ ಚೋಮನಿಗೆ ಎದೆ ಹಾರಿತ್ತು, ಮಗ ಜಾತಿ ಬಿಟ್ಟ ಕಾರಣಕ್ಕೆ ಪೆಂಜುರ್ಲಿ ಹೀಗೆ ಮಾಡಿದೆ ಎಂದು ಭಾವಿಸಿದ.

ಇತ್ತೀಚೆಗೆ ಚೋಮನ ನಡೆವಳಿಕೆ ಸಂಕಪ್ಪಯ್ಯನವರಿಗೆ ಹಿಡಿಸಿರಲಿಲ್ಲ. ಅದಕ್ಕೆ ಅವರು ಅವನನ್ನು ಗದರಿಸಿದರೆ, ಚೋಮ ಹೋ ನೀವು ನನಗೆ ಕೈತುಂಬ ಕೂಲಿ ಕೊಡುವಾಗ ಬೆಳಿಗ್ಗೇನೂ ಸಂಜೆಯೇನು ಎಂದು ವ್ಯಂಗ್ಯವಾಗಿ ನಕ್ಕಿದ್ದ. ಸಂಕಪ್ಪಯ್ಯನವರು ತುಂಬಾ ಕೋಪದಿಂದ ಮನೆಗೆ ಬರಬೇಡವೆಂದು ಚೋಮನನ್ನು ಬೈದರು. ಬೆಳ್ಳಿ ತಂದೆಗಾಗಿ ಕ್ಷಮೆ ಕೇಳಿದಳು. ಇನ್ನು ಮುಂದೆ ಧನಿಯರ ಮನೆಯಲ್ಲಿ ತಂದೆ ಸ್ಥಾನವನ್ನು ತಾನು ನಿರ್ವಹಿಸುತ್ತೇನೆಂದು ನಿರ್ಧರಿಸಿದಳು. ಅಷ್ಟರಲ್ಲಿ ಸೇರೆಗಾರ ಮನ್ವೇಲ ಬಂದು ಚೋಮನನ್ನು ನಿನ್ನ ಮಕ್ಕಳು ಹಳೆಯ ಸಾಲದ ಜೊತೆಗೆ ಇನ್ನು ಸಾಲ ಮಾಡಿದ್ದಾರೆ. ಅದನ್ನು ತೀರಿಸುವವರು ಯಾರೆಂದು ಬೈದನು. ಮನೆಯಲ್ಲಿ ನಡೆದಿರುವ ಗುರುವ ಚನಿಯರ ಸಂಗತಿ ತಿಳಿದು ಬೆಳ್ಳಿಯನ್ನು ಕೆಲಸಕ್ಕೆ ಬರುವಂತೆ ಸೂಚಿಸಿ ಹೊರಟನು. ಅದರಂತೆ ಬೆಳ್ಳಿ ಕಳಸಕ್ಕೆ ನೀಲನ ಜೊತೆ ಹೊರಟಳು. ಕಳಸದ ಕಾಫಿ ತೋಟದಲ್ಲಿ ಹೊಸಬಳಾದುದರಿಂದ ಹಾಗೂ ಅಲ್ಲಿ ಬೆಳ್ಳಿಯ ಬಣ್ಣ ತುಸು ಎದ್ದು ಕಾಣುತ್ತಿತ್ತು. ಮಂಗೇಲ ದೊರೆ ವಿಶೇಷವಾಗಿ ವಿಚಾರಿಸಿದ, ನಂತರ ಅವಳ ತಂದೆ ಮಾಡಿದ ಸಾಲದ ಬಾಬ್ತು ೧೫ ರೂಪಾಯಿ ಎಂದು ತಿಳಿಸಿದ. ಬೆಳ್ಳಿಗೆ ಮನ್ವೇಲ ಮೋಸಗಾರನೆಂದೆನಿಸಿತು. ದುರಂತಕ್ಕೆ ನೀಲ ಚಳಿಜ್ವರದಿಂದ ಹಾಸಿಗೆ ಹಿಡಿದ. ಸರಿಯಾಗಿ ಬೆಳ್ಳಿ ಕೆಲಸಕ್ಕೆ ಹೋಗಲು ಆಗುತ್ತಿರಲಿಲ್ಲ. ಒಮ್ಮೆ ತಿಂಗಳ ಸಂಬಳ ಕೊಡುವಾಗ ಮನ್ವೇಲ ಆಕೆಯನ್ನು ವಿಚಾರಿಸಿದಾಗ ಆಕೆ ತಮ್ಮನ ಆರೋಗ್ಯದ ವಿಚಾರವನ್ನು ಶ್ರುತ ಪಡಿಸಿದಳು, ಆತ ತನ್ನ ಮನೆಯಲ್ಲಿಯೇ ಮನೆಗೆಲಸ ಮಾಡಿಕೊಂಡಿರುವಂತೆ ಸೂಚಿಸಿದ. ಅನಂತರ ಅವರಿಬ್ಬರ ನಡುವೆ ಸಲುಗೆ ಬೆಳೆಯಿತು. ಅದು ದೈಹಿಕ ಸಂಬಂಧಕ್ಕೆ ದಾರಿಮಾಡಿಕೊಟ್ಟಿತು. ಒಮ್ಮೆ ಜಾತಿಗೆಟ್ಟವನ ಮನೆಗೆ ನಾವೇಕೆ ಹೋಗುತ್ತೇವೆ ಎಂದಿದ್ದ ಬೆಳ್ಳಿಗೆ ಇಲ್ಲಿ ಅದಾವುದು ಗಮನಕ್ಕೆ ಬರಲಿಲ್ಲ. ಆಕೆಯ ದೈಹಿಕ ದೌರ್ಬಲ್ಯವೇ ಪ್ರಬಲವಾಯಿತು. ಮುಂದೆ ಅದೇ ಮಂಗೇಲ ದೊರೆಗಳ ಜೊತೆಗೂ ಸಂಬಂಧ ಬೆಳೆಸಿದಳು. ಅವರು ಅಂದು ಆಕೆಗೆ ಐದು ರೂಪಾಯಿಗಳನ್ನು ಕೊಟ್ಟಿದ್ದರು. ನೀಲ ಹುಡುಗರ ಜೊತೆ ಆಟವಾಡುವಾಗ ಜಗಳವಾಗಿ, ಎದುರಿನ ಹುಡುಗ ಸೇರೆಗಾರರ ಭಾವನೆಂಟ ಎಂದು ಬೈದಿದ್ದ. ಇದರಿಂದ ದಿಗಿಲುಗೊಂಡ ಬೆಳ್ಳಿ ತಂದೆಯ ಸಾಲ ತೀರಿಸಿದನೆಂದು ಸಮಾಧಾನವಾದರೂ ಮನಸ್ಸಿಗೆ ಶಾಂತಿಯಿಲ್ಲದೆ ಮನ್ವೇಲನಿಗೆ ನಾನಿನ್ನು ಊರಿಗೆ ಹೋಗುತ್ತೇನೆ ಎಂದು ಹೇಳಿದಳು. ಮನ್ವೇಲನ ಹೆಂಡತಿ ಒಂದು ವಾರದಲ್ಲಿ ಹಿಂದಿರುಗುತ್ತಿದ್ದರಿಂದ ಹಾಗೇ ಮಾಡೆಂದು ಕೈಗೆ ಸ್ವಲ್ಪಹಣವನ್ನು ಕೊಟ್ಟು ಕಳುಹಿಸಿದ. ಬೆಳ್ಳಿ ಕೂಡ ಬಹುಶಃ ಅವಿವಾಹಿತನಾದ ಹುಡುಗನೊಡನೆ ಸಂಬಂಧವಿದ್ದರೆ ಆಕೆ ಗುರುವನಂತೆ ಆಗುತ್ತಿದ್ದಳೇ ? ಅಥವಾ ತಂದೆಯ ಮೇಲಿನ ಪ್ರೀತಿ ಆಕೆಯನ್ನು ಅಲ್ಲಿ ಇರಗೊಡಲಿಲ್ಲವೇ ? ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಹಾಗೆ ಊರಿಗೆ

ಒಂದು ದಿನವೇ ಪಂಜದ ಜಾತ್ರೆ ಶುರುವಾಗುತ್ತದೆ. ಚನಿಯ ಬಂದಾಗಲೂ ಪಂಜದ ಜಾತ್ರೆ ಶುರುವಾಗಿರುತ್ತದೆ ಎಂಬುದನ್ನು ಗಮನಸಿಬೇಕು.

ಮತ್ತೊಮ್ಮೆ ಚೋಮ ಮೂರನೇ ಬಾರಿ ಸಂಕಪ್ಪಯ್ಯನವರ ಬಳಿ ತನ್ನ ಬೇಸಾಯದ ಆಸೆಯನ್ನು ತೂಡಿಕೊಂಡ. ಆದರೆ ಅವರು ನಿಸ್ಸಹಾಯಕರು "ಅಂತದ್ದಾಗಬೇಕಾದರೆ ನಮ್ಮಮ್ಮ ಸಾಯಬೇಕು" ಎಂದರು. ಚೋಮ ಬೇಸರದಿಂದ ಮನೆಗೆ ಹಿಂದಿರುಗಿದ ಮರುದಿನ ಕಾಳ ನೀರಲ್ಲಿ ಬಿದ್ದು ಸಾವನಪ್ಪಿದ. ಆದರೆ ಅವನನ್ನು ಬದುಕಿಸಬಹುದಾಗಿತ್ತು. ಆದರೆ ಚೋಮನ ಜಾತಿ ಅಡ್ಡ ಬಂದು ಆತನ ಪ್ರಾಣವನ್ನು ಬಲಿತೆಗೆದುಕೊಂಡಿತ್ತು. ಚೋಮನಿಗೆ ಇನ್ನು ಈ ಊರಿನ ದೇವರ ತಂಟೆಯೇ ಬೇಡವೆಂದು ನಿರ್ಧರಿಸಿದ. ಕ್ರೈಸ್ತಮತಕ್ಕೆ ಮತಾಂತರವಾಗಲು ಚಿಂತಿಸಿ ಮಗಳೊಡನೆ ಹೇಳಿದ. ಮಗಳು "ಮನ್ವೇಲನ ಹಂಬಲವೂ" ಬಂದು ಆಕೆ ಒಪ್ಪಿದಳು. ಅದೇ ಕ್ಷಣದಲ್ಲಿ ಮನ್ವೇಲ ಬಂದು ಕೊಕ್ಕಡದಲ್ಲಿರುವ ಗುರುವನಿಗೆ ನಿಮ್ಮನ್ನು ನೋಡುವ ಆಸೆಯಿದೆಯಂತೆ ಹೋಗಿ ಕರೆದುಕೊಂಡುಬನ್ನಿ, ಆತ ಬೇರೆ ಬೇಸಾಯಗಾರನಾಗಿದ್ದಾನೆಂದು ಹೇಳಿದ. ಜೊತೆಗೆ ಅವನನ್ನು ಕರೆತರಲು ಇರುವ ಅಡ್ಡಿಯನ್ನು ಆತ ಹೇಳಿದ. ಆಗ ಬೆಳ್ಳಿ ಸೇರೆಗಾರರೆ ನಾವಿನ್ನು ಪಾದ್ರಿ ಮತ ಸೇರುವುದೆಂದು ಮಾಡಿದ್ದೇವೆ, ಎಂದು ಹೇಳಿದಳು. ಚೋಮ ಮಗನನ್ನು ಕರೆದು ತರಲು ಕೊಕ್ಕಡಕ್ಕೆ ಹೊರಡಲು ನಿಶ್ಚಯನಾದನು.

ಮುಂಜಾನೆ ಚೋಮ ಕೊಕ್ಕಡಕ್ಕೆ ಮಗ ಗುರುವನನ್ನು ಕರೆತರಲು ಹೊರಟನು. ಆತನ ಜೊತೆಗೆ ಆತನ ನಾಯಿ 'ಬಾಡು' ಕೂಡ ಹೊರಟಿತು. ಇತ್ತ ಕಾಳನನ್ನು ಸೊಪ್ಪಿಗೆ ಕಳುಹಿಸಿ ಧನಿಯರ ಮನೆಗೆಲಸಕ್ಕೆ ಹೋಗಲು ಸಿದ್ಧಳಾಗಿದ್ದ ಬೆಳ್ಳಿಯನ್ನು ನೋಡಲು ಮನ್ವೇಲ ಬಂದನು. ಅವರಿಬ್ಬರ ನಡುವೆ ಮತ್ತೆ ಪ್ರಣಯದಾಟ ಶುರುವಾದವು. ಇತ್ತ ಕಡೆ·ಬೀಸು ಹೆಜ್ಜೆಗಳನ್ನು ಹಾಕುತ್ತ ಕೊಕ್ಕಡಕ್ಕೆ ಹೊರಟಿದ್ದ ಚೋಮನಿಗೆ ದಾರಿಯಲ್ಲಿ ಪೆಂಜೂರ್ಲಿ ಭೂತಕ್ಕೆ ನಮಸ್ಕರಿಸಿ ಹೋಗುವುದು ವಾಡಿಕೆ. ಅಂದು ಚೋಮನ ನಾಯಿ 'ಬಾಡು' ಪೆಂಜುರ್ಲಿ ಭೂತದ ಗುಡಿಯಮುಂದೆ ನಿಂತಿತ್ತು. ಚೋಮ ತಟಸ್ಥನಾಗಿ ಮೊಣಕಾಲುಗಳನ್ನು ಕೇವಲ ಅಭ್ಯಾಸಬಲದಿಂದಲೇ ಊರಿದ ಮೈ ಜುಮ್ಮೆಂದಿತು" ತಾನು ಪಾದ್ರಿ ಮತವನ್ನು ಸೇರುವವನು ಇನ್ನು ಪೆಂಜುರ್ಲಿಗೆ ತಗ್ಗಾಲು ಹಾಕುವುದೇ ಎಂದು ಅನಿಸಿತು ಕಾಲನ್ನು ನೀಡಲು ಆಗಲಿಲ್ಲ. ಪೆಂಜುರ್ಲಿ ತನ್ನೆದುರಿಗೆ ನಿಂತಂತೆ ಕಾಣಿಸಿತು, ತಾನು ನಂಬಿದ ಮತಧರ್ಮದಲ್ಲೆ ಇರುತ್ತೇನೆಂದು ನಿರ್ಧರಿಸಿ ಮನೆಗೆ ಹಿಂತಿರುಗಿ ಬಂದ ಗುಡಿಸಲು ಬಾಗಿಲು ತೆಗೆದೇ ಇದ್ದುದರಿಂದ ನೇರವಾಗಿ ಒಳಗೆ ನುಗ್ಗಿದ ಚೋಮ. ಅಲ್ಲಿ ಮನ್ವೇಲ ಮತ್ತು ಬೆಳ್ಳಿಯನ್ನು ಏಕಾಂತದಲ್ಲಿ ನೋಡಿ ಸಿಟ್ಟುಗೊಂಡು ತನ್ನ ದೊಣ್ಣೆಯನ್ನು ಅವನ ಮೇಲೆ ಎಸೆದ. ಮನ್ವೇಲ ತಪ್ಪಿಸಿಕೊಂಡ. ಬೆಳ್ಳಿಯನ್ನು ಗುಡಿಸಲಿನಿಂದ ಈಚೆಗೆ ತಳ್ಳಿ, ಕಾಳನನ್ನು ಹಾಗೇ ತಳ್ಳಿ ಒಬ್ಬನೆ ಕುಳಿತು ಗುಡಿಸಲಿನ ಕದ ಮುಚ್ಚಿ ಚಿಂತಿಸಿದ. ಮಗಳು ಬೆಳ್ಳಿಯ ತಪ್ಪಿಲ್ಲವೆನ್ನಿಸಿತು. ತನ್ನದೇ ತಪ್ಪು ಆಕೆಗೆ ಸರಿಯಾದ ವಯಸ್ಸಿಗೆ ಮದುವೆ ಮಾಡಬೇಕಾಗಿತ್ತು ಎಂದು ಹಪಹಪಿಸಿ ಎತ್ತುಗಳನ್ನು ಅವು ಸಿಕ್ಕಲ್ಲೆ ಹೋಗಿ

[illegible]

ಬಿಟ್ಟು ಬಂದ. ನೇಗಿಲನ್ನು ಮುರಿದು ಅದನ್ನು ಹೊತ್ತಿಸಿ ಕೊನೆಯ ಬಾರಿ ದುಡಿಯನ್ನು ಬಾರಿಸುತ್ತ ಸಾವನ್ನಪ್ಪಿದ. ಕೊನೆಯಲ್ಲಿ ಅವನು ಕಾಡಿಗಟ್ಟಿದ್ದ ಎತ್ತುಗಳು ತಿರುಗಿ ಬಂದಿದ್ದವು. 'ಬಾಡು' ನಾಯಿ ಅಲ್ಲಿಯೇ ನಿಂತಿತ್ತು. ಹಸಿವಿನಿಂದ ನೋವಿನಿಂದ, ಕಾದಂಬರಿಯ ಆರಂಭದಲ್ಲಿ ದುಡಿ ಬಾರಿಸುತ್ತ ಎಲ್ಲರ ಎಚ್ಚರ ತಪ್ಪಿಸಿದ್ದ ಚೋಮ, ಕಾದಂಬರಿಯ ಕೊನೆಯಲ್ಲಿ ದುಡಿ ಬಾರಿಸುತ್ತಲೆ ಶಾಶ್ವತ ಎಚ್ಚರ ತಪ್ಪಿದ.

ಕೆಂಪು ಮೀನು (ಚೆಮ್ಮೀನು)

ಸಮುದ್ರ ತೀರದಲ್ಲಿ ಸಮುದ್ರವನ್ನೇ ಆಶ್ರಯಿಸಿದ ಬೆಸ್ತರ ಕುಲಗಳು ವಾಸ ಮಾಡುವ ಅನೇಕ ಊರುಗಳಿವೆ. ಈ ಕುಲಗಳಲ್ಲಿ ವಿಧಿ ನಿಷೇಧ್ಧಗಳು ಅಪಾರ. ಸಂಪ್ರದಾಯದ ಬಿಗಿತ ಹೆಚ್ಚು. ಅದರಲ್ಲಿ ಜನಜನಿತವಾದ ಸಾರ್ವತ್ರಿಕವಾದ ಒಂದು ಪ್ರಬಲ ನಂಬಿಕೆಯೆಂದರೆ, ಪರಂಪರಾಗತವಾದ ತತ್ವವೆಂದರೆ, ಹೆಣ್ಣಿನ ಪಾತಿವ್ರತ್ಯ, ಚಾರಿತ್ರ್ಯ. ಕಡಲ ಮೇಲಿನ ಗಂಡಸಿನ ಜೀವ, ನೆಲದ ಮೇಲಿನ ಜೀವನ ನಿರ್ಧಾರವಾಗುವುದು ಈ ತತ್ವದಿಂದ. ಕಡಲ ಮೇಲೆ ದೋಣಿ ಹತ್ತಿ ಹೋಗಿರುವ ಬೆಸ್ತರಿಗೆ ತೀರದಲ್ಲಿನ ಆದರ್ಶ ಸತಿಯರ ಪಾವಿತ್ರ್ಯವೆ ರಕ್ಷೆ. ಕಡಲಮ್ಮ ಕಠೋರೆಯಾದ ಒಡತಿ. ಅವಳು ಈ ಕಡಲ ತಳದ ಅರಮನೆಯಲ್ಲಿ ವಾಸಮಾಡುತ್ತಾಳೆ. ಅಲ್ಲಿಗೆ ಭೀಕರ ಸುಳಿಗಳು ಸೇರುವ, ಘೋರವಾಹಿನಿಗಳು ಸೇರುವ ಮಾರ್ಗವಿದೆ. ಅಧರ್ಮಿಗಳನ್ನು ಅವಳು ಕಾರುಣ್ಯದ ಸೋಂಕೆ ಇಲ್ಲದೆ ಅಲ್ಲಿಗೆ ಹಿಡಿದೆಳೆಯುತ್ತಾಳೆ. ಅದೇ ಸಮಯದಲ್ಲಿ ಭೂತಾಕಾರದ ಪಾಪರೂಪಗಳು ತಿಮಿಂಗಲಾದಿಗಳು ವಿಷಸರ್ಪಗಳು, ಕಡಲಮ್ಮನ ಕೋಪವನ್ನು ಸಾರುತ್ತ ಜನರನ್ನು ಎಚ್ಚರಿಸುತ್ತ ತೀರದಲ್ಲಿ ಹರಿದಾಡುತ್ತವೆ.

ಇಂತಹ ಕಟ್ಟುಪಾಡಿನ ಪರಂಪರಾಗತ ತತ್ವದ ಬೆಸ್ತರ ಗ್ರಾಮ ನೀರ್ಕುನ್ನಿ ಸಮುದ್ರ ತೀರ. ತೀರದಲ್ಲಿ ಒಂದು ಹೆಣ್ಣು ಒಂದು ಗಂಡು ಮಾತನಾಡುತ್ತ ನಿಂತಿದ್ದಾರೆ. ಅದೂ ಬೇರೆ ಬೇರೆ ಧರ್ಮಕ್ಕೆ ಸೇರಿದವರು ಅವರು. ಅದು ಪರಂಪರಾಗತ ನಂಬಿಕೆಗೆ ವಿರುದ್ಧವಾದುದು. ಆದರೆ ತತ್ತಕ್ಕೆ, ನಂಬಿಕೆಗೆ ಅಪಚಾರವೆಸಗುವಂತಹ ನಡೆವಳಿಕೆ ಅವರಿಬ್ಬರದಲ್ಲ. ಆದರೂ ಹೀಗೆ ಮಾತನಾಡುವುದು ನಿಷಿದ್ಧ ಅಲ್ಲಿ. ಆ ಹೆಣ್ಣಿನ ಹೆಸರು ಕರುತ್ತಮ್ಮ; ಆ ಗಂಡಿನ ಹೆಸರು ಪರೀಕುಟ್ಟಿ. ಆಕೆ ಬೆಸ್ತರ ಹುಡುಗಿ. ಆತ ಮುಸ್ಲಿಂ. "ನಮ್ಮ ಅಪ್ಪ ದೋಣಿ ಬಲೆ ಕೊಂಡು ಕೊಂಡು ಬರುವುದಕ್ಕೆ ಹೋಗುತ್ತಿದ್ದಾನೆ" ಎನ್ನುತ್ತಾಳೆ ಕರುತ್ತಮ್ಮ ತುಂಬ ಅದೃಷ್ಟವಂತೆ ನೀನು ಕರುತ್ತಮ್ಮ ಎನ್ನುತ್ತಾನೆ. ಪರೀಕುಟ್ಟಿ. ಕರುತ್ತಮ್ಮನಿಗೆ ಪ್ರತಿ ಹೇಳಲು ಬಾಯಿ ಬರಲಿಲ್ಲ. ಆದರೂ ಕ್ಷಣದಲ್ಲೆ ಅವಳು ಆ ಬಿಕ್ಕಟ್ಟನ್ನು ಪರಿಹರಿಸಿದಳು ಅವಳು ಹೇಳಿದಳು ಆದರೆ ರೂಪಾಯಿ ಸಾಲದು! ನಮಗೆ ಕೊಂಚ ರೂಪಾಯಿ ಕೊಡುತ್ತೀಯಾ? ನನ್ನ ಕೈಲೆಲ್ಲಿಂದ ರೂಪಾಯಿ ಪರೀಕುಟ್ಟಿ ಬೆರಳು ಬಿಡಿಸಿ ಅಂಗೈ ತೋರಿಸಿದ. ಆಗ ಕರುತ್ತಮ್ಮ ನಕ್ಕಳು. ಮತ್ತೆ ಏಕೆ ಚಿಕ್ಕ ಸಾಹುಕಾರ ಅಂತ ದೊಡ್ಡದಾಗಿ ಹೇಳಿಕೊಂಡು ಮೆರೆಯುತ್ತೀ? ಎಂದಳು ಚಿಕ್ಕ ಸಾಹುಕಾರ ಅಂತ ಕರುತ್ತಮ್ಮ ಕರೆಯೋದೇಕೆ? ಮತ್ತೆ ಹೇಗೆ ಕರೆಯೋದು? ಪೆರಿಕುಟ್ಟಿ ಅಂತ ಕರೆಯಬೇಕು ಕರುತ್ತಮ್ಮ 'ಪರೀ' ಎನ್ನವವರೆಗೂ ಉಚ್ಚರಿಸಿದಳು ಆಮೇಲೆ ಪಕ್ಕನೆ ನಕ್ಕಳು ಗಂಭೀರವಾಗಿ ಮಾತನಾಡಲು ಯತ್ನಿಸಿ ನಗತೊಡಗಿದಳು ಪರೀಕುಟ್ಟಿಯೂ ನಗತೊಡಿಗಿದ ಹೇಗೆ ನಕ್ಕರೊ ಏಕೆ ನಕ್ಕರೋ, ಏನೋ? ನಗುವನ್ನು ಅದುಮಲಾರದೆ ಅಸಹಾಯಕರಾಗಿ ನಕ್ಕರು.[೧]

---

೧ ಕೆಂಪು ಮೀನು (ಚೆಮ್ಮೀನು) ; ಪುಟ ೨

ಹೀಗೆ ಶುರುವಾದ ಸಂಗತ ಮಾತುಕತೆ ಅವರಿಬ್ಬರಿಗೂ ಮುದನೀಡಿತು. ವಿಲಕ್ಷಣ ಆನಂದ ಆವರಿಸಿತು ಇದ್ದಕ್ಕಿದ್ದಂತೆ ಕರುತ್ತಮ್ಮಳ ಮುಖ ಕೆಂಪೇರಿತು. ಅವಳು ನಾಚಿದಳು. ಅಲ್ಲ ರೇಗಿದಳು ಬತ್ತಲೆ ಎದೆಯ ಕರುತ್ತಮ್ಮ ಅನುಪಮ ಸುಂದರಿ. ಪರೀಕುಟ್ಟಿ ಅವಳ ತುಂಬಿದೆದೆಯ ಮೇಲೆ ಕಣ್ಣಿರಿಸಿದ್ದ ಅದು ಅವನಿಗೆ ಗೊತ್ತಾಗದೆ ಆದ ಸಂಗತಿ. ಅದ್ದರಿಂದ ಕರುತ್ತಮ್ಮನಿಗೆ ಮುದವಾಗಿತ್ತು. ಆದರೆ ಆಕೆ ನಾಚಿಕೊಂಡು ಪರೀಕುಟ್ಟಿಯ ಮೇಲೆ ರೇಗಿಯೇ ಮನೆಗೆ ಓಡಿದಳು. ಕಡಲ ತೀರದಲ್ಲಿ ಅವರಿಬ್ಬರಿಗೂ ಚಿಕ್ಕಂದಿನಿಂದಲೂ ಗೆಳೆತನ ಬೆಳೆದು ಒಬ್ಬರನೊಬ್ಬರು ಅರಿವಿಲ್ಲದೆ ತುಂಬಾ ಪ್ರೀತಿಸುತ್ತಿದ್ದಾರೆ. ಅವರ ಪ್ರೀತಿಯಲ್ಲಿ ಕಪಟತೆಯಿಲ್ಲ. ಆದರೆ ಅದು ಸಮಾಜ ಒಪ್ಪಿತವಲ್ಲ. ಕಡಲ ತಡಿಯಿಂದ ಓಡಿದ ಕರುತ್ತಮ್ಮನನ್ನು ನೆನೆದು ತಪ್ಪುಮಾಡಿದೆನೇನೋ ಎಂಬ ಭಾವದಿಂದ "ತಪ್ಪನ್ನು ಕ್ಷಮಿಸಬೇಕೆಂದು ಕರುತ್ತಮ್ಮನನ್ನು ಬೇಡಿಕೊಳ್ಳಬೇಕು, ಇನ್ನು ಆ ರೀತಿ ಮೇರೆ ದಾಟುವುದಿಲ್ಲ" ಕ್ಷಮಾಯಾಚನೆಗೆ ಹಾತೊರೆಯುತ್ತಾನೆ. ಕರುತ್ತಮ್ಮ ತಂದೆ ಚೆಂಪನ್‌ಕುಞ್ಞು ಹಾಗೂ ತಾಯಿ ಚಕ್ಕಿ ಸಮುದ್ರದಲ್ಲಿ ಮೀನಿನ ಕೆಲಸಕ್ಕೆ ಹೋಗಿದ್ದಾಗ ಮನೆಯಲ್ಲೇ ಇರು ಎಂದು ಕರುತ್ತಮ್ಮನನ್ನು ನಿಯಮಿಸಿ ಹೋಗಿದ್ದರು. ಅದಕ್ಕೆ ಕರುತ್ತಮ್ಮ ತನ್ನ ತಂಗಿ ಪಂಚಮಿಯನ್ನು ಮನೆಯಲ್ಲಿರಿಸಿ ಕಡಲ ತಡಿಯಲ್ಲಿ ಪರೀಕುಟ್ಟಿಯ ಜೊತೆ ಮಾತನಾಡುತ್ತಿದ್ದಳು. ತಾನು ತನ್ನ ಓರಗೆಯವರೊಂದಿಗೆ ಆಟವಾಡಲು ಬಿಡದೆ ಈ ರೀತಿ ಮನೆಯಲ್ಲೆ ಕಾವಲು ಇರಿಸಿದಳಲ್ಲ ಎಂದು ಸಿಟ್ಟಿನಿಂದ ತಾಯಿ ಚಕ್ಕಿ ಬಂದಾಗ, ಕಡಲ ತೀರದಲ್ಲಿ ಪರೀಕುಟ್ಟಿಯ ಜೊತೆಗಿನ ಮಾತುಕತೆಯ ವಿಚಾರವನ್ನು, ನಗುತ್ತಿದ್ದ ಸಂಗತಿಯನ್ನು ಎಲ್ಲವನ್ನು ಹೇಳಿದಳು.

ಆತಂಕಗೊಂಡ ತಾಯಿ, ಮಗಳನ್ನು ವಿಚಾರಿಸಿದಳು. ಮಗಳಿಗೆ ತಮ್ಮ ಕಡಲ ಹಾಗೂ ಕುಲದ ತತ್ವವನ್ನು ವಿವರಿಸಿದಳು "ಅಲ್ಲಿಂದಿಲ್ಲಿಯವರೆಗೂ ಹರಡಿರುವ ಕಡಲಿನಲ್ಲಿ ಎಲ್ಲವೂ ಉಂಟು ಮಗಳೆ ! ಎಲ್ಲವೂ ಉಂಟು ಆಚೆ ಹೋಗ್ಪೋ ಗಂಡಸರು ಈಚೆಗೆ ಹಿಂತಿರಿಗೋದು ಯಾತರಿಂದ ಗೊತ್ತೇನು? ದಡದಲ್ಲಿರೋ ಹೆಂಗಸರು ನಿಜ ನೀತಿ ಕಾಪಾಡುವುದರಿಂದ. ಇಲ್ಲದೆ ಹೋದರೆ ಅವರನ್ನು ಸಾಗರ ದೋಣಿಸಹಿತ ಸುಂಟರ ಸುಳಿ ಹಿಡಿದು ನುಂಗೆ ಬಿಡುತ್ತದೆ. ಕಡಲಿಗೆ ಹೋಗಿರುವ ಜೀವ ದಡದಲ್ಲಿನ ಹೆಣ್ಣಿನ ಕೈಯಲ್ಲಿದೆ ಮಗಳೆ"[೨] ಆದರೆ ಕರುತ್ತಮ್ಮ ಕಡಲ ಮೇಲಿರುವ ಯಾವ ಜೀವಕ್ಕೂ ಇನ್ನೂ ಬಾಧ್ಯಳಾಗಿಲ್ಲ. ಅವಳಿಗೆ ಈ ವಿಚಾರ ಅಪ್ರಸ್ತುತ ಎನ್ನುತ್ತಿದ್ದಂತೆ ತಾಯಿ "ನೋಡೆ ನಿನಗೀಗ ತಲೆ ಮೊಲೆ ತುಂಬಿರುವ ಪ್ರಾಯ. ಚಿಕ್ಕ ಸಾಹುಕಾರರು ತಲೆಯಲ್ಲಿ ಮೆದುಳಿಲ್ಲದ ಈಗಿನ ಕಾಲದ ಹುಡುಗರು. ನಿನ್ನ ಎದೆ ಕಡೆ ಆಸನದ ಕಡೆ ಚುಚ್ಚುನೋಟ ಬೀರುತ್ತಾರೆ.[೩] ಎಂದು ವಿವೇಕ ಮುಂದುವರೆಸಿದಳು ಅಂದು ನಡೆದ ಸಂಗತಿಯು ಇದೇ ಆಗಿತ್ತು. ಕರುತ್ತಮ್ಮ ನಡುಗಿದಳು.

ಚಕ್ಕಿ ತನ್ನ ಗಂಡ ಚಂಪನ್‌ಗೆ ಮಗಳ ಮದುವೆ ಮಾಡುವಂತೆ ಒತ್ತಾಯ ಪಡಿಸತೊಡಗಿದಳು. ಆಕೆಗೆ ಪ್ರಾಯದ ದುಡುಕಿನ ನಡವಳಿಕೆಗಳ ಅರಿವಿದೆ. ಅಂತಹ ಪ್ರಾಯವನ್ನು ಆಕೆ ದಾಟಿ ಬಂದವಳು. ಸಮಾಜದ ನಿಷ್ಠುರ ನುಡಿಗಳು, ಕಟ್ಟು ಕಟ್ಟಲೆಗಳ ಭಯವಿದೆ ಆಕೆಗೆ. ಆದರೆ ಗಂಡ ಚಂಪನ್‌ಗೆ ತಾನು ದೋಣಿ ಬಲೆ ಕೊಂಡು ಕೊಳ್ಳುವುದು ಮುಖ್ಯ. ಆತನಿಗೆ ತಾನೊಂದು ದೋಣಿಯ ಒಡೆಯನಾಗಬೇಕೆಂಬ ಬಯಕೆಯ ಮುಂದೆ ಮಿಕ್ಕೆಲ್ಲವೂ ಕುಬ್ಜವಾಗಿ ಕಾಣುತ್ತವೆ. " ನೋಡು! ಆ ಗಂಟಿಂದ ಮಾತ್ರ ಏನೇ ಬರಲಿ

---

೧ ಕೆಂಪು ಮೀನು (ಚೆಮ್ಮೀನು) ; ಪುಟ ೬

೨. ಅದೇ : ಪುಟ ೭

ಒಂದು ಬಿಡಿಕಾಸು ನಾನು ಹೊರತೆಗೆಯುವುದಿಲ್ಲ. ಆ ಯೋಚನೆ ಬಿಟ್ಟುಬಿಡು". ಎನ್ನುವಷ್ಟು ಕಠಿಣ ನಿಲುವು ಅವನದು ಚಕ್ಕಿ ಮಗಳನ್ನು ಯಾವನಾದರೂ ಒಬ್ಬ ನಾಲ್ಕನೆಯ ವೇದದವನು ಕೆಡಿಸಿ ಬಿಡುತ್ತಾನೆ ನೋಡುತ್ತಿರಿ ನಡೆಯುವುದು ಅದು! ಯಾವನಾದರೂ ನಾಲ್ಕನೆಯ ವೇದದವನು ಮಗಳನ್ನು ಕೆಡಿಸಿಬಿಡುತ್ತಾನೆ ಎಂದು ಚಕ್ಕಿ ಹೇಳಿದ್ದು ಕರುತ್ತಮ್ಮಳ ಕಿವಿಯಲ್ಲಿ ಗುಡುಗಿತು. ಅದರ ಪೂರ್ಣ ಪರಿಜ್ಞಾನ ಮಾತ್ರ ಚಂಪನ್‌ಗೆ ಹೊಳೆಯಲಿಲ್ಲ. ಚಕ್ಕಿ ಎಲ್ಲವನ್ನು ವಿವರಿಸಿ ಹೇಳಲು ಅಶಕ್ತಳಾಗಿದ್ದಳು.

ಚಂಪನ್ ದೋಣಿ ಬಲೆ ಕೊಂಡುಕೊಳ್ಳಲು ಪರೀಕುಟ್ಟಿಯ ಹತ್ತಿರ ಸಾಲಕೇಳಿದ. ಆತ ಉದಾರವಾಗಿ ರಾತ್ರಿ ಹೊತ್ತು ತನ್ನ ಗಡಂಗಿಂದ ಮೀನಿನ ಬುಟ್ಟಿಗಳನ್ನು ತಂದು ಚಂಪನ್‌ಗೆ ಕೊಡತೊಡಗಿದ. ದೋಣಿ ಕೊಳ್ಳುವ ವಿಪರೀತ ಆಶೆವುಳ್ಳ ಚೆಂಪನ್‌ಕುಞ್ಞಗೆ ಪೆರಿಕುಟ್ಟಿಯ ಔದಾರ್ಯದ ಗುಟ್ಟು ಗೊತ್ತಿಲ್ಲ. ತನ್ನ ಅಪ್ಪ ಪರೀಕುಟ್ಟಿಯಿಂದ ಹಣ ತೆಗೆದುಕೊಳ್ಳುವುದು ಕರುತ್ತಮ್ಮನಿಗೆ ಇಷ್ಟವಿಲ್ಲ, ಅವಳು ತಾಯಿಯ ಹತ್ತಿರ ಎಲ್ಲವನ್ನು ಬಿಡಿಸಿ ಹೇಳುತ್ತಾಳೆ. ತನ್ನನ್ನು ನೋಡಿ ಆತ ಸಾಲಕೊಟ್ಟಿರುವುದು ಎಂದು ತಿಳಿಸುತ್ತಾಳೆ. ಇದರಿಂದ ಚಕ್ಕಿ ನಿತ್ಯದಂತೆ ಪಡುವಲ ದಿಕ್ಕಿಗೆ ಮೀನು ವ್ಯಾಪಾರಕ್ಕೆ ಹೋಗುವುದನ್ನು ನಿಲ್ಲಿಸಿದಳು. ಈಗ ಆಕೆಗೆ ವ್ಯಾಪಾರಕ್ಕಿಂತ ಮಗಳ ಬದುಕು ಮುಖ್ಯ. ಗಂಡನಿಗೆ ಖಚಿತವಾಗಿ ತಾನು ಇನ್ನು ವ್ಯಾಪಾರಕ್ಕೆ ಹೋಗುವುದಿಲ್ಲವೆಂದು ಹೇಳಿದಳು. ಆದರೆ ಕರುತ್ತಮ್ಮಳಿಗೆ ಪರೀಕುಟ್ಟಿಯ ಬಗ್ಗೆ ಇನ್ನಷ್ಟು ಪ್ರೀತಿ ಹೆಚ್ಚಿತು. ಆದರೆ ಅದನ್ನು ಯಾರಿಗೂ ಹೇಳಿಕೊಳ್ಳಲಾರಳು.

ಚಂಪನ್ ದೋಣಿಕೊಳ್ಳುವ ಆಶೆ ಈಡೇರಿತು. ಆತ ದೋಣಿ ಬಲೆ ಕೊಂಡು ಕೊಳ್ಳಲು ಹೊರಟ. ಆದರೆ ನೀರ್ಕುನ್ನಿ ಕಡಲ ತೀರದಲ್ಲಿ ಅದೊಂದು ಕ್ರಾಂತಿಕಾರಿ ಸಂಗತಿಯಾಯಿತು. ಕಾರಣವೆಂದರೆ ಬೆಸ್ತರಲ್ಲಿ ಐದು ಜಾತಿ ಉಂಟು. ಒಂದು ಆರ್ಯೆಯನ್ ಈತ ಕೋಮಿಗೆ ಯಜಮಾನ. ಅದರ ನಾಯಕ. ಪುರೋಹಿತ ಅವನೇ ಜೀವನದ ಪ್ರತಿಯೊಂದು ಕೆಲಸಕಾರ್ಯಗಳಲ್ಲೂ ಅವನ ಕೈವಾಡ ಇದ್ದೇ ಇದೆ. ಅವನ ಒಪ್ಪಿಗೆ ಇಲ್ಲದೆ, ಅವನ ಆಶೀರ್ವಾದ ಪಡೆಯದೆ, ಒಬ್ಬನೂ ಸ್ವಂತವಾಗಿ ದೋಣಿ ಪಡೆದು ನಡೆಸುವಂತಿಲ್ಲ. ಅವನ ಅಪ್ಪಣೆ ಇಲ್ಲದೆ ಯಾರ ವಿವಾಹವೂ ನಡೆಯುವಂತಿಲ್ಲ ಎಂಥ ಜಗಳವನ್ನು ಅವನೇ ಬಗೆ ಹರಿಸಬೇಕು. ಆತನೇ ಅದರ ಉಚ್ಛನ್ಯಾಯಾಧಿಪತಿ.

ಎರಡನೆಯವರು ವಲ್ಲಕ್ಕಾರನ್, ಇವರು ಬಲೆ ಮತ್ತು ದೋಣಿಯನ್ನು ಕೊಳ್ಳಬಹುದು. ಇವರಿಗೆ ಆರಯ್ಯ ಅಪ್ಪಣೆ ಕೊಡುತ್ತಾನೆ. ಮೂರನೆಯವರು ಮುಕ್ಕುವನ್ ನಾಲ್ಕನೆಯ ಮರಕ್ಕಾನ್ ಹಾಗೂ ಪಂಚಮರು ಈ ಮಿಕ್ಕ ಜಾತಿಗಳಿಗೆ ದೋಣಿಕೊಳ್ಳುವ ಅವಕಾಶವಿಲ್ಲ.

ಮತ್ತೊಂದು ಅಲ್ಲಿರುವ ಪ್ರತಿಯೊಬ್ಬ ಬೆಸ್ತರವನಿಗೂ ದೋಣಿಯನ್ನು ಸ್ವಂತಕ್ಕೆ ಕೊಳ್ಳಬೇಕೆಂಬ ಆಶೆ ಇದೆ. ಆದರೆ ಅವರು ಸಂಪಾದಿಸುವ ಹಣ ಬದುಕು ನಡೆಸುವುದಕ್ಕೆ ಸಾಕಾಗುವುದಿಲ್ಲ. ಅಂತಹದ್ದರಲ್ಲಿ ದೋಣಿ ಬಲೆ ಕೊಂಡುಕೊಳ್ಳುವುದು ಅವರಿಗೆ ಅಸಾಧ್ಯವೇ ಸರಿ. ಅಷ್ಟೊಂದು ಬಡತನ ಅಲ್ಲಿನ ಜನರಿಗೆ.

[illegible]

ಆದರೆ ಇದಕ್ಕೆಲ್ಲ ವ್ಯತಿರಿಕ್ತವಾಗಿ ಚೆಂಪನ್ ದೋಣಿ ಬಲೆಯನ್ನು ಸ್ವಂತಕ್ಕೆ ತರುತ್ತಾನೆ. ಅದಕ್ಕಾಗಿ ಅರಯ್ಯನ ಹತ್ತಿರ ವಿಚಾರಣೆಯಾಯಿತು. ಆತನಿಗೆ ಸ್ವಲ್ಪ ಹಣಕೊಟ್ಟು ಸುಮ್ಮನಿರಿಸಿದ. ಸ್ವತಃ ಅರಯ್ಯನೇ ಚೆಂಪನ್ ದೋಣಿಯಲ್ಲಿ ಕೆಲಸಮಾಡಲು ಎಲ್ಲರಿಗೂ ಸೂಚಿಸಿದ. ಆದರೆ ಸಮಾಜದ ರೀತಿಮಾತ್ರ ಒಬ್ಬ ವ್ಯಕ್ತಿಗಿಂತ ಭಿನ್ನ. ಅದೊಂದು ಸಾಮುದಾಯಿಕ ಪ್ರಜ್ಞೆ. ಅರಯ್ಯ ಸುಮ್ಮನಿದ್ದಂತೋ ಸುಮ್ಮನಿರಿಸಿದಂತೋ, ಇರಲು ಸಾಧ್ಯವಿಲ್ಲ. ಜನರು ಎಲ್ಲ ಪರೀಕುಟ್ಟಿ ಕರುತ್ತಮ್ಮಳ ಸಂಬಂಧವನ್ನು ಮಾತನಾಡತೊಡಗಿದರು "ಕಾಳಿಕುಞ್ಞ ಮನೆಯಲ್ಲಿ ನಾಲ್ಕಾರು ಹೆಂಗಸರು ಸೇರಿದ್ದರೆ ಹರಟೆಗೆ ಅವರು ಹರಟುವುದು ಈ ತಾಯಿಮಗಳನ್ನು ಕುರಿತಂತೇ! ಚಕ್ಕಿ ಕಿವಿಗೊಟ್ಟು ಆಲಿಸಿದಳು. ಒಬ್ಬಳು ಬಾಯಿತೆರೆದು ಗಟ್ಟಿಯಾಗಿ ಅಂದೇಬಿಟ್ಟಳು. ಪರಿಕುಟ್ಟಿಗೂ ಕರುತ್ತಮಳಿಗೂ ಗುಟ್ಟು ಅಂತ. ಚಕ್ಕಿಗೂ ಇದು ಕಿವಿಗೆ ಬಿದ್ದು ಜಗಳವಾಡುತ್ತಾಳೆ. ಆದರೆ ಕರುತ್ತಮ್ಮ ಅಂತಹ ಜಗಳಕ್ಕೆ ಹೆದರುತ್ತಾಳೆ. ಏಕೆಂದರೆ ಅಂತಹ ಅನೈತಿಕ ಸಂಬಂಧ ಪರೀಕುಟ್ಟಿ ಮತ್ತು ಕರುತ್ತಮ್ಮಳ ನಡುವೆ ಇಲ್ಲದಿದ್ದರು ಆತ ಮಾತ್ರ ಸಾಲಕೊಟ್ಟಿದ್ದು ಆಕೆಯ ಕಾರಣದಿಂದಲೆ, ಅದು ಭಯ ಆಗುತ್ತದೆ. ದೋಣಿಕೊಂಡ ಮೇಲೆ ಮೀನನ್ನು ಪರೀಕುಟ್ಟಿಗೆ ಕೊಡುವುದು ಎಂದಾಗಿತ್ತು. ಆದರೆ ಚಂಪನ್ ಸಾಲ ತೀರಿಸುವ ಬಗ್ಗೆ ಈಗ ಯೋಚಿಸುವುದಿಲ್ಲ. ಚಕ್ಕಿ ಎಷ್ಟೇ ಹೇಳಿದರೂ ಕೇಳುವ ತಾಳ್ಮೆಯಿಲ್ಲ ಚೆಂಪನ್‌ಗೆ. ಇದರಿಂದ ಪರೀಕುಟ್ಟಿಗೆ ನಷ್ಟವಾಯಿತು. ಅವನ ತಂದೆ ಅಬ್ದುಲ್ ಎಷ್ಟೇ ಹೇಳಿದರೂ ಕೇಳದೆ ನೀರ್ಕುನ್ನಿ ತೀರದಲ್ಲೆ ಉಳಿದ. ಪರೀಕುಟ್ಟಿ ತಂಗಿಯ ಮದುವೆ ಕಡೆಗೂ ಗಮನಹರಿಸಲಿಲ್ಲ. ಚೆಂಪನ್ ತೃಕ್ಕುನ್ನಪೊಳೆ ಕಡಲ ತೀರದ ಒಬ್ಬ ಸದೃಢ ಬುದ್ಧಿವಂತ ಅನಾಥ ಮೀನುಗಾರನಾದ ಪಳನಿಗೆ ಕರುತ್ತಮ್ಮನನ್ನ ಕೊಟ್ಟು ಮದುವೆ ಮಾಡಿದ. ಆತನಿಗೆ ಕೊಡಲು ಇದ್ದ ಪ್ರಬಲ ಕಾರಣವೆಂದರೆ ಚಂಪನ್‌ಗೆ ಆತ ದೃಢಕಾಯ ಹಾಗೂ ವರದಕ್ಷಿಣೆ ಇಲ್ಲದೆ ಮದುವೆಮಾಡಿಕೊಳ್ಳಲು ಒಪ್ಪಿದ್ದು. ಮೇಲ್ನೋಟಕ್ಕೆ ಕರುತ್ತಮ್ಮ ಇದಕ್ಕೆ ಬಗ್ಗಿದಂತೆ ಕಂಡರೂ ಅವಳ ಪ್ರೀತಿ ಪರೀಕುಟ್ಟಿಯ ಕಡೆಗೆ ಇತ್ತು. "ಚಕ್ಕಿ ಸಾಹುಕಾರ ಹೆಣವನ್ನು ಚುಚ್ಚ ಬೇಡ" ಎನ್ನುವ ಕರುತ್ತಮ್ಮನ ಮಾತು ಇದನ್ನು ದೃಢಪಡಿಸುತ್ತದೆ ಇದನ್ನರಿತ ಚಕ್ಕಿ ಕರುತ್ತಮ್ಮಳ ಮೇಲೆ ಬಂದ ಆರೋಪವನ್ನು ಕೇಳಿ ಕಾಯಿಲೆ ಬಂದರೂ ಮಗಳನ್ನು ಗಂಡನ ಮನೆಗೆ ಕಳುಹಿಸುತ್ತಾಳೆ. ಸ್ವಲ್ಪದಿನಗಳಲ್ಲೆ ಚಕ್ಕಿ ಸತ್ತು ಹೋಗುತ್ತಾಳೆ. ತಾಯಿ ಆರೋಗ್ಯ ಕೆಟ್ಟರೂ ಗಂಡನ ಮನೆಗೆ ಹೋದಳಲ್ಲ ಎಂದು ಬೇರೆ ವಿಚಾರ ತಿಳಿಯದ ಚೆಂಪನ್ ತನ್ನ ಮಗಳು ಸತ್ತಳೆಂದು ತಿಳಿಯುತ್ತಾನೆ.

ಚಕ್ಕಿ ಸಾಯುವುದರ ಮೊದಲು ಪರೀಕುಟ್ಟಿಯನ್ನು ಮನೆಗೆ ಬಂದಾಗ ನೀನು ನನ್ನ ಮಗ. ಕರುತ್ತಮ್ಮಳಿಗೆ ಅಣ್ಣ ಎಂದು ಕೈಮುಟ್ಟಿ ಭಾಷೆ ತೆಗೆದುಕೊಳ್ಳುತ್ತಾಳೆ. ಆಕೆಗೆ ಅಲ್ಲಿನ ಭೀಕರ ಸಂಪ್ರದಾಯ ಮತ್ತು ಸೆಳೆತವೆರಡು ಗೊತ್ತು. ಚಕ್ಕಿ ಸತ್ತ ಸುದ್ದಿಯನ್ನು ಯಾರೂ ಕರುತ್ತಮ್ಮಳಿಗೆ ಹೇಳದೆ ಇದ್ದಾಗ ಪರೀಕುಟ್ಟಿಯೇ ಮುಟ್ಟಿಸುತ್ತಾನೆ. ಕಡಲ ತೀರದಲ್ಲಿ ಪರೀಕುಟ್ಟಿಯನ್ನು ಕಂಡ ಜನ ಅವಕ್ಕಾಗಿ, ಕರುತ್ತಮ್ಮ ಮತ್ತು ಪರೀಕುಟ್ಟಿಯ ಸಂಬಂಧದ ಮುಂದುವರಿಕೆಯನ್ನು ಕುರಿತು ಮಾತನಾಡತೊಡಗುತ್ತಾರೆ. ಇತ್ತಕಡೆ ಚೆಂಪನ್

[illegible]

ಚಕ್ಕಿ ಸತ್ತ ನಂತರ ಆರಯ್ಯ ಸ್ತ್ರೀಯೂ, ತಾನು ದೋಣಿ ಬಲೆಕೊಂಡು ತಂದ ಕಂಡನ್‌ಕೋರನ್‌ನ ಹೆಂಡತಿ ಪಾಪ್ಪಿಕುಇಣ್ಣು (ಗಂಡಸತ್ತು ವಿಧವೆಯಾಗಿರುತ್ತಾಳೆ) ಮದುವೆಯಾಗುತ್ತಾನೆ. ಹಾಗೆ ಮದುವೆಯಾಗುವಾಗ ಆಕೆಗೆ ಗಂಗಾಧತ್ತನೆಂಬ ಮಗನಿರುತ್ತಾನೆ. ಮುಂದೆ ಅವರ ಎರಡನೆ ಮದುವೆಯ ದಾಂಪತ್ಯ ಸಫಲವಾಗುವುದಿಲ್ಲ. ಕೊನೆಗೆ ತನ್ನ ಎರಡನೆ ಹೆಂಡತಿ ಪಾಪ್ಪಿಕುಇಣ್ಣುವಿನಿಂದ, ಕರುತ್ತಮ್ಮ ಮತ್ತು ಪರೀಕುಟ್ಟಿಯ ವಿಷಯ ತಿಳಿದು ಅವಾಕ್ಕಾಗುತ್ತಾನೆ. ದೋಣಿ ರಿಪೇರಿಗೆ ಎಂದು ಜೋಸೆಫ್ ಹತ್ತಿರ ತಂದ ಹಣವನ್ನೆಲ್ಲ ಪರೀಕುಟ್ಟಿಗೆ ಕೊಟ್ಟು ತಳ ಒಡೆದ ದೋಣಿಯಲ್ಲಿ ಮಲಗಿ ಹುಚ್ಚನಾಗುತ್ತಾನೆ.

ಚಿಕ್ಕ ಮಗಳು ಪಂಚಮಿ ಅಕ್ಕನ ಮನೆ ತೃಕ್ಕುನ್ನಪೊಳೆಗೆ ಹೋಗುತ್ತಾಳೆ. ಅಲ್ಲಿ ಈಗಾಗಲೆ ಅನೇಕ, ಸಂಗತಿಗಳೊಡನೆ ಏರುಪೇರುಗಳನ್ನು ಕಂಡಿದ್ದ ಪಳನಿ ಮತ್ತು ಕರುತ್ತಮ್ಮಳ ಬದುಕು, ಅಲ್ಲಿನ ಸಮಾಜದಿಂದಲೇ ದೂರವಾಗಿರುತ್ತದೆ. ಕಾರಣ ಪರೀಕುಟ್ಟಿಯ ವಿಚಾರ. ಒಂದು ದಿನ ಪಳನಿ ಅಕ್ಕತಂಗಿಯರ ಮಾತನ್ನು ಕೇಳಿಸಿಕೊಳ್ಳುತ್ತಾನೆ. ಆಕೆ ಇನ್ನು ಪರೀಕುಟ್ಟಿಯ ಬಗ್ಗೆ ಪ್ರೀತಿಯನ್ನು, ಆಸೆಯನ್ನು ಹೊಂದಿರುವುದು ತಿಳಿದು ಭ್ರಾಂತನಾಗುತ್ತಾನೆ. ಮಾರನೇ ದಿನ ಭಯಂಕರ ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೆ ಸಮುದ್ರದ ಮಧ್ಯದಲ್ಲಿ ಒಂಟಿ ದೋಣಿಯನ್ನು ಬಹಳ ದೂರದವರೆಗೆ ತೆಗೆದುಕೊಂಡು ಹೋಗುತ್ತಾನೆ. ಅದು ಒಂಟಿ ದೋಣಿಯಲ್ಲಿ ಅಷ್ಟುದೂರ ಹೋಗುವುದು ಅಪಾಯಕಾರಿಯಾಗಿತ್ತು, ಅವನು ಒಂದು ಶಾರ್ಕ್ ಮೀನನ್ನು ಹಿಡಿದು ಅದನ್ನು ದಡಕ್ಕೆ ಎಳೆಯಲು ಪ್ರಯತ್ನಿಸುತ್ತಾನೆ. ಆಗ ಬಿರುಗಾಳಿ ಎದ್ದು ದೋಣಿ ತಲೆಕೆಳಗಾಗಿ ಅವನು ನೀರಿನಲ್ಲಿ ಮುಳುಗಿಹೋಗುತ್ತಾನೆ. ಅದೇ ರಾತ್ರಿ ಕರುತ್ತಮ್ಮ ಮತ್ತು ಪರೀಕುಟ್ಟಿಯರು ಗುಪ್ತವಾಗಿ ತೃಕ್ಕುನ್ನಪೊಳೆ ಕಡಲತೀರದಲ್ಲಿ ಭೇಟಿಯಾಗುತ್ತಾರೆ. ಅವರಿಬ್ಬರೂ ಒಂದಾಗುತ್ತಾರೆ. ಕಡಲಿನಲ್ಲಿ ಸಾಯುವ ಮೊದಲು ಪಳನಿ "ಕರುತ್ತಮ್ಮಾ"! ಎಂದು ಕೊನೆಯ ಬಾರಿ ಕೂಗುತ್ತಾನೆ.

ಮರುದಿನ ಬೆಳಗ್ಗೆ ಪಂಚಮಿ ಸಮುದ್ರ ತೀರದಲ್ಲಿ ಕರುತ್ತಮ್ಮಳ ಮಗುವನ್ನು ಸಮಾಧಾನ ಪಡಿಸುತ್ತಿರುತ್ತಾಳೆ. ಅಲೆಗಳು ಒಬ್ಬ ಗಂಡಸು ಮತ್ತು ಹೆಂಗಸನ್ನು ಅವರ ಆಲಿಂಗನ ಬದ್ದ ಶರೀರಗಳೊಂದಿಗೆ ದಡಕ್ಕೆ ತಂದೆಸೆಯುತ್ತವೆ. ಅವು ಪರೀಕುಟ್ಟಿ ಕರುತ್ತಮ್ಮಳದಾಗಿರುತ್ತದೆ. ಅಲ್ಲೆ ಸ್ವಲ್ಪ ದೂರದಲ್ಲಿ ಅಲೆಗಳು ಸತ್ತಿದ್ದ ಶಾರ್ಕ್‌ನ್ನು ಎಸೆಯುತ್ತವೆ ತೀರದಲ್ಲಿ ಜನ ಪರಂಪರಾಗತ ಐತಿಹ್ಯವನ್ನು ಮಾತನಾಡಿಕೊಳ್ಳುತ್ತಿರುತ್ತಾರೆ.

✦✦✦✦✦✦✦

ಅಧ್ಯಾಯ – ೪

ಕಾದಂಬರಿಗಳ ಕಥಾವಸ್ತು

ಕನ್ನಡದ ಕಾರಂತರ ಚೋಮನದುಡಿ ಹಾಗೂ ಮಲೆಯಾಳಂನ ತಗಳೀ ಶಿವಶಂಕರ್ ಪಿಳ್ಳೆಯವರ ಚೆಮ್ಮೀನು ಕಾದಂಬರಿಗಳ ರಚನೆ ಹಾಗೂ ವೈಶಿಷ್ಟ್ಯಗಳು ಬೆರಗುಗೊಳಿಸುವಂತವು. ಚೋಮನದುಡಿ ೧೯೩೩ರಲ್ಲಿ ರಚನೆಯಾದರೆ ಚೆಮ್ಮೀನು ೧೯೫೬ ರಲ್ಲಿ ರಚನೆಯಾಗಿದೆ. ಒಂದು ಸ್ವಾತಂತ್ರ್ಯ ಪೂರ್ವದ ಕಾದಂಬರಿಯಾದರೆ ಮತ್ತೊಂದು ಸ್ವಾತಂತ್ರ್ಯಾನಂತರದ ಕಾದಂಬರಿಯಾಗಿದೆ. ದೇಶ, ಕಾಲಗಳು ಒಂದು ಕೃತಿಯ ವಸ್ತುವಿನ ಮೂಲಾಂಶಗಳಲ್ಲಿ ಸೇರಿರುತ್ತದೆ. ಈ ಕಾಲದ ಅಂತರವೇ ಕೃತಿಯಲ್ಲಿ ಅನೇಕ ವೈದೃಶ್ಯಗಳಿಗೆ ಕಾರಣವಾಗಿದೆ. ಈ ಇಪ್ಪತ್ತು ವರ್ಷಗಳ ಅಂತರದಲ್ಲಿ ಸಮಾಜದ ಮೂಲ ರಚನೆಯಲ್ಲಿ, ಗ್ರಹಿಕೆಯಲ್ಲಿ ಆಲೋಚನೆಯಲ್ಲಿ ಆಗಿರಬಹುದಾದ, ಆಗದೆ ಇರುವ, ಆಗಿರುವಂತೆ ಕಂಡರೂ ಗುಪ್ತವಾಗಿ ಜಾಗೃತವಾಗಿರುವ ಗೃಹೀತಗಳನ್ನು ಗ್ರಹಿಸಬಹುದಾಗಿದೆ.

ಅಲಿಗರಿಯ ಮಟ್ಟದಲ್ಲಿ ಎರಡು ಕಾದಂಬರಿಗಳ ವಸ್ತುವಿನ್ಯಾಸ ಬೇರೆ ಬೇರೆ ಎಂಬಂತೆ ಕಂಡು ಬರುತ್ತವೆ. ಪರಸ್ಪರ ಪ್ರಭಾವದ ಯಾವ ಸೂಚನೆಗಳೂ ಕಾದಂಬರಿಯಲ್ಲಿ ಸಿಗುವುದಿಲ್ಲ. ಆರಂಭದ ಅಧ್ಯಾಯದಲ್ಲಿ ಹೇಳಿದಂತೆ ಒಂದು ಕೃತಿ ಇನ್ನೊಂದರ ಪ್ರಭಾವದಿಂದಲೇ ರಚಿತವಾಗಿ ಶ್ರೇಷ್ಠತೆಯನ್ನು ಪಡೆಯಬೇಕಾಗಿಲ್ಲ. ಚೋಮನದುಡಿಯಲ್ಲಿ ಚೋಮನೆಂಬ ಶೋಷಿತ ದಲಿತನೊಬ್ಬನ ಬದುಕು ಉಳುವ ಭೂಮಿಗೆ ಆಸೆ ಪಟ್ಟು ಅದು ಸಿಗದೆ ನಾಶವಾಗುವ ಚಿತ್ರಣದಂತೆ ಮೇಲುನೋಟಕ್ಕೆ ಕಾಣುತ್ತದೆ. ಚೆಮ್ಮೀನಿನಲ್ಲಿ ಬೆಸ್ತರ ಐತಿಹ್ಯ, ಸಮಾಜದ ಪರಂಪರಾಗತ ನಂಬಿಕೆ, ಬೆಸ್ತರ ಜೀವನ, ಇವುಗಳ ನಡುವೆ ಅಂತರ್‌ಜಾತಿಯ ವ್ಯಕ್ತಿಗಳಿಬ್ಬರ ನಿಷ್ಕಳಂಕ ಪ್ರೇಮವನ್ನು ಕುರಿತು ಅದರಿಂದ ಉಂಟಾಗುವ ದುರಂತವನ್ನು ಕುರಿತು ಹೇಳುವ ರಮ್ಯ ಕಥನದಂತೆ ತೋರಿಕೆಗೆ ಕಾಣುತ್ತದೆ.

ಆದರೆ ಕಾದಂಬರಿಯೊಂದರ ಮೇಲ್ಪದರದಲ್ಲಿ ಕಾಣಿಸುವ ಇಂತಹ ಅಂಶವೊಂದೇ ಕಥಾ ವಸ್ತುವೆಂದು ತಿಳಿಯಲಾಗುವುದಿಲ್ಲ. ವಸ್ತು ಒಟ್ಟು ಕಾದಂಬರಿಯ ಒಳರಚನಾ ವಿನ್ಯಾಸವನ್ನು ಅವಲಂಬಿಸಿ ನಿರ್ಧಾರವಾಗುತ್ತದೆ. ಈ ಎರಡು ಕಾದಂಬರಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಅನೇಕ ಸಾದೃಶ್ಯಗಳು ಕಂಡು ಬರುತ್ತವೆ. ಕೊನೆಗೆ ಒಂದಕ್ಕೊಂದು ಅಬೇಧವೆನ್ನುವಷ್ಟು ಆ ಹೋಲಿಕೆಗಳು ಕಂಡು ಬರುತ್ತವೆ. ಸಮಾಜ ಮತ್ತು ಶೋಷಿತ ಸಮುದಾಯವೊಂದರ ವರ್ಗ ಮತ್ತು ಜಾತಿಯ ಸಂಘರ್ಷವೇ ಇದರ ವಸ್ತು. ಭಾರತದಂತಹ ದೇಶದಲ್ಲಿ ಈ ವರ್ಗದ ಪರಿಕಲ್ಪನೆ, ಜಾತಿಯ ಹೆಸರನ್ನು ತೊಟ್ಟು ತನ್ನ ಕ್ರೌರ್ಯದ ತೀವ್ರತೆಯನ್ನು ಗುಪ್ತವಾಗಿರಿಸಿದೆ. ಎನ್ನಬಹುದು. ಜೊತೆಗೆ ಸಮುದಾಯದ ಗ್ರಹಿಕೆ ಹಾಗೂ ವ್ಯಕ್ತಿಯ ವ್ಯಷ್ಟಿ ಪ್ರಜ್ಞೆಗಳ ಮಟ್ಟದಲ್ಲೇ ಈ ಹೋರಾಟ ಕೇಂದ್ರೀಕೃತವಾಗಿದೆ. ಎರಡು ಕಾದಂಬರಿಗಳ ಮುಖ್ಯ ವಸ್ತುವಿನಲ್ಲಿ

[illegible]

ಬಡತನ, ಸಮಾಜದ ಅಸಮಾನತೆ, ಜಾತೀಯತೆ, ನಂಬಿಕೆ, ವಾಸ್ತವವನ್ನು ಮೀರಿದ ಹಂಬಲಗಳು ಕಾದಂಬರಿಯ ಕೇಂದ್ರ ವಸ್ತು ಆಶಯಗಳು. ಕಾದಂಬರಿಗಳ ಕಥನದ ರೀತಿಯಲ್ಲೆ ಸಂಪ್ರದಾಯಬದ್ಧ ಸಮಾಜವನ್ನು ವಿಮರ್ಶಿಸುವುದಕ್ಕೆ ಶೋಷಿತನೊಬ್ಬನ ದೃಷ್ಟಿಕೋನವನ್ನು ಆಯ್ದುಕೊಂಡಿರುವುದೇ ಆ ವಸ್ತುವಿನ ಎಲ್ಲ ಆಯಾಮಗಳನ್ನು ಗ್ರಹಿಸುವುದಕ್ಕೆ ಈ ಇಬ್ಬರು ಲೇಖಕರಿಗೆ ಸಾಧ್ಯವಾಗಿದೆ.

ಈ ಕಾದಂಬರಿಗಳ ನಾಯಕರಾದ ಚೋಮ ಮತ್ತು ಚೆಂಪನ್‌ಕುಞ್ಞ (ಚೆಮ್ಮೀನ್‌ನಲ್ಲಿ ಸರ್ವಸಾಕ್ಷೀ ಪ್ರಜ್ಞಾತಂತ್ರ ಕಾದಂಬರಿಯಲ್ಲಿ ಅನೇಕ ನಾಯಕರು ಎಂದು ತೋರಿಸುತ್ತದೆ. ಆದರೆ ಪ್ರಾತಿನಿಧಿಕವಾಗಿ ಮಾತ್ರ ಚೆಂಪನ್‌ಕುಞ್ಞಯನ್ನು ಆಯ್ದುಕೊಂಡಿದ್ದೇನೆ) ಕೇವಲ ದೃಷ್ಟಿಕೋನಗಳಾಗಿ ಉಳಿಯದೆ ಸಂಪೂರ್ಣ ಶೋಷಿತ ಸಮಾಜದ ಗ್ರಹಿಕೆಗಳನ್ನೊಳಗೊಂಡ ಸಮುದಾಯದ ಚರಿತ್ರೆಯನ್ನು ಒಳಗೊಂಡ ಸಮಾಜದ ಚರಿತ್ರೆ ಕುತೂಹಲಕರವಾಗ ನಮ್ಮನ್ನು ಪ್ರಭಾವಿಸುತ್ತದೆ. ಈ ಕಾದಂಬರಿಗಳ ಸಾಮಾಜಿಕ ವಸ್ತುವಾದ ಬಡತನ, ಜಾತಿ, ಧರ್ಮ, ಈ ಹಿನ್ನೆಲೆಯಲ್ಲಿಯೇ ರೂಪಿತವಾದ ಐತಿಹ್ಯ ಮತ್ತು ನಂಬಿಕೆಗಳು ವ್ಯಕ್ತ್ಯಾತ್ಮಕ ವಸ್ತುವಾದ ನಾಯಕನ / ನಾಯಕಿಯರ ಪರಕೀಯತೆ ಅನುಭವದಿಂದ ಬೇರ್ಪಡಿಸುವುದು ಸಾಧ್ಯವಿಲ್ಲ. ಸಮಾಜ ಎನ್ನುವುದು ಸಮಷ್ಟಿ ಪ್ರಜ್ಞೆಯಿಂದ, ಸಮಾಜದ ಹಿತಾಕಾಂಕ್ಷೆಯಿಂದ ರೂಪಿತಗೊಂಡಿರುತ್ತದೆ. ಆದರೆ ಯಾರ ಹಿತಾಕಾಂಕ್ಷೆಯೆಂಬುದು ಪ್ರಶ್ನೆ ಅದು ಬದಲಾದ ಕಾಲಗತಿಯಲ್ಲಿ ವ್ಯಕ್ತಿಯ ವ್ಯಷ್ಟಿ ಪ್ರಜ್ಞೆಯನ್ನು ಗೌರವಿಸಬೇಕಾಗಿರುತ್ತದೆ. ವ್ಯಕ್ತಿ ಪ್ರಜ್ಞೆ ತಾತ್ವಿಕವೂ, ನೈತಿಕವೂ ಆಗಿದ್ದಾಗ, ಅದು ಸಮಾಜದ ಕೇಂದ್ರ ಸ್ಥಾನದಲ್ಲಿ ನೆಲೆಸಬೇಕಾಗಿರುತ್ತದೆ. ಆದರೆ ಇಂತಹ ಪ್ರಜ್ಞೆ ಎಂದೂ ಕೇಂದ್ರ ಸ್ಥಾನದಲ್ಲಿ ಅಂಕುರಿಸಲೇ ಇಲ್ಲ ಎನ್ನುವುದು ಮಾತ್ರ ಸತ್ಯ. ಆದುದರಿಂದ ಜಾತಿ ಇಲ್ಲಿನ ಕಾದಂಬರಿಗಳ ನಾಯಕರ ಸಹಜ ಆಕಾಂಕ್ಷೆಗಳು ಮತ್ತು ಅಭಿಲಾಷೆಗಳಿಗೆ ಅಡ್ಡಿ ಮಾಡುವ ಸಾಮಾಜಿಕ ವಸ್ತುಗಳ ಘರ್ಷಣೆಯಲ್ಲಿ ಕಾದಂಬರಿ ರೂಪತಳೆಯುತ್ತದೆ.

ಈ ಎರಡು ಕಾದಂಬರಿಗಳ ಸಾಮಾಜಿಕ ರಚನೆಯಲ್ಲಿರುವ ತಾರತಮ್ಯವೆ ಕಾದಂಬರಿಯ ನಾಯಕರು ತಮ್ಮ ಅಭಿಲಾಷೆಗಳನ್ನು ಈಡೇರಿಸಿಕೊಳ್ಳಲು ಇರುವ ಅಡ್ಡಿ. ದಕ್ಷಿಣ ಕನ್ನಡ ಜಿಲ್ಲೆಯ ದಟ್ಟ ಕಾಡಿನ ನಡುವಿರುವ ಭೋಗನಹಳ್ಳಿ ಹಾಗೂ ಕೇರಳದ ಸಮುದ್ರದ ತಡಿಯಲ್ಲಿರುವ ನೀರ್ಕುನ್ನಿ ಎಂಬ ಹಳ್ಳಿಗಳ ಪರಿಸರ ಒಂದು ಫ್ಯೂಡಲ್ ಪ್ರಪಂಚ. ಕಾದಂಬರಿಗಳಲ್ಲಿ ಈ ಇಬ್ಬರು ನಾಯಕರಾದ ಚೋಮ ಮತ್ತು ಚೆಂಪನ್‌ಕುಞ್ಞಗೆ ಸುಮಾರು ೬೦ ವರ್ಷದಿಂದ ಅಪರ ಜೀವನದ ಚಿತ್ರಣವಿದೆ. ಈ ಸಮಾಜದ ತಾರತಮ್ಯವೆಂದರೆ ಜಾತಿಯೇ. ಚಮ್ಮೀನಿನಲ್ಲಿ "ಮತ್ತೇಕೆ, ಎಲ್ಲರಿಗೂ ದೋಣಿಬಲೆ ಇಲ್ಲದೆ ಇರೋದೂ ?" ಅದಕ್ಕೂ ಕಾರಣ ಉಂಟು. ಬೆಸ್ತರದಲ್ಲಿ ಐದು ಜಾತಿ ಉಂಟು. ಆರೈಯ್ಯನ್, ವಲ್ಲಕಾರನ್, ಮುಕ್ಕುವನ್, ಮರಕ್ಕಾನ್ ಹಾಗೂ ಪಂಚಮ ಜಾತಿ, ಅವುಗಳ ಮೇಲೆ 'ವಾಲನ್' ಎಂಬುದು ಇನ್ನೊಂದು ಪಂಚಮಜಾತಿ ಇದೆ. 'ವಲ್ಲಕ್ಕಾರನ್ ಅಂತ ಇದ್ದಾರಲ್ಲ ಅವರಿಗೆ ಮಾತ್ರ ಅವಕಾಶವುಂಟು. ಹಿಂದೆ ದೋಣಿ ಬಲೆ ಕೊಂಡುಕೊಳ್ಳುವುದಕ್ಕೆ ! ಅವರಿಗೆಲ್ಲ ಗುರುಸ್ಥಾನದಲ್ಲಿ ಆರಯ್ಯ ಇರುತ್ತಾನಲ್ಲ ಅವನು ವಲ್ಲಕ್ಕಾರನ್‌ಗೆ ಮಾತ್ರ ಅಪ್ಪಣೆ ಕೊಡುತ್ತಿದ್ದ. ಉಳಿದವರು ಬಾಯಿ ಬಾಯಿ ಹೊಡೆದುಕೊಂಡರು ಇಲ್ಲ .

ವೇಲಾಯುಧನ್ ಕೇಳಿದ

"ನಮ್ಮ ಚೆಂಪನ್‌ಕುಞ್ಞ ಈ ಪೈಕಿ ಯಾವ ಜಾತಿ".

ಆಗ ಮಣ್ಣನ್ ಒಳಗೊಳಗೆ ನಕ್ಕ. ರಾಮನ್ ಯಜಮಾನ ಹೇಳಿದ "ಮುಕ್ಕುವನ್ ಅವನು ಮುಕ್ಕುವ ಜಾತಿ",[೧] ಚೋಮನದುಡಿಯಲ್ಲಿ ಮೇರ, ಬೈರ ಅಜಿಲ, ಮಾರಿ ಎಂಬ ನಾಲ್ಕಾರು ಜಾತಿಗಳಿದ್ದು ಅವರಲ್ಲಿ ಮೇರರಿಗೆ ಮಾತ್ರ ಸ್ವಾಗುವಳಿಮಾಡುವ ಅವಕಾಶವಿದೆ. ಆದರೆ ಚೋಮ 'ಮಾರಿ' ಹೊಲೆಯ. ಮೊದಲೇ ಸೂಚಿಸಿದಂತೆ ಈ ಇಬ್ಬರು ನಾಯಕತು ತಮ್ಮ ಬಯಕೆಯನ್ನು ಈಡೇರಿಸಿಕೊಳ್ಳಲು ಸಮಾಜದ ಮೂಲಾಂಶದ ನಿರ್ಮಾತೃವಾದ ಜಾತಿ ಮತ್ತು ನಂಬಿಕೆಯೆ ಅಡ್ಡಿ. ಚೋಮ ಸಂಕಪ್ಪಯ್ಯನವರ ಹತ್ತಿರ ಮೂರು ಬಾರಿ ಜಮೀನಿನ ಗೇಣಿ ವಿಚಾರ ಪ್ರಸ್ತಾಪವೆತ್ತುತ್ತಾನೆ. ಪ್ರತಿ ಬಾರಿಯು ಚೋಮನಿಗೆ ಭೂಮಿ ಕೊಡಲು ಇಷ್ಟವಿದ್ದರೂ, ಸಂಕಪ್ಪಯ್ಯನವರಿಗೆ ಇರುವ ಮುಖ್ಯ ಅಡ್ಡಿಯಂದರೆ "ಚೋಮ, ಇದುವರೆವಿಗೂ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೆ ಇಲ್ಲ" ಎನ್ನುತ್ತಾರೆ. ಸಂಕಪ್ಪಯ್ಯನವರ ತಾಯಿ "ಅಬ್ಬಾ ! ಈ ಹೊಲೆಯರಿಗೆ ಬಂದ ಸೊಕ್ಕೇ" ಎಂದು ಶಪಿಸುತ್ತಾಳೆ. ಅಂದರೆ ಜಾತಿ ಇಲ್ಲಿ ಮುಖ್ಯ ತೊಂದರೆಯಾಗಿದೆ. ಹೊಲೆಯರು ಭೂಮಿ ಉಳುಮೆ ಮಾಡಿದರೆ ತಮ್ಮ ಕೆಲಸ ಮಾಡುವವರು ಇಲ್ಲವಾಗುತ್ತಾರೆ ಎಂಬ ನಿಲುವು ಈ ಸಮಾಜದ್ದು. ಮೂರು ಬಾರಿ ಸಂಕಪ್ಪಯ್ಯ ತಾಯಿ ಹತ್ತಿರ ಕೇಳಿದರೂ ಆಕೆಯಲ್ಲಿ ತನ್ನ ಮೊದಲಿನ ನಿಲುವಿನಲ್ಲಿ ಸ್ವಲ್ಪವೂ ಬದಲಾವಣೆ ಇರಲಿಲ್ಲ. ಆಕೆ ನಂಬಿದ ಶ್ರದ್ಧೆ, ಪರಂಪರೆಯಲ್ಲಿ ತೀವ್ರ ನಿಷ್ಠೆ ಹೊಂದಿರುವವಳು. ಈ ನಿಷ್ಠೆ ಸಮಾಜದ ಸಾಮುದಾಯಿಕ ಮೇಲ್ವರ್ಗದ ಪ್ರಜ್ಞೆಯಿಂದ ಬಂದದ್ದು. ಇದನ್ನು ಒಮ್ಮೆಲೆ ಅಲ್ಲಗಳೆದು ಆಕೆ ಹೊಸದನ್ನು ಯೋಚಿಸಲು ಸಾಧ್ಯವೇ ಇಲ್ಲ.

ಚೋಮನಿಗೆ ಕ್ರೈಸ್ತಪಾದ್ರಿ ಗೇಣಿ ಭೂಮಿಕೊಡಲು ಸಿದ್ಧ. ಆದರೆ ಆತನು ತನ್ನ ಧರ್ಮಕ್ಕೆ ಚೋಮ ಮತಾಂತರನಾಗಬೇಕು ಎನ್ನುತ್ತಾನೆ. ಪಾದ್ರಿಯೂ ಕೂಡ ಜಮೀನು ಕೊಡಲು ಚೋಮನ ಜಾತಿಯೇ ಅಡ್ಡಿ. ಒಮ್ಮೆ ಒಬ್ಬ ಸರ್ಕಾರಿ ಅಧಿಕಾರಿ ಚೋಮನಿಗೆ ದರಕಾಸು ಭೂಮಿಯನ್ನು ಮಂಜೂರು ಮಾಡಿಕೊಡಲು ಇಚ್ಛಿಸುತ್ತಾನೆ. ಕಾರಂತರು ಈ ಸಂದರ್ಭದಲ್ಲಿ ಬಳಸಿರುವ "ಉದ್ಧಾರ" ಪದ ಅನೌಚಿತ್ಯವಾದುದು. ಉದ್ಧಾರ ಸಾಧ್ಯವೇ ಇಲ್ಲ ಎಂಬ ನಂಬಿಕೆಯ ನೆಲೆಯಲ್ಲಿ ಹುಟ್ಟಿದ್ದು ಈ ಪದ. ಆದರೆ ಚೋಮನಿಗೆ ದರಕಾಸು ಭೂಮಿಯನ್ನು ಹೊಂದಲು ಇಷ್ಟವಿಲ್ಲ ಯಾಕೆ ? ಎಂಬ ಬಗ್ಗೆ ಕಾದಂಬರಿಯಲ್ಲಿ ಎಲ್ಲಿಯೂ ವಿವರಣೆ ಸಿಗುವುದಿಲ್ಲ. ಆದರೆ ಕಾದಂಬರಿಯ ಒಟ್ಟು ರಚನೆಯನ್ನು ಗಮನಿಸಿದಾಗ ಆತ ಮತ್ತೆ ಮತ್ತೆ ಸಂಕಪ್ಪಯ್ಯನಲ್ಲೇ ಬೇಡಿಕೆ ಇರಿಸುವ. ಕೊನೆಗೆ ಮತಾಂತರಕ್ಕೆ ನಿರ್ಧರಿಸಿ ಸಾಧ್ಯವಾಗದೆ ಹೋಗುವ ಹಿನ್ನಲೆ, ತುಂಬಾ ಸೂಕ್ಷ್ಮವಾದುದಾಗಿದೆ. ಚೋಮನಿಗೆ ಈ ಸಮಾಜದ ಬಗ್ಗೆ ಸಿಟ್ಟಿದೆ, ಆಕ್ರೋಶವಿದೆ. ಆದರೆ ಆತ ಸಮಾಜದಲ್ಲೇ ಬದುಕಬೇಕು. ಅದರಿಂದ ಹೊರತಾಗಿ ಒಬ್ಬನೆ ಬದುಕಲು ಸಾಧ್ಯವಿಲ್ಲ. "ಹೊರಗಿನ ಬಯಲಿನಲ್ಲಿ ಬಂಗಲೆಯನು ಮಾಡಿ ಕುಳಿತನಾದರೆ ಬಂತೇನು?" ಆ ಕಾರಣದಿಂದಲೆ ಇರುವ

೧ ಕೆಂಪು ಮೀನು (ಚೆಮ್ಮೀನು) ; ಪುಟ ೩೨ : ಅನು : ನಾ ಕಸ್ತೂರಿ

[illegible]

[illegible]

[illegible]

ಅಸಮಾನತೆಯ ಸಮಾಜದಲ್ಲೇ ತನ್ನ ಸ್ಥಾನವನ್ನು ಕಂಡುಕೊಳ್ಳುವ, ತನ್ನ ಆಸೆಯನ್ನು ಈಡೇರಿಸಿಕೊಳ್ಳುವ ಕೆಲಸ ಮಾಡುತ್ತಾನೆ. ಆದರೆ ಸಮಾಜ ಅಷ್ಟು ನಮ್ಯತೆಯ ಗುಣದ್ದಲ್ಲವಲ್ಲ.

ಆದರೆ ಚೆಮ್ಮೀನಿನಲ್ಲಿ ಚೆಂಪನ್‌ಕುಞ್ಞ ತನ್ನ ಕುಲಕ್ಕೆ ಸಮಾಜದಲ್ಲಿನ ತನ್ನ ಜಾತಿಗೆ ಮೀರಿ ದೋಣಿಯನ್ನು ಕೊಂಡುಕೊಳ್ಳುತ್ತಾನೆ. ಅದು ಆತನಿಗೆ ಸಾಧ್ಯವಾದುದು ಆತನ ಬಳಿ ಇದ್ದ ಹಣದಿಂದ. ಇಲ್ಲಿ ಹಣ ಹೇಗೆ ಬಂದಿತು ಎಂಬ ವಿಚಾರವನ್ನು ಸ್ವಲ್ಪ ಬದಿಗೆ ಸರಿಸಿ ನೋಡಿದರೆ ಶೋಷಿತರು ಆರ್ಥಿಕವಾಗಿ ಸ್ಥಿತಿವಂತರಾದರೆ ಸುಲಭವಾಗಿ ಜಾತಿಯ ಸಮಸ್ಯೆಯನ್ನು ದಾಟಲು ಸಾಧ್ಯವಾಗುತ್ತದೆ. ಜೊತೆಗೆ ತಕಳೀಯವರಿಗೆ ಮಾರ್ಕ್ಸ್‌ವಾದದಲ್ಲಿ ಪ್ರಬಲ ನಂಬಿಕೆ ಇತ್ತು ಎಂಬುದನ್ನು ಹಾಗೂ ಕಾದಂಬರಿ ರಚಿತವಾದ ಕಾಲವನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಕಾದಂಬರಿಯಲ್ಲೇ "ಹಿಂದೆ ದೋಣಿ ಕೊಳ್ಳುವುದಕ್ಕೆ ಅವರಿಗೆ ಮಾತ್ರ ಅವಕಾಶ ಉಂಟು". ಎನ್ನುವ ಸಾಲು ಬದಲಾಗಿರುವ ಕಾಲವನ್ನು ಸೂಚಿಸುತ್ತದೆ. ಆದರೆ ಕಾರಂತರ ಚೋಮನ ದುಡಿ ರಚಿತವಾದ ಕಾಲದಲ್ಲಿ ಇಂತಹ ಬದಲಾವಣೆ ಅಷ್ಟು ಸುಲಭವಾಗಿರಲಿಲ್ಲ ಎಂಬುದು ಗಮನಾರ್ಹ.

ಚೆಂಪನ್ ದೋಣಿಯನ್ನು ಕೊಂಡು ತಂದ ಮೇಲೆ ರಾಮನ್‌ಕುಞ್ಞ ಮುಂತಾದವರೆಲ್ಲ ಆರಯ್ಯನಲ್ಲಿ ದೂರುತ್ತಾರೆ. ಆರಯ್ಯನ್, ಚೆಂಪನ್ ಜಾತಿಗೆ ಮೀರಿ ತಂದ ದೋಣಿ ಬಲೆಯ ಬಗ್ಗೆ ಆಕ್ಷೇಪಿಸುತ್ತಾನೆ. ಆದರೆ ಚೆಂಪನ್ ಒಬ್ಬನೆ ಆರಯ್ಯನ್ ನನ್ನು ಕಂಡು ಆತನಿಗೆ ಸ್ವಲ್ಪ ಹಣ ಕೊಟ್ಟ ನಂತರ ಚೆಂಪನ್ ಪರವಾಗಿ ಅಂಗೀಕಾರದ ಮುದ್ರೆಯನ್ನು ಒತ್ತುತ್ತಾನೆ. ಕಾರಂತರ ಕಾದಂಬರಿಯಲ್ಲಿ ಸಂಕಪ್ಪಯ್ಯನವರ ತಾಯಿಗೆ ಸಮಾಜದ ಪರಂಪರೆಯ ಬಗ್ಗೆ ಇರುವ ಅಚಲವಾದ ನಂಬಿಕೆ ಆರಯ್ಯನಿಗೆ ಇಲ್ಲ. ಇದು ಆರ್ಥಿಕ ಕಾರಣದಿಂದ ಬದಲಾಗಿದೆ ಎಂಬುದನ್ನು ಗಮನಿಸಬೇಕು. ಚೆಮ್ಮೀನಿನಲ್ಲಿ ಆರಯ್ಯ ಒಬ್ಬ ನೀತಿ ಭ್ರಷ್ಟನಾಗಿ ಕಾಣಿಸಿಕೊಳ್ಳುತ್ತಾನೆ. ಆ ಮೂಲಕ ಕಾದಂಬರಿಕಾರರು ಸಮಾಜದ ಜಾತಿ ವ್ಯವಸ್ಥೆ ಹಿಂದೆ ಇರುವ ಡಾಂಭಿಕತೆ ಹಾಗೂ ಆರ್ಥಿಕ ಅಸಮಾನತೆಯ ಮೂಲವನ್ನು ತೆರೆದು ತೋರಿಸುತ್ತಾನೆ. ಮುಂದುವರೆದು ಚೆಮ್ಮೀನಿನಲ್ಲಿ ಕರುತ್ತಮ್ಮ ಮತ್ತು ಪರೀಕುಟ್ಟಿಯವರ ನಡುವಿನ ನಿಷ್ಕಳಂಕ ಪ್ರೇಮ ಮುರಿದು ಬೀಳುವುದು ; ಇಡೀ ಕಾದಂಬರಿಯಲ್ಲಿ ದುರಂತಕ್ಕೆ ಕಾರಣವಾಗುವುದು ಜಾತಿಯ ಪರಿಕಲ್ಪನೆಯ ವಿಸ್ತೃತ ರೂಪವಾದ ಧರ್ಮದಿಂದ. ಚೆಂಪನ್ ಸ್ಥಿತಿವಂತನಾದ ನಂತರ ತನ್ನದೇ ಜಾತಿಯ ಒಳಪಂಗಡದ ಶ್ರೇಣಿಕರಣವನ್ನು ಮುರಿದ ಹಾಗೆ ವಿಸ್ತೃತ ರೂಪದ ಜಾತಿ ವ್ಯವಸ್ಥೆಯನ್ನು ಮುರಿಯಲಾಗದು. ಅದು ಎಲ್ಲಾ ಆರ್ಥಿಕ ಸ್ಥಿತಿಗಳನ್ನು ಮೀರಿದ ಅವಸ್ಥೆ.

ಚೋಮನ ದುಡಿಯಲ್ಲಿ ಗುರುವ ಮರಳಿ ತನ್ನ ತಂದೆಯನ್ನು ಸೇರದಿರುವುದು ಅಥವಾ ಇವರು ಆತನನ್ನು ಜೊತೆಗೆ ಸೇರಿಸಿಕೊಳ್ಳದಿರುವುದು ಕೂಡ ಜಾತಿಯ ಕಾರಣದಿಂದಲೇ. ಚೋಮದ ದುಡಿಯಲ್ಲಿ ಜಾತಿ, ವರ್ಗ, ಪರಿಕಲ್ಪನೆ ವ್ಯಾಪಕವಾಗಿ ಕ್ರೀಯಾಶೀಲವಾಗಿರುವುದನ್ನು ಗಮನಿಸಬೇಕು, ಚೋಮನಿಗೆ ತನ್ನ

ಒಳಪಂಡಗಗಳನ್ನು ಮುರಿಯಲು ಸಾಧ್ಯವಿಲ್ಲ. ಹೊರಪಂಗಡಗಳನ್ನು ಒಪ್ಪಿಕೊಳ್ಳಲೂ ಸಾಧ್ಯವಿಲ್ಲ. ಆತನದು ಒಡಲಲ್ಲಿ ಅಲಗು ಮುರಿದಂತಹ ಸ್ಥಿತಿ. ಇಲ್ಲಿ ಗಮನಿಸಬೇಕಾದ ಒಂದು ವೈದೃಶ್ಯವೆಂದರೆ ಚೋಮನ ದುಡಿಯಲ್ಲಿ ಚೋಮನ ಪ್ರತಿಭಟನೆ ಆರೋಹಣ ಕ್ರಮದಲ್ಲಿ ಮುಂದುವರೆಯುತ್ತದೆ. ಅದು ರೊಚ್ಚಿಗೆ ತಿರುಗುತ್ತದೆ ಮತ್ತು ಆತ ಭೂಮಿಯನ್ನು ಹೇಗಾದರೂ ಸರಿ ಪಡೆಯಲೇ ಬೇಕು ಎಂಬ ನಿರ್ಧಾರಕ್ಕೆ ಬಂದವನಲ್ಲ. ಹಾಗೆ ಹಾಗಿದ್ದರೆ ಆತ ಪಾದ್ರಿ ಮತಕ್ಕೆ ಮತಾಂತರವೋ ಅಥವಾ ಸರ್ಕಾರಿ ದರಕಾಸು ಭೂಮಿಯನ್ನು ಪಡೆಯಲು ಪ್ರಯತ್ನಿಸಬಹುದಾಗಿತ್ತು. ಆತನ ಒಳಗೆ ಇರುವ ತನ್ನ ನಂಬಿಕೆ ಮತ್ತು ಶ್ರದ್ಧೆಗಳು ಆತನನ್ನು ನಿಯಂತ್ರಿಸುತ್ತವೆ. ಚಂಪನ್ ದೋಣಿ ಕೊಳ್ಳಲು ಪರೀಕುಟ್ಟಿಯಿಂದ ಸಾಲ ತರುತ್ತಾನೆ. ಆರಯ್ಯನಿಗೆ ಲಂಚ ಕೊಡುತ್ತಾನೆ. ಪರೀಕುಟ್ಟಿ ತನಗೆ ಅಷ್ಟು ಧಾರಾಳವಾಗಿ ಹಣವನ್ನು ಏಕೆ ಕೊಟ್ಟ ? ಎಂದು ಯೋಚಿಸುವ ಗೋಜಿಗೆ ಹೋಗುವುದಿಲ್ಲ.

ಈ ಎರಡು ಕಾದಂಬರಿಗಳಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಚಂಪನ್‌ಕುಞ್ಞ ಜಾತೀಯ ಶ್ರೇಣಿಕರಣದಲ್ಲಿ ಉನ್ನತ ಪಂಗಡದವರಾದ ಆರಯ್ಯ ಸ್ತ್ರೀಯನ್ನೇ ಎರಡನೇ ಮದುವೆಯಾಗುತ್ತಾನೆ. ಆಕೆ ಚಂಪನ್ ದೋಣಿ ಬಲೆಯನ್ನು ಕೊಂಡು ತಂದ ದೋಣಿಯ ಯಜಮಾನ ಕಂಡನ್‌ಕೋರ್‌ನ ಹೆಂಡತಿ ಪಾಪ್ಪಿಕುಞ್ಞ. ಇದನ್ನು ಮುಂದೆ ಆರೈಯ ವಿರೋಧಿಸುವಾಗ ಚಂಪನ್ ವ್ಯಂಗವಾಗಿ ನಕ್ಕು ಉಡಾಫೆಯ ಉತ್ತರ ಕೊಡುತ್ತಾನೆ. "ನಮ್ಮ ಮದುವೆಯೇ ಆಗಿಲ್ಲ, ಸುಮ್ಮನೆ ನಮ್ಮ ಮನೆಯ ಕೆಲಸಕ್ಕೆ ಕರೆತಂದಿದ್ದೆ" ಎನ್ನುತ್ತಾನೆ. ಕಾದಂಬರಿಯಲ್ಲಿ ತುಂಬಾ ಗಮನಾರ್ಹವಾದ ಅಂಶ ಇದು. ಆರಯ್ಯ ಸ್ತ್ರೀಯನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದೆ ಎನ್ನುವುದರ ಮೂಲಕ ಉಚ್ಛ ಜಾತಿಯ ಶ್ರೇಣಿಕರಣಕ್ಕೆ ಆತ ಕೊಡುವ ಹೊಡೆತ ಎಂತಹದೆಂದರೆ ಆರಯ್ಯ ತಬ್ಬಿಬ್ಬಾಗುತ್ತಾನೆ. ಚಂಪನ್ ಆಕೆಯನ್ನು ಮದುವೆಯಾಗಿದ್ದರೂ ಸಹ ಮದುವೆ ಆಗಿಲ್ಲವೆಂದು ಹೇಳುವ ಮೂಲಕ ತೋರುವ ಪ್ರತಿಭಟನೆಯ ಸ್ವರೂಪ ಫ್ಯಾನಾನ್‌ನ ಪರಕೀಯ ಪ್ರಜ್ಞೆಯ ಸಿದ್ಧಾಂತವೊಂದರ ಹೊಳಹು ಸೂಚಿತವಾಗುತ್ತದೆ.

ಚೋಮನ ದುಡಿಯಲ್ಲಿ ಇಂತಹ ತೀವ್ರ ಪ್ರತಿಭಟನೆ ಬೇರೆಯ ರೂಪದಲ್ಲಿ ಪ್ರಕಟವಾಗುತ್ತದೆ. ಆತ ತನ್ನ ಮಗ ನೀಲ ನೀರಿನಲ್ಲಿ ಬಿದ್ದು ಸತ್ತಾಗ ಯಾರಿಗೂ ಮುಖ ತೋರಿಸದೆ ಒಳಗೆ ಕುಳಿತು ಸಂಜೆಯಾದ ಮೇಲೆ ದುಡಿ ಬಾರಿಸುವ ಮೂಲಕ ಪ್ರತಿಭಟನೆ ವ್ಯಕ್ತಪಡಿಸುತ್ತಾನೆ. ಅದು ಸಂಕಪ್ಪಯ್ಯನವರ ಬಾಯಿಯಲ್ಲಿ "ಇವನ ಮನೆ ಹಾಳಾಗ ಮಗ ಸತ್ತಿದ್ದರೂ ದುಡಿ ಬಾರಿಸುತ್ತಾನಲ್ಲ" ಎನ್ನುತ್ತಾರೆ. ಅವನ ನೋವು, ಸಂಕಟ ಚೋಮನಿಗೆ ಮಾತ್ರ ಗೊತ್ತು. ಚೋಮ ಮತ್ತೊಂದು ಸಂದರ್ಭದಲ್ಲಿ ಕೆಲಸದಲ್ಲಿ ಆಸಡ್ಡೆ ತೋರಿಸಿದಾಗ ಸಂಕಪ್ಪಯ್ಯ "ನೀನು ಬೆಳಗ್ಗೆಯೂ ಸೇಂದಿ ಅಂಗಡಿಗೆ ಹೊಗತೊಡಗಿದ್ದೀಯಾ ?" ಎನ್ನುತ್ತಾರೆ. ಆಗ ಚೋಮ ಯಾವಗಾಲೂ ಒಡೆಯರಿಗೆ ತಗ್ಗಿ ಬಗ್ಗಿ ನಡೆವ ದೊಡ್ಡ ಧ್ವನಿಯಿಂದ ಮಾತನಾಡಲು ಹೆದರುವ ಚೋಮ "ಹೂಂ ನೀವು ನನಗೆ ಕೈ ತುಂಬಾ ಸಂಬಳ ಕೊಡುವಾಗ ಬೆಳಗ್ಗೇನು ಸಂಜೆಯೇನು ?" ಎಂದು

[illegible]

[illegible]

[illegible]

ಉತ್ತರಿಸುತ್ತಾನೆ. ಇನ್ನು ಇಲ್ಲಿ ಕಾಲಿಡಬೇಡ ಎಂದು ಸಂಕಪ್ಪಯ್ಯ ಗದರಿದರೆ ತಿರಸ್ಕಾರದ ನಗೆ ನಕ್ಕು ಮನೆಗೆ ನಡೆಯುತ್ತಾನೆ. ಇಲ್ಲಿ ಚೋಮನಿಗೆ ಸಂಬಳವೇ ಮುಖ್ಯ. ಬಹುಶಃ ಆರ್ಥಿಕವಾಗಿ ಸುರಕ್ಷಿತನಾಗಿದ್ದರೆ ಅವನ ಪ್ರತಿಭಟನೆ ಚಂಪನ್ ತರಹವೇ ಇರುತ್ತಿತ್ತೇನೋ ಆದರೆ ಆರಯ್ಯ ಹಾಗೂ ಸಂಕಪ್ಪಯ್ಯನವರಂತಹ ಫ್ಯೂಡಲ್‌ಇಸಂ ಗೆ ಕೊಡುವ ತಿರಸ್ಕಾರದ ನಗು ತುಂಬಾ ಮುಖ್ಯವಾದದು.

ಕಾದಂಬರಿಯ ಈ ಇಬ್ಬರು ನಾಯಕರ ಮೇಲೆ ಒತ್ತಡ ತರುವ ಸಾಮಾಜಿಕ ವಾಸ್ತವವನ್ನು ಈ ಎರಡೂ ಕಾದಂಬರಿಗಳಲ್ಲಿಯೂ ತುಂಬ ಎಚ್ಚರಿಕೆಯಿಂದ ಚಿತ್ರಿಸಲಾಗಿದೆ. ಜಾತಿ ವ್ಯವಸ್ಥೆಯಿಂದ ಛಿದ್ರವಾದ ತನ್ನ ಸಮಾಜವನ್ನು ಒಪ್ಪಿಕೊಳ್ಳದೆ, ಹೊಸ ಜೀವನಕ್ಕೆ ಆಸೆ ಪಡುವುದರಿಂದ ಇಬ್ಬರೂ ನಾಯಕರು, ಸಮಸ್ಯಾತ್ಮಕ ನಾಯಕರಾಗುತ್ತಾರೆ. ಚಮ್ಮೀನಿನಲ್ಲಿ ಇನ್ನು ಇಬ್ಬರು ನಾಯಕರು ಅವರೆಂದರೆ ಪರೀಕುಟ್ಟಿ ಮತ್ತು ಕರುತ್ತಮ್ಮ. ಈ ನಾಯಕರು ತಮ್ಮ ಅಮಿತವಾದ ಬಯಕೆಗಳಿಂದ, ವಸ್ತು ಸ್ಥಿತಿ, ಪ್ರಾಪಂಚಿಕ ಪರಿಜ್ಞಾನವನ್ನು ನಿರ್ಲಕ್ಷಿಸಿ, ಅದರಿಂದ ಆಗುವ ಅಪಾಯದಿಂದ ಅವರ ಬಯಕೆಗಳು ದುರ್ಬಲವಾಗುತ್ತದೆ. ಬದುಕನ್ನೇ ನಾಶಮಾಡಿಬಿಡಬಹುದಾದ ಈ ಎಲ್ಲಾ ವಿಚಾರಗಳ ಸಣ್ಣ ಪರಿಕಲ್ಪನೆಯು ಸಹ ಅವರ ಅಮಿತ ಬಯಕೆಯ ಗರ್ಭವನ್ನು ಸೀಳಿ ಮನಸ್ಸನ್ನು ಹೊಕ್ಕಲಾರವು. ಈ ಇಬ್ಬರು ಬಯಕೆಯಲ್ಲಿ ಸುತ್ತಲಿನ ಪ್ರಪಂಚವನ್ನು ನಿರ್ಲಕ್ಷಿಸಿ ಬಿಡುತ್ತಾರೆ.

ಚೋಮನ ದುಡಿಯ ಬೆಳ್ಳಿ ಅನೇಕ ಬಾರಿ ಚೋಮನ ಭೂಮಿಯ ಬಯಕೆಯ ಬಗ್ಗೆ ವಿಶದಪಡಿಸಿ ಹೇಳುತ್ತಾಳೆ. ಆದರೆ ಚೋಮನಿಗೆ ಅದು ಅರ್ಥವಾಗುವುದಿಲ್ಲ. ಬೆಳೆದು ನಿಂತ ಮಕ್ಕಳಿಗೆ ಮದುವೆ ಮಾಡಬೇಕೆಂಬುದಕ್ಕಿಂತಲು ಭೂಮಿಯ ಬಯಕೆ ಅಮಿತವಾದದ್ದು. ಆತನಿಗೆ ಆದರೆ ಮಕ್ಕಳ ಮದುವೆಯ ಬಗ್ಗೆ ಯೋಚಿಸಿರಲಿಲ್ಲವೆಂದಲ್ಲ. ಚನಿಯ ಕಳಸಕ್ಕೆ ಹೋಗುವ ಮೊದಲು ಎಲ್ಲರೊಡನೆ, ಚನಿಯ ಹಿಂದಿರುಗಿ ಬಂದ ಮೇಲೆ ಅವನಿಗೆ ಒಂದು ಒಳ್ಳೆಯ ಹುಡುಗಿಯನ್ನು ತಂದು ಮದುವೆ ಮಾಡುವುದರ ಬಗ್ಗೆ ಮಾತನಾಡುತ್ತಾನೆ. ಅವನು ಹಿಂದಿರುಗಿ ಬರುವಷ್ಟರಲ್ಲಿ ಮೊಂಡನ ಮಗಳು ಗಿಡ್ಡಿಯನ್ನು ನೋಡಿರುತ್ತಾನೆ. ಅವನಿಗೆ ಬೆಳ್ಳಿ ಬಗ್ಗೆ ಮಾತ್ರ ಸ್ವಲ್ಪ ಜಿಜ್ಞಾಸೆ. ಮಗಳನ್ನು ಅಳಿಯನೊಂದಿಗೆ ಕಳುಹಿಸಬೇಕಾಗುತ್ತದೆಂಬ ಹೆದರಿಕೆಯಿಂದ. ಅವಳ ಮದುವೆ ಪ್ರಸ್ತಾಪವನ್ನು ಚೋಮ ಮಾಡುವುದೇ ಇಲ್ಲ. "ಇನ್ನು ಚಿಕ್ಕವಳು ಅವಸರವೇನು ಎಂಬುದು ಅವನ ಸಮಾಧಾನ." ಆದರೆ ಅದರ ಹಿಂದೆ ಇನ್ನಾವುದೇ ಸ್ವಾರ್ಥದ ವಿಷಯವಿಲ್ಲ.

ಚಂಪನ್‌ನಿಗೆ ದೋಣಿಯ ಒಡೆಯನಾಗಬೇಕಂಬ ಬಯಕೆ. ಚಂಪನ್‌ನ ಹೆಂಡತಿ ಚಕ್ಕಿ ಪರಿಸ್ಥಿತಿಯನ್ನು ಎಷ್ಟೇ ವಿವರಿಸಿದರೂ ಆತನಿಗೆ ತನ್ನ ಬಯಕೆಯ ಈಡೇರಿಕೆಯೇ ಮುಖ್ಯ. ಅದರ ಮುಂದೆ ಮಗಳ ಮದುವೆಯ ವಿಚಾರವೂ ಆತನಿಗೆ ಮುಖ್ಯವಲ್ಲ. ಮಗಳ ಮದುವೆ ಅವನ ಬಯಕೆಗೆ ಅಡ್ಡಿ ಎನಿಸುತ್ತದೆ. ಚಂಪನ್‌ನಿಗೆ ಕೊನೆಯವರೆಗೂ ತನ್ನ ಬಯಕೆಗಳಾದ ದೋಣಿ ಮತ್ತು ಬಲೆಯ ಜೊತೆಗೆ

ಹೆಂಡತಿಯ ದೈಹಿಕ ಸುಖ ಮುಖ್ಯವೇ ಹೊರತು ಬೇರಿಲ್ಲ. ಹೆಂಡಿಯ ಸತ್ತ ನಂತರ ದೈಹಿಕ ಸುಖಕ್ಕಾಗಿ ಇನ್ನೊಂದು ಮದುವೆಯನ್ನು ಮಾಡಿಕೊಳ್ಳುತ್ತಾನೆ ಚಂಪನ್. ಆತನಿಗೆ ಮಕ್ಕಳ ಬಗ್ಗೆ ಚೋಮನಂತಹ ವಿಶೇಷ ಪ್ರೀತಿ ಏನು ಇಲ್ಲ.

ಚೋಮನ ದುಡಿ ಮತ್ತು ಚಮ್ಮೀನ್‌ನಲ್ಲಿ ಏಕಕಾಲದಲ್ಲಿ ಎರಡು ಸಮಸ್ಯೆಗಳು ಮುಖ್ಯವಾಗಿ ಕಾಣಿಸಿಕೊಳ್ಳುತ್ತವೆ. ಚೋಮನ ದುಡಿಯಲ್ಲಿ ಚೋಮನ ಭೂಮಿ ಗೇಣಿ ಮಾಡುವ ಬಯಕೆ ಮತ್ತು ಆತ ಕಾಫಿ ತೋಟದಲ್ಲಿ ಮಾಡಿದ ಸಾಲ. ಚಮ್ಮೀನ್‌ನಲ್ಲಿ ದೋಣಿ ಹೊಂದುವ ಬಯಕೆ ಹಾಗೂ ಮಗಳ ಮದುವೆ. ಇದು ಬೆಸ್ತರ ಸಮಾಜದಲ್ಲಿ ತುಂಬಾ ಮುಖ್ಯವಾದ ಸಮಸ್ಯೆ. ಹತ್ತು ವರ್ಷದಲ್ಲಿ ಮಗಳ ಮದುವೆ ಮಾಡಬೇಕೆಂಬುದು ಅಲ್ಲಿಯ ನಿಯಮ. ಅದುದರಿಂದಲೇ ಕೆಲವರು ಆರಯ್ಯನ ಬಳಿ ಈ ಸಮಸ್ಯೆಯನ್ನು ವಿಚಾರಣೆಗೆ ಒಳಪಡಿಸುತ್ತಾರೆ. ಹೆಣ್ಣಿನ ಮದುವೆಯ ಬಗ್ಗೆ ತೋರುವ ಆಸ್ಥೆ ಕರುತ್ತಮ್ಮನ ಮೇಲಿನ ಪ್ರೀತಿಯಿಂದಲ್ಲ. ಬದಲಿಗೆ ಸಮಾಜದ ಒಪ್ಪಿತ ಮೌಲ್ಯದ ಪುನರ್‌ಸ್ಥಾಪನೆಗೆ ಸ್ತ್ರೀಯನ್ನು ಆ ಇಡೀ ಸಮಾಜ ಗ್ರಹಿಸುವ ರೀತಿ, ಭಾರತೀಯ ಸಮಾಜದ ಸ್ತ್ರೀಯನ್ನು ಕುರಿತ ಚಿಂತನೆಗಿಂತ ಭಿನ್ನವೇನಲ್ಲ. ಕಾರಂತರ ಬೆಳ್ಳಿಗೆ ಇಂತಹ ಸಮಸ್ಯೆಯೇನು ಇಲ್ಲ. ಆದರೆ ಬೆಳ್ಳಿ ಮತ್ತು ಕರುತ್ತಮ್ಮರು ವ್ಯಕ್ತಿಗತವಾಗಿ ಕಾದಂಬರಿಯಲ್ಲಿ ಅನಾವರಣಗೊಳ್ಳುವ ಸ್ವಭಾವ ಸಂಕೀರ್ಣವಾದದು. ಇಷ್ಟೆಲ್ಲ ಆಗಿ ಆರಯ್ಯನ ಬಳಿ ಹೋದ ಚಂಪನ್ ಮಗಳ ಮದುವೆ ವಿಚಾರವನ್ನು ನಿರ್ಲಕ್ಷಿಸುತ್ತಾನೆ. ಚೋಮ ಕೂಡ. ಭೂಮಿಯನ್ನು ಗೇಣಿ ಮಾಡುವ ಬಯಕೆಯಲ್ಲಿ ಮನ್ವೇಲನ ಸಾಲದ ತೀರುವಳಿಯ ಬಗ್ಗೆ ನಿರ್ಲಕ್ಷಿಸುತ್ತಾನೆ. ಚೋಮನ ದುಡಿಯಲ್ಲಿ ಮನ್ವೇಲ ಸಂಕಪ್ಪಯ್ಯನವರ ಹತ್ತಿರ ತನಗೆ ಬರಬೇಕಾದ ಹಣದ ಬಗ್ಗೆ ವಿಚಾರ ಮುಟ್ಟಿಸುತ್ತಾನೆ. ಸಂಕಪ್ಪಯ್ಯನವರು ಚೋಮನನ್ನು ಗದರಿಸುತ್ತಾರೆ. ಆದರೆ ಚೋಮ ತನ್ನ ಎತ್ತುಗಳನ್ನು ಮಾರಿ ಅದರಿಂದ ಬಂದ ಹಣದಿಂದ ಕಾಫಿ ತೋಟದ ಸಾಲ ತೀರಿಸಲು ಸುತಾರಂ ಒಪ್ಪುವುದಿಲ್ಲ. ಸ್ವತಃ ತಾನೇ ಹೋಗಿ ಕಾಫಿ ತೋಟದಲ್ಲಿ ದುಡಿಯಲು ಸಿದ್ಧ. ಆದರೆ ಎತ್ತುಗಳನ್ನು ಮಾರಲು ಸಿದ್ಧವಿಲ್ಲ. ಚೋಮ ಮತ್ತು ಚಂಪನ್ ಇಬ್ಬರಿಗೂ ಮುಂದೆ ಒದಗಬಹುದಾದ ಅನಾಹುತದ ಪ್ರಜ್ಞೆಇಲ್ಲ. ಇದು ಎರಡು ಕಾದಂಬರಿಗಳಲ್ಲಿಯೂ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಎರಡು ಕಾದಂಬರಿಗಳಲ್ಲಿ ಇರುವ ಮತ್ತೊಂದು ವಸ್ತುಸಂಗತಿಯನ್ನು ಗಮನಿಸಬೇಕು. ಚೋಮನ ದುಡಿಯಲ್ಲಿ ಬೆಳ್ಳಿ, ಮನ್ವೇಲ, ಮಂಗೇಲರಿಂದ ಬಂದ ಹಣದಿಂದ ಸಾಲತೀರಿಸುತ್ತಾಳೆ. ಆದರೆ ಆ ಹಣ ಬೆಳ್ಳಿಗೆ ಬಂದದ್ದು ಆಕೆಯ ಶೀಲ ಹರಣದಿಂದ. (ಬೆಳ್ಳಿಗೆ ಕೂಡ ಈ ಲೈಂಗಿಕ ಕ್ರಿಯೆಯಲ್ಲಿ ಆಸಕ್ತಿ ಇದ್ದುದರಿಂದ ಹೀಗೆ ಶೀಲಹರಣವೆಂದು ಕರೆಯಬೇಕೇ ಎಂಬುದು ಪ್ರಶ್ನೆ. ಮುಂದೆ ಈ ಸಂಗತಿಯನ್ನು ಚರ್ಚಿಸುತ್ತೇನೆ.) ಚೆಮ್ಮೀನಿನಲ್ಲಿ ದೋಣಿ ಕೊಳ್ಳಲು ಪರೀಕುಟ್ಟಿಯಿಂದ ಚೆಂಪನ್ ಹಣದ ಸಹಾಯ ಪಡೆಯುತ್ತಾನೆ. ಪರೀಕುಟ್ಟಿ ಚೆಂಪನ್‌ಗೆ ಸಹಾಯ ಮಾಡುವುದು ಕರುತ್ತಮ್ಮನ ಮೇಲಿನ ಪ್ರೀತಿಯಿಂದ. ಚೋಮನಿಗೆ ಮಗಳ

ಶೀಲಹರಣ ಸಂಗತಿ ಗೊತ್ತಿಲ್ಲ. ಅದರ ಬಗ್ಗೆ ಯೋಚಿಸುವುದು ಅವನಿಂದ ಶಕ್ಯವಲ್ಲ. ಮಗಳ ಬಗ್ಗೆ ಅವನಿಗೆ ಅಂತಹ ನಂಬಿಕೆ. ಚೆಂಪನ್‌ಗೆ ಕೂಡ ಮಗಳ ಬಗ್ಗೆ ಅಂತಹದೇ ನಂಬಿಕೆ. ಆದರೆ ಚಕ್ಕಿಗೆ ಪರೀಕುಟ್ಟಿ ಸಹಾಯದ ಹಿಂದೆ ಇರುವ ಸಂಗತಿಯ ಅರಿವಿದೆ. ಆಕೆ ಅದನ್ನು ತಡೆಯುವಲ್ಲಿ ವಿಫಲಳಾಗುತ್ತಾಳೆ.

ಬೆಳ್ಳಿ ವಯೋದೌರ್ಬಲ್ಯಕ್ಕೆ ಒಳಗಾಗಿ ಮನ್ವೇಲನ ಕಾಮ ಚೇಷ್ಟೆಗೆ ಮೌನದ ಅಂಗೀಕಾರದ ಮುದ್ರೆ ಒತ್ತುತ್ತಾಳೆ. ಅನಂತರ ಮೀಂಗಲನ ಜೊತೆಗೂ ಸಂಬಂಧವನ್ನು ಹೊಂದುತ್ತಾಳೆ. ಇದು ಒಂದು ಕಡೆ ಆಕೆಯ ವಯೋದೌರ್ಬಲ್ಯವಾಗಿದ್ದು, ಈ ಕ್ರಿಯೆಗೆ ಒಳಗಾಗುವಾಗ ಯಾವ ಮಾನಸಿಕ ಜೀಜ್ಞಾಸೆಯ ನಡೆಯುವುದಿಲ್ಲವೆಂದು ಗಮನಿಸಬೇಕು. ವಯೋದೌರ್ಬಲ್ಯವೇ ಎಲ್ಲಾ ಕ್ರಿಯೆಗಳನ್ನು ಮೀರಿ ನಿಲ್ಲುತ್ತದೆ. ಅದು ಮನುಷ್ಯನನ್ನು ಪಶುವಾಗಿಯೂ ಮಾಡಿಬಿಡುತ್ತದೆ. ಈ ಸಂದರ್ಭದಲ್ಲಿ ನಾವು ಗಮನಿಸಬೇಕಾದ ಅನೇಕ ಅಂಶಗಳಿವೆ. ಗುರುವ ಕೂಡ ಇದೇ ಕಳಸದಲ್ಲಿ ಮೇರಿಯನ್ನು ಮದುವೆ ಮಾಡಿಕೊಂಡಿದ್ದ. ಅವನಿಗೆ ತನ್ನ ನಂಬಿಕೆ, ಧರ್ಮಕ್ಕಿಂತ ಆಕೆಯ ಮೇಲಿನ ಪ್ರೀತಿ ಮುಖ್ಯವಾಗಿತ್ತು. ಇದು ಆತನ ವಯೋದೌರ್ಬಲ್ಯದಿಂದ ಹುಟ್ಟಿದ್ದೆ ? ಮನುಷ್ಯನನ್ನು ಲೈಂಗಿಕ ಆಸಕ್ತಿ, ಪ್ರೀತಿ ರೆಬೆಲ್ ಮಾಡಿಬಿಡುತ್ತದೆ. ಆದರೆ ಏಕಕಾಲದಲ್ಲಿ ಮಿಂಗೇಲ ಮತ್ತು ಮನ್ವೇಲರ ಜೊತೆ ಲೈಂಗಿಕ ಕ್ರಿಯೆಗೆ ಒಳಗಾಗುವ ಬೆಳ್ಳಿಯದು ತೀರಾ ಅನೈತಿಕವೇ? ಆಕೆ ಕೂಡ ಗುರುವನಂತೆ ಮನ್ವೇಲನನ್ನು ಪ್ರೀತಿಸಬಹುದಾಗಿತ್ತು, ಮದುವೆಯಾಗಬಹುದಾಗಿತ್ತು ಎನಿಸುತ್ತದೆ. ಮುಂದೆ ಬೆಳ್ಳಿ ಆ ತರಹದ ಕನಸ್ಸನ್ನು ಕಾಣುತ್ತಾಳೆ. ಆದರೆ ಬೆಳ್ಳಿಯನ್ನು ಹಿಂದಿರುಗಿ ಕೊಪ್ಪಕ್ಕೆ ಮನ್ವೇಲ ಕಳುಹಿಸಲು ಒಪ್ಪುವುದು ತನ್ನ ಹೆಂಡತಿಯು ಮನೆಗೆ ಬರುತ್ತಾಳೆಂಬ ಕಾರಣದಿಂದ.

ಚೋಮನ ದುಡಿಯಲ್ಲಿ ಗಮನಿಸಬೇಕಾದ ತುಂಬಾ ಮುಖ್ಯ ಸಂಗತಿ ಎಂದರೆ ಕಾದಂಬರಿ ಎರಡು ಸ್ತರದಲ್ಲಿ ನಡೆಯುತ್ತದೆ ಎಂಬುದು. ಒಂದು ಬದಲಾವಣೆಯನ್ನೇ ಕಾಣದ ಭೋಗನಹಳ್ಳಿ ಇದು ಭಾರತೀಯ ಪರಂಪರಾಗತವಾದ ಜಾತಿ ವ್ಯವಸ್ಥೆಯ ಸಂಕೀರ್ಣ ಚರಿತ್ರೆಯಿಂದ ಕಟ್ಟಲ್ಪಟ್ಟದು. ಇಲ್ಲಿ ತನ್ನ ಚರಿತ್ರೆಯ ಮಿತಿಯಲ್ಲಿಯೇ ದಯೆಗೆ ಸ್ಥಾನವಿದೆ. ಅಧು ಭೂಮಿ ಕೊಡುವುದರ ಬಗ್ಗೆ ಕನಿಕರ ತೋರುವ ಸಂಕಪ್ಪಯ್ಯ ಮತ್ತು ಚೋಮನ ಮಗ ನೀಲ ಸತ್ತ ಮೇಲೆ ಶವವನ್ನು ಹೊರಕ್ಕೆ ತೆಗೆಯುವ ಬ್ರಾಹ್ಮಣ ಹುಡುಗನಷ್ಟು ಮಾತ್ರ. ಆದರೆ ಇಲ್ಲಿನ ಪರಂಪರಾಗತ, ಸಾಮಾಜಿಕ ಹಾಗು ಆರ್ಥಿಕ ವ್ಯವಸ್ಥೆಯನ್ನು ಅಲುಗಾಡಿಸುವ ಯಾವುದೇ ವ್ಯಕ್ತಿಗತ ಪ್ರಯತ್ನ ಮತ್ತು ಬಯಕೆಯನ್ನು ತೀವ್ರವಾಗಿ ಈ ಪ್ರಪಂಚ ವಿರೋಧಿಸುತ್ತದೆ. ಸಾಮಾಜಿಕ ವಾಸ್ತವದ ಈ ಮುಖವನ್ನು ಸಂಕಪ್ಪಯ್ಯನವರ ತಾಯಿ ಪ್ರತಿನಿಧಿಸುತ್ತಾರೆ. "ಅಬ್ಬಾ ! ಈ ಹೊಲೆಯರಿಗೆ ಬಂದ ಸೊಕ್ಕೇ?" ಎನ್ನುತ್ತಾರೆ. ಚೋಮನ ದುಡಿಯ ಇನ್ನೊಂದು ಸ್ತರವೆಂದರೆ ಕಳಸ. ಇದು ವರ್ಗ ಸಂಘರ್ಷದ ನೆಲೆಯಿಂದ ಕಟ್ಟಲ್ಪಟ್ಟದ್ದು, ಇಲ್ಲಿ ಜಾತಿ ಮುಖ್ಯವಲ್ಲ, ಬಡತನ ಮುಖ್ಯ. ಇದು ಬಡತನ ಮತ್ತು ಸಾಲಕ್ಕೆ ಸಿಲುಕಿ ಬಂದಿರುವ ಕೂಲಿಗಳನ್ನು ನಿರ್ದಯವಾಗಿ ಶೋಷಿಸುವ ನಿರ್ದಯ ಪ್ರಪಂಚ. ಇಲ್ಲಿ ಕೂಲಿಗಳನ್ನು ಭಯಾನಕವಾದ ಕೊಟ್ಟಿಗೆಯಲ್ಲಿ ಕೂಡಿ ಹಾಕಿ ಅವರಿಗೆ ಸಿಗುವ ಸಂಬಳಕ್ಕೂ

[illegible]

ಕುತ್ತುತರಲಾಗುತ್ತದೆ. ಸಾಲ ತೀರಿದರೂ ತೀರಿಸದೇ ಇರಿಸಿದ್ದರ, ಆಧುನಿಕ ಪಶುತ್ವದ ವರ್ಗ ಪರಿಕಲ್ಪನೆಯ ಈ ಲೋಕವನ್ನು ಕಾಮುಕ ಮಂಗೇಲ ಮತ್ತು ಮಸ್ವೇಲರಿಬ್ಬರು ಪ್ರತಿನಿಧಿಸುತ್ತಾರೆ. ಭೋಗನಹಳ್ಳಿಯಲ್ಲಿ ವ್ಯಕ್ತಿಗತವಾಗಿಯಾದರೂ ಸಾಧ್ಯವಾಗುವ ಪ್ರತಿಭಟನೆ, ಇಲ್ಲಿ ಕನಸಿನ ಮಾತಾಗಿದೆ. ಏಕೆಂದರೆ ಆಗಾಗ ಕೆಲಸಕ್ಕೆ ಬಂದು ಸೇರುವ ಈ ಜನರನ್ನು ಒಂದು ಸಮಾಜವೆಂದು ಕರೆಯುವಂತಿಲ್ಲ. ಚೋಮನ ಕೌಟುಂಬಿಕ ದುರಂತಗಳ ಮೂಲ ಕರ್ತೃವೇ ಈ ನೆಲದಿಂದ ಶುರುವಾಗುವುದನ್ನು ಗಮನಿಸಬಹುದು. ಗುರುವನ ಮತಾಂತರ, ಚನಿಯನನ್ನು ಕೊಲ್ಲುವ ರೋಗ, ಬೆಳ್ಳಿಯ ಶೀಲಹರಣ ನಡೆಯುವುದು ಈ ನೆಲದಲ್ಲಿಯೇ. ದುರ್ಬಲರೂ, ಶೋಷಿತರು ಪ್ರಬಲ ವ್ಯವಸ್ಥೆಯಲ್ಲಿ ಸುರಕ್ಷಿತವಾಗಿ ಇರಲಾರರೆಂಬ ಮತ್ತು ಮಾನಸಿಕವಾಗಿ ಹಾಗೂ ದೈಹಿಕವಾಗಿ ಶೋಷಣೆಗೆ ಒಳಗಾಗುತ್ತಾರೆ. ಎಂಬುದನ್ನು ಇದು ಸೂಚಿಸುತ್ತದೆ. ಜೊತೆಗೆ, ಈ ಇಬ್ಬರು ಕ್ರೈಸ್ತ ಪಾತ್ರಗಳು ಎಂಬುದನ್ನು, ಈ ಹಿನ್ನೆಲೆಯೇ ಕಾದಂಬರಿ ಮತ್ತು ಕಾದಂಬರಿಕಾರ ಹೇಳುವ ವಿಚಾರವನ್ನು ಲಕ್ಷಿಸಬೇಕು. ಇಲ್ಲಿ ವ್ಯವಸ್ಥೆಯ ಉಸ್ತುವಾರಿ ಯಾರೆಂಬುದು ಮುಖ್ಯವಷ್ಟೆ. ಈ ಎರಡು ಪ್ರಪಂಚಗಳು ಚೋಮನ ಅಂತರಂಗವನ್ನು ಸಮಾನವಾಗಿ ಘಾಸಿಗೊಳಿಸಿವೆ.

ಚೆಮ್ಮೀನಿನಲ್ಲಿಯೂ ಕಾದಂಬರಿ ಎರಡು ಸ್ತರದಲ್ಲಿ ನಡೆಯುತ್ತದೆ. ಒಂದು ನೀರ್ಕುನ್ನಿ. ಇದು ಜಾತಿ ಧರ್ಮಗಳ ಸಂಕೀರ್ಣ ವ್ಯವಸ್ಥೆ, ವಿಧಿ ನಿಷೇಧಗಳು, ಆಚಾರ, ಸಂಪ್ರಾದಯದ ಬಿಗಿತ ಹೆಚ್ಚು. ಜಾತಿಗಳಲ್ಲಿ ಅಸಮಾನತೆ ಹೆಚ್ಚು. ದೋಣಿಯ ಒಡೆಯ, ದೋಣಿಯ ಕೆಲಸಗಾರ ಬೆಸ್ತರು, ಮೂಡಲಿಂದ ಬಂದ ಕೆಳವರ್ಗದ ಸ್ತ್ರೀಪುರುಷರು, ಇತ್ಯಾದಿ. ಇಲ್ಲಿನ ಅನೇಕ ಜನ ವ್ಯಾಪಾರಿಗಳು ಮುಸ್ಲೀಮರು. ಇಲ್ಲಿನ ಸಂಪ್ರದಾಯದ ಪ್ರತಿನಿಧಿಯಾಗಿ, ಆರಯ್ಯ ಇದು ಪರಂಪರೆ, ಐತಿಹ್ಯ ನಂಬಿಕೆಯು ಬಲವಾಗಿ ಬೇರು ಬಿಟ್ಟಿರುವ ಒಂದು ಸಂಕೀರ್ಣ ವ್ಯವಸ್ಥೆ. ಇಲ್ಲಿ ಪ್ರೀತಿ, ವಿಶ್ವಾಸ, ನೆರೆಹೊರೆಯ ಸ್ನೇಹ, ಈರ್ಷೆ, ಮತ್ಸರ ಒಟ್ಟಾರೆ ಭಾರತೀಯ ಮನಸ್ಥಿತಿಯ ಎಲ್ಲಾ ಸಂಕೀರ್ಣ ರೂಪಗಳು ಈ ಪ್ರಪಂಚದಲ್ಲಿ ಅನಾವರಣಗೊಳ್ಳುತ್ತವೆ. ಈ ಸಮಾಜದಲ್ಲಿ ಜಾತಿಯ ವ್ಯವಸ್ಥೆಯನ್ನು ಮೀರಿ ದೋಣಿ ಕೊಳ್ಳುವುದು ನಿಷೇಧ. ಆದರೆ ಚಂಪನ್ ದೋಣಿ ಕೊಳ್ಳುತ್ತಾನೆ. ಅದು ಅವನಿಗೆ ಸಾಧ್ಯವಾದದ್ದು. ಆತನ ಹಣದಿಂದ. ಆರ್ಥಿಕ ಸ್ಥಿತಿಯಿಂದ ಜಾತಿ ವ್ಯವಸ್ಥೆಯನ್ನು ಸುಲಭವಾಗಿ ಮೀರಬಹುದು ಎಂಬುದನ್ನು ಇದು ತೋರಿಸುತ್ತದೆ. ಆದರೆ ಈ ನೀರ್ಕುನ್ನಿ ಹಿಂದೂ ಸಮಾಜದಲ್ಲಿ ಸ್ತ್ರೀಯರನ್ನು ಗ್ರಹಿಸುವ ರೀತಿ ತುಂಬಾ ಸೂಕ್ಷ್ಮವಾದದು. ಸ್ತ್ರೀ ಕೂಡ ಶೋಷಿತ ಸಮಾಜದ ಪ್ರತಿನಿಧಿ. ಆಕೆ ಶೋಷಿತರಲ್ಲಿ ಶೋಷಿತಳು. ಚೆಮ್ಮೀನಿನಲ್ಲಿ ಒಂದು ಅರ್ಥಕ್ಕೆ ಜಾತಿಯ ಕಟ್ಟು ಪಾಡು ಮತ್ತು ಹೆಣ್ಣಿನ ಶೀಲಕ್ಕೆ ತೀರ ನಿಕಟವಾದ ಸಂಬಂಧ ಏರ್ಪಟ್ಟಿರುವುದನ್ನು ಕಾಣಬಹುದು. ಸುಲಭವಾಗಿ ಹೇಗೆ ಆ ಫ್ಯೂಡಲ್ ವ್ಯವಸ್ಥೆಯಲ್ಲಿ ಜಾತಿ ಕಾರಣಕ್ಕಾಗಿ ದೋಣಿ ಒಡೆಯನಾಗುವುದು ಸಾಧ್ಯವಿಲ್ಲದೇ ಸಾಧ್ಯವಾಗಿದೆ. ಅದಕ್ಕಿಂತಲೂ ಕ್ರೂರವಾದದು ಈ ಸ್ತ್ರೀ ಶೋಷಣೆ. ಆರ್ಥಿಕ ಕಾರಣದಿಂದ ಸುಲಭವಾಗಿ ತನ್ನ ಆಸೆಯನ್ನು ದಾಟಿದ ಚಂಪನ್, ಆ ಕ್ರಮ ಸ್ತ್ರೀಯರಿಗೆ ಸಾಧ್ಯವಾಗದು. ಆಕೆಯ ಆರ್ಥಿಕ

ಅಸ್ವಾತಂತ್ರ್ಯದಿಂದಲೇ ಇದೆಂಬುದನ್ನು ಗಮನಿಸಬೇಕು, ಈ ಪ್ರಪಂಚದಲ್ಲಿ ಸ್ತ್ರೀ ಕೇವಲ ಕಡಲ ಮೇಲೆ ಪಯಣಕ್ಕೆ ಹೋದ ಗಂಡನ ಪ್ರಾಣ ರಕ್ಷಣೆಗೆ ಪ್ರಾರ್ಥಿಸುತ್ತಾ ಅವನಿಗೋಸ್ಕರ ತನ್ನ ಎಲ್ಲಾ ಸುಖ-ದುಃಖ, ಆಸೆ-ಆಕಾಂಕ್ಷೆಗಳನ್ನು ಮರೆತು ಬಾಳ್ವೆ ಮಾಡಬೇಕಾದುದು ಇದರ ನಂಬಿಕೆಯನ್ನು ವಿವರಿಸುವುದು ಅಷ್ಟೆ ಸ್ತ್ರೀಗೆ ತನ್ನ ವಾಂಛೆಗಿಂತ, ಶೀಲ ಮುಖ್ಯ. ಆದರೆ ಗಂಡನಿಗೆ ಅದು ಮುಖ್ಯವೇ ಅಲ್ಲ. ಆತ ಹೇಗಿರಬೇಕೆಂಬ ಬಗ್ಗೆ ಕಾದಂಬರಿ ಎಲ್ಲಿಯೂ ಏನನ್ನೂ ಹೇಳುವುದಿಲ್ಲ. ಇದು ಒಟ್ಟು ಭಾರತೀಯ ಪರಂಪರೆಗೆ ಹಿಡಿದ ಕನ್ನಡಿ.

ಕಾದಂಬರಿಯಲ್ಲಿ ಗಂಡಸಿಗೆ ಧೈರ್ಯ, ದಾರ್ಢ್ಯವೇ ಅವಶ್ಯ ಗುಣಗಳು ಎಂಬುವುದನ್ನು ಗಮನಿಸಬೇಕು. ಅವನಿಗೆ ಶೀಲದ ಪ್ರಶ್ನೆ ಮುಖ್ಯವಾಗುವುದೇ ಇಲ್ಲ. ಅದು ಸ್ತ್ರೀಗೆ ಮಾತ್ರ ಸೀಮಿತ. ಕರುತ್ತಮ್ಮನನ್ನು ಪಳನಿಗೆ ಕೊಟ್ಟು ಮದುವೆ ಮಾಡಲು ಚಂಪನ್ ನಿರ್ಧರಿಸುವುದು ಅವನ ದೈಹಿಕ ಕ್ಷಮತೆಯನ್ನು ಮಾತ್ರ ನೋಡಿ ಎಂಬುದು ಗಮನಿಸಬೇಕಾದ ಅಂಶ. ಇಡೀ ಭಾರತೀಯ ಪರಂಪರೆಯಿಂದ ಬಂದ ನಂಬಿಕೆ ಇದು. ಸೀತೆಗೆ ಮಾತ್ರ ಪತಿವ್ರತೆಯ ಪರೀಕ್ಷೆ, ದ್ರೌಪದಿಗೆ ಮಾತ್ರ ನಿಜ ಸಂಗತಿಯನ್ನು ನುಡಿಯಲೇ ಬೇಕಾದ (ಕರ್ಣನನ್ನು ಬಯಸಿದ್ದು) ತುರ್ತು. ಆದರೆ ರಾಮನಿಗೆ ಸೀತೆ ಶೌರ್ಯದ ಶುಲ್ಕ, ಅರ್ಜುನನ ಶೌರ್ಯಕ್ಕೆ ದ್ರೌಪದಿ ಶುಲ್ಕವಷ್ಟೆ. ಬಿಲ್ಲನ್ನು ಎತ್ತಿದ ಧೈರ್ಯ, ದೈಹಿಕ ಕ್ಷಮತೆಗೆ ಸಂದ ಬಳುವಳಿ ಈ ಸೀತೆ ಮತ್ತು ದ್ರೌಪದಿ. ಇಂತಹ ನಂಬಿಕೆಯ ನೆಲ ಭಾರತದಲ್ಲಿ ಅಷ್ಟು ಸುಲಭವಾಗಿ ಬದಲಾಗುವಂತಹದ್ದಲ್ಲ. ಚಂಪನ್ ಆರಯ್ಯ ಸ್ತ್ರೀಯನ್ನು ಮದುವೆ ಮಾಡಿಕೊಳ್ಳುವ ಮೂಲಕ ಜಾತಿಯ ಶ್ರೇಣಿಕರಣವನ್ನು ಮುರಿರುವುದು ಕಾದಂಬರಿಯ ಶ್ರೇಷ್ಠತೆಯೇ ಸರಿ. ಆದರೆ ಚಂಪನ್ ಆರಯ್ಯ ಸ್ತ್ರೀ ಪಾಪ್ಪಿಕುಞ್ಞವನ್ನು ನೋಡಿಕೊಳ್ಳುವ ರೀತಿ ಬೇರೆ ಸ್ತ್ರೀಗಿಂತ ಹೆಚ್ಚೇನು ಭಿನ್ನವಲ್ಲ. ಆಕೆಯ ಮನೋಧೋರಣೆಗಿಂತ ಆಕೆಯಿಂದ ಸಿಗುವ ದೈಹಿಕ ಸುಖವೇ ಆತನಿಗೆ ಮುಖ್ಯವಾಗುತ್ತದೆ. ನಮ್ಮ ಪರಂಪರೆಯಲ್ಲಿ ಸ್ತ್ರೀಯನ್ನು ಲೈಂಗಿಕ ಕೇಂದ್ರವಾಗಿ ಪರಿಗಣಿಸುವುದು ಶೋಚನೀಯ. ಆಕೆಯ ಶೀಲ, ಚಾರಿತ್ರ್ಯ ಹಾಗೂ ಆಕೆಯಿಂದ ಸಿಗುವ ದೈಹಿಕ ಸುಖ ಇಷ್ಟರಿಂದ ಆಚೆಗೆ ಹೆಚ್ಚು ಯೋಚಿಸಿದ್ದೆ ಕಡಿಮೆ. ಕರುತ್ತಮ್ಮ ಮತ್ತು ಪರೀಕುಟ್ಟಿಯ ಪ್ರೇಮ ವಿವಾಹಕ್ಕೆ ದಾಟದೇ ಹೋದದ್ದು ಈ ಜಾತಿ, ಧರ್ಮದ ಕಾರಣದಿಂದ. ಜಾತಿಯ ಒಳಶ್ರೇಣಿಕರಣವನ್ನು ಸುಲಭವಾಗಿ ದಾಟದಂತೆ ಧರ್ಮವನ್ನು ಈ ದೇಶದಲ್ಲಿ ದಾಟುವುದು ಅಷ್ಟು ಸುಲಭದ ಸಂಗತಿಯಲ್ಲ.

ಚಮ್ಮೀನಿನ ಇನ್ನೊಂದು ಸ್ತರ ತೃಕ್ಕುನ್ನಪೊಳೆಯದು. ಅದು ಮೇಲಿನ ಪ್ರಪಂಚಕ್ಕಿಂತ ಹೆಚ್ಚೇನು ವಿಶೇಷವಲ್ಲ. ಆದರೆ ಅಲ್ಲಿ ಆರ್ಥಿಕ ಕಾರಣಕ್ಕಾಗಿಯೇ ಪಳನಿಯನ್ನು ಸಮುದಾಯ ದೂರವಿರಿಸುವುದನ್ನು ನೋಡಬಹುದು. ಸ್ತ್ರೀಯ ಚರಿತ್ರೆಯನ್ನು ಕುರಿತು ನೀರ್ಕುನ್ನಿಯ ಧೋರಣೆಗಿಂತ ಬೇರೇನು ವ್ಯತ್ಯಾಸವಿಲ್ಲ. ಇದು ಒಟ್ಟು ಭಾರತೀಯ ಜಾತಿ, ಧರ್ಮದ ವ್ಯವಸ್ಥೆಯ ಸಂಕೀರ್ಣತೆಯ ಅನಾವರಣ ಮಾಡುವ ಒಂದು ಮಹತ್ವದ ವಸ್ತುವಾಗಿದೆ.

ಎರಡು ಕಾದಂಬರಿಗಳಲ್ಲಿ ಪ್ರಧಾನವಾದ ವಸ್ತು ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರತಿನಿಧಿಸುವ ಪ್ರತಿನಿಧಿಗಳಾದ ಸಂಕಪ್ಪಯ್ಯ ಹಾಗೂ ಆರಯ್ಯನವರದ್ದು. ಸಂಕಪ್ಪಯ್ಯನವರ ಬಗ್ಗೆ ಕನ್ನಡ ವಿಮರ್ಶಾಲೋಕದಲ್ಲಿ ಬಹಳ ದೊಡ್ಡ ಚರ್ಚೆ ನಡೆದಿದೆ. ಆದರೆ ಅದು ಸಮರ್ಪಕವೆಂದು ನನಗೆ ತೋರಿಲ್ಲ. ಜಿ.ಎಚ್. ನಾಯಕ್ ಅವರು "ಸಂಕಪ್ಪಯ್ಯ ವ್ಯವಸ್ಥೆಯ ಕ್ರೂರ ಪ್ರತಿನಿಧಿ" ಎಂದು ಹೇಳಿದರೆ ಡಿ.ಆರ್. ನಾಗರಾಜ್ ಅವರು "ಶೋಷಣೆಯ ಮೂಲ" ಎಂದಿದ್ದಾರೆ. ಆರ್. ವಿ. ಭಂಡಾರಿಯವರು "ಒಟ್ಟಾರೆಯಾಗಿ ಸಂಕಪ್ಪಯ್ಯ ತುಂಬಾ ನಾಜೂಕಿನ ವ್ಯವಸ್ಥೆಯ ಪ್ರತಿನಿಧಿಯಂತೆ ಗ್ರಹಿಸಿದ್ದಾರೆ". ಡಾ. ರಾ. ಗೌ. ಅವರು ತಮ್ಮ ಲೇಖನದಲ್ಲಿ "ಸಂಕಪ್ಪಯ್ಯ ಜಮೀನ್ದಾರಿ ಮತ್ತು ಯಜಮಾನ್ಯ ಸಂಸ್ಕೃತಿಯ ಪ್ರತೀಕವಾಗಿ ಕಂಡುಬರುತ್ತಾನೆ".[೧] ಅಂತಯೇ ರಹಮತ್ ತರೀಕೆರೆಯವರು "ಕಾರಂತರು ನಮ್ಮ ಗ್ರಾಮೀಣ ಜಾತಿ ವ್ಯವಸ್ಥೆಯಲ್ಲಿ ಇರುವ ಕ್ರೌರ್ಯವನ್ನು ಬಿಚ್ಚಿಡುವ ಕೆಲಸವನ್ನು ಮಾಡಲಿಲ್ಲ. ಇದಕ್ಕೆ ಚೋಮನ ದುಡಿಯೆ ಸಾಕ್ಷಿ"[೨]. ಮೇಲಿನ ಎಲ್ಲಾ ಮಾತುಗಳ ಆಯಾಮವನ್ನು ಗಮನಿಸಿದ ಮೇಲೆ ನನಗೆ ಅನ್ನಿಸಿದ್ದು ಕಾದಂಬರಿ ಸೂಕ್ಷ್ಮ ಓದು ಕಾರಂತರ ಜಾತಿಯ ಬಗೆಗಿನ. ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ಗ್ರಹಿಸಿದೆ ಕೆಲಸ ಮಾಡಿಸಿವೆ. ಈ ಹಿನ್ನಲೆಯಲ್ಲಿ ಡಾ. ರಾ.ಗೌ. ಅವರ ಮಾತು ಗಮನಾರ್ಹವಾಗಿದೆ. ಜೊತೆಗೆ ಸಂಕಪ್ಪಯ್ಯ ವ್ಯವಸ್ಥೆಯ ಪ್ರತಿನಿಧಿಯಾದರೂ. ಅವನೊಳಗೆ ಮಾನವಿಯತೆಯ ಅಂಶಗಳು ಗೋಚರಿಸುತ್ತದೆ. ಆದರೆ ಆತ ಅಂದುಕೊಂಡದ್ದನ್ನು ಕಾರ್ಯಗತ ಮಾಡಲು ಶಕ್ತನಲ್ಲ. ಜೊತೆಗೆ ಎಲ್ಲವೂ ಇರುವ ಅವನಿಗೆ ವ್ಯಕ್ತಿಗತವಾಗಿ ಚೋಮ ಮಾಡಿದಂತೆ ವ್ಯವಸ್ಥೆಯ ವಿರುದ್ದ ಪ್ರತಿಭಟಿಸುವ ತುರ್ತು ಇಲ್ಲ. ಆತನ ಬಯಕೆಗೆ ಸಮಾಜ ಅಡ್ಡಿ ಪಡಿಸುತ್ತದೆ ಎಂದು ಗೊತ್ತಾಗುತ್ತಿದ್ದಂತೆಯೆ ಮೌನ ವಹಿಸುತ್ತಾನೆ, ಕನಿಕರ ಪಡುತ್ತಾನೆ ಅಷ್ಟೆ. ಅದರೆ ಚೋಮ ರೆಬೆಲ್ ಆಗುತ್ತಾನೆ. ಏಕೆಂದರೆ ಚೋಮನ ನೋವು ಅಂತಹದ್ದು. ಜೊತೆಗೆ ಸಂಕಪ್ಪಯ್ಯ ಒಮ್ಮೆ "ತಮ್ಮ ತಾಯಿ ಸಾಯುವ ಈ ವರೆವಿಗೂ ಪ್ರಶ್ನೆ ಬೇಡ" ಎನ್ನುತ್ತಾರೆ. ಅವರ ಮನಸ್ಸಿನಿಂದ ಬರುವ ಈ ಮಾತು ಡಾಂಭಿಕವಾದುದಲ್ಲ. ಕೂಲಿ ಮಾಡದಿದ್ದರೂ ಅವರು ಕೂಲಿ ಕೊಡುತ್ತಾರೆ. ಚೋಮ ದುಡಿ ಬಾರಿಸುವ ಶಬ್ದ ಕೇಳಿ ತಾನು ಜಮೀನು ಕೊಡಲಿಲ್ಲ ಎಂಬ ಕಾರಣಕ್ಕೆ ದುಡಿ ಬಾರಿಸುತ್ತಿದ್ದಾನೆ ಎಂಬ ಅರಿವು ಇದೆ. ಎತ್ತುಗಳಿಗೆ ಹುಷಾರಿಲ್ಲ ಉಳುಮೆ ಮಾಡಲು ಎಂದಾಗ ಸಹಜವಾದ ಅನುಮಾನ ಮೂಡುತ್ತದೆ. ಇಂತಹ ಸೂಕ್ಷ್ಮ ಸಂವೇದನಶೀಲ ಪಾತ್ರ ಸಂಕಪ್ಪಯ್ಯನವರದು. ಅಂತೆಯೇ ಅತ್ಯಂತ ಮುಖ್ಯವಾದ ಅಂಶವೆಂದರೆ ಸಂಕಪ್ಪಯ್ಯ ಬದಲಾಗಲೊಲ್ಲದ ಸಮಾಜದಲ್ಲಿ ಬದಲಾವಣೆ ಬಯಸದ ಮನಸ್ಥಿತಿ ಹಾಗೂ ಸಮಾಜದ ಕಟ್ಟುಪಾಡುಗಳ ಬಗ್ಗೆ ಕನಿಕರ ಹೊಂದಿದ್ದರೂ ಏನೋ ಮಾಡಲಾಗದಂತಹ ಪರಂಪರೆಯ ಮುಂದೆ ಸುಮ್ಮನೆ ಇರಬೇಕಾದ ನಿರ್ವೀರ್ಯ, ನಿಶಕ್ತ ಸ್ಥಿತಿಯ ಪ್ರತಿನಿಧಿಯಾಗಿ ಸಂಕಪ್ಪಯ್ಯ ಕಾಣಿಸುತ್ತಾನೆ.

ಚಮ್ಮೀನಿನಲ್ಲಿ ಆರಯ್ಯನವರು ಹೆಚ್ಚುಕಮ್ಮಿ ಈ ತರಹದ ಸ್ಥಿತಿಯೇ. ರಾಮನ್‌ಕುಞ್ಞ ಮುಂತಾದವರು ಅವನನ್ನು ತೀರ ಬಲವಂತ ಪಡಿಸಿದಾಗ, ಚೆಂಪನ್ ದೋಣಿ ತಂದಿದ್ದನ್ನು ವಿಚಾರಿಸುತ್ತಾನೆ. ಅವನು ಸ್ವಲ್ಪ ಹಣ ಕೊಟ್ಟ ಮೇಲೆ ಸುಮ್ಮನಾಗುತ್ತಾನೆ. ಕರುತ್ತಮ್ಮನ ಮದುವೆಯ ಸಂದರ್ಭದಲ್ಲಿ ನದಿಯ ತೀರದಲ್ಲಿ

---

೧ ಷಷ್ಠಿ ಸಂಪದ ; ಡಾ. ರಾಗೌ ; ಪುಟ. ೧೧೭

೨. ಕತ್ತಿಯಂಚಿನ ದಾರಿ ; ರಹಮತ್ ತರೀಕೆರೆ ಪುಟ. ೬೨

ಜಗಳವಾಗಿ ಪೊಲೀಸರು ಬೆಸ್ತರನ್ನು ಹಿಡಿದುಕೊಂಡು ಹೋದಾಗ ಬಿಡಿಸುತ್ತಾನೆ. ಆದರೆ ಆರಯ್ಯನಿಗೆ ತನ್ನ ವರ್ಗದ ಸ್ತ್ರೀಯನ್ನು ಚಂಪನ್ ಮದುವೆ ಮಾಡಿಕೊಂಡಾಗ ಸಹಿಸಲಾಗುವುದಿಲ್ಲ. ಹಾಗೂ ಏನೂ ಮಾಡಲಾರದ ಸ್ಥಿತಿಯನ್ನು ತಲುಪಿದ್ದಾನೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಸ್ವಾತಂತ್ರ್ಯೋತ್ತರ ಫ್ಯೂಡಲ್ ವ್ಯವಸ್ಥೆಯ ಪ್ರತಿನಿಧಿಗಳು ಕೋರೆ ಕಳೆದುಕೊಂಡ ಹುಲಿಗಳಾಗಿದ್ದರು, ತೋರಿಕೆಯ ಗೊಂಬೆಗಳಾಗಿದ್ದರು ಇವರು ಎಂಬುವುದು.

ಚೋಮನ ದುಡಿಯಲ್ಲಿ ನೀಲ ನೀರಿಗೆ ಬಿದ್ದಾಗ ಅವನನ್ನು ಎತ್ತಲು ಬಂದ ಬ್ರಾಹ್ಮಣ ಯುವಕನನ್ನು ಜನ ತಡೆಯುತ್ತಾರೆ. ಅದಕ್ಕೆ ಏಕಮಾತ್ರ ಕಾರಣ ನೀರಿನಲ್ಲಿ ಬಿದ್ದಿರುವವ ಹೊಲೆಯ ಎಂಬುದು. ಜಾತಿಯ ಕ್ರೂರತೆಯ ಬಾಹುಳ್ಯ ಚೋಮನನ್ನು ಆಘಾತಕ್ಕೆ ಒಳಪಡಿಸುತ್ತದೆ. ಚೋಮನಿಗೆ ತನ್ನ ಜಾತಿಯ ಸಮಸ್ಯೆ ತೀವ್ರವಾಗಿ ಕಾಡುತ್ತದೆ. ಈ ಜನರು ಎಷ್ಟೇ ತಡೆದರು ಬ್ರಾಹ್ಮಣ ಯುವಕ ನೀಲ ಸತ್ತ ನಂತರ ನೀರಿನಿಂದ ಹೊರಕ್ಕೆ ತರುತ್ತಾನೆ. ಇದು ಕಾದಂಬರಿ ರಚಿತ ಕಾಲಕ್ಕೆ ಸಮಾಜದ ವ್ಯವಸ್ಥೆಯಲ್ಲಿ ಆಗುತ್ತಿರುವ ಬೆಳವಣಿಗೆಯ ಸಂಕೇತವೇ ಆಗಿದೆ. ಈ ಹಿನ್ನಲೆಯಲ್ಲಿ ಸಂಕಪ್ಪಯ್ಯನವರನ್ನು ಗ್ರಹಿಸಬೇಕು. ಚೆಮ್ಮೀನಿನಲ್ಲಿ ನೀರ್ಕುನ್ನಿ ಹಾಗೂ ತೃಕ್ಕುನ್ನಪೊಳೆಗೆ ಜಗಳವಾಗಿ ಪೊಲೀಸರು ಎಲ್ಲರನ್ನು ಬಂಧಿಸಿದಾಗ ಆರಯ್ಯ ಎಲ್ಲರನ್ನು ಬಿಡಿಸುತ್ತಾನೆ. ಎಲ್ಲರೂ ಆತನಿಗೆ ಕಾಣಿಕೆ ಕೊಟ್ಟು ತಲೆ ತಗ್ಗಿಸುತ್ತಾರೆ. ಆದರೆ ವೇಲಾಯುಧನ್ ವಿಧೇಯತೆ ತೋರಿಸಲು ನಿರಾಕರಿಸುತ್ತಾನೆ. ಒಬ್ಬ ಭ್ರಷ್ಟನಿಗೆ, ಗೊಡ್ಡು ಸಂಪ್ರಾದಯದ ನಾಯಕನಿಗೆ ನಮಸ್ಕರಿಸಲು ವಿರೋಧಿಸಿ ಜೈಲು ಸೇರುತ್ತಾನೆ.

ಎರಡೂ ಕಾದಂಬರಿಗಳು ಶೋಷಣೆಯ ಸ್ವರೂಪವನ್ನು ವಿಸ್ತೃತಗೊಳಿಸಿರುವುದು ತುಂಬಾ ಮುಖ್ಯ. ಶೋಷಣೆ ಮಾಡುವ ಕ್ರಿಯೆ ಕೇವಲ ಒಂದು ವರ್ಗಕ್ಕೆ ಜನಾಂಗಕ್ಕೆ ಸೀಮಿತವಲ್ಲ ಅದು ಎಲ್ಲರಿಗೂ ಸೇರಿದ್ದು, ಶೋಷಣೆಗೊಳಗಾದ ವ್ಯಕ್ತಿಯೇ ಒಟ್ಟು ವ್ಯವಸ್ಥೆಯ ಆಯಕಟ್ಟಿನ ಸ್ಥಾನದಲ್ಲಿ ನಿಂತರೆ ಆತನೂ ಶೋಷಣೆಯನ್ನು ಮಾಡುತ್ತಾನೆ. ಆತನಿಗೆ ಬಂದ ಕಷ್ಟಗಳ ಗ್ರಹಿಕೆಯಿಂದ ಉತ್ತಮಿಕೆಯನ್ನು ಬಯಸುತ್ತಾನೆ.

ಚೋಮನದುಡಿಯ ಚೋಮ, ರೈತನೊಬ್ಬ ತನ್ನ ಮನೆಯಲ್ಲಿ ಸತ್ತಿರುವ ಎಮ್ಮೆಯನ್ನು ತೆಗೆದುಕೊಂಡು ಹೋಗಲು ಹೇಳಿದಾಗ ಖುಷಿಯಾದರೂ ನೆಂಟರಿರುವ ಕಾರಣ ಬರಲು ಸಾಧ್ಯವಿಲ್ಲವೆನ್ನುತ್ತಾನೆ. ಕೊನೆಗೆ ನಾಲ್ಕಾಣೆ ಕೊಡಲು ಒಪ್ಪಿದ ಮೇಲೆ ಒಪ್ಪುತ್ತಾನೆ. ಚೆಂಪನ್ ಮತ್ತು ಚಕ್ಕಿಯರು ತೀರ ಬಡತನದಲ್ಲಿ ಬೆಳೆದು ಬಂದವರಾದರೂ ದೋಣಿ ಬಲೆ ತಂದ ಮೇಲೆ, ಸುಧಾರಿಸಿದ ತಮ್ಮ ಆರ್ಥಿಕ ಸ್ಥಿತಿಯಿಂದ ಅಕ್ಕಪಕ್ಕದ ಮನೆಯವರ ವಸ್ತುಗಳನ್ನೆಲ್ಲಾ ಗಿರಿವಿ ಇಟ್ಟುಕೊಂಡು ಸಾಲ ಕೊಡುತ್ತಾರೆ. ರಾಮನ್‌ಕುಞ್ಞಿವಿಗೆ ಸಾಲ ಕೊಟ್ಟು ಚೀನಿ ದೋಣಿಯನ್ನು ಅಪಹರಿಸುತ್ತಾರೆ. ಪರೀಕುಟ್ಟಿಗೆ ಕೊಟ್ಟಸಾಲವನ್ನು ಹಿಂದಿರುಗಿಸುವುದೇ ಇಲ್ಲ, ಶೋಷಣೆ ಮಾಡುವ ಶಕ್ತಿ, ವರ್ಗತಾರತಮ್ಯ ಆರ್ಥಿಕ ಹಿನ್ನೆಲೆಯಿಂದ ರೂಪಿತವಾಗಿರುವುದನ್ನು ಎರಡು ಕಾದಂಬರಿಗಳು ನಿರೂಪಿಸುತ್ತವೆ.

[illegible]

ಎರಡು ಕಾದಂಬರಿಯಲ್ಲಿ ಜಾತ್ರೆಯ ಪ್ರಸಂಗಗಳು ಚಿತ್ರಿತವಾಗಿವೆ. ಅವೆಲ್ಲವು ವರ್ಷಕ್ಕೊಂದಾವರ್ತಿ ನಡೆಯುವ ಜಾತ್ರೆ. ಅವು ಅವರ ಸಂತೋಷದ ಅನಂತರದ ಕ್ಷಣಗಳನ್ನು ಸವಿಯುವ ದಿನ. ಚೋಮನದುಡಿಯಲ್ಲಿ ಪಕ್ಕದಹಳ್ಳಿ ಪಂಜದಲ್ಲಿ ಜಾತ್ರೆ ನಡೆದರೆ ಚೆಮ್ಮೀನಿನಲ್ಲಿ ಆಶ್ಲೇಷ ಜಾತ್ರೆ ನಡೆಯುತ್ತದೆ. ಆದರೆ ಚೋಮನದುಡಿಯಲ್ಲಿ ಜಾತ್ರೆಯ ವರ್ಣನೆ ಜಾತ್ರೆಯನ್ನು ಕುರಿತ ವಿಮರ್ಶೆಯೂ ಆಗಿರುವುದು ಗಮನಿಸಬೇಕಾದ ಅಂಶ.

ಈ ಎರಡು ಕಾದಂಬರಿಗಳಲ್ಲಿ ಮತಾಂತರ ಪ್ರಕ್ರಿಯೆ ಹಾಗೂ ಅನ್ಯ ಧರ್ಮದವರೊಂದಿಗಿನ ಸಂಬಂಧದ ವಿಶ್ಲೇಷಣೆ ಮುಖ್ಯವಾದದ್ದು. ಚೋಮನದುಡಿ ಕೃತಿ ರಚನೆಯ ಹೊತ್ತಿಗೆ ಇಡೀ ದೇಶದಲ್ಲಿ ವ್ಯಾಪಕವಾಗಿ ಕ್ರೈಸ್ತ ಮತಾಂತರ ಪ್ರಕ್ರಿಯೆ ನಡೆಯುತ್ತಿತ್ತು ಎಂಬುದನ್ನು ಗಮನಿಸಬೇಕು. ಕಾದಂಬರಿಯಲ್ಲಿ ಚೋಮ ತನ್ನ ಮುಂದೆ ಇರುವ ನೇಗಿಲಿನ ಚಿತ್ರನೋಡಿ, ಪಕ್ಕದ ಹಳ್ಳಿಗೆ ಹೋಗಿದ್ದಾಗ, ಅಲ್ಲಿನ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ ತನ್ನ ಜಾತಿಯ ಮೂಲದವನೊಬ್ಬನ ನೆರವಿನಿಂದ ಪಾದ್ರಿಯನ್ನು ಭೇಟಿ ಮಾಡುತ್ತಾನೆ. ಪಾದ್ರಿ ಜಮೀನು ಕೊಡಲು ಸಿದ್ಧ, ಆದರೆ ನೀನು ನಮ್ಮ ಜಾತಿಗೆ ಮತಾಂತರ ಹೊಂದಬೇಕು ಎನ್ನುತ್ತಾನೆ. ಪಾದ್ರಿಯು ಕೂಡ ಜಾತಿಯ ಚೌಕಟ್ಟಿನಿಂದ ಆಚೆ ಯೋಚನೆ ಮಾಡಲಾರ. ಇಲ್ಲಿ ಜಾತಿ ವ್ಯವಸ್ಥೆಯ ಇನ್ನೊಂದು ಕ್ರೂರತೆ ನಮ್ಮ ಕಣ್ಣ ಮುಂದೆ ತೆರೆದುಕೊಳ್ಳುತ್ತದೆ. ಆದರೆ ಗುರುವ ಕ್ರೈಸ್ತ ಮತಕ್ಕೆ ಮತಾಂತರ ಹೊಂದಲು ಕಾರಣ ಅವನ ಪ್ರೀತಿಯಷ್ಟೆ ವಯೋಸಹಜವಾದ ವಾಂಛೆಗೆ ಬಲಿಯಾಗಿ, ಅವನು ಮೇರಿಯ ಜಾತಿಯನ್ನೆ ಸೇರಿ ಆಕೆಯನ್ನು ಮದುವೆಯಾಗುತ್ತಾನೆ. ಅನಂತರ ಬೇಸಾಯದ ವಿಚಾರ ಆತನಿಗೆ ಆನುಷಂಗಿಕವಾದದ್ದು. ಡಾ. ರಾಗೌ ಅವರು ಗುರುತಿಸುವ ಹಾಗೆ ಗುರುವ "ತನ್ನ ಪ್ರೇಮ ಸಮಸ್ಯೆಯನ್ನು ಮತಾಂತರ ಹೊಂದುವ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸುತ್ತಾನೆ.[೧] ಎಂಬುದು ಸರಿಯಾಗಿದೆ. ಆದರೆ ಮುಂದೆ ಡಾ. ರಾಗೌ ಮಾನವಶಾಸ್ತ್ರಜ್ಞರ ಮಾತನ್ನು ಉಲ್ಲೇಖಿಸಿರುವುದನ್ನು ಪಾರ್ಶ್ವಿಕವಾಗಿ ಒಪ್ಪಬಹುದು ಅದರ ಜೊತೆಗೆ ಗಮನಿಸಬಹುದಾದ ಅಂಶವೆಂದರೆ ಏಕೆ ಮನ್ವೇಲ ಬೆಳ್ಳಿಯನ್ನು ಮದುವೆ ಮಾಡಿಕೊಂಡು ಆಕೆಯ ಜಾತಿಗೆ ಮತಾಂತರ ಹೊಂದಲಿಲ್ಲ ? ಬೆಳ್ಳಿಯು ಏಕೆ ತನ್ನ ಅಪ್ಪನಿಗೆ ಕ್ರೈಸ್ತ ಮತಕ್ಕೆ ಮತಾಂತರವಾಗಲು ಒಪ್ಪಿಗೆ ಕೊಡುತ್ತಾಳೆ ? ಎಂಬುದನ್ನು ಗಮನಿಸಬೇಕು. ಕಾರಣವೆಂದರೆ ಈ ಮತಾಂತರ ಪ್ರಕ್ರಿಯೆ. ಡಾ. ರಾಗೌ ಗುರುತಿಸುವ ಹಾಗೆ ವಸಾಹಾತುಶಾಹಿ ಬಂದ ಪರಿಕಲ್ಪನೆ (ನಮ್ಮಲ್ಲಿಯೂ ಮತಾಂತರ ಪ್ರಕ್ರಿಯೆ ಇತ್ತು ಅದು ಬೇರೆಯ ತರಹದ್ದು) ಆಗ ಕ್ರೈಸ್ತ ಮತಕ್ಕೆ ಮತಾಂತರ ಹೊಂದಬಹುದಾದಷ್ಟು ಸುಲಭವಾಗಿ ಹಿಂದು ಮತಕ್ಕೆ ಮತಾಂತರಗೊಳ್ಳಲು ಆಗುತ್ತಿರಲಿಲ್ಲ. ಜೊತೆಗೆ ಹಿಂದೂ ಧರ್ಮದ ಜಾತಿ ವ್ಯವಸ್ಥೆಯಿಂದ ಬಿಡುಗಡೆ ಬಯಸುವವರೆಲ್ಲ, ಕ್ರೈಸ್ತ ಮತಕ್ಕೆ ಮತಾಂತರ ಹೊಂದುತ್ತಿದ್ದರು" ಅಲ್ಲಿ ಎಲ್ಲವು ಸಮಾನವೆಂಬ ತೋರಿಕೆಯ ಕಲ್ಪನೆ ಇತ್ತು ಎಂಬುದು ಮುಖ್ಯ, ಮುಂದೆ ಚೋಮ ತನ್ನ ದೇವರು ಧರ್ಮದ ಮೇಲೆ ತಿರಸ್ಕಾರ ಮೂಡಿ, ಮತ್ತೆ ಕ್ರೈಸ್ತ ಧರ್ಮಕ್ಕೆ ಸೇರಲು ಹೋಗುವುದನ್ನು ಗಮನಸಿದರೆ, ಬೆಳ್ಳಿ ತನ್ನ ತಂದೆ

೧ ಷಷ್ಟಿ ಸಂಪದ ; ಡಾ. ರಾಗೌ ; ಪುಟ. ೧೧೯

ಮತಾಂತರಗೊಳುವುದನ್ನು ಒಪ್ಪಿಕೊಳ್ಳಲು ಇರುವ ಕಾರಣವೆಂದರೆ ಮನ್ವೇಲನ ಬಗೆಗಿನ ಹಂಬಲವಷ್ಟೇ. ಆದರೆ ಆಕೆಗೆ ಈಗಾಗಲೇ ಮನ್ವೇಲನಿಗೆ ಮದುವೆಯಾಗಿರುವ ಸಂಗತಿ ಗೊತ್ತಿಲ್ಲ. ನವೋದಯದ ಲೇಖಕರಿಗೆ ವಸಾಹತುವಿನ ಬಗ್ಗೆ ಇರುವ ಸಂಘರ್ಷಾತ್ಮಕ ಧೋರಣೆ ಗಮನಾರ್ಹ.

ಚೋಮನದುಡಿಯಲ್ಲಿ ಚೋಮ ಮತಾಂತರವಾಗಲು ಹೋಗಿ ಸಾಧ್ಯವಾಗದೇ ಹಿಂದಿರುಗುವುದು ಆತನೊಳಗಿನ ತಾಕಲಾಟದಿಂದ. ದಾರಿಯಲ್ಲಿ ಹೋಗುವಾಗ ಪೆಂಜುರ್ಲಿ ಮುಂದೆ ಕಾಲೂರಿ ತನಗೇ ಅರಿವಿಲ್ಲದೇ ಕುಳಿತಾಗ ಪೆಂಜುರ್ಲಿ ತನ್ನನ್ನು ಬಯ್ಯುತ್ತಿರುವಂತೆ ಭಾಸವಾಗಿ ಹಿಂದಿರುಗುತ್ತಾನೆ. ಚೋಮನಿಗೆ ತನ್ನ ಪರಂಪರೆಯಿಂದ ಬಂದ ನಂಬಿಕೆ ಮುಖ್ಯವಾಗುತ್ತದೆ. ಜೊತೆಗೆ ತನ್ನ ವಯೋಮಾನ. ಈ ಸಂದರ್ಭದಲ್ಲಿನ ಚೋಮನ ಮಾತುಗಳನ್ನು ಇದು ಸ್ಪಷ್ಟಗೊಳಿಸುತ್ತದೆ.

ಚೆಮ್ಮೀನಿನಲ್ಲಿ ಪರೀಕುಟ್ಟಿ ಮುಸ್ಲೀಂ ಜಾತಿಗೆ ಸೇರಿದವನೆಂದು ಗೊತ್ತಾಗಿದ್ದರಿಂದಲೇ ಚಕ್ಕಿ ಕರುತ್ತಮ್ಮನ ಜೊತೆಗಿನ ಆತನ ಸಂಬಂಧವನ್ನು ವಿರೋಧಿಸುತ್ತಾಳೆ. ಅದು ನಂಬಿರುವ ಶ್ರದ್ಧೆ ಮತ್ತು ನಂಬಿಕೆಯ ಮೂಲದಿಂದ ಹುಟ್ಟಿದ. ಒಮ್ಮೆ ಪಕ್ಕದ ಮನೆಯವರೊಡನೆ ಜಗಳವಾಡುವಾಗ ಬೇರೆ ಮತಕ್ಕೆ ಮತಾಂತರವಾಗುವ ಮಾತನಾಡುವ ಚಕ್ಕಿಯ ಮನಸ್ಸಿನಲ್ಲಿ ಪರೀಕುಟ್ಟಿ ಇರಲಿಕ್ಕು ಸಾಕು. ಆದರೆ ಅದು ಅಷ್ಟು ಸುಲಭವಲ್ಲ. ಭಾರತದೇಶದೊಳಗೆ ಮುಸ್ಲಿಂ ಮತಕ್ಕೆ ಮತಾಂತರವಾಗುವುದು ಕಷ್ಟದ ಸಂಗತಿ. ಆದರೆ ಕರುತ್ತಮ್ಮನಿಗೆ ಅದೊಂದು ಆಶಾಕಿರಣವಾಗಿ ಕಾಣುತ್ತದೆ. ಅಲ್ಲಿ ಅವರೆಷ್ಟೇ ಪರಿಶುದ್ಧ ಪ್ರೇಮಿಗಳಾದರೂ ಅದನ್ನು ಮೀರಿದ ವಾಸ್ತವ ಜಗತ್ತು ಅವರನ್ನು ನಿಯಂತ್ರಿಸುತ್ತದೆ.

ಎರಡೂ ಕಾದಂಬರಿಗಳ ಅಂತ್ಯ ತುಂಬಾ ಕುತೂಹಲಕಾರಿಯಾದ ಸಾಮ್ಯತೆಯನ್ನು ಹೊಂದಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಲು ಹೋಗಿ ಹಿಂದಿರುಗಿದ ಚೋಮನಿಗೆ ಮನೆಯಲ್ಲಿ ಬೆಳ್ಳಿ ಮತ್ತು ಮನ್ವೇಲರನ್ನು ಒಟ್ಟಿಗೆ ನೋಡಿ ಅಘಾತವಾಗುತ್ತದೆ. ಈಗ್ಗೆ ಸ್ವಲ್ಪ ಹೊತ್ತಿಗೆ ಮುಂಚೆ ಪೆಂಜುರ್ಲಿ ಭೂತದ ಹತ್ತಿರ ಅವನೊಳಗೆ ಶುರುವಾಗಿದ್ದ ತಾಕಲಾಟ ಈ ದೃಶ್ಯವನ್ನು ನೋಡಿ ಘಾಸಿಯಾಗುತ್ತದೆ. ಕ್ರೈಸ್ತ ಧರ್ಮದ ಬಗ್ಗೆ ಚೋಮ "ಅಲ್ಲಿರುವವರು ಸಾಯುವುದಿಲ್ಲವೇ" ಎಂಬ ಸ್ಥಿತಿ ಮತ್ತೆ ಜ್ಞಾಪಕ್ಕೆ ಬಂದಿರಬೇಕು. ಬೆಳ್ಳಿಯ ಈ ನಡವಳಿಕೆ ಚೋಮನನ್ನು ಪರಕೀಯ ಪ್ರಜ್ಞೆಗೆ ತಳ್ಳಿಬಿಡುತ್ತದೆ. ಗುರುವ ಕ್ರೈಸ್ತ ಮತಕ್ಕೆ ಮತಾಂತರವಾದಾಗ, ಚನಿಯ ಸತ್ತಾಗ, ಭೂಮಿ ಸಿಗದಿದ್ದಾಗ, ನೀಲ ನೀರಿನಲ್ಲಿ ಸತ್ತಾಗ, ಪ್ರತಿಯೊಂದು ನೋವಿನ ಸಂದರ್ಭದಲ್ಲಿ ದುಡಿ ಬಡಿಯುವ ಮೂಲಕ, ಕುಡಿಯುವ ಮೂಲಕ, ಹೇಗೋ ತನ್ನ ನೋವನ್ನು ನಿವಾರಣೆ ಮಾಡಿಕೊಳ್ಳುತ್ತಾನೆ. ಆದರೆ ತಾನೂ ಅಪಾರವಾಗಿ ಪ್ರೀತಿಸಿದ್ದ ನಂಬಿದ್ದ ಬೆಳ್ಳಿಯ ಅನೈತಿಕತೆ ಅವನನ್ನು ಇಚ್ಛಾ ಪೂರ್ವಕವಾಗಿ ತನ್ನ ಎಲ್ಲಾ ಸಂಬಂಧವನ್ನು ಕಡಿದುಕೊಳ್ಳುವಂತೆ ಮಾಡುತ್ತದೆ. ಈ ಸಂದರ್ಭದಲ್ಲಿನ ಕಾದಂಬರಿಯ ವಿವರಗಳು ಅದ್ಭುತವಾಗಿ ಬಂದಿವೆ. ಇಲ್ಲಿನ ಪ್ರತಿಯೊಂದು ಕ್ರಿಯೆಯು ವಿಧ್ಯುಕ್ತ ಕ್ರಿಯೆಯ ರೂಪದಲ್ಲಿರುವುದನ್ನು ಗಮನಿಸಬಹುದು. ಇನ್ನೊಂದು ಮುಖ್ಯ ಸಂಗತಿ ಎಂದರೆ ಚೋಮನಿಗೆ ಗುರುವನ

[illegible]

[illegible]

ಸಂಬಂಧ ಅನೈತಿಕವೆಂದು ತೋರಲಿಲ್ಲವೇ ? ಆದರೆ ಗಮನಿಸಬಹುದಾದ ಅಂಶವೆಂದರೆ ಚೋಮನನ್ನು ಪರಂಪರಾಗತವಾದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ನಂಬಿಕೆಗಳು ಆತನ ಮನಸ್ಸಿನಲ್ಲಿ ಎಷ್ಟು ಆಳಕ್ಕೆ ಇಳಿದಿದ್ದವು ಎಂಬುದು ಗಂಡು ಹುಡುಗನೊಬ್ಬ ಬೇರೆ ಧರ್ಮದ ಜಾತಿಯ ಹುಡುಗಿಯನ್ನು ಮದುವೆಯಾದರೆ, ಅದು ಗಂಡಿನ ತವರಿನವರಿಗೆ ಅವಮಾನದ ಸಂಗತಿಯೇನಲ್ಲ. ಆದರೆ ಹೆಣ್ಣಿನ ಕಡೆಯವರಿಗೆ ಅದೊಂದು ತಾಳಲಾರದ ಆಘಾತ. ಇಂತಹ ಭಾರತೀಯ ಪುರುಷ ಕೇಂದ್ರಿತ ಪಾತಳಿಯಿಂದ ಹುಟ್ಟಿದ ನಂಬಿಕೆಯೇ ಚೋಮನಿಗೆ ಅಘಾತವನ್ನು ಉಂಟು ಮಾಡಿದೆ. ಈ ಅನೈತಿಕತೆಯಿಂದ ಚೋಮ ಸಾಯಲು ತೀರ್ಮಾನಿಸಿ ಬಿಡುತ್ತಾನೆ. ಆದರೆ ಆತನಿಗೆ ಮಗಳ ಬಗ್ಗೆ ಕೋಪವಿಲ್ಲ. ತನ್ನ ಬಗ್ಗೆ, ತನ್ನ ನಿರ್ಲಕ್ಷ್ಯದ ಬಗ್ಗೆ ಕೋಪವಿದೆ. ಯಾವ ನೇಗಿಲು ಅವನ ಉಳುಮೆಯ ಸಂಕೇತವಾಗಿತ್ತೊ, ಅದನ್ನು ಮುರಿದು ಬೆಂಕಿ ಹಾಕುತ್ತಾನೆ. ಆತನಿಗೆ ಬೆಳ್ಳಿಯ ಶೀಲಕ್ಕಿಂತ ಇದು ಯಾವುದು ಮುಖ್ಯವಲ್ಲ. ಈ ನೋವಿನಿಂದಲೇ ಚೋಮ ದುಡಿಯನ್ನು ಬಾರಿಸುತ್ತಾ ಸಾಯುತ್ತಾನೆ. ಚೋಮನದುಡಿಯಲ್ಲಿನ ಮುಕ್ತಾಯ ಅವನ ವೈಯುಕ್ತಿಕ ದುರಂತವಾಗಿ ಕಂಡು ಬರುತ್ತದೆ. ಅದು ಒಂದು ಸಮುದಾಯದ ಪ್ರಜ್ಞೆಯಾಗುವ ಕಡೆ ಹೋಗುವುದಿಲ್ಲ ಎಂಬುದು ಗಮನಾರ್ಹ.

ಚೆಮ್ಮೀನಿನಲ್ಲಿ ಅದರ ಬೆನ್ನಿಗಿರುವ ಐತಿಹ್ಯ, ಧಾರ್ಮಿಕ, ಸಾಮಾಜಿಕ, ಪರಂಪರಾಗತವಾದ ನಂಬಿಕೆ ಮೇಲೆ ನಡೆಯುತ್ತಿದ್ದ ಚಂಪನ್‌ಗೆ ಇತರರಿಂದ ಮಗಳ ವಿಚಾರ ತಿಳಿದಾಗ ಹುಚ್ಚನಾಗುತ್ತಾನೆ. ಇದುವರೆವಿಗೂ ಸಾಲದ ಹಣವನ್ನು ಪರೀಕುಟ್ಟಿಗೆ ಹಿಂದಿರುಗಿಸುವ ಬಗ್ಗೆ ಸಣ್ಣ ಯೋಚನೆಯನ್ನು ಮಾಡದ ಚಂಪನ್ ಜೋಸೆಫ್‌ನಿಂದ ದೋಣಿಯ ರಿಪೇರಿಗೆ ತಂದ ಹಣವನ್ನು ಆತನಿಗೆ ಕೊಟ್ಟು "ನೀನೊಬ್ಬ ಪಿಶಾಚಿ ಕಣೋ ನೀನು ಒಂದು ಸಂಸಾರವನ್ನು ಚೂರು ಚೂರು ಮಾಡಿದೆ. ನನ್ನ ಬದುಕನ್ನು ಹಾಳು ಮಾಡಿದೆ. ಎಷ್ಟು ಜನರನ್ನು ನಾಶಮಾಡಿದೆ ಗೊತ್ತೇನೊ"[೧] ಎಂದು ತನ್ನ ಮನಸ್ಸಿನ ಆರ್ತತೆಯನ್ನು ತೋಡಿಕೊಳ್ಳುತ್ತಾನೆ. ಚಂಪನ್ ತನ್ನ ಜೀವನದ ಮಹಾ ಸಾಧನೆಯಾದ, ಇಷ್ಟ ಪಟ್ಟು ತಂದ ಮುರಿದ ದೋಣಿಯ ತಳದೊಳಗೆ ಮಲಗಿ ಹುಚ್ಚನಾಗಿ ನಗುತ್ತಲೇ ಇರುತ್ತಾನೆ. ಈ ಸಂದರ್ಭದಲ್ಲಿನ ದೋಣಿಯ ಚಿತ್ರಣ ಶಕ್ತಿಯುತವಾಗಿ ಬಂದಿದೆ. "ದೋಣಿಯಂತೆ ಚಂಪನ್ ಕೂಡ ತಳ ಹೊಡೆದಂತೆ ಸೂಚಿತವಾಗುತ್ತದೆ. ಈಗ ಅವನ ದೋಣಿಯ ಚುಕ್ಕಾಣಿಯ ತುದಿ ಎತ್ತರದಲ್ಲೂ ಮತ್ತೊಂದು ತುದಿ ತಗ್ಗಿನಲ್ಲೂ ಇದೆ. ದಿಗಂತದಾಚೆ ಕಡಲಿನ ನಡುವೆ ಏನನ್ನೋ ಹುಡುಕುವಂತೆ ಭಾಸವಾಗುತ್ತದೆ."[೨] ಇದು ಚಂಪನ್ ಸಾವಿನ ಕಡೆ ಮುಖ ಮಾಡಿರುವುದನ್ನು ಸಂಕೇತಿಸುತ್ತದೆ. ಇಲ್ಲಿ ಕೂಡ ಪುರುಷ ಕೇಂದ್ರಿತ ನಂಬಿಕೆಗಳು ಕೆಲಸ ಮಾಡುವುದನ್ನು ಗಮನಿಸಬಹುದು. ಚೋಮನದುಡಿ ಮತ್ತು ಚೆಮ್ಮೀನಿನ ಕಾಲದ ಅಂತರದ ದೃಷ್ಟಿಯಿಂದ ಈ ಸಂಗತಿಯನ್ನು ಅನುಲಕ್ಷಿಸಬೇಕು. ಕಾಲ ಎಷ್ಟೇ ಬದಲಾದರೂ ಸ್ತ್ರೀಯ ಚಾರಿತ್ರ್ಯ, ಶೀಲ ಕುರಿತ ನಮ್ಮ ನಂಬಿಕೆಗಳು ಬದಲಾಗುವುದಿಲ್ಲ. ಇಂತಹ ಕಾರಣದಿಂದಲೇ ಪಳನಿ ಕೂಡ ಕಾದಂಬರಿಯ ಕೊನೆಯಲ್ಲಿ ಸಮುದ್ರದ ಮೇಲೆ ಪ್ರಯಾಣ ಮಾಡುವಾಗ ಸಾಯುತ್ತಾನೆ. ಆ ವಿವರಣೆ ಕಾದಂಬರಿಯಲ್ಲಿ ತುಂಬಾ ಕಲಾತ್ಮಕವಾಗಿ ಮನೋವೈಜ್ಞಾನಿಕವಾಗಿ ಬಂದಿದೆ. ಎಲ್ಲಾ ವಿವರಣೆಯನ್ನು ಚೋಮನ ದುಡಿಯೇ ಪ್ರತಿನಿಧಿಸುತ್ತದೆ. ೧೮

---

೧ ಕೆಂಪು ಮೀನು (ಚೆಮ್ಮೀನು) ಪುಟ ೨೩೪

೨. ಅದೇ : ಪುಟ ೨೩೮

ಅಧ್ಯಾಯಗಳು ಹಾಗೂ ಕಾದಂಬರಿಯಲ್ಲಿ ೧೮ ಬಾರಿ ದುಡಿಯನ್ನು ಬಾರಿಸುವ ಕ್ರಿಯೆಯನ್ನು ಗಮನಸಿದರೆ ನಮಗೆ ಒಟ್ಟು ಕೃತಿಯ ಹಾಗೂ ದುಡಿಯ ಪ್ರತಿಮೆಯ ಅಗಾಧತೆ ತಿಳಿಯುತ್ತದೆ.

ಎರಡು ಕಾದಂಬರಿಗಳು ಕೊನೆಯಲ್ಲಿ ಕೆಲವು ಅನುಮಾನಗಳನ್ನು ಹಾಗೆಯೇ ಉಳಿಸುತ್ತವೆ ಚೋಮನದುಡಿಯಲ್ಲಿ ಬೆಳ್ಳಿಯ ಶೀಲಹರಣವಾದಮೇಲೆ ಚೋಮ ನೇಗಿಲನ್ನು ಮುರಿದ, ಎತ್ತುಗಳನ್ನು ಬಿಟ್ಟು ಬರುವುದರ ಮೂಲಕ ಜಾತಿ ವ್ಯವಸ್ಥೆಯ ವಾಸ್ತವವನ್ನು ಮೀರಿದ ಅವನ ಬಯಕೆಯಿಂದಲೇ ಈ ದುರಂತ ಸಂಭವಿಸಿದೆ ಎಂದು ಕಾದಂಬರಿ ಹೇಳುತ್ತಿಲ್ಲವೇ, ತನ್ಮೂಲಕ ಜಾತಿಯ ವಾಸ್ತವ ಸಂಗತಿಯನ್ನು ಒಪ್ಪಿಕೊಳ್ಳುವಂತೆ ಕಾದಂಬರಿ ಪರೋಕ್ಷವಾಗಿ ಹೇಳುತ್ತಿರಬಹುದು ಎನಿಸುತ್ತದೆ. ಚೆಮ್ಮೀನು ಚಂಪನ್ ಒಳ ಜಾತಿಯ ಶ್ರೇಣೀಕರಣವನ್ನು, ಆರ್ಥಿಕ ಸ್ಥಿತಿಯ ಹಿನ್ನೆಲೆಯಲ್ಲಿ ಮೀರಿದರೂ ಅನ್ಯ ಧರ್ಮಕ್ಕೆ ಸಂಬಂಧಪಟ್ಟ ಹಾಗೆ ಆತನ ಯೋಚನೆಯಲ್ಲಿ ಯಾವ ಬದಲಾವಣೆಯು ಇಲ್ಲ ಎನಿಸುತ್ತದೆ. ಸ್ತ್ರೀಯ ಕುರಿತ ಕಾದಂಬರಿಯ ಐತಿಹ್ಯ ಭಾರತೀಯ ಮೂಲಭೂತ ಪರಿಕಲ್ಪನೆಯಿಂದ ಕೂಡಿದ್ದು ಎನಿಸುತ್ತದೆ.

ಹೀಗೆ ಎರಡು ಕೃತಿಗಳು ವಸ್ತುವಿನ ಸಂರಚನೆಯಲ್ಲಿ ಅನೇಕ ಸಾಮ್ಯತೆಯನ್ನು ಪಡೆದಿವೆ. ಇಂದಿಗೂ ಎಂದಿಗೂ ಪ್ರಸ್ತುತವಾಗುತ್ತ, ನಮ್ಮೊಳಗೆ ಚರ್ಚೆಯನ್ನು ಹುಟ್ಟು ಹಾಕುವ ಈ ಕೃತಿಗಳ ವಸ್ತುವೇ ಈ ಕಾದಂಬರಿಗಳ ಶ್ರೇಷ್ಟತೆಯನ್ನು ಎತ್ತಿ ತೋರಿಸುತ್ತದೆ.

✦✦✦✦✦✦✦

ಅಧ್ಯಾಯ – ೫

ಕಾದಂಬರಿಗಳ ಸನ್ನಿವೇಶ

ಕಾದಂಬರಿಯೊಂದರಲ್ಲಿ ಸನ್ನಿವೇಶವನ್ನಷ್ಟೇ ಪ್ರತ್ಯೇಕವಾಗಿ ನೋಡುವುದು ಸಮಂಜಸವಲ್ಲ. ಕಾದಂಬರಿಯ ಒಟ್ಟು ಸಾವಯವ ಬಂಧವನ್ನು ಕುರಿತು ಚಿಂತಿಸುವಾಗ ಕೃತಿಯ ಎಲ್ಲಾ ಅಂಶಗಳು ಆನುಷಂಗಿಕವಾಗಿ ಒಂದಕ್ಕೊಂದು ಪೂರಕವಾಗಿರುತ್ತವೆಯೆ ಎಂಬುದು ಮುಖ್ಯ. ಹಲವೊಮ್ಮೆ ಕೃತಿಯ ಯಾವುದಾದರೊಂದು ಅಂಶವನ್ನು ಕುರಿತು ಮಾತನಾಡುತ್ತೇನೆ ಎಂದರೆ ಅದನ್ನು ಇತರ ಅಂಶದಿಂದ ಬೇರ್ಪಡಿಸುವುದು ಸಾಧ್ಯವೇ ಇಲ್ಲವೇನೊ ಎನ್ನುವಷ್ಟರ ಮಟ್ಟಿಗೆ ಕೃತಿಯ ಒಟ್ಟು ಸಾವಯವದಲ್ಲಿ ಒಂದಾಗಿರುತ್ತದೆ. ಇದನ್ನೇ ನಾವು ಶಿಲ್ಪ ಎಂದು ಕರೆಯುತ್ತೇವೆ ಮತ್ತು ಒಂದು ಶ್ರೇಷ್ಠ ಕೃತಿಯಲ್ಲಿ ಹೀಗೆ ಪ್ರತ್ಯೇಕಿಸಲಿಕ್ಕೆ ಆಗದಂತೆ ಕಾದಂಬರಿಯ ಎಲ್ಲಾ ಅಂಶಗಳು ಮುಪ್ಪುರಿಗೊಂಡಿರುತ್ತವೆ. ಚೋಮನದುಡಿ ಮತ್ತು ಚೆಮ್ಮೀನು ಇಂತಹ ಶ್ರೇಷ್ಠ ಕೃತಿಗಳಾಗಿವೆ.

ಈ ಎರಡು ಕೃತಿಗಳ ತೌಲನಿಕ ಅಭ್ಯಾಸದಲ್ಲಿ ಸನ್ನಿವೇಶವನ್ನು ತುಲನಾತ್ಮಕವಾಗಿ ನೋಡುವ ಕೆಲಸವನ್ನು ಈ ನಿಬಂಧದಲ್ಲಿ ಮಾಡಿದ್ದೇನೆ. ವಸ್ತುವೊಂದರ ಕ್ರಿಯೆ ಸನ್ನಿವೇಶವೊಂದರಿಂದ ನಿರ್ಧರಿತವಾಗುತ್ತದೆ. ಸನ್ನಿವೇಶವೆಂದರೆ ದೇಶ ಕಾಲಬದ್ಧವಾದ ಒಂದು ಪ್ರಮಾಣ. ಅದು ಕಾದಂಬರಿಯ ಪ್ರಕಾರದಲ್ಲಿ ತುಂಬಾ ಮಹತ್ವದ್ದು, ಈ ಸನ್ನಿವೇಶ ಕಾದಂಬರಿಯಲ್ಲಿ ಎರಡು ಪ್ರಧಾನ ರೀತಿಯಲ್ಲಿ ನೋಡಸಿಗುತ್ತವೆ. ಒಂದು ಕಾದಂಬರಿಯ ಹೊರಗೆ ಅದು ನಿರ್ಮಾಣಗೊಳ್ಳುವ ದೇಶಕಾಲ ಸಂಹಿತೆಯದ್ದು, ಅಂದರೆ ಕಾದಂಬರಿಯೊಂದು ರಚನೆಯಾಗುವಾಗ ದೇಶ ಕಾಲ ಸಮಯ ಮುಂತಾದ ಪರಿಸ್ಥಿತಿಯಲಿ, ಲೇಖಕ ಸಹಜವಾಗಿಯೇ ಅದರಿಂದ ಪ್ರಭಾವಿತವಾಗಿಯೋ ಪ್ರಚೋದಿತವಾಗಿಯೋ ಹೇಗೋ ಒಟ್ಟು ಆ ದೇಶಕಾಲಬದ್ಧವಾದ ಸಮಾಜದೊಳಗಿಂದಲೇ ಕೃತಿ ರಚನೆಯಾಗುತ್ತದೆ. ಕೃತಿಕಾರ ಈ ಕಾಲ ದೇಶ ಪ್ರಮಾಣ ಸಂಹಿತೆಗೆ ಒಳಗಾಗಿ ಅದಕ್ಕೆ ಅನುಗುಣವಾಗಿ ಅಂದರೆ ಈ ಸಂಹಿತೆ ಸೃಷ್ಟಿಸುವ ಸತ್ಯದ ಪರಿಕಲ್ಪನೆಯನ್ನೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯೆಂದು ಮೆಚ್ಚಿ ಅದನ್ನು ಕೃತಿಯಲ್ಲಿ ರಚಿಸಿಕೊಳ್ಳಬಹುದು. ಅರ್ಥಾತ್ ದೇಶಕಾಲ ಸಂಹಿತೆಗೆ ಒಳಗಾಗಿ ಕೃತಿ ರಚಿಸುವುದು. ಇನ್ನೊಂದು ಸದ್ಯದ ಸಂಹಿತೆಯ ಸತ್ಯದ ಪರಿಕಲ್ಪನೆಯನ್ನು ಮೀರಿ, ಅದು ಮರೆಮಾಚಿರುವ ಬಹುಶೃತ ಸತ್ಯವನ್ನು ಕೃತಿಯಲ್ಲಿ ತರುವುದು ಇದು. ದೇಶಕಾಲ ಬದ್ಧತೆಯ ಜೊತೆಗೆ, ಅದನ್ನು ಮೀರುವ ಕ್ರಿಯೆ. ಕೃತಿಯಲ್ಲಿ ಈ ಎರಡು ಬಗೆಗಳಲ್ಲಿ ಯಾವುದು ಪ್ರಧಾನ ಸ್ಥಾನ ಪಡೆದಿದೆ ಎನ್ನುವುದು ಮುಖ್ಯ. ಸತ್ಯದ ಸಂಹಿತೆಯನ್ನು ಮೀರುವ ಕೃತಿಯೇ ಶ್ರೇಷ್ಠವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದುದರಿಂದ ಈ ಸಂಗತಿಗಳು ಕಾದಂಬರಿಯಲ್ಲಿ ಹೇಗೆ ಕೆಲಸಮಾಡಿವೆ ಎಂಬುದನ್ನು ಕಾದಂಬರಿಯ ಸನ್ನಿವೇಶದಿಂದಲೇ ಗುರುತಿಸಬೇಕಾಗಿದೆ. ಕೆಲವೊಮ್ಮೆ ವಸ್ತು, ದೇಶಕಾಲ

[illegible]

[illegible]

[illegible]

ಸಂಹಿತೆಯನ್ನು ಮೀರಿದಂತೆ ಮೇಲ್ನೋಟಕ್ಕೆ ಗೋಚರಿಸಿದರೂ, ಸನ್ನಿವೇಶದ ಚಿತ್ರಣದಲ್ಲಿ ಅದು ವಿಫಲವಾಗಿರುತ್ತದೆ.

ಸನ್ನಿವೇಶ ಚಿತ್ರಣ ಕಾದಂಬರಿಯ ಒಳಗಿನದ್ದು, ಇದನ್ನು ತೀರ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಕಾದಂಬರಿ ಒಳಗೆ ಇನ್ನೂ ಎರಡು ರೀತಿ ಸನ್ನಿವೇಶಗಳು ನಿರ್ಮಿತವಾಗಿರುತ್ತವೆ. ಒಂದು ಕಾದಂಬರಿಯ ವಸ್ತುವಿಗೆ ಅನುಗುಣವಾಗಿ ಸನ್ನಿವೇಶ ರಚನೆಯಾಗುವುದು, ಇದು ವಸ್ತುವಿನ ಸಹಜ ಮುನ್ನಡೆಗೆ ಸಹಾಯಕವಾಗುತ್ತದೆ. ಎರಡನೆಯದು ವಸ್ತುವಿಗೆ ಹೊರತಾದ ಸನ್ನಿವೇಶವನ್ನು ನಿರ್ಮಿಸಿ ವಸ್ತುವಿನ ಪಾತ್ರದ ಗತಿಯನ್ನು ನಿಯಂತ್ರಿಸುವ ಕ್ರಿಯೆ .ನಡೆಯುತ್ತದೆ. ಇದಕ್ಕೊಂದು ಸೂಕ್ತ ಉದಾಹರಣೆಯೆಂದರೆ ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯಲ್ಲಿ ಕ್ರಾಂತಿಯ ದಿನ ದೇವರು ಮಾಯವಾಗುವುದು. ಇಂತಹ ಎಲ್ಲಾ ಸೂಕ್ಷ್ಮ ವಿಚಾರಗಳನ್ನು ನೊಡುವ ದೃಷ್ಟಿಯಿಂದ ಸನ್ನಿವೇಶವನ್ನು ಪ್ರತ್ಯೇಕವಾಗಿ ನೋಡಲು ಪ್ರಯತ್ನಿಸಲಾಗಿದೆ.

ಕಾರಂತರ **ಚೋಮನದುಡಿ** ಹಾಗೂ ತಕಳೀಯವರ **ಚೆಮ್ಮೀನು** ಕೃತಿಗಳಲ್ಲಿ ಇಡೀ ಕೃತಿಯನ್ನೇ ಧ್ವನಿಸುವ ಸನ್ನಿವೇಶಗಳಿವೆ. ಅವು ಕಾದಂಬರಿಯ ವಸ್ತುವನ್ನು, ಔಚಿತ್ಯವನ್ನು ಉನ್ನತೀಕರಿಸಿವೆ. ಇವೆರಡು ಕಾದಂಬರಿಗಳ ಸನ್ನಿವೇಶವನ್ನು ಒಟ್ಟಿಗೆ ನೋಡುವ ಎರಡರ ಮೂಲ ರಚನೆ ಹಾಗು ವೈಶಿಷ್ಟ್ಯಗಳನ್ನು ಗ್ರಹಿಸುವ ಪ್ರಯತ್ನ ಇಲ್ಲಿದೆ.

ಚೋಮನದುಡಿ ಕಾದಂಬರಿಯ ಆರಂಭದ ಅಧ್ಯಾಯ ತುಂಬಾ ಮುಖ್ಯವಾದದ್ದು ಮತ್ತು ಮನೋಜ್ಞವಾದದ್ದು. ಇಡೀ ಕಾದಂಬರಿಯ ವಸ್ತುವನ್ನು, ಮತ್ತು ಆಶಯವನ್ನು ಅತ್ಯಂತ ಸಮರ್ಥವಾಗಿ ಈ ಸನ್ನಿವೇಶ ಚಿತ್ರಿಸಿದೆ. ಇದು ಏಕಕಾಲದಲ್ಲಿ ನಿಸರ್ಗದ ಚಿತ್ರಣವು ಹೌದು, ಬದಲಾವಣೆಯನ್ನು ಕಾಣದ ನಿರ್ದಯ ಭಾರತೀಯ ಹಿಂದೂ ಸಮಾಜದ ಭೋಗನಹಳ್ಳಿಯ ಚಿತ್ರಣವೂ ಹೌದು. 'ಕತ್ತಲೆಂದರೆ ಕತ್ತಲು : ಕಣ್ಣಿಗೆ ಕಣ್ಣು ತಾಗಿಸಿದರು ಏನು ಕಾಣುವ ಹಾಗಿಲ್ಲ. ಚಂದ್ರಮನು ಮೂಡುವುದಕ್ಕೆ ಇನ್ನು ಎರಡು ಗಳಿಗೆ ಇರಬಹುದು. ಕಾಡು ಗುಡ್ಡಗಳ ಭೀಕರ ಕತ್ತಲನ್ನು ಕಡಿದು ಒಮ್ಮೆಯಾದರು ಜೀವದ ಚಿಹ್ನೆಯನ್ನು ತೋರಲು ಮಿಣುಕು ಹುಳುಗಳು ಮಿನುಗುತ್ತಲಿಲ್ಲ. ಸದ್ದೇ ? ಸದ್ದಿನ ಸುದ್ದಿಯು ಇಲ್ಲ. ಕಾಡಿನ ದಟ್ಟಣೆಯದು. ಬೆಟ್ಟದ ಬದಿಯು ಆದರೂ ಒಂದು ಎಲೆಯಲುಗಿದ ಸದ್ದು ಕೇಳಿಸುವುದಿಲ್ಲ. ನೆಲದ ಮೇಲೆ ತರಗೆಲೆಗಳು ರಾಶಿ ರಾಶಿಯಾಗಿ ಬಿದ್ದಿದ್ದರೂ ಒಂದು ಹುಳುವಿನ ಹರಿದಾಟವು ಇಲ್ಲದೇ ಒಂದಿಷ್ಟು ಧ್ವನಿಯು ಕೇಳಿಸುತ್ತಲಿಲ್ಲ. ಗಾಳಿಯ ಬೀಸುವಿಕೆಯು ಮೊದಲೇ ಇಲ್ಲ. ಬಿದಿರಿನ ಮೆಳೆಗಳಿಂದ ಒಣಗಿದ್ದ ಎಲೆಗಳು ಸಹ ಉದುರುವುದಿಲ್ಲ. ಬಿದಿರನ ದಿಂಡುಗಳು ಒಂದು ಇನ್ನೊಂದಕ್ಕೆ ತಿಕ್ಕಿ ಚಿರೀಂ ಎಂದು ಸಚೇತನ ಪ್ರಾಣಿಗಳ ಕಿರಿಚಾಟವನ್ನು ಅಣಕಿಸುತ್ತಲೂ ಇಲ್ಲ. ಈ ಊರಿನ ಹೆಸರು ಭೋಗನಹಳ್ಳಿ'[೧]

ಈ ಇಡೀ ವಿವರಣೆ ಬದಲಾವಣೆಯನ್ನು ಬಯಸದ ಭೋಗನಹಳ್ಳಿಯ ವಿವರಣೆಯಷ್ಟೆ ಅಲ್ಲ ಒಟ್ಟು ಭಾರತೀಯ ಸಮಾಜದ ವಿವರಣೆಯೂ ಆಗಿದೆ. ಡಾ. ರಾ.ಗೌ. ಅವರು ಹೇಳುವ 'ಈ ಹಳ್ಳಿಯ ಜೀವನ ಭೋಗನಹಳ್ಳಿಯದು ಇದು ತುಂಬಾ ವ್ಯಂಗ್ಯವಾದದ್ದು, ಭೋಗನಹಳ್ಳಿ ಎಂಬ ಪದವೇ ಅದಕ್ಕೆ ವಿರುದ್ಧವಾಗಿ ಸಿದ್ಧವಾಗುತ್ತ ಹೋಗುತ್ತದೆ'[೨] ಈ ಮಾತು ಸರಿಯಾದದ್ದು. ಮೇಲಿನ ಚಿತ್ರಣದಲ್ಲಿ ಚಂದ್ರಮ ಮೂಡುವುದಕ್ಕೆ ಇನ್ನು ಎರಡು ಗಳಿಗೆ

---

೧ ಚೋಮನದುಡಿ ; ಪುಟ ೧

೨. ಷಷ್ಟಿ ಸಂಪದ ; ಪುಟ ೧೨೫

ಇರಬಹುದು ಎಂಬ ವಾಕ್ಯ ಕತ್ತಲಿಂದ ಕೂಡಿದ ಕಗ್ಗಾಡಿನಲ್ಲಿ ಚಂದ್ರ ಮೂಡುವ ಭವಿಷ್ಯತ್ತಿನ ಕ್ರಿಯೆಯನ್ನು ಸೂಚಿಸುವ ವಾಕ್ಯವಾಗಿದೆ'.

ಅನ್ಯಾಯ, ಅಸಮಾನತೆ, ಜಾತೀಯತೆ ತುಂಬಿದ್ದರೂ ಅದನ್ನು ಪ್ರತಿಭಟಿಸುವ ಒಂದು ಸಣ್ಣ ಪ್ರಯತ್ನವೂ ಅಲ್ಲಿ ಇಲ್ಲ ಎಂಬ ಸಂಗತಿಯನ್ನು 'ನೆಲದ ಮೇಲೆ ಒಂದು ಹುಳುವಿನ ಹರೆದಾಟವು' ಇಲ್ಲ ಎಂಬ ವಾಕ್ಯ ಶಕ್ತಿಯುತವಾಗಿಯೇ ಬಿಂಬಿಸಿದೆ. ಕೃತಿಯ ರಚನೆಯ ಕಾಲಕ್ಕೆ ರಷ್ಯಾದ ಕಮ್ಯುನಿಷ್ಟ್ ಸಿದ್ಧಾಂತ ಉತ್ತುಂಗದಲ್ಲಿತ್ತು. ಅದರ ಗಾಳಿ ಎಲ್ಲಡೆ ಬೀಸುತ್ತಿತ್ತು. ಆದರೆ ಅಂತಹ ಭರವಸೆಯ ಯಾವ ಗಾಳಿಯ ಬೀಸುವಿಕೆಯು ಇಲ್ಲಿಲ್ಲ. ಇಂತಹ ಪ್ರಪಂಚದಲ್ಲಿ ಒಂದು ಸಣ್ಣ ದೀಪದ ಮಿನುಗು ಕಾಣಿಸದು, ಬಡತನ, ಜಾತೀಯತೆ, ಮೌಢ್ಯ ತುಂಬಿದ ಜಗತ್ತು ಇದು. ಇಂತಹ ನಿಷ್ಕ್ರಿಯ ಜಗತ್ತಿನಲ್ಲಿ ಈ ಗೂಢ ನೀರವವನ್ನು ಒಮ್ಮೆಲೇ ಮುರಿಯುವ ಒಂದು ವಿಚಿತ್ರ ಧ್ವನಿ ಕೇಳಿಸಿತು. ಅದು ಭೋಗನಹಳ್ಳಿಯ ಕೊಂಪೆಯಿಂದ ಬರುವ ಸದ್ದು. ಈ ಕೊಂಪೆ ಭೋಗನಹಳ್ಳಿ ಹೊರಪ್ರದೇಶದಲ್ಲಿದೆ. ಅಲ್ಲಿಂದ ಬರುವ ಈ ಸದ್ದು ಗುಡ್ಡದಿಂದ ಗುಡ್ಡಕ್ಕೆ ಬಡಿದು ಒಂದಕ್ಕೆ ಎರಡಾಗಿ ಎರಡಕ್ಕೆ ನಾಲ್ಕಾಗಿ ಬಂದು ಕಿವಿಗೆ ನಾಟುತ್ತವೆ. ಇದರೊಳಗೆ ಪೂರಕ ಧ್ವನಿ ಅಪರ ಧ್ವನಿಯನ್ನು ಗುರುತಿಸಲಾಗುವುದಿಲ್ಲ. ಆದರೆ ಈ ಧ್ವನಿಯನ್ನು ಹೊರಡಿಸುವ ವ್ಯಕ್ತಿ ಪ್ರಯತ್ನ ಸಮಷ್ಟಿ ಪ್ರಯತ್ನವಾಗಿರದೇ, ಅಲ್ಲಿಯ ಪರಂಪರಾಗತ ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆ ಇದರಿಂದ ಅಲುಗಾಡುವುದಿಲ್ಲ. ಅಲುಗಾಡಿಸಲು ಪ್ರಯತ್ನಿಸುವ ಪ್ರಯತ್ನ ಹಾಗೂ ಆಕಾಂಕ್ಷೆಗಳನ್ನು ಈ ಪ್ರಪಂಚ ತೀವ್ರವಾಗಿ ವಿರೋಧಿಸುತ್ತದೆ. ಅಥವಾ ನಿರ್ಲಕ್ಷಿಸುತ್ತದೆ. 'ಹಾಂ ಮೊದಲು ಏನೆಂದೆ ತಿಳಿಯಲಿಲ್ಲ ಇದು ನಮ್ಮ ಚೋಮನದುಡಿ' ಎಂದು ಸಂಕಪ್ಪಯ್ಯ ನಕ್ಕರು. ಆದರೆ ಚೋಮನದುಡಿ ಚೋಮನಿಗೆ ಒಂದು ಸಾಧನವಲ್ಲ, ಅದು ಅವನ ಮನಸ್ಸಿನ ತುಮುಲದ ಅಭಿವ್ಯಕ್ತಿ. ಚೋಮನದುಡಿಯನ್ನು ವರ್ಣಿಸುವ ಈ ಭಾಗವನ್ನು ನೊಡಿ "ಈ ಸ್ವರಗಳ ಆವೇಗ ಜೋರಾಗುತ್ತ ಸರಿದು, ಧಾವಿಸಿ ಪ್ರಾಣಬಿಡಲಿರುವ ಪ್ರಾಣಿಯೊಂದರ ಎದೆಯ ಮಿಡಿತಗಳಂತೆ ಕೇಳುತ್ತದೆ. ಕೆಲವು ಬಾರಿ ಅದು ಮಂದಗತಿಯಿಂದ ಸರಿಯುವಾಗ ಚಂಬುಕುಟಿಕನೊಬ್ಬನ ಲಯಬದ್ಧವಾದ ಸುತ್ತಿಗೆ ಏಟುಗಳಂತೆ ಕೇಳಿಸುತ್ತದೆ. ಮರುಧ್ವನಿಯೊಂದಿಗೆ ಮುರಿದು ಬಿದ್ದರೆ ಪ್ರಳಯಕ್ಕೆ ಇನ್ನೊಂದು ಗಳಿಗೆಯು ಉಳಿದಿಲ್ಲವೆನಿಸುತ್ತದೆ. ಅದು ಬರಿಯ ಸದ್ದಿನವಿಲ್ಲ! ಯಾಂತ್ರಿಕ ಜಡ ಪ್ರಪಂಚದ ನಿಯಮಕ್ಕೆ ಆಳಾಗಿರುವ ಸದ್ದಾಗಿರದು. ಅದು ಜಡವಾದನವೇನೋ ನಿಜ ! ಅದರ ಹಿಂದೆ ಧ್ವನಿಯನ್ನು ಮೊಳಗಿಸುವ ಒಂದು ಅದ್ಭುತ ಶಕ್ತಿಯೇ ಇರುವಂತೆ ಕಾಣುತ್ತಿದೆ. ಬರಿಯ ಊಹೆಯಿಂದ ಅದು ಇಂಥದೆಂದು ಹೇಳುವಂತಿಲ್ಲ".[೧] ಈ ವಿವರಣೆ ಭೋಗನಹಳ್ಳಿಯಿಂದ ಹೊರಗೆ ಇರುವ ಪ್ರಪಂಚ ಕೊಪ್ಪದಿಂದ ಬರುವ ಚೋಮನದುಡಿಯ ವರ್ಣನೆ. ಭಾರತೀಯ ಸಮಾಜದ ಅಂಚಿನ ಸಂಸ್ಕೃತಿಯ ಜನರ ನೋವು ಆಕ್ರೋಶ, ಆಕ್ರಂದನವನ್ನು ಇದಕ್ಕಿಂತಲೂ ಮನೋಜ್ಞವಾಗಿ ವರ್ಣಿಸಲು ಅಸಾಧ್ಯವೇ ಸರಿ. ಆದರೆ ಇಂಥ ಸದ್ದು ಪರಂಪರೆಯ. ಊಳಿಗಮಾನ್ಯದ, ಜಾತಿ ವ್ಯವಸ್ಥೆಯ, ಸಂಕೇತವಾದ ಸಂಕಪ್ಪಯ್ಯನವರನ್ನು ಕೆಲವೊಮ್ಮೆ ಮಾತ್ರ ಗಾಬರಿಗೊಳಿಸಬಹುದೆ ಹೊರತು, ನಕ್ಕು ಮುನ್ನಡೆಯುವರೆ ಹೊರತು ಅದನ್ನೇನು ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಕಾದಂಬರಿಯ ಮುಂದಿನ ಅಧ್ಯಾಯದಲ್ಲಿ ಸಂಕಪ್ಪಯ್ಯನವರಲ್ಲಿ ಆಗುವ

೧ ಚೋಮನದುಡಿ : ಪುಟ ೨

ಬದಲಾವಣೆಯ ಜಾಗೃತಿಯನ್ನು ಅನುಲಕ್ಷಿಸಬೇಕು. ಜೊತೆಗೆ ಇದೊಂದು ವ್ಯಕ್ತಿಗತ ಪ್ರಯತ್ನವೆಂದು ಇಂತಹ ಪ್ರಯತ್ನದಿಂದ ಸಮಷ್ಟಿಯ ಸಾಮೂಹಿಕ ಸಮಾಜದ ಬದಲಾವಣೆ ಸಾಧ್ಯವಿಲ್ಲವೆಂದು ಕಾದಂಬರಿ ಶಕ್ತವಾಗಿಯೇ ವರ್ಣಿಸುತ್ತದೆ. ಇಂತಹ ವ್ಯಕ್ತಿಗತ ಪ್ರಯತ್ನ ಹೇಗೆ ನಾಶದ ಅಂಚನ್ನು ತಲುಪಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ಚೆಮ್ಮೀನಿನಲ್ಲಿ ಇಂತಹ ಪ್ರತಿಮಾತ್ಮಕ ಧ್ವನಿ ಪೂರ್ಣ ವಿವರಣೆಯೇನು ಆರಂಭದ ಅಧ್ಯಾಯದಲ್ಲಿ ಇಲ್ಲ. ಆದರೆ ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ ಸ್ವತಂತ್ರ್ಯಪೂರ್ವದಲ್ಲಿ ರಚನೆಯಾದ ಚೋಮನದುಡಿ ಭಾರತದ ಫ್ಯೂಡಲ್ ವ್ಯವಸ್ಥೆಯನ್ನು ಶಕ್ತವಾಗಿಯೇ ಧ್ವನಿಸಿದರೆ, ಚೆಮ್ಮೀನು ಸ್ವಾತಂತ್ರ್ಯನಂತರ ಅಂತಹ ಸಾಮಾಜಿಕ ಕ್ರೂರತೆಗಳು ಐತಿಹ್ಯವಾಗಿ ಮಾರ್ಪಟ್ಟಿರುವುದನ್ನು ಅಭಿವ್ಯಕ್ತಿಸಿದೆ. ಕಾದಂಬರಿ ಆರಂಭದಲ್ಲಿ ಇಬ್ಬರು ಅನ್ಯಧರ್ಮಕ್ಕೆ ಸೇರಿದ, ಸ್ತ್ರೀ–ಪುರುಷರ ಸಂಭಾಷಣೆಯೇ ಕಾದಂಬರಿಯಲ್ಲಿನ ದುರಂತಕ್ಕೆ ಕಾರಣವಾಗುತ್ತದೆ. ಸ್ತ್ರೀಯರ ಕುರಿತು ಬದಲಾಗದ ಭಾರತೀಯ ಚಿಂತನೆಯನ್ನೇ ಇದು ಧ್ವನಿಸುತ್ತದೆ. “ಅಲ್ಲಿಂದಲ್ಲಿಯವರೆಗೂ ಹರಡಿರುವ ಈ ಕಡಲಿನಲ್ಲಿ ಎಲ್ಲವೂ ಉಂಟು ಮಗಳೆ ! ಎಲ್ಲವೂ ಉಂಟು ಆಚೆ ಹೋಗೋ ಗಂಡಸರು ಈಚೆಗೆ ಹಿಂತಿರುಗೋದು ಯಾವುದರಿಂದ ಗೊತ್ತೇನು ? ದಡದಲ್ಲಿರೊ, ಹೆಂಗಸರು ನಿಜ–ನೀತಿ ಕಾಪಾಡುವುದರಿಂದ, ಇಲ್ಲದೇ ಹೋದರೆ, ಅವರನ್ನು ಅವರ ದೋಣಿ ಸಹಿತ ಸುಂಟರ ಸುಳಿ ಹಿಡಿದು ನುಂಗೇಬಿಡುತ್ತದೆ. ಕಡಲಿಗೆ ಹೋಗುವವನ ಜೀವ ದಡದಲ್ಲಿರೋ ಹೆಣ್ಣಿನ ಕೈಯಲ್ಲಿದೆ ಮಗಳೇ”.[೧] ಕರುತ್ತಮ್ಮನಿಗೆ ಆಕೆಯ ತಾಯಿ ಚಕ್ಕಿ ಹೇಳುವ ಈ ಮಾತು ಸ್ತ್ರೀಯನ್ನು ಕುರಿತ ಒಟ್ಟು ಭಾರತೀಯ ಪರಿಕಲ್ಪನೆಯದು.

ಈ ಎರಡು ಕಾದಂಬರಿಯ ನಾಯಕರಾದ ಚೋಮ ಮತ್ತು ಚಂಪನ್‌ಕುಞ್ಞ ಇಬ್ಬರು ತಮ್ಮ ಪ್ರಬಲವಾದ ಆಸೆಯನ್ನು ಈಡೇರಿಸಿಕೊಳ್ಳುವ ಮಹತ್ವಕಾಂಕ್ಷೆಯನ್ನು ಉಳ್ಳವರು “ಬೇಸಾಯಗಾರಗಬೇಕೆಂಬ ಬಯಕೆ ಚೋಮನಿಗೆ ಕುತ್ತಿಗೆವರೆಗಿದೆ”[೨]. ಚಂಪನ್‌ಕುಞ್ಞವಿಗೆ “ದೋಣಿ ಬಲೆ ಅವರೆಡು ಅವನ ಜೀವಿತದ ಪರಮೋದ್ದೇಶಗಳು, ಅವನ ಬಹು ಸಂವತ್ಸರಗಳ ಹೊಂಗನಸು” ![೩] ಆದರೆ ಇವರಿಬ್ಬರ ಬಯಕೆಗಳನ್ನು ಈಡೇರಿಸಿಕೊಳ್ಳಲು ದೊಡ್ಡ ತೊಂದರೆಯಂದರೆ ಜಾತಿ. ಚೋಮ ತನ್ನ ಬಯಕೆಯನ್ನು ಆತನ ಮಕ್ಕಳಿಗೆ ತಿಳಿಸಿದ ಮೇಲೆ ಬೆಳ್ಳಿ ಹೇಳುವ ಈ ಮಾತುಗಳು ‘ನೀನು ಧನಿಯರೊಂದಿಗೆ ಬಾಯಿ ತೆರೆದು ಮರ್ಯಾದೆ ಕಳೆದುಕೊಳ್ಳಬೇಡ ! ಎಂದಳು, ಇದುವರೆಗೆ ಚೋಮನ ಹಿರಿಯರಲ್ಲಿ ಬೇಸಾಯ ಮಾಡಿದವರಿಲ್ಲ. ಅವನ ಧನಿಯರಿಗೆ ಯಾವೊಬ್ಬ ಹೊಲೆಯರು ಒಕ್ಕಲು ಇಲ್ಲ. ಹೊಲೆಯರು ನೇಗಿಲು ಹಿಡಿದರೆ ಪ್ರಳಯವೇ ಆದಿತು ಎಂದು ತಿಳಿಯುವವರು ಅವರು’.[೪] ‘ಅದಕ್ಕೂ ಕಾರಣ ಉಂಟು ಬೆಸ್ತರಲ್ಲಿ ಐದು ಜಾತಿ ಉಂಟು ಅರಯ್ಯನ್, ವಲ್ಲಕಾರನ್, ಮುಕ್ಕುವನ್, ಮರಕ್ಕಾನ್ ಹಾಗೂ ಐದನೇಯದೊಂದು ಪಂಚಮ ಜಾತಿ..... ಅವನು ವಲ್ಲಕಾರನಿಗೆ ಮಾತ್ರ ಅಪ್ಪಣೆ ಕೊಡುತ್ತಿದ್ದ, ಉಳಿದವರು ಬಾಯಿ ಬಾಯಿ ಹೊಡೆದುಕೊಂಡರು ಇಲ್ಲ.

ವೇಲಾಯುಧನ್ ಕೇಳಿದ

ನಮ್ಮ ಚಂಪನ್‌ಕುಞ್ಞ ಈ ಪೈಕಿ ಯಾವ ಜಾತಿ

ಆಗ ಪಣ್ಯನ್ ಒಳಗೊಳಗೆ ನಕ್ಕ, ರಾಮನ್ ಯಜಮಾನ ಹೇಳಿದ ‘ಮುಕ್ಕುವನ್ ಅವನು ಮುಕ್ಕುವ ಜಾತಿ’[೫] ದೋಣಿ ಬಲೆ ತರುವ ಚಂಪನ್‌ಕುಞ್ಞ ವಿಚಾರ ಕೇಳಿ ಚರ್ಚೆ ಮಾಡುವಾಗ ಊರವರಿಂದ ಕೇಳಿ ಬರುವ ಮಾತು ಇದು.

---

೧ ಕೆಂಪು ಮೀನು (ಚೇಮ್ಮೀನು) ಪುಟ ೬

೨. ಚೋಮನದುಡಿ ; ಪುಟ ೧೧

೩. ಕೆಂಪು ಮೀನು (ಚೇಮ್ಮೀನು) ಪುಟ ೧೦

೪. ಚೋಮನದುಡಿ ; ಪುಟ ೧೧

೫. ಕೆಂಪು ಮೀನು (ಚೇಮ್ಮೀನು) ಪುಟ ೩೪

ಈ ಮೇಲಿನ ಎರಡು ಸಂದರ್ಭದಲ್ಲಿ ಕಾದಂಬರಿಯ ಭಾಷೆಯನ್ನು ಗಮನಿಸಬೇಕು ಚೋಮನದುಡಿಯಲ್ಲಿ ವರ್ತಮಾನದ ಸಂಗತಿಯಾದರೆ ಚೇಮ್ಮೀನಿನಲ್ಲಿ ಭೂತಕಾಲದ ಸಂಗತಿ. ಅಲ್ಲಿ ಸೂಚಿತವಾಗುವ ವಾಕ್ಯಗಳ ಭೂತ ಕಾಲದ ಪ್ರತ್ಯಯಗಳನ್ನು ಗಮನಿಸಬೇಕು.

ಚೋಮನದುಡಿಯಲ್ಲಿ ಚೋಮನ ಹೆಂಡತಿ ಸಾಯುವ ಸಂದರ್ಭದಲ್ಲಿ ಚೋಮ ಕಳಸಕ್ಕೆ ಹೋಗಿದ್ದಾಗ ಕಾಫಿ ತೋಟದ ಯಜಮಾನನ ಹತ್ತಿರ ಸ್ವಲ್ಪ ಸಾಲ ಉಳಿಸಿಕೊಂಡಿರುತ್ತಾನೆ. ಅದನ್ನು ತೀರಿಸಲು ಈಗ ಸೇರೆಗಾರ ಮನ್ವೇಲ ಒತ್ತಾಯಿಸುತ್ತಾನೆ. ಆಗ ಚೋಮನ ಮಕ್ಕಳು ಎತ್ತುಗಳನ್ನು ಮಾರಿ ಸಾಲ ತೀರಿಸುವಂತೆ ಬಹಳವಾಗಿ ಹೇಳುತ್ತಾರೆ. ಆದರೆ ಅದಕ್ಕೆ ಚೋಮ ಸುತಾರಂ ಒಪ್ಪುವುದಿಲ್ಲ. ಸ್ವತಃ ತಾನೇ ಹೋಗಿ ಕಾಫಿ ತೋಟದಲ್ಲಿ ದುಡಿಯಲು ಸಿದ್ದ. ಆದರೆ ಅವನ ಬೇಸಾಯಕ್ಕೆ ಸಾಧನವಾದ ಎತ್ತುಗಳನ್ನು ಮಾರಲು ಸಿದ್ಧನಿಲ್ಲ. ಮನ್ವೇಲ 'ನಿನ್ನ ಎತ್ತಿನ ಜೊತೆಯನ್ನಾದರೂ ಧನಿಗಳಿಗೆ ಮಾರಿ.....' ಎಂದರೆ ಚೋಮ ನನ್ನ ಎತ್ತಿನ ಜೊತೆಯನ್ನು ನಾನು ಮಾರುತ್ತೇನೆ ಬಿಡುತ್ತೇನೆ ಅದೆಲ್ಲಾ ನಿಮಗೇಕೆ ಎನ್ನುತ್ತಾನೆ.

ಚೆಮ್ಮೀನಿನಲ್ಲಿ ಚಕ್ಕಿ ತನ್ನ ಗಂಡನಾದ ಚಂಪನ್‌ಕುಞ್ಞುವಿಗೆ ಮಗಳು ಕರುತ್ತಮ್ಮ ಹಾಗೂ ಪರೀಕುಟ್ಟಿಯ ವಿಚಾರ ತಿಳಿದು, ಅದರಿಂದ ಬರಬಹುದಾದ ಅಪಾಯ ಅರಿತು ಗಂಡನಿಗೆ ದೋಣಿ ಬಲೆ ಕೊಂಡುಕೊಳ್ಳಲು ಇಟ್ಟಿರುವ ಹಣದಿಂದ ಮಗಳ ಮದುವೆ ಮಾಡು ಎಂದು ಪರಿಪರಿಯಾಗಿ ಬೇಡುತ್ತಾಳೆ,

'ಚಕ್ಕಿ ಸರಿ ! ದೋಣಿ ಬಲೆ ಇವರೆಡನ್ನು ಸಿದ್ಧಮಾಡುತ್ತಾ ಇರಿ ನೀವು.....

ಚಂಪನ್‌ಕುಞ್ಞು ಕಡಾಕಂಡಿತ ಹೇಳಿಯೇ ಬಿಟ್ಟ.... 'ನೋಡು ! ಆ ಗಂಟಿಂದ ಮಾತ್ರ, ಏನೇ ಬರಲಿ ಒಂದು ಬಿಡಿಕಾಸು ನಾನು ಹೊರತೆಗೆಯುವುದಿಲ್ಲ.... ಆ ಯೋಚನೆ ಬಿಟ್ಟುಬಿಡು ಎನ್ನುತ್ತಾನೆ.[೧] ಚೋಮ ತನ್ನ ಭೂಮಿಯ ಆಸೆಯನ್ನು ಆತನ ಧನಿಯಿಂದ ಮಾತ್ರ ಈಡೇರಿಸಿಕೊಳ್ಳಬೇಕು. ಆತ ಸ್ವತಃ ಭೂಮಿಯನ್ನು ಪಡೆದುಕೊಳ್ಳುವಷ್ಟು ಸ್ಥಿತವಂತ ಅಲ್ಲವೇ ಅಲ್ಲ. ಕಾದಂಬರಿಯಲ್ಲಿ ಆತನಿಗೆ ದಿನವೊಂದಕ್ಕೆ ಬರುವ ಕೂಲಿ ಎರಡು ಪಾವು ಅಕ್ಕಿ, ಐದು ಪಾವು ಭತ್ತ ಅಷ್ಟು ಬಡತನ ಆದುದರಿಂದ ಚೋಮನಿಗೆ ಸಂಕಪ್ಪಯ್ಯನವರನ್ನು ಕೇಳಿಯೇ ಅವರಿಂದಲೇ ಭೂಮಿ ಪಡೆಯಬೇಕು ಅದಕ್ಕಾಗಿ ಆತ ಸಂಕಪ್ಪಯ್ಯನವರನ್ನು ಕೇಳುತ್ತಾನೆ. ಸಂಕಪ್ಪಯ್ಯ ತಮ್ಮ ತಾಯಿಯನ್ನು ಒಂದು ಮಾತು ಕೇಳುತ್ತೇನೆ ಎಂದು ಒಳ ಹೋಗಿ ಕೇಳಿ ಹೊರಬಂದು 'ಚೋಮ ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗದ್ದೆ ಕೊಟ್ಟಿದ್ದಿಲ್ಲ ಈಗ ಹಾಗೇ ಕೊಡಲಿಕ್ಕೆ ಬರುವ ಹಾಗೆ ಇಲ್ಲ' ಅಂದರು. ಆ ಮಾತಿಗೆ ಪ್ರತಿ ಮಾತಿಲ್ಲ. ವಿಷಯ ಅಲ್ಲಿಗೆ ಮುಗಿಯಿತು. ಮನೆಯೊಳಗಿಂದ ಸಂಕಪ್ಪಯವನರ ತಾಯಿ "ಅಬ್ಬಾ ! ಈ ಹೊಲೆಯರಿಗೆ ಬಂದ ಸೊಕ್ಕೇ" ಎಂದು ಶಪಿಸುತ್ತಿದ್ದರು.[೨] ಮುಂದೆ ಮತ್ತೊಮ್ಮೆ ಮಗದೊಮ್ಮೆ ಚೋಮ ತನ್ನ ಭೂಮಿಯ ಬೇಡಿಕೆ ಇಟ್ಟಾಗ ಸಂಕಪ್ಪಯವನರು ಬಡ ಚೋಮನಿಗಾಗಿ ತಾಯಿಯನ್ನು ಮೃದುವಾಗಿ ಮಾತನಾಡಿಸಿ ನೋಡಿದರು, ಬಲುವಾಗಿ ಬೇಡಿದರು. ತಾಯಿ ಉತ್ತರ ಒಂದೇ "ಬೇರೆ ಯಾರಾದರೂ ಹಾಗೆ ಮಾಡಿದ್ದಾರೆಯೇ. ಆಮೇಲೆ ಮಾಡು. ಮೊದಲಿಗೆ ನೀನು ಹೊಲೆಯರಿಗೆ ಉಪವೀತ ಕೊಡುವುದು ಬೇಡ, ನಾಳೆ ಅಪಕೀರ್ತಿ ಬಂದೀತು".[೩] ಸಂಕಪ್ಪಯ್ಯನವರ ತಾಯಿಗೆ

---

೧ ಕೆಂಪು ಮೀನು (ಚೆಮ್ಮೀನು) ಪುಟ

೨. ಚೋಮನದುಡಿ : ಪುಟ ೨೮

೩. ಚೋಮನದುಡಿ ; ಪುಟ ೨೮

ಎಲ್ಲಿ ತನ್ನ ಮಗನಿಗೆ ಅಪಕೀರ್ತಿ ಬರುತ್ತದೆ ಎನ್ನುವ ಚಿಂತೆಯೊಂದಿಗೆ ತನ್ನ ಪರಂಪರೆಯ ನಂಬಿಕೆಯನ್ನು ಆಕೆ ಕಡಿದುಕೊಳ್ಳಲು ಸಿದ್ಧಳಿಲ್ಲ.

ಚಮ್ಮೀನಿನಲ್ಲಿ ಚಂಪನ್‌ಕುಞ್ಞನ ಆರ್ಥಿಕ ಸ್ಥಿತಿ ಸುಧಾರಿತವಾದುದ್ದರಿಂದ, ಆತ ದೋಣಿ ಬಲೆಯನ್ನು ಕೊಂಡು ತರುತ್ತಾನೆ. ಆತ ಯಾರನ್ನೂ ಕೇಳುವುದಿಲ್ಲ. ಆದರೆ ಚಂಪನ್‌ಕುಞ್ಞುವಿನ ಜಾತಿ ಹಾಗೇ ದೋಣಿ ಕೊಳ್ಳಲು ಅವಕಾಶವಿಲ್ಲವೆಂದು ಸಂಪ್ರಾಯದ ಪರಂಪರೆಯನ್ನು ಪ್ರತಿನಿಧಿಸಿದ ಆ ಸಮಾಜದ ಉಚ್ಛ ಸ್ಥಾನದಲ್ಲಿರುವ ಆರಯ್ಯನ್‌ಗೆ ಅಲ್ಲಿನ ಜನ ದೂರು ಕೊಡುತ್ತಾರೆ. ಆಗ ಆರಯ್ಯ ತಾನು ತೀರ್ಪು ಕೊಡುವವರೆಗೆ ಚಂಪನ್‌ಕುಞ್ಞುವಿನ ದೋಣಿಗೆ ಯಾರೂ ಕೆಲಸಕ್ಕೆ ಹೋಗಬಾರದೆಂದು ಕಟ್ಟೆಚ್ಚರಿಕೆ ಮಾಡುತ್ತಾನೆ. ಕೊನೆಗೆ ಚಂಪನ್ ಒಂಟಿಯಾಗಿ ಆರಯ್ಯನನ್ನು ಭೇಟಿಯಾಗುತ್ತಾನೆ. 'ಮರು ದಿನ ಮುಂಜಾನೆ ಚಂಪನ್‌ಕುಞ್ಞ ಆರಯ್ಯನ ಸಮೀಪಕ್ಕೆ ಧಾವಿಸಿದ. ಆತ ಮೊದಮೊದಲು ಮೇಲೆ ಬಿದ್ದ, ಆಮೇಲೆ ಶಾಂತನಾದ. ಹುಡುಗಿಗೆ ಆದಷ್ಟು ಬೇಗ ಮದುವೆ ಮಾಡಿ ಮನೆಯಿಂದ ಕಳುಹಿಸಬೇಕೆಂದು ಒತ್ತಿ ಹೇಳಿದ. ದೋಣಿಯ ಸಂಪಾದನೆಯಲ್ಲಿ ಆರಯ್ಯನಿಗೆ ಸಲ್ಲಬೇಕಾದ ಭಾಗವನ್ನು ಕಳುಹಿಸಿ ಬಿಡಬೇಕೆಂದು ಹೇಳಿದ. ಚಂಪನ್‌ಕುಞ್ಞ ಆತನಿಗೆ ಊರಿನವರ ಹೊಟ್ಟೆಯುರಿಯ ಸಂಗತಿಯನ್ನು ಹೇಳಿದ. ಅದಕ್ಕೆ ತಕ್ಕ ಪರಿಹಾರ ಮಾಡುತ್ತೇನೆ ಎಂದು ಆರಯ್ಯನು ಉತ್ತರಿಸಿದ.'[೧] ಚೋಮನದುಡಿಯಲ್ಲಿ ಸಂಕಪ್ಪಯ್ಯನ ತಾಯಿಯ ಮನಸ್ಸು ಮೃದುವಾಗಬಹುದೇ ಹೊರತು, ಬದಲಾವಣೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಚೆಮ್ಮೀನಿನಲ್ಲಿ ಆರಯ್ಯ ಕೇವಲ ಬದಲಾವಣೆಯನ್ನಷ್ಟೆ ಅಲ್ಲ ಆತನ ಪರವಾಗಿ ಕೆಲಸವನ್ನೂ ಮಾಡಬಲ್ಲ. ಜಾತಿಯನ್ನು ಮೀರಿ ದೋಣಿ ಬಲೆ ತೆಗೆದುಕೊಂಡದ್ದನ್ನು ಸಿಂಧುಗೊಳಿಸಿದ್ದಲ್ಲದೇ ಆತನಿಂದ ಬರಬೇಕಾದ ಹಣದ ಬಗ್ಗೆ ಮಾತನಾಡುತ್ತಾನೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ ಸ್ವಾತಂತ್ರ್ಯನಂತರ ಜಾತಿಯ ಕಟ್ಟುಪಾಡುಗಳ ಸಡಿಲಿಕೆ ಜೊತೆಗೆ ಅದು ಸಾಧ್ಯವಾಗುತ್ತಿರುವುದು ಚಂಪನ್‌ಕುಞ್ಞುವಿನ ಆರ್ಥಿಕ ಸ್ಥಿತಿಯ ಉತ್ತಮಿಕೆಯಿಂದ. ಚೋಮ ಆರ್ಥಿಕ ಸಮಾನತೆಯನ್ನು ಪಡೆದುಕೊಳ್ಳುವ ಬಯಕೆಯ ಹಾದಿಯಲ್ಲಿದ್ದರೆ, ಇಲ್ಲಿ ಚಂಪನ್ ಆರ್ಥಿಕತೆಯಿಂದಲೇ ತಾನು ಸಮಾಜದ ಸಿಂಧುತ್ವವನ್ನು ಪಡೆಯುತ್ತಾನೆ. ಆರಯ್ಯನ ಭ್ರಷ್ಟತೆಯ ಮೂಲಕ ಸಮಾಜದ ನೀತಿ ಭ್ರಷ್ಟತೆಯನ್ನು, ಜಾತಿಯ ಸುಳ್ಳು ಪರಿಕಲ್ಪನೆಯನ್ನು ಕಾದಂಬರಿಕಾರರು ತೆರೆದಿಡುತ್ತಾರೆ.

ಚೋಮನದುಡಿಯಲ್ಲಿ ಚೋಮನ ಸಾಲವನ್ನು ಬೆಳ್ಳಿ ತೀರಿಸುತ್ತಾಳೆ. ಆ ಸಾಲ ಚನಿಯ ಗುರುವರಿಂದ ತೀರದ ಸಾಲ ಆದರೆ ಬೆಳ್ಳಿ ಆ ಸಾಲವನ್ನು ತೀರಿಸುವುದು ಅನೈತಿಕವಾಗಿ. ಆಕೆ ಈ ಅನೈತಿಕತೆಯನ್ನು ಪ್ರಜ್ಞಾಪೂರ್ವಕವಾಗಿ ಮಾಡುವುದಿಲ್ಲ. ಅದೊಂದು ವಯೋದೌರ್ಬಲ್ಯದಿಂದ ನಡೆಯುವ ಘಟನೆ. 'ಮನ್ವೇಲ ಅವಳೊಡನೆ ಮಾತನಾಡುವುದು, ನಗುವುದು, ಚೇಷ್ಟೆ ಮಾಡುವುದು ಹೆಚ್ಚುತ್ತಾ ಹೋಯಿತು. ಅವಳಿಗೆ ಅವುಗಳ ಅರ್ಥ ಹೊಳೆಯುತ್ತಾ ಬಂತು. ಜೀವನದಲ್ಲಿ ಮೊದಲನೇ ಬಾರಿಗೆ ದುಡುಕನ್ನು ಅವಳು ಅನುಭವಿಸತೊಡಗಿದಳು, ಆದ್ದರಿಂದ ಮನ್ವೇಲನ ಚೇಷ್ಟೆಗಳನ್ನು ತಿರಸ್ಕರಿಸಲು ಹೋಗಲಿಲ್ಲ. ಮುಂದೆ ಸಮ್ಮತಿಯ ಮುದ್ರೆಯನ್ನು ಕೊಟ್ಟಂತೆ ಕಾಣುತ್ತದೆ. ಅವನ ಕರುಣೆಯಿಂದ ತಂದೆಯ ಸಾಲ ತೀರುವುದಾದರೆ ಏನಾದರೇನೆಂಬ ಉದಾಸೀನಭಾವ ತಾಳಿದಳು ಕಾಯ ದೌರ್ಬಲ್ಯ ಅವಳನ್ನು ಕಾಮದ ದಾಸಿಯನ್ನಾಗಿ ಮಾಡಿತು. ಮನ್ವೇಲನಿಂದ ದೊರಕುತ್ತಿದ್ದ ಆಣೆ ಎರಡಾಣೇಗಳ ಬಹುಮಾನವನ್ನು ಶೇಖರಿಸುತ್ತಾ ಬಂದು ತಂದೆಯ ಋಣವನ್ನು ತೀರಸುತ್ತೇನೆ ಎಂಬ

---

೧ ಕೆಂಪು ಮೀನು (ಚೆಮ್ಮೀನು) ಪುಟ ೪೮

ವಿಶ್ವಾಸವನ್ನು ಅವಳು ಗಳಿಸಿದಳು'.[೧] ದೇಹದ ಕಾಮದ ಬಯಕೆ ಆಕೆಯ ವಿವೇಚನೆಯನ್ನು ಶೂನ್ಯ ಮಾಡಿತ್ತು. ದುರ್ಬಲರು ಶೋಷಿತರು ಪ್ರಬಲ ವ್ಯವಸ್ಥೆಯಲ್ಲಿ ಇರಲಾರರು ಹಾಗೂ ಮಾನಸಿಕವಾಗಿ ದೈಹಿಕವಾಗಿ ಶೋಷಣೆಗೆ ಒಳಗಾಗುತ್ತಾರೆ ಎಂಬುದರ ಜೊತೆಗೆ ಈ ಶೋಷಣೆಯ ವಿಸ್ತೃತ ಧರ್ಮಾತೀತ ಸ್ವರೂಪವನ್ನು ಕಾದಂಬರಿಕಾರರು ತೆರೆದಿಡುತ್ತಾರೆ.

ಚೆಮ್ಮೀನಿನಲ್ಲಿ ಚಂಪನ್‌ಕುಞ್ಞ ದೋಣಿ ಕೊಳ್ಳಲು ಸಹಾಯ ಮಾಡುವುದು ಪರೀಕುಟ್ಟಿ, ಆದರೆ ಆತ ಸಾಲ ಕೊಡುವುದು ಚಂಪನ್‌ಕುಞ್ಞನನ್ನು ನಂಬಿ ಅಲ್ಲ, ಕರುತ್ತಮ್ಮನನ್ನು ಮೆಚ್ಚಿ 'ಅದು ಕರುತ್ತಮ್ಮನಿಗೆ ಆಕೆಯ ತಾಯಿ ಚಕ್ಕಿಗೂ ಗೊತ್ತು'

ಕರುತ್ತಮ್ಮ 'ಅಪ್ಪನನ್ನು ನಂಬಿ ಕೊಟ್ಟನೇನು ಅವನು ಅದನ್ನೆಲ್ಲ ?

"ಮತ್ತೆ ಅಲ್ಲದೇ"

ಥಟಕ್ಕನೆ ಚಕ್ಕಿಗೆ ನೆನಪಾಯಿತು ! ಕರುತ್ತಮ್ಮ ಚಿಕ್ಕ ಸಾಹುಕಾರನೊಂದಿಗೆ ಹಣ ಪ್ರಸ್ತಾಪವನ್ನು ಮಾತಾಡಿದ್ದಳೆಂದು ಬಹುಶಃ ಅದನ್ನು ಮನಸ್ಸಿನಲ್ಲಿ ಇರಿಸಿಕೊಂಡಿರಬಹುದು ಅವಳು ಹಾಗೇ ಕೇಳಿದಾಗ "ಮತ್ತೇ ನೀನು ಕೇಳಿದ್ದರಿಂದ ಕೊಟ್ಟನೇನೆ" ?

"ಹುಂ ! ಅದರಿಂದ ಮಾತ್ರ ಎಂದು ಕರುತ್ತಮ್ಮ ಹೇಳಲಾರಳು ಆದರೆ ಪರೀಕುಟ್ಟಿಗೆ ಅವಳ ಮೇಲೆ ಪ್ರೇಮ ಉಂಟು, ಅವಳೆಂದಳು "ನನ್ನ ಬಾಯಿಬಿಟ್ಟು ಹೇಳಿಸಬೇಡ ಅಮ್ಮಚ್ಚಿ"[೨] ಆದರೆ ಚೋಮನದುಡಿಯಲ್ಲಿ ಮನ್ವೇಲ ಮಂಗೇಲರದು ಕಾಮದ ದೃಷ್ಟಿ. ಅವರಿಗೆ ಹೆಣ್ಣೊಂದು ಭೋಗದ ವಸ್ತುವಷ್ಟೇ. ಆದರೆ ಅದನ್ನು ಪ್ರತಿಭಟಿಸಲು ಬೆಳ್ಳಿ ಅಶಕ್ತಳು. ಆಕೆಗೆ ಇರುವ ದೈಹಿಕ ದೌರ್ಬಲ್ಯ ಒಳಗೆ ಇರುವ ಮಾನಸಿಕ ಚೈತನ್ಯ ಪ್ರಜ್ಞೆಯ ಮೇಲೆ ಸವಾರಿ ಮಾಡುತ್ತದೆ. ಆದರೆ ಪರೀಕುಟ್ಟಿ ಮತ್ತು ಕರುತ್ತಮ್ಮರ ಸಂಬಂಧ ಶುದ್ಧ ಪ್ರೇಮದ್ದು, ಅಥವಾ ಪ್ರೇಮದ ವಯೋಸಹಜ ಆಕರ್ಷಣೆಯದ್ದು (ಇನ್‌ಫ್ಯಾಚುಯೇಷನ್). ಅದೊಂದು ಪ್ರಬುದ್ಧವಾದ ಪ್ರೇಮವೇನು ಅಲ್ಲ. ಮನ್ವೇಲ ತನ್ನ ಹೆಂಡತಿ ಇದ್ದರೂ ಬೆಳ್ಳಿಯ ಸಂಬಂಧ ಬಯಸುವ ಕಾಮುಕ ಹೇಗೋ, ಹಾಗೆ ಪರೀಕುಟ್ಟಿ ತನ್ನ ತಂಗಿಯ ಮದುವೆ ಮಾಡದೇ, ತಂದೆಯ ಸ್ಥಿತಿಯ ಬಗ್ಗೆ ಯೋಚಿಸದೆ ಕೇವಲ ಕರುತ್ತಮ್ಮನಿಗೋಸ್ಕರವೇ ಯೋಚಿಸುವ ಬೇಜವಬ್ದಾರಿ ಮನುಷ್ಯ. ಕಾದಂಬರಿಯಲ್ಲಿ ಮನ್ವೇಲನ ಹೆಂಡತಿ ಹಾಗೂ ಪರೀಕುಟ್ಟಿಯ ತಂಗಿಯ ಪ್ರಸ್ತಾಪವಿದೆಯೇ ಹೊರತು ವಿವರಣೆಯಿಲ್ಲ.

ಕಳಸದಲ್ಲಿ ನೀಲ ಅವನ ಸಮಪ್ರಾಯದ ಹುಡುಗರೊಡನೆ ಆಟವಾಡುವಾಗ ಕಾರಣಾಂತರದಿಂದ ಜಗಳವಾಗಿ ಅವರಿಬ್ಬರು ಪರಸ್ಪರ ಬೈಯ್ಯತೊಡಗಿದರು. ಆ ಇನ್ನೊಬ್ಬ ಹುಡುಗ ಸಿಟ್ಟಿನಿಂದ 'ಸೇರೆಗಾರರ ಭಾವನಂಟ' ಎಂದುಬಿಟ್ಟ. ಈ ವಿಚಾರವನ್ನು ನೀಲ ಬೆಳ್ಳಿಗೆ ಹೇಳುತ್ತಾನೆ. ಬೆಳ್ಳಿಗೆ ಕೇಳಿ ಬಹಳ ದುಃಖವಾಯಿತು. ತನ್ನ ಜೀವನದ ಕಳಂಕದ ಕಥೆ ತೋಟಕ್ಕೆಲ್ಲಾ ಹಬ್ಬೀತೆಂದು ಅವಳು ಊಹಿಸಿರಲಿಲ್ಲ. ಇನ್ನೇನು ಗತಿಯೆಂದು ನೊಂದು ಕೊಂಡಳು[೩] ಬೆಳ್ಳಿಗೆ ಸೇರೆಗಾರರ ಜೊತೆ ಸಂಬಂಧ ಕುರಿತ ಮಾತು ಜನರ ಬಾಯಲ್ಲಿ ನಡೆದಾಡುತ್ತಿದೆ ಎಂಬ ಕಲ್ಪನೆ ಬಂದೊಡನೆ ಆಕೆ ತನ್ನ ಸ್ಥಿತಿಯ ಬಗ್ಗೆ ಚಿಂತಿಸತೊಡಗಿದಳು. ಮುಂದೆ ಮನ್ವೇಲನೆ ಮಂಗೇಲರ ಜೊತೆ ದೈಹಿಕವಾಗಿ ಆಕೆಯ ಸಂಬಂಧ ಏರ್ಪಡಿಸಿದ. ಆಕೆ ಇನ್ನೂ

---

೧ ಚೋಮನದುಡಿ ; ಪುಟ ೮೫

೨. ಕೆಂಪು ಮೀನು (ಚೆಮ್ಮೀನು) ಪುಟ ೨೦

೩. ಚೋಮನದುಡಿ ; ಪುಟ ೮೬

ಹೆದರಿದಳು. 'ಇನ್ನು ನಾಲ್ಕು ದಿನ ಕಳೆದರೆ ದೊರೆಗಳ ಭಾವನೆಂಟ ಎಂದು ಜನ ಹೇಳುತ್ತಾರೆಂದು ಬೆದರಿದಳು'[೧] ಮುಂದೆ ಬೆಳ್ಳಿಗೆ ತಂದೆಯ ನೆನಪು ಬಂದು ತನ್ನ ವ್ಯವಹಾರದ ಬಗ್ಗೆ ಹೆದರಿ ಹಿಂದಿರುಗಲು ಊರಿಗೆ ನಿಶ್ಚಯಿಸಿದಳು.

ಇತ್ತ ಚೆಮ್ಮೀನಿನಲ್ಲಿ ಚಂಪನ್‌ಕುಞ್ಞ ದೋಣಿ ತರಲು ಹೋದ ನಂತರ "ಕಾಳಿಕುಞ್ಞ ಮನೆಯಲ್ಲಿ ನಾಲ್ಕರು ಹೆಂಗಸರು ಸೇರಿದ್ದಾರೆ, ಹರಟೆಗೆ. ಅವರು ಹರಟುವುದು ಆ ತಾಯಿ ಮಗಳನ್ನು ಕುರಿತೆ ! ಚಕ್ಕಿ ಕಿವಿಗೊಟ್ಟು ಲಾಲಿಸಿದಳು, ಒಬ್ಬಳು ಬಾಯಿ ತೆರೆದು ಅಂದೇ ಬಿಟ್ಟಳು ಪರೀಕುಟ್ಟಿಗೆ ಕರುತ್ತಮ್ಮನಿಗೆ ಗುಟ್ಟು, ಅಂತ ! ಅವಳೇ ನೋಡಿದಳಂತೆ, ದೋಣಿಯ ಮರೆಯಲ್ಲಿ ಲಲ್ಲೆ ಹೊಡೆಯೋದನ್ನು ಆದ್ದರಿಂದಲೇ ಅಂತೆ ಕರುತ್ತಮ್ಮನಿಗೆ ಇನ್ನು ಮದುವೆಯಾಗದಿರೋದು.[೨] ಮುಂದೆ ಈ ಜಗಳ ತಾರಕಕ್ಕೆ ಏರಿ ಕರುತ್ತಮ್ಮನ ಕಿವಿಗೆ ಬಿದ್ದಿತು. ಆಕೆ ತನ್ನ ಎರಡು ಕಿವಿಗಳನ್ನು ಮುಚ್ಚಿಕೊಂಡಳು. ಆ ಮಾತುಗಳು ಕರುತ್ತಮ್ಮನಿಗೆ ತೀರ ಅಸಹ್ಯಕರವಾಗಿದ್ದವು. ಆದರೆ ಆಕೆ ಪರೀಕುಟ್ಟಿಯನ್ನು ಇಷ್ಟಪಡುತ್ತಿದಿದ್ದು ನಿಜವೇ ಆಗಿತ್ತು. ಅದನ್ನು ಬಹಿರಂಗವಾಗಿ ಹೇಳಿಕೊಳ್ಳುವಂತೆ, ಅದು ಮಾರ್ಪಟ್ಟಿರಲಿಲ್ಲ ಅಷ್ಟೇ. ಈ ಎರಡೂ ಸಂದರ್ಭಗಳು ಹೆಣ್ಣನ್ನು ಕುರಿತು ಆಲೋಚಿಸುವ ಭಾರತೀಯ ಮನಸ್ಥಿತಿಯನ್ನು ಧ್ವನಿಸುತ್ತವೆ.

ಚೆಮ್ಮೀನಿನಲ್ಲಿ ಚಂಪನ್‌ಕುಞ್ಞ ದೋಣಿ ಬಲೆ ಕೊಂಡು ತರುವುದನ್ನು ಹಾಗೂ ಮಗಳ ಮದುವೆ ಮಾಡದಿರುವುದನ್ನು ವಿರೋಧಿಸಿ ಆ ವಿಚಾರವನ್ನು ಆರಯ್ಯನ ಬಳಿಗೆ ತೆಗೆದುಕೊಂಡು ಹೋಗುತ್ತೇನೆ ಎಂದಾಗ 'ಆಗ ಕರುತ್ತಪೆಣ್ಣು ಹೇಳಿದಳು'

"ನೀತಿ ನ್ಯಾಯ ಯಾರು ಯಾರಲ್ಲಿ ಸೊನ್ನೆ ಅಂಥವರಿಗೇನು ಏನು ಮಾಡಬೇಕು ಅಂತೆಲ್ಲ ಅರಯನಿಗೆ ಗೊತ್ತು, ನಮಗೇಕೆ ?"

ಬುದ್ಧಿವಂತಿಕೆಯ ಉತ್ತರ ಕೊಟ್ಟಳು ಚಕ್ಕಿ

ಮಾಡಲಿ ಮಾಡಲಿ ! ಮನಸ್ಸಿಗೆ ಬಂದದ್ದನೆಲ್ಲ ಮಾಡಲಿ ನಾವು ನಾಲ್ಕನೆಯ ವೇದಕ್ಕೆ ಸೇರುತ್ತೇನೆ ಇಲ್ಲದೇ ಇದ್ದರೆ ನಸ್ರಾಣಿಗಳಾಗ್ತೇವೆ. ಆಮೇಲೆ ನಿಮ್ಮ ಅರಯ ನಮ್ಮನ್ನೇನು ಮಾಡುವಂತಿಲ್ಲ[೩] ಎನ್ನುತ್ತಾಳೆ.

ಚೋಮನದುಡಿಯಲ್ಲಿ ಚನಿಯನ ಸಾವು, ಗುರುವನ ಮತಾಂತರ, ನೀಲನ ಸಾವು, ತನಗೆ ಭೂಮಿ ಸಿಗದೇ ಇರುವುದು, ಇದನ್ನೆಲ್ಲ ಉಂಟು ಮಾಡಿದ ತನ್ನ ಜಾತಿಯ ಬಗ್ಗೆ ಸಿಟ್ಟುಗೊಂಡ ಚೋಮ, ಕ್ರೈಸ್ತ ಮತಕ್ಕೆ ಮತಾಂತರಗೊಳ್ಳಲು ಬಯಸುತ್ತಾನೆ. 'ಇನ್ನು ಬೇಡ ಈ ಊರಿನ ದೇವರ ತಂಟೆಯೇ ಬೇಡ ! ತನಗಿನ್ನು ಕ್ರೈಸ್ತ ದೇವರು ! ಮಗ ಗುರುವನನ್ನು ಬೇಸಾಯಗಾರನಾಗಿ ಮಾಡಿದ ದೇವರು'[೪] ಎಂಬುದಾಗಿ ನಿರ್ಧರಿಸಿದ. ಈ ಮಾತನ್ನು ಕೇಳಿದ ಬೆಳ್ಳಿ 'ಆದರೆ ಕ್ರೈಸ್ತನಾದ ಅವನನ್ನು ತಿರುಗಿ ಸೇರಲು ಅವನಂತೆ ಕ್ರೈಸ್ತನಾಗಬೇಕಾಗುತ್ತದೆ ! ತಮಗಿನ್ನು ಯಾವ ದೇವರಾದರೇನು ಎಂದು ತೋರಿತು, ಮರುಕ್ಷಣ ಹಾಳು ಮನ್ವೇಲನ ಹಂಬಲು ಬಂದು ಅವಳಿಗೆ ಅವಳ ವಿಲಾಸಿ ಜೀವನದ ಆಸೆಯು ತಿರುಗಿ ಮೊಳೆಯಿತು. ಒಮ್ಮೊಮ್ಮೆ ತನ್ನ ಕನಸಿನಲ್ಲಿ ಮನ್ವೇಲನ ಮಡದಿಯಾಗುವೆನೆಂದು ಚಿತ್ರಿಸಿಕೊಂಡಳು. ಗುರುವನು ಮಾರಿಯ ಪತಿಯಾಗಲಿಲ್ಲವೇ ? ಈ ಎಲ್ಲಾ ಆಲೋಚನೆಯ ಹಿನ್ನೆಲೆಯಲ್ಲಿ ಕ್ರೈಸ್ತ ಮತಕ್ಕೆ ಸೇರುವ ತಂದೆಯ ಪ್ರಸ್ತಾಪವನ್ನು ಒಪ್ಪಿ ಒತ್ತಾಸೆಯಾದಳು. ಭಾರದಂಥ ದೇಶದಲ್ಲಿ ಆದ ಮತಾಂತರಗಳ ಹಿಂದೆ ಇಂತಹ ಜಾತಿಯ ಕ್ರೂರತೆಗಳೇ ಹೆಚ್ಚು ಕೆಲಸ ಮಾಡಿವೆ. ಜೊತೆಗೆ ಆನುಷಂಗಿಕವಾಗಿ ವಿಲಾಸಿ ಜೀವನದ ಕಲ್ಪನೆ ಕೂಡಾ.

---

೧ ಚೋಮನದುಡಿ ; ಪುಟ ೮೭

೨. ಕೆಂಪು ಮೀನು (ಚೆಮ್ಮೀನು) ಪುಟ ೪೦

೩. ಕೆಂಪು ಮೀನು (ಚೆಮ್ಮೀನು) ಪುಟ ೪೨೨.

೪. ಚೋಮನದುಡಿ ; ಪುಟ ೯೭

[illegible]

ಇತ್ತ ಚೆಮ್ಮೀನಿನಲ್ಲಿ ಚಕ್ಕಿ ನಾಲ್ಕನೇ ವೇದಕ್ಕೆ ಸೇರುತ್ತೇವೆ ಎಂಬ ಮಾತನ್ನು ಕೇಳಿಸಿಕೊಂಡ ಕರುತ್ತಮ್ಮ 'ಇದನ್ನೆಲ್ಲಾ ಕೇಳುತ್ತಿದ್ದ ಕರುತ್ತಮ್ಮನ ಆಗಿನ ಅಂತರಂಗದ ಆಂದೋಲನ ಅವಳು ಇಂದೆಂದು ಅನುಭವಿಸಿರಲಿಲ್ಲ. ಅಂದೋಳನದಿಂದ ನೋವಾಯಿತೆ ? ಹೇಳಲಿಕ್ಕೆ ಬರದು, ಅಡಗಿಸಲಾರದ ಆಶ್ವಾಸವೇ ? ಹಾಗೂ ಹೇಳುವುದರಷ್ಟು..... ನಾಲ್ಕನೇ ವೇದ ಸೇರಿಬಿಡುತ್ತೇವೆ ಎಂಬ ಘೋಷಣೆ ಅವಳ ಮೆದುಳೊಳಗೆ ಮೊಳಗುತ್ತಿತ್ತು. ಅವಳ ಮೈಗೆ ಕಾವು ಕೊಟ್ಟರು ತಡೆಯಲಾರದ ಕಾವು[೧]. ಬೆಳ್ಳಿ ಮತ್ತು ಕರುತ್ತಮ್ಮನ ಅಂತರಂಗ ಇದು.

ಮುಂದೆ ಚೋಮನದುಡಿಯಲ್ಲಿ ಬೆಳ್ಳಿ ಈ ವಿಚಾರವನ್ನು 'ಸೇರೆಗಾರರೆ ನಾವಿನ್ನು ಪಾದ್ರಿ ಮತ ಸೇರುವುದುದೆಂದು ಮಾಡಿದ್ದೇವೆ ಎಂದಳು ಬೆಳ್ಳಿ' ಚೆಮ್ಮೀನಿನಲ್ಲಿ ಕರುತ್ತಮ್ಮನಿಗೆ 'ಆ ಗಳಿಗೆಯಲ್ಲಿ ಪರೀಕುಟ್ಟಿ ಅಲ್ಲೆಲ್ಲಾದರೂ ಪ್ರತ್ಯಕ್ಷವಾಗಿದ್ದರೆ ಅವಳು ಹೇಳೇಬಿಡುತ್ತಿದ್ದಳು.

"ನಾವು ನಾಲ್ಕನೇಯ ವೇದಕ್ಕೆ ಸೇರಿ ಬಿಡುತ್ತೇವೆ"

ಹಾಗೆ ಮಾಡುವಾಗ ಅವನು ಹಿಗ್ಗಿ ಕುಣಿದಾಡುವನು."[೨]

ಕರುತ್ತಮ್ಮ ಆ ಸನ್ನಿವೇಶವನ್ನು ಮನಸ್ಸಿನಲ್ಲಿ ನೆನೆಸಿಕೊಂಡು ಅನಂತವನ್ನು ಅನುಭವಿಸುತ್ತಾಳೆ. ಕರುತ್ತಮ್ಮ ಬೆಳ್ಳಿಯರ ಸಂಬಂಧದ ಸಿಂಧುತ್ವಕ್ಕೆ ಮತಾಂತರ ಪರಿಹಾರವಾಗಿ ಕಾಣತೊಡಗಿದೆ, ಬೆಳ್ಳಿ ಮತ್ತು ಒಡಲಾಳದ ಚಿನ್ನಸ್ವಾಮಿಯನ್ನು ಇಷ್ಟಪಡುವ ಪುಟ್ಟಗೌರಿಯ ಮಾನಸಿಕ ಸ್ಥಿತಿಯನ್ನು, ದಲಿತ ಕಥೆಗಳ ಈ ವಿಶೇಷ ವಿಮರ್ಶಕರು ಸಂದರ್ಭದಲ್ಲಿ ಗಮನಿಸಬಹುದು.

ಎರಡು ಕಾದಂಬರಿಗಳ ಸೂಕ್ಷ್ಮ ಅಧ್ಯಯನದಿಂದ ಮಹತ್ವದ ಅಂಶಗಳಲ್ಲಿ ಬದಲಾಗುತ್ತಿರುವ ಕಾಲಗತಿಯ ಸಂಗತಿಯೂ ಒಂದು. ಚೋಮನದುಡಿಯಲ್ಲಿ ನೀಲ ನೀರಿಗೆ ಬಿದ್ದಾಗ "ಒಬ್ಬ ಬ್ರಾಹ್ಮಣ ತರುಣ ಧಾವಿಸಿ ನೀಲನನ್ನು ಎಳೆದು ತರಲು ಮುಂದುವರೆದ, ಅವನನ್ನು ಹಿರಿಯರು ಅವನನ್ನು ತಡೆದರು ! ಅವನು ಹೊಲೆಯನಲ್ಲವೇ ?" ಎಂದು ಬೆದರಿಸಿದರು, ತರುಣ ತಳಮಳಸಿ ನಿಂದ ಕಾಲೆಡರಿ ಬಿದ್ದ ಚೋಮ ಎಲ್ಲಾವನ್ನು ಕಂಡ.... ಆಗ ಬ್ರಾಹ್ಮನ ತರುಣ ನೀರಿನಲ್ಲಿ ದುಮುಕಿದ, ಇತರರು ಅವನನ್ನು ತಡೆಯಲು ಯತ್ನಿಸಿ ಹತಾಶರಾಗಿ ನಿಂತರು. ನೀಲನ ಶವವೇನು ಮೇಲಕ್ಕೆ ಬಂದಿತು ಪ್ರಾಣವಿರಲಿಲ್ಲ ! ಆ ತರುಣ ಮುಖವನ್ನು ತಗ್ಗಿಸಿಕೊಂಡು ಹೊರಟುಹೋದ'[೩] ಕಾರಂತರು ಬದಲಾಗುತ್ತಿರುವ ಕಾಲಗತಿಯನ್ನು ಈ ಸನ್ನಿವೇಶದ ಮೂಲಕ ಸೂಚಿಸುತ್ತಿದ್ದಾರೆ. ಆದರೆ ಸಕಾಲದಲ್ಲಿ ಬದಲಾಗದೇ ಹೋದುದರಿಂದ ಆದ ಅನಾಹುತವನ್ನು ಹೇಳುತ್ತಾರೆ.

ಚೆಮ್ಮೀನಿನಲ್ಲಿ ನೀರ್ಕುನ್ನಿ ಹಾಗೂ ತ್ರಿರ್ಕುನ್ನಿಗೆ ಜಗಳವಾಯಿತು. ಎರಡು ಮೂರು ತಲೆಗಳು ಹೊಡೆದವು "ಪೊಲೀಸರು ಧಾವಿಸಿ ಬಂದು ಹಲವರನ್ನು ಹಿಡಿದರು. ಆರಯ್ಯನ ಮಾತಿನ ಮೇರೆಗೆ ಅವರನ್ನು ಬಿಡಿಸಿ ತಂದರು ಬಿಡುಗಡೆಯಾದವರು, ಅವರ ಬಂಧುಗಳು, ಮಿಕ್ಕವರು ಒಬ್ಬರಾಗಿ ಆರಯ್ಯನಿಗೆ ಗುರುಕಾಣಿಗೆ ಒಪ್ಪಿಸಿದರು. ಸಾರ್ವಜನಿಕವಾದ ಒಂದು ಚಂದ ಬೇರೆ ಎತ್ತಿ ಆರಯ್ಯನಿಗೆ ಅರ್ಪಿಸಿದರು. ಹಾಗೆ ಆ ಕೇಸು ಕೊನೆಗೊಂಡಿತು. ಅಲ್ಲಿಗೆ ಅವರೆಲ್ಲರ ಸಂಪಾದನೆ ಕರಗಿ ಮಾಯವಾಯಿತು. ವೇಲಾಯುಧನ್ ಮಾತ್ರ ಆರಯ್ಯನಿಗೆ ತಲೆಬಾಗಲಿಲ್ಲ. ಅವನು ಆರಯ್ಯನನ್ನು ಪ್ರತಿಭಟಿಸಿದ. ಆದ್ದರಿಂದ ಪೊಲೀಸರಿಗೆ ಹೇಳಿ ಅವನನ್ನು ಬಂಧಿಸಿದರು. ಅವರ ಅಧೀನದಲ್ಲಿ ವೇಲಾಯುಧನ್ ಒಂದು ವಾರ ಕಾರಗೃಹ ಸವಿದು. ಈಚೆಗೆ ಬಂದಾಗಲು ಅವನು ಅದನ್ನೇ ಹೇಳಿದ'[೪] ಕಾದಂಬರಿಕಾರರು ವೇಲಾಯುಧನ ಈ ಸನ್ನಿವೇಶದ ಮೂಲಕ ಸಮಾಜದ ಶೋಷಣೆಯ

---

೧ ಕೆಂಪು ಮೀನು (ಚೆಮ್ಮೀನು) ಪುಟ ೪೨

೨. ಕೆಂಪು ಮೀನು (ಚೆಮ್ಮೀನು) ಪುಟ ೪೦

೫. ಕೆಂಪು ಮೀನು (ಚೆಮ್ಮೀನು) ಪುಟ ೪೩

೩. ಚೋಮನದುಡಿ : ಪುಟ-೯೪-೯೫.

೪. ಕೆಂಪು ಮೀನು (ಚೆಮ್ಮೀನು) ಪುಟ ೮೯

ವಿರುದ್ಧ ಪ್ರತಿಭಟಿಸಬೇಕಾದ ಅಗತ್ಯ ಹಾಗೂ ಅದರಿಂದ ತಾತ್ಕಾಲಿಕವಾಗಿ ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಸೂಚಿಸುತ್ತಿದ್ದಾರೆ.

ಶೋಷಣೆಯ ಬಗ್ಗೆ ಪ್ರತಿಭಟಿಸುವ ಎರಡು ಕಾದಂಬರಿಗಳು ನಮಗೆ ಇನ್ನೊಂದು ಅಷ್ಟೇ ಮಹತ್ವದ ಶೋಷಣೆಯ ವ್ಯಾಖ್ಯಾನವನ್ನು ನಮ್ಮ ಮುಂದೆ ಇಡುತ್ತದೆ. ಶೋಷಣೆ ಮಾಡುವ ಕ್ರಿಯೆ ಹೇಗೆ ಆಯಕಟ್ಟಿನ ಸ್ಥಾನದಿಂದ ನಿರ್ಧರಿತವಾಗುತ್ತದೆ ಎಂಬುದು. ಶೋಷಿತ ವ್ಯಕ್ತಿಗೆ ಉನ್ನತಿಕರಣ ದೊರಕುತಿದ್ದಂತೆ ಹಳೆಯದನ್ನು ಮರೆತು ಆ ಕ್ಷಣಕ್ಕೆ ತಕ್ಕಂತೆ ವರ್ತಿಸುತ್ತಾನೆ ಎಂಬುದು, ಚೋಮನದುಡಿಯಲ್ಲಿ "ಅದೇ ಊರಿನ ಒಬ್ಬ ಬೇಸಾಯಗಾರ ಚೋಮನನ್ನು ಹುಡುಕಿ ಅಲ್ಲಿಗೆ ಬಂದ ಈವರೆಗೆ ಚೋಮನನ್ನ ಆತ ತನ್ನ ಕೆಲಸಕ್ಕೆ ಕರೆಯಲು ಬಂದವನಲ್ಲ ಈಗ ಬಂದದ್ದೇಕೆಂದು ಅವನಿಗೆ ಹೊಳೆಯಲಿಲ್ಲ. "ಚೋಮಾ ಎಂದು ಕರೆಯುತ್ತಲೇ ಅವನು ಎದ್ದು ನಿಂತು ಮುಂದೆ ಹೋದ" "ಚೋಮಾ ನಮ್ಮ ಮನೆಯ ಎಮ್ಮೆ ಸತ್ತಿದೆ ಬಂದು ತೆಗೆದುಕೊಂಡು ಹೋಗುತ್ತೀಯಾ ? ಎಂದು ಕೇಳಿದ. ಅವನಿಗೆ ಅಂತರಂಗದಲ್ಲಿ ಬಹಳ ಖುಷಿಯಾಯಿತು ಆದರೆ ತೋರಿಸಿಕೊಳ್ಳದೆ "ಇಂದು ಮನೆಗೆ ನೆಂಟರು ಬಂದಿದ್ದಾರೆ ಮನೆಯನ್ನು ಹೇಗೆ ಬಿಡುವುದು ?" ಎಂದ

"ನೆಂಟರು ಬಂದರೆ ಔತಣವ್ವೋ ಆಯಿತಲ್ಲ"

"ಹೌದು ಔತಣವಾಗುತ್ತದೆ ಆದರೆ ಬರಿಯ ಮಾಂಸದಿಂದ ಏನು, ಅದರ ಮೇಲೆ ಸಾಮಾನಿಗೆಲ್ಲಿ ಹೋಗುವುದು ? ಕೈಯಲ್ಲಿ ಕಾಸಿಲ್ಲ"

ಅವನಾದರೂ ಏನು ಮಾಡಬಲ್ಲ ? ಕೊಟ್ಟಿಗೆಯಲ್ಲಿ ಹೆಣವನ್ನಿರಿಸಿ ಕಾಯುದಕ್ಕೊಂಟೆ ? ಇಲ್ಲವೇ ತಾನೊಬ್ಬನೆ ಎಳೆದು ಹೊರಕ್ಕೆ ಹಾಕಲು ಮಾರ್ಗವುಂಟೆ ? ಆದುದರಿಂದ ಬಹಳವಾಗಿ ಕೊರಗಿ "ಆಯಿತು ಬಾ ನಾಲ್ಕಾಣೆ ಕೊಡುತ್ತೇನೆ ಎಂದ" ಚೋಮನು ಜಿಗಿದು ಕುಣಿದು ಬಿಟ್ಟ[1] ಚೋಮನಿಗೆ ಶೋಷಣೆ ಮಾಡುತ್ತಿದ್ದೇನೆ ಎಂಬ ಪ್ರಜ್ಞೆ ಇಲ್ಲದೇ ಆ ಕ್ರಿಯೆ ಜರುಗುವುದನ್ನು ಈ ಸನ್ನಿವೇಶದಿಂದ ಗಮನಿಸಬೇಕು.

ಚೆಮ್ಮೀನಿನಲ್ಲಿ ಚಂಪನ್ ಪರೀಕುಟ್ಟಿಯ ಹಣದ ಸಹಾಯದಿಂದ ದೋಣಿಯನ್ನು ಪಡೆದುಕೊಂಡ ಮೇಲೆ ಆತನಿಗೆ ಹಿಂದುರಿಗಿಸಬೇಕಾದ ಸಾಲದ ಬಗ್ಗೆ ಚಾಕರವೆತ್ತುವುದೇ ಇಲ್ಲ.

ಪರೀಕುಟ್ಟಿ ಚಂಪನ್‌ಕುಞ್ಞನನ್ನು ಕೇಳಿದ "ನನಗೆ ಕೊಡುತ್ತೀಯಾ ಮೀನು ?" ಅವನು ಕೇವಲ ಹೊಸಬನೇನೋ ಎಂಬಂತೆ ಮಾತನಾಡಿದ ಚಂಪನ್‌ಕುಞ್ಞ. "ರೊಕ್ಕ ಕೊಡಬೇಕು ಈಗ ! ಕೈಮೇಲೆ... ಆಮೇಲೆ ಮಾತು ! ನನಗೆ ಬೇಕಾದ್ದು ರೊಕ್ಕ..."[2] ಪರೀಕುಟ್ಟಿಗೆ ಮೀನು ಸಿಗದೆ ಹಿಂದಿರುಗುತ್ತಾನೆ ರಾಮನ್‌ಕುಞ್ಞುವಿನ ದೋಣಿಯಲ್ಲಿ ಕೆಲಸಮಾಡುತ್ತಿದ್ದ ಚಂಪನ್‌ಕುಞ್ಞ ಸ್ವತಃ ದೋಣಿ ಕೊಂಡು ಸ್ಥಿತಿವಂತನಾದಮೇಲೆ ರಾಮನ್‌ಕುಞ್ಞ ಅನಿವಾರ್ಯವಾಗಿ ಸಾಲ ಕೇಳಲು ಚಂಪನ್‌ಕುಞ್ಞುವಿನ ಹತ್ತಿರ ಬಂದಿದ್ದಾನೆ. ಚಂಪನ್ ನೂರಾ ಐವತ್ತು ರೂಪಾಯಿಗಳನ್ನು ಸಾಲ ಕೊಡುತ್ತಾನೆ. "ಅವನು ಹೊರಟ ಕೂಡಲೇ ಚಂಪನ್‌ಕುಞ್ಞ ಒಳಗೆ ನುಗ್ಗಿ ಚಕ್ಕಿ ಎದುರು ಪಕ್ಕೆ ಹಿಡಿದುಕೊಂಡು ಗಟ್ಟಿಯಾಗಿ ನಕ್ಕ ಅಂದಿನಷ್ಟು ಉತ್ಸಾಹ ಅವನಲ್ಲಿ ಎಂದಿಗೂ ಕಂಡಿದ್ದಿಲ್ಲ.

ಚಕ್ಕಿ ಕೇಳಿದಳು

"ಇದೇ ಹುಚ್ಚೊ, ಶಿವಲೀಲೆಯೋ ?"

"ಹೋಗೇ, ಲೇ ನಿನಗೇನು ತಿಳಿಯುತ್ತೇ ? ಅವನ ಹತ್ತಿರ ಇರೋ ಚೀನೀ ದೋಣಿ ಇನ್ನು ಆರು ತಿಂಗಳಾಗುವುದರೊಳಗೆ... ಈ ಚಂಪನ್‌ಕುಞ್ಞುವಿನದು. ನೋಡೆ ! ಮತ್ತೆ ರೊಕ್ಕ ಕೈಯಲ್ಲಿದ್ದರೆ ಎಂತಹ ಅನುಕೂಲ[3] ಎನ್ನುತ್ತಾನೆ. ಮುಂದುವರಿದು ಚಕ್ಕಿ ಕಡಲ

---

೧ ಚೋಮನದುಡಿ ; ಪುಟ ೭೯

೨. ಕೆಂಪು ಮೀನು (ಚೆಮ್ಮೀನು) ಪುಟ ೬೧

೩. ಕೆಂಪು ಮೀನು (ಚೇಮ್ಮೀನು) ಪುಟ ೭೩

ತೀರದ ಅನೇಕ ಅಕ್ಕಪಕ್ಕದವರ ಮನೆಯ ಪಾತ್ರೆಗಳನ್ನು ಅಡವಿಟ್ಟುಕೊಂಡಿದ್ದಾಳೆ. ಸದೃಢವಾದ ಆರ್ಥಿಕ ಸ್ಥಿತಿ, ಬಡತನ ಜಾತಿಯವರನ್ನೆ ಶೋಷಿಸುವುದಕ್ಕೆ ಸಾಧನವಾಗುವ ಈ ಕ್ರಮ ಗಮನಾರ್ಹ.

ಎರಡು ಕಾದಂಬರಿಗಳಲ್ಲಿ ಜಾತ್ರೆಯ ಸನ್ನಿವೇಶ ಬರುತ್ತದೆ. ಚೆಮ್ಮೀನಿನಲ್ಲಿ ವರ್ಷಕ್ಕೆ ಒಂದಾವರ್ತಿ ಬರುವ ಆಶ್ಲೇಷ ಜಾತ್ರೆ ಉಂಟು. ಅಲ್ಲಿ ಹೊಸ ಬಟ್ಟೆ ಹಬ್ಬದಡಿಗೆ ಉಂಡು ನಲಿಯಬಹುದು. ಆದರೆ ಅದಕ್ಕಿಂತ ಹೆಚ್ಚಿನ ವಿವರಣೆಯೇನು ಬರುವುದಿಲ್ಲ. ಆದರೆ ಚೋಮನದುಡಿಯಲ್ಲಿ ವರ್ಷಕ್ಕೆ ಒಂದು ಸಾರಿ ನಡೆಯುವ ಪಂಜದ ಜಾತ್ರೆ ವಿವರಣೆ, ಮೊದಲ ಅಧ್ಯಾಯದಲ್ಲೇ ಬರುತ್ತದೆ. ಈ ಜಾತ್ರೆ ವಿವರದಲ್ಲೇ ದೇವರು, ದೇವಸ್ಥಾನದ ಹಾಗೂ ಒಟ್ಟು ಭಾರತೀಯ ಧಾರ್ಮಿಕ ಪರಿಕಲ್ಪನೆಯ ಸ್ಪಷ್ಟ ವಿಡಂಬನೆ ಮತ್ತು ಜನರ ಮೌಢ್ಯವನ್ನು ತೆರೆದು ತೋರಿಸುವ ರೀತಿ ಮನೋಜ್ಞವಾಗಿದೆ. ದೇವರ ಉತ್ಸವ ಬೆಳಗ್ಗೆಯಿಂದ ಸಂಜೆಯತನಕ ನಡೆದು ರಾತ್ರಿಯಾಗುತ್ತಿದ್ದಂತೆ ಬರುವ ಈ ವರ್ಣನೆ ನೋಡಿ "ಈಗ ಸಮಯವು ಬಂತು ನಡುರಾತ್ರಿಯು ಕಳೆದು, ಪೂಜಾರಿಗೂ ಉತ್ಸವ ಮೂರ್ತಿಯನ್ನು ಹೊತ್ತವರಿಗೂ ನಿದ್ದೆಯ ಅಮಲೇರಿ ಬೇಗ ಈ ರಗಳೆ ತೀರಿದರೆ ಸಾಕು ಎಂಬಷ್ಟಾಗಿದೆ. "ಹುಂ ಓಲಗವಾಗಲಿ, ಆರತಿ... ಆರತಿ... ಎಲ್ಲಿ ಯಾರು ? ಪನಿವಾರ ಹಂಚಬಾರದೇ ? ಪಾನಕ... ಹೂ ಹಾಂ" ಎಂದು ಗಡಬಿಡಿಯೆಬ್ಬಿಸಿ ಹಗಲೆಲ್ಲ ದಣಿದ ದೇವರನ್ನು ನಿದ್ರೆಯ ತೊಟ್ಟಿಲಿಗೆ ಒಯ್ದು ಮುಟ್ಟಿಸಿದರು.[೧] ಕಾರಂತರ ಕಾದಂಬರಿಯಲ್ಲಿ ಇಂತಹ ಪುರೋಹಿತರನ್ನು ನೋಡುವ ರೀತಿಯನ್ನು, ಕುವೆಂಪು ತಮ್ಮ ಕಾದಂಬರಿಗಳಲ್ಲಿ ಪುರೋಹಿತಶಾಹಿಯನ್ನು ವಿಮರ್ಶಿಸುವ ರೀತಿಯನ್ನು ಗಮನಿಸಬೇಕು. ಕಾರಂತರಿಗೆ ಶ್ರದ್ಧೆ ನಂಬಿಕೆ ಇದ್ದು ಯಾವ ವೃತ್ತಿ ಮಾಡಿದರೂ ತಪ್ಪಲ್ಲವೆನಿಸುತ್ತದೆ. ಮುಂದೆ ಕಾದಂಬರಿಯಲ್ಲಿ "ದೇವರ ಗುಡಿಯ ಹತ್ತು ದೀಪಗಳು ಎಣ್ಣೆ ಬತ್ತಿಗಳಿಲ್ಲದೇ ನಂದಿ ಹೋಗುತ್ತಿದ್ದಾಗ ಹಳ್ಳಿಗಳ ಹತ್ತೆಂಟು ಸೂಡಿಗಳು ಬೆಳಗಿದವು, ಸರಿ ಸೂಡಿಯ ಬೆಳಕಿನಲ್ಲಿ ಒಬ್ಬರು ಇನ್ನೊಬ್ಬರನ್ನು ಗುರುತಿಸುತ್ತಾ ತಮ್ಮ ತಮ್ಮ ಹಳ್ಳಿ ಗೆಳೆಯರನ್ನು ಗಂಟುಹಾಕಿಕೊಂಡು ಹೊರಟರು"[೨] ಈ ಸಾಲುಗಳು ಇಡೀ ಭಾರತೀಯ ಧಾರ್ಮಿಕ ಕ್ರಿಯೆಯನ್ನು ಅದ್ಭುತವಾಗಿ ಸೆರೆಹಿಡಿದ ಕನ್ನಡಿಯಂಥವು, ಹಗಲು ಹೊತ್ತಿನಲ್ಲಿ ಉರಿಯುವ ದೇವರ ದೀಪಗಳು, ಬೆಳಕಿನೊಳಗೆ ಮತ್ತಷ್ಟು ಬೆಳಕಾಗಿ ತಮ್ಮ ಮಹತ್ವ ಕಳೆದು ಕೊಂಡು ಸಮುದಾಯದ ಪ್ರಜ್ಞೆಯನ್ನು ಕಳೆದುಕೊಂಡ ಪ್ರಜ್ಞಾಹೀನ ಜ್ಯೋತಿಗಳಂತೆ ತೋರುತ್ತದೆ. ದೇವರ ಗುಡಿಯ ಬೆಳಕು ಹಾರಿದಮೇಲೆ ಹಚ್ಚಿದ ಬೆಳಕಿನಿಂದ ಮಾತ್ರ ಒಬ್ಬರು ಇನ್ನೊಬ್ಬರನ್ನು ನೋಡಬಹುದು. ದಾರಿಯ ಗುರುತು ಹಿಡಿದು ತಲುಪ ಬೇಕಾಗಿರುವ ಸ್ಥಳವನ್ನು ತಲುಪಬಹುದು. ಅದು ಸಾಧ್ಯವಾದದ್ದು ದೇವರು ಗುಡಿ ಸೇರಿದ ಮೇಲೆ, ದೇವಸ್ಥಾನದ ದೀಪವಾರಿದಮೇಲೆ. ಭಾರತದಂಥಹ ದೇಶಗಳಲ್ಲಿ ಈ ಧಾರ್ಮಿಕ ಶ್ರದ್ಧಾ ಕೇಂದ್ರಗಳು ಜನರ ಮೌಢ್ಯದ ಕಾರ್ಖಾನೆಗಳು ಆಗಿದೆ ಎಂಬುದನ್ನು ಈ ಸನ್ನಿವೇಶ ಧ್ವನಿಸುತ್ತದೆ.

ಎರಡು ಕಾದಂಬರಿಗಳ ಒಂದು ವೈದೃಶ್ಯವೆಂದರೆ ಚೋಮನದುಡಿಯಲ್ಲಿ ಆತನ ನೆಂಟರು ಇದ್ದಕ್ಕಿದ್ದಂತೆ ಬಂದು ಚೋಮನ ಮನೆಯಲ್ಲಿ ಸಮಾರಾಧನೆ ಮಾಡುತ್ತಾರೆ. ಅಲ್ಲಿನ ಯಾವ ನೆಂಟರೂ ಆತನ ನೋವು ನಲಿವು ದುಃಖ ದುಮ್ಮಾನಗಳಿಗೆ ಸ್ಪಂದಿಸುವುದಿಲ್ಲ. ಜೊತೆಗೆ ಇವರ ಸ್ವಭಾವವೆಂದರೆ "ಬೇಸಾಯವೆಲ್ಲ ಕಳೆದುದರಿಂದ ಅವರಿಗೆ ಬೇರೆ ಕೆಲಸವಿಲ್ಲ ಇನ್ನೇನು? ನೆಂಟರ ಮನೆಗಳಿಗೆ ಇನ್ನೆರಡು ತಿಂಗಳತನಕ ತಿರುಗುತ್ತಲೇ ಇರುವುದು ಬಾಯಿ

---

೧ ಚೋಮನದುಡಿ ; ಪುಟ ೩

೨. ಅದೇ : ಪುಟ ೩–೪

ಬಿಟ್ಟು ಇನ್ನು ಮನೆಯಲ್ಲಿ ಕಾಳುಕಡ್ಡಿಯ ಚೂರಿಲ್ಲ ಎಂದು ತಿಳಿಸುವ ತನಕ ಹೊರಡದಿರುವುದು ನೆಂಟರ ಸ್ವಭಾವ. ಇಂತಹ ನೆಂಟರು ಈಗಾಗಲೇ ಆರ್ಥಿಕ ದುಸ್ಥಿತಿಯಲ್ಲಿರುವವರಿಗೆ ಇನ್ನಷ್ಟು ಭಾರವಾಗುತ್ತಾರೆ. ಜೊತೆಗೆ ಇಡೀ ಕಾದಂಬರಿಯಿಂದ ಈ ಅಧ್ಯಾಯವನ್ನು ತೆಗೆದಿದ್ದರೂ ಅಂತಹ ಹೆಚ್ಚಿನ ವ್ಯತ್ಯಾಸ ಆಗುತ್ತಿರಲಿಲ್ಲವೆನಿಸುತ್ತದೆ. ಆದರೆ ಒಟ್ಟು ಕಾದಂಬರಿಯ ಹಿನ್ನೆಲೆಯಲ್ಲಿ ಈ ಸನ್ನಿವೇಶವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಭೋಗನಹಳ್ಳಿ ಎಂಬ ಭಾರತದ ಕೇಂದ್ರ ಸ್ಥಾನದ ಅಂಚಿನಲ್ಲಿ ಕೊಪ್ಪವೆಂಬ ಅಂಚಿನ ಸಂಸ್ಕೃತಿ ಬಹುಸಂಖ್ಯಾತ ಜನರಿದ್ದಾರೆ. ಭೋಗನಹಳ್ಳಿಯನ್ನು ಊರು ಎಂದು ಕರೆಯುವ ಹಾಗೆ ಕೊಪ್ಪವನ್ನು ಕರೆಯಲು ಬರುವುದಿಲ್ಲ. ಶೋಷಣೆ ಮಾಡುವವರು ಸಂಘಟಿತರಾಗಿರುವಂತೆ ಶೋಷಿತರು ಆಗಿರುವುದಿಲ್ಲ. ಜೊತೆಗೆ ಇಲ್ಲಿನ ಸಮುದಾಯಕ್ಕೆ ಶೋಷಣೆ ಎಂಬುದರ ಅರ್ಥವೇ ಹೊಳೆಯದಿರುವುದು, ಅದು ಕೇವಲ ಚೋಮನಿಗೆ ಮಾತ್ರ ಸೀಮಿತವಾಗಿರುವುದು. ಸ್ವತಃ ಅವನ ಮಕ್ಕಳಿಗೂ ತಿಳಿಯದೇ ಹೋಗಿರುವುದನ್ನು ಗಮನಸಬೇಕು. ಆಗ ಚೋಮನ ವ್ಯಕ್ತಿಗತ ಹೋರಾಟದ ವ್ಯರ್ಥ ಪ್ರಯತ್ನ ಗೊತ್ತಾಗುತ್ತದೆ.

ಚೆಮ್ಮೀನಿನಲ್ಲಿ ಇದಕ್ಕಿಂತ ಭಿನ್ನವಾದ ಸಮಾಜವಿದೆ. ಅಲ್ಲಿ ಈರ್ಷೆ ಮತ್ಸರ ಎಲ್ಲಾ ಇದ್ದರು ಅವರು ಎಷ್ಟೇ ಜಗಳವಾಡಿದ್ದರೂ ಒಬ್ಬರ ಸಹಾಯಕ್ಕೆ ಒಬ್ಬರು ಒದಗಿಬರುತ್ತಾರೆ. ಒಬ್ಬರ ದುಃಖ ಇನ್ನೊಬ್ಬರ ದುಃಖವಾಗಿರುತ್ತದೆ. ಚಕ್ಕಿಯ ಆರೋಗ್ಯ ಕೆಟ್ಟಾಗ ಆಕೆಯ ಜೊತೆ ಜಗಳವಾಡಿದ್ದ ನಲ್ಲಪೆಣ್ಣು ಆಕೆಯ ಶುಶ್ರೂಷೆ ಮಾಡುತ್ತಾಳೆ. ಆಕೆ ಸತ್ತ ನಂತರ ಚಕ್ಕಿಯ ಮಗಳು ಪಂಚಮಿಯನ್ನು ಸಾಕುತ್ತಾಳೆ. ಚಂಪನ್‌ಕುಞ್ಞುವಿನ ಸ್ನೇಹಿತರು ಆತನಿಗೆ ಎರಡನೇ ಮದುವೆ ಮಾಡಿಸುತ್ತಾರೆ. ಆದರೆ ಗಮನಿಸಬೇಕಾದ ಸಂಗತಿಯೆಂದರೆ ಕಷ್ಟದಲ್ಲಿ ಒಂದಾಗುವ ಮಂದಿ ಶ್ರೀಮಂತಿಕೆ ಬಂದಾಗ ದೂರ ಸರಿಯುವುದು ಒಂದು ಜೀವಂತ ಸ್ವಸ್ಥ ಮಾನವ ಸಮಾಜದ ಪ್ರತೀಕವಾಗಿದೆ.

ಚೋಮನದುಡಿಯಲ್ಲಿ ದುಡಿಯ ಪ್ರತಿಮೆ ಚೋಮನ ನೋವು ನಲಿವುಗಳನ್ನು ಮಾತಿಗೆ ಮೀರಿದ ಆರ್ತತೆಯನ್ನು ಶಕ್ತವಾಗಿ ಪ್ರತಿನಿಧಿಸುವ ಒಂದು ಸಂಕೇತವಾಗಿದೆ. ಆರೋಗ್ಯಕರ ವ್ಯಕ್ತಿಯನ್ನಾಗಿ ಚೋಮನನ್ನು ಹಿಡಿದಿಡುವ ಸಾಂಸ್ಕೃತಿಕ ಸಾಧನವೂ ಆಗಿದೆ. ಚೋಮನ ಜೀವನದ ನಡವಳಿಕೆಗಳಿಗೆ ಖಚಿತತೆ ಲಭ್ಯವಾಗುವುದು ಈ ಸಾಧನದಿಂದಲೇ. ಚೋಮ ಹಾಗೂ ಆತನ ದುಡಿ ಅಭೇದವಾದದ್ದು, ಆತನ ಸಮಾಜಕ್ಕೆ ಮೀರಿದ ಬಯಕೆಯ ಒಳಗೂ ಅಧಃಪತನ ಕಾಣದ ವ್ಯಕ್ತಿತ್ವ ಚೋಮನದು. ಆದರೆ ಚಂಪನ್‌ಗೆ ಕಾದಂಬರಿಯಲ್ಲಿ ಇಂತಹ ಸಾಂಸ್ಕೃತಿಕ ಸಾಧನವಿಲ್ಲ, ಆದುದರಿಂದಲೇ ಆತ ಹೆಂಡತಿ ಸತ್ತ ತಕ್ಷಣ ಎರಡನೇ ಮದುವೆ ಮಾಡಿಕೊಳ್ಳುತ್ತಾನೆ. ಆಕೆಯಿಂದ ಲಭಿಸುವ ದೈಹಿಕ ಸುಖದ ಬಗ್ಗೆ ಆಲೋಚಿಸುತ್ತಾನೆ. ತನಗೆ ದೈಹಿಕ ಸುಖ ಸಿಗದಿದ್ದಾಗ ಕೊರಗಿ ನಿಃಶಕ್ತನಾಗುತ್ತಾನೆ. ಅವನಿಗೆ ಆಗುವ ಪ್ರತಿಯೊಂದು ಆಘಾತದಿಂದಲೂ ಹೊರಬರಲು ಆತನಿಗೆ ಸಾಧ್ಯವಾಗುವುದಿಲ್ಲ. ಚೋಮ ಎರಡನೇ ಮದುವೆ ಬಗ್ಗೆ

ಆಲೋಚಿಸಿದಂತೆ ಕಂಡು ಬರುವುದಿಲ್ಲ. ಚಂಪನ್‌ಕುಞ್ಞಿವಿಗೆ ಈ ಸಾಂಸ್ಕೃತಿಕ ಸಾಧನವಿಲ್ಲದೇ ಇರುವುದು ಕಾದಂಬರಿಯ ರಚನೆಯಕಾಲದ ಅಂತರದ ಹಿನ್ನೆಲೆಯಲ್ಲಿ ನೋಡಬಹುದು.

ಎರಡು ಕಾದಂಬರಿಗಳ ಅಂತ್ಯ ಸೊಗಸಾದ ಒಳವಿನ್ಯಾಸ ಹೊಲಿಕೆಗಳನ್ನು ಹೊಂದಿದೆ. ಚೋಮನದುಡಿಯಲ್ಲಿ ಚೋಮ ಮತಾಂತರಕ್ಕೆ ಹೋಗಿ ಪೆಂಜೂರ್ಲಿಯ ಗುಡಿಯಿಂದ ಮನಸ್ಸು ಬದಲಾಯಿಸಿ ಮನೆಗೆ ಹಿಂದಿರುಗುತ್ತಾನೆ. ಆಗ ಅವನಿಗೆ ತನ್ನ ಮಗ ಕ್ರೈಸ್ತ ಧರ್ಮಕ್ಕೆ ಸೇರಿದ್ದು, ತಾನು ಸೇರಲು ನಿರ್ಧರಿಸಿದ್ದು ತಪ್ಪು ಎನಿಸುತ್ತದೆ. ಅದೇ ಮನಃಸ್ಥಿತಿಯಲ್ಲಿ ಮನೆಗೆ ಹಿಂದಿರುಗಿದ ಚೋಮ ಮನ್ವೇಲನ ಜೊತೆಯಲ್ಲಿರುವ ಬೆಳ್ಳಿಯನ್ನು ನೋಡುತ್ತಾನೆ. ಬೆಳ್ಳಿಯ ಈ ದ್ರೋಹ ಅವನನ್ನು ಘಾಸಿಗೊಳಿಸುತ್ತದೆ. "ಕಣ್ಣೆದುರಿಗೆ ಮನ್ವೇಲನು ಬೆಳ್ಳಿಯು ಒಂದೇ ಚಾಪೆಯ ಮೇಲೆ ಕುಳಿತು ಮಾತನಾಡುತ್ತಿದ್ದರು. ನೋಡಿಯೇ ಮೈ ಕಂಪಿಸಿತು. ಕುಳಿತವರು ಕುಪ್ಪಳಿಸಿ ಜಿಗಿದು ನಿಂತರು. ಚೋಮ ಎದುರುನಿಂದ ಅವರನ್ನು ದುರುದುರನೆ ನೋಡುತ್ತಿದ್ದ. ಒಮ್ಮೆಗೆ ಉಸಿರುಗರೆದು.... ಅವನು ಪ್ರಾಣದಾಸೆಯಿಂದ ಹೊರಕ್ಕೆ ಓಡಿಹೋದ. ಅಲ್ಲಿ ನಿಲ್ಲಲಿಲ್ಲ. ಬೆಳ್ಳಿಯನ್ನೇನು ಮಾಡಲೆಂದು ತೋರಲಿಲ್ಲ. ಅವಳ ಕೈಯನ್ನು ಗಭಕ್ಕನೇ ಹಿಡಿದ ಬೆಳ್ಳಿ ಮೈ ಬೆವರಿಂದ ಒದ್ದೆಯಾಗಿತ್ತು. ಹಾಗೆಯೇ ನಿಂತು ಮಂಕನಂತೆ ನೋಡಿದ. ಅವಳ ಕತ್ತನ್ನು ಅಮುಕಿ ಹಿಡಿದು ಮೂಕನಂತೆ ಅವಳನ್ನು ಚುಂಬಿಸಿದ. ಅವನ ವಿಕಟನಗು ಹೆಚ್ಚಿದಂತೆ ಬೆಳ್ಳಿಯ ಪಂಚವಾಯಿಗಳು ಕ್ಷೀಣಿಸುತ್ತಾ ಹೋದವು. ಕೊನೆಗೆ ಚೋಮ ಅವಳ ಕತ್ತನ್ನು ಎಳೆದು ಹೊರಕ್ಕೆ ತಳ್ಳಿ ಮನೆಯ ಕದವನ್ನು ಎಳೆದುಕೊಂಡ" ಅನಂತರ ಕಾದಂಬರಿಯಲ್ಲಿ ಬರುವ ಎಲ್ಲಾ ವಿವರಗಳು ತುಂಬಾ ಮುಖ್ಯವಾದವು ಜಿ.ಎಸ್.ಅಮೂರ ಗುರುತಿಸುವಂತೆ "ಚೋಮನ ಪ್ರತಿಯೊಂದು ಕ್ರಿಯೆಯು ವಿಧ್ಯುಕ್ತ ಕ್ರಿಯೆಯ ರೂಪದಲ್ಲಿರುವುದನ್ನು ನೋಡಿದಾಗ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನಂಬಿಕೆಗಳು ಅವನ ಮನಸ್ಸಿನಲ್ಲಿ ಎಷ್ಟು ಆಳಕ್ಕಿಳಿದವುಗಳನ್ನೆವುದು ಗೊತ್ತಾಗುತ್ತದೆ. ಎಲ್ಲಾ ಆಸೆಗಳಿಂದಲೂ ಮುಕ್ತಿ ಪಡೆದು ತನ್ನ ಎಲ್ಲಾ ಋಣ ಸಲ್ಲಿಸಿ ಬರುವ ಸಾವಿಗೆ ಆತನು ಸಿದ್ಧನಾಗುತ್ತಾನೆ[೧] ಕೊನೆಗೆ "ಒಮ್ಮೆಗೆ ದುಡಿಯನ್ನು ಹಿಡಿದು ಬಾರಿಸ ತೊಡಗಿದ ಆ ಆನಂದ ಇತರರಿಗೆ ಸಿಗಬಾರದೆಂದೋ ಏನೋ ಕದವನ್ನು ಮರೆಮಾಡಿ ಬಂದು ತನ್ನ ದುಡಿ ಬಾರಿಸಲು ಕುಳಿತ. ಆ ದಿನದಂತೆ ದುಡಿಯನ್ನು ಅವನು ಈ ಜೀವಮಾನದಲ್ಲೇ ಬಾರಿಸಿರಲಿಲ್ಲ. ಇನ್ನು ಬಾರಿಸುವಂತಿಲ್ಲ. ತೀರ ಸ್ವಲ್ಪ ಹೊತ್ತು ಬಾರಿಸಿದ. ಆದರೆ ನಿಜಕ್ಕೂ ಅದು ಪ್ರಳಯ ತಾಂಡವದ ಢಮರು ನಿನಾದ ! ದುಡಿಯ ಢಮ್ ಢಮ್ ಒಮ್ಮೆಗೆ ನಿಂತಿತು. ಚೋಮನ ಹೃದಯದ ಬಡಿತವು ನಿಂತಿತು. ಅದು ಒಮ್ಮೆಗೆ ನಿಂತಿತು[೨] ಚೋಮನಿಗೆ ತಮ್ಮ ಮಗಳ ಮೇಲೆ ಇಟ್ಟಿದ್ದ ನಂಬಿಕೆ ಮುರಿದ ಮೇಲೆ ಜೊತೆಗೆ ಎಲ್ಲರನ್ನು ಕಳೆದುಕೊಂಡಿದ್ದಾಗ ಆದ ಆಘಾತವನ್ನು ಹೇಗೋ ತಾಳಿಕೊಂಡಿದ್ದ. ಬೆಳ್ಳಿಯ ಮನ್ವೇಲನ ಜೊತೆಗಿನ ಸ್ಥಿತಿ ಆತನನ್ನು ಪರಕೀಯ ಸ್ಥಿತಿಗೆ ತಳ್ಳಿಬಿಡುತ್ತದೆ. ಆದುದರಿಂದ ಆತನಿಗೆ ಸಾವೇ ಬಿಡುಗಡೆಯ ದಾರಿಯಾಗಿ ಕಾಣಿಸುವ ಈ ಸನ್ನಿವೇಶ ತುಂಬಾ ಸೊಗಸಾಗಿ ಕಾದಂಬರಿಯಲ್ಲಿ ಬಂದಿದೆ.

ಚೆಮ್ಮೀನಿನಲ್ಲಿ ಪಾಪ್ಪಿಕುಞ್ಞ ಹಾಗೂ ಅಕ್ಕಪಕ್ಕದವರ ಮನೆಯವರಿಂದ ಕರುತ್ತಮ್ಮ ಮತ್ತು ಪರೀಕುಟ್ಟಿಯ ಸಂಬಂಧ ಚಂಪನ್‌ಗೆ ತಿಳಿಯುತ್ತದೆ. ಅದುವರೆಗೆ ಚಂಪನ್‌ಗೆ ಈ ವಿಷಯ ಗೊತ್ತಿಲ್ಲ. ಅನಂತರ ಆತ ಪರೀಕುಟ್ಟಿಯು ದೋಣಿ ಬಲೆ ಕೊಂಡುಕೊಳ್ಳುವಾಗ ಮಾಡಿದ ಸಹಾಯ ಮತ್ತು ಆತನ ನಡವಳಿಕೆ ಈಗ ಅರ್ಥವಾಯಿತು. ಈ ಸಂಗತಿಗಳು ಗೊತ್ತಾಗಿ ಚಂಪನ್ ಹುಚ್ಚನಾಗುತ್ತಾನೆ. ಚಂಪನ್ ತನ್ನ

---

೧ ಕನ್ನಡ ಕಥನ ಸಾಹಿತ್ಯ : ಕಾದಂಬರಿ ಜಿ.ಎಸ್. ಅಮೂರ ಪುಟ ೯೩

೨. ಚೋಮನದುಡಿ ಪುಟ ೧೦೩-೧೦೪

ಮಹಾತ್ವಾಕಾಂಕ್ಷೆಯ ದೋಣಿಬಲೆಯನ್ನು ·ರಿಪೇರಿ ಮಾಡಲು ಜೊಸೆಫ್‌ನಿಂದ ತಂದ ಸಾಲದ ಹಣವನ್ನು ತೆಗೆದುಕೊಂಡು ಹೋಗಿ ಪರೀಕುಟ್ಟಿಗೆ "ನಿನಗೆ ಎಷ್ಟು ರೂಪಾಯಿ ಕೊಡಬೇಕು... ಎಷ್ಟಯ್ಯ ?

ಉತ್ತರವಿಲ್ಲ, ತಪ್ಪಿತಸ್ಥನಂತೆ ನಿಂತಿದ್ದ ಪರೀಕುಟ್ಟಿ ಚಂಪನ್‌ಕುಞ್ಞಾ ಹೇಳಿದ

ನೀನು ಒಳ್ಳೆಯ ಮನುಷ್ಯ ಎಂದಿದ್ದೆ ನಾನು ! ನೀನು... ನೀನು ಅಂತಹವನಲ್ಲ

ನೀನು ಆ ಹೊತ್ತು ಹಣ ಕೊಟ್ಟದ್ದು ನನ್ನ ಮಗಳ ಮೇಲೆ ಒಂದು ಕಣ್ಣು ಇರಿಸಿ ಅಲ್ಲವೇನೋ ? ಅಲ್ಲ ಎಂಬ ಉತ್ತರ ಗಂಟಲವರೆಗೆ ಏರಿ ಬಂತು. ಆದರೆ ಅದರಾಚೆ ಬರಲಿಲ್ಲ...

ಲೋ ನಮಗೆ ಎಂಥಾ ದ್ರೋಹ ಮಾಡಿದೆ ಎಂಬುದು ನಿನಗೇನಾದರು ತಿಳಿದಿರಿದಿಯೇ ?

ಪರೀಕುಟ್ಟಿ ಕಲ್ಲಿನ ಗೊಂಬೆಯಂತೆ ನಿಂತಿದ್ದ. ನಿರ್ವಿಕಾರನಾಗಿ ನಿಶ್ಚಿಂತೆಯಿಂದ... ಚಂಪನ್‌ಕುಞ್ಞಾವಿನ ಕಣ್ಣಲ್ಲಿ ಹನಿಗೂಡಿತು.

"ನೀನು ಒಂದು ಸಂಸಾರನ ಚೂರು ಚೂರು ಮಾಡಿದೆ. ನನ್ನ ಬದುಕನ್ನೇ ಹಾಳು ಮಾಡಿದೆ. ಎಷ್ಟು ಜನರನ್ನು ನೀನು ನಾಶ ಮಾಡಿದೆ ಗೊತ್ತೇನೊ.[1] ಚಂಪನ್ ಮಾತುಗಳಲ್ಲಿ ಆತನಿಗೆ ಅದ ಆಘಾತ ನೋವುಗಳು ಹೊರಹೊಮ್ಮಿವೆ. ಮುಂದೆ ತಾನು ಪ್ರೀತಿಯಿಂದ ತನ್ನ ಜೀವಮಾನದ ಸಾಧನೆಯೆಂದು ತೆಗೆದುಕೊಂಡು ಬಂದ ತಳ ಒಡೆದ ದೋಣಿಯಲ್ಲಿ ಹೋಗಿ ಮಲಗುತ್ತಾನೆ." "ಆಗ ಫಳಕ್ಕನೆ ಘೊಳ್ಳೆಂದು ಯಾರೊ ನಕ್ಕರು. ಅದನ್ನು ಕೇಳಿ ಪರೀಕುಟ್ಟಿ ಬೆಚ್ಚಿದ. ತುಸು ದೂರದಲ್ಲೆ ಕಂಡನ್‌ಕೋರನಿಂದ ಚಂಪನ್‌ಕುಞ್ಞಾ ಕೊಂಡು ತಂದ ದೋಣಿಯನ್ನು ಮರಳ ಮೇಲೆ ಎಳೆದು ಇರಿಸಿದ್ದರು ಅದು ಅಲ್ಲಿ ಮಲಗಿ ಎಷ್ಟೊ ತಿಂಗಳು ಆಯಿತು. ಅದರ ಚುಕ್ಕಾಣಿ ತುದಿ ಎತ್ತರದಲ್ಲೂ, ಮತ್ತೊಂದು ತುದಿ ತಗ್ಗಿನಲ್ಲು ಇತ್ತು. ಅರ್ಧ ಎದ್ದು ಕುಳಿತ ಅದು ದಿಗಂತದಾಚೆ ಕಡಲಿನ ನಡುವೆ ಯಾವುದೇ ಒಂದನ್ನು ಹುಡುಕುತಿದ್ದಂತೆ ಭಾಸವಾಗುವುದು.... ಅದರ ಒಂದು ತುದಿ ಮರಳೊಳಗೆ ಹೂತಿತ್ತು, ನಾನು ಹಾಳಾದೆ ಎಂದು ಕೊರಗುತ್ತಿದ್ದು ಆ ದೋಣಿಯ ಕೆಳಗಿಂದ ಘೋಳ್ಳೆಂದು ನಗು ಚಿಮ್ಮಿತು ಅನಾಹುತ ಪರಂಪರೆಯಿಂದ ನಿರಾಶೆಯಿಂದ ಎದ್ದ ನಗು ಅದು. ಚಂಪನ್‌ಕುಞ್ಞುವಿನ ನಗು ಅದು.. ಈ ಇಬ್ಬರ ಪರಕೀಯ ಸ್ಥಿತಿಯ ಪ್ರಜ್ಞೆಯಿಂದ ಹುಟ್ಟಿದ ಈ ಸ್ಥಿತಿಯನ್ನು ಈ ಸನ್ನಿವೇಶಗಳು ಚೆನ್ನಾಗಿ ಚಿತ್ರಿಸಿ. ಕರುತ್ತಮ್ಮನ ಗಂಡನಾದ ಪಳನಿಯ ಸಮುದ್ರದಲ್ಲಿನ ಅಂತ್ಯವನ್ನು ಹೀಗೆಯೇ ಮನೋ ವಿಜ್ಞಾನದ ದೃಷ್ಟಿಯಲ್ಲಿ ವಿವರಿಸಬಹುದು. ಇಂತಹ ನೋವನ್ನೆಲ್ಲಾ ಚೋಮನದುಡಿಯೊಂದೆ ಶಕ್ತವಾಗಿ ಧ್ವನಿಸುತ್ತದೆ. ಇಂತಹ ಅನೇಕ ಸಾದೃಶ್ಯ ವೈದೃಶ್ಯಗಳ ಹೋಲಿಕೆಯನ್ನು ಈ ಎರಡು ಕೃತಿಗಳು ತಮ್ಮ ಸಂರಚನಾ ವಿನ್ಯಾಸದಲ್ಲಿ ಹೊಂದಿವೆ.

✦✦✦✦✦✦✦

೧ ಕೆಂಪು ಮೀನು (ಚೆಮ್ಮೀನು) ಪುಟ ೨೩೪, ೩೫, ೩೬

೨. ಅದೇ : ಪುಟ ೨೩೯

ಅಧ್ಯಾಯ – ೬

ಪಾತ್ರಗಳ ತೌಲನಿಕ ಅಧ್ಯಯನ

ಕಾದಂಬರಿಯಲ್ಲಿ ಪ್ರಮುಖವಾಗಿ ವಸ್ತುವೊಂದು ಇದ್ದೆ ಇರುತ್ತದೆ. ಅದು ಸರಳವಾಗಿರಬಹುದು ಅಥವಾ ಸಂಕೀರ್ಣವಾಗಿರಬಹುದು. ವಸ್ತು ಯಾವುದೋ ಒಂದು ಸಂಘರ್ಷವನ್ನು ಏರ್ಪಡಿಸಿಕೊಂಡಿರುತ್ತದೆ. ಇಂತಹ ಸಂಘರ್ಷವನ್ನು ಅರ್ಥ ಮಾಡಿಕೊಳ್ಳಲು ಕಾದಂಬರಿಯ ಪ್ರಮುಖ ಪಾತ್ರಗಳ ಬೆಳವಣಿಗೆಯ ಸ್ವರೂಪವನ್ನು ಅಧ್ಯಯನ ಮಾಡಬೇಕಾಗುತ್ತದೆ. ಇದು ಲೇಖಕ ವಸ್ತುವನ್ನು ನಿರ್ವಹಿಸುವ ರೀತಿಯನ್ನು ತೋರಿಸುತ್ತದೆ. ಅನೇಕ ಬಾರಿ ಕೃತಿಯ ವಸ್ತುವೇ ಸಹಜವಾಗಿ ಪಾತ್ರದ ಮುನ್ನಡೆಯನ್ನು ಕಂಡುಕೊಳ್ಳುತ್ತದೆ. ಕೆಲವೊಮ್ಮೆ ಲೇಖಕನೇ ಮಧ್ಯ ಪ್ರವೇಶ ಮಾಡಿ ಪಾತ್ರವನ್ನು ತನ್ನಿಷ್ಟದಂತೆ ನಡೆಸಿ ವಸ್ತುವನ್ನು ತನ್ಮೂಲಕ ನಿಯಂತ್ರಿಸುವ ಕೆಲಸವನ್ನು ಮಾಡುತ್ತಾನೆ.

ಈ ನಿಬಂಧದಲ್ಲಿ ಚೋಮನದುಡಿ ಹಾಗೂ ಚೆಮ್ಮೀನಿನ ಕೃತಿಗಳ ಪ್ರಮುಖ ಪಾತ್ರಗಳನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡಲಾಗಿದೆ. ಇದು ಈ ಕೃತಿಗಳ ಒಟ್ಟು ಆಶಯಕ್ಕೆ ಅನುಗುಣವಾಗಿಯೇ ಇದೆ. ಎರಡು ಕಾದಂಬರಿಗಳ ವಸ್ತು ಮತ್ತು ಆಶಯವನ್ನು ಈ ಹಿಂದಿನ ಅಧ್ಯಯನದಲ್ಲಿ ನೋಡಿದ್ದೇವೆ. ಜಾತಿ, ಬಡತನ, ಮೌಢ್ಯ, ಪರಂಪರೆ, ಸಾಮಾಜಿಕ ನಂಬಿಕೆ, ವಾಸ್ತವವನ್ನು ಮೀರಿದ ನಾಯಕನ ಹಂಬಲ ಹೇಗೆ ದುರಂತಕ್ಕೆ ಕಾರಣವಾಗುತ್ತದೆ ಎಂಬುದು ಈ ಎರಡು ಕಾದಂಬರಿಗಳ ವಸ್ತು. ಇದು ಚೋಮನದುಡಿಯಲ್ಲಿ ನೇರವಾಗಿ ಗೋಚರಿಸಿದರೆ, ಚೆಮ್ಮೀನಿನಲ್ಲಿ ಅಂತರ್‌ಗತವಾಗಿದೆ. ಇದರ ಕೇಂದ್ರದ ಸಂಘರ್ಷವನ್ನು ಎರಡು ಕಾದಂಬರಿಗಳ ಪಾತ್ರಗಳ ಸಾದೃಶ್ಯ ವೈದೃಶ್ಯಗಳಲ್ಲಿ ನೋಡಬಹುದಾಗಿದೆ.

ಚೋಮ ಮತ್ತು ಚಂಪನ್

ಚೋಮನದುಡಿ ಹಾಗೂ ಚೆಮ್ಮೀನು ಕೃತಿಗಳ ಉದ್ದೇಶಕ್ಕೆ ಬದ್ಧವಾಗಿ, ಜಾತಿಯ ವಿಷವರ್ತುಲಕ್ಕೆ ಸಿದ್ಧವಾಗಿ, ತನ್ನದೇ ರೀತಿಯಲ್ಲಿ ಪ್ರತಿಭಟಿಸುವುದರ ಮೂಲಕ ಚೋಮ ಮತ್ತು ಚಂಪನ್‌ಕುಞ್ಞ ಕಾದಂಬರಿಯ ಕೇಂದ್ರವಾಗಿ ಪರಿಣಮಿಸುತ್ತಾರೆ. ಈ ಪಾತ್ರಗಳ ಬೆಳವಣಿಗೆಗಳ ಅವಲೋಕನದ ಮೂಲಕ ಕಾದಂಬರಿಯ ಹಾಗೂ ಕಾದಂಬರಿಕಾರನ ಉದ್ದೇಶಗಳ ಮೇಲೂ ಬೆಳಕು ಬೀರುವುದು ಸಾಧ್ಯ. ಭೋಗನಹಳ್ಳಿ ಒಂದು ನೀರವ ನಿರುತ್ಸಾಹ ಜಡತೆಯನ್ನು ಹೊಂದಿರುವ ಒಂದು ಹಳ್ಳಿ. ಇಲ್ಲಿ ಬದಲಾವಣೆಯ ಗಾಳಿ ಬೀಸುವುದಿಲ್ಲ. ಅಂತಹ ಜಡ ಪ್ರಪಂಚವನ್ನು ಒಮ್ಮೆಲೆ ಎಚ್ಚರಿಸುವ, ಈ ಗೂಢ ನೀರವವನ್ನು ಹರಿದು ಚೂರಾಗಿಸುವ ಒಂದು ವಿಚಿತ್ರ ಧ್ವನಿ ಕೇಳಿಸುತ್ತದೆ. ಅದು ಭೋಗನಹಳ್ಳಿಯ ಹೊರ ವಲಯದಲ್ಲಿರುವ ಕೊಂಪೆಯಿಂದ ಬರುವ ಧ್ವನಿ. ಆ ಧ್ವನಿ ಅಕಸ್ಮತ್ ಆ ರಸ್ತೆಯಲ್ಲಿ ಬರುವ ಹೊಸಬರು ದಿಕ್ಕು ತೊಚದೇ ಓಡಬೇಕು ಅಂತಹ ಧ್ವನಿಯದು, ಈ ಧ್ವನಿ "ಆ ಸ್ವರಗತ ಆವೇಗ ಜೋರಾಗಿ ಸರಿದು ಪ್ರಾಣ ಬಿಡಲಿರುವ ಪ್ರಾಣಿಯೊಂದರ ಎದೆಮಿಡಿತದಂತೆ ಕೇಳುತ್ತದೆ.... ಅದು ಮುರಿದು ಬಿದ್ದರೆ ಪ್ರಳಯಕ್ಕೆ ಇನ್ನು ಒಂದು ಗಳಿಗೆಯು ಉಳಿದಿಲ್ಲವೆನಿಸುತ್ತದೆ.... ಅದರ ಹಿಂದೆ

ಧ್ವನಿಯನ್ನು ಮೊಳಗಿಸುವ ಒಂದು ಅದ್ಭುತ ಶಕ್ತಿಯು ಇರುವಂತೆ ಕಾಣಿಸುತ್ತದೆ. ಬರಿಯ ಊಹೆಯಿಂದ ಅದು ಇಂತದೆಂದು ಹೇಳುವಂತಿಲ್ಲ.

ದುಡಿಯ ಮೂಲಕ ಈ ಧ್ವನಿಯನ್ನು ಹೊರಡಿಸುವ ಚೋಮನ ಸ್ಥಿತಿ ಆತನೊಳಗೆ ಇರುವ ಅದ್ಭುತ ನೋವು, ದುಃಖ, ದುಮ್ಮಾನಗಳ ಶಕ್ತಿ ಊಹೆಗೆ ನಿಲುಕದ್ದು. ಚೋಮನ ಒಳಗಿನ ಶಕ್ತಿ ಈ ಜಡ ಪ್ರಪಂಚದ ನಿಯಮಕ್ಕೆ ಆಳಾಗಿ ನಲಿಯುವ ಸಂಗತಿಯಲ್ಲ. ಏಕ ಕಾಲದಲ್ಲಿ ದುಡಿ ಮತ್ತು ಚೋಮನ ಈ ಅಭೇದವಾದ ವರ್ಣನೆ ಚೋಮನ ಪಾತ್ರದ ಅಗಾಧತೆಯನ್ನು ಅದ್ಭುತವಾಗಿ ತೆರೆದು ತೋರಿಸುತ್ತದೆ. ಚೋಮನಿಗೆ ಐದು ಜನ ಮಕ್ಕಳು. ಅವರಲ್ಲಿ ನಾಲ್ಕು ಗಂಡು ಮತ್ತು ಒಂದು ಹೆಣ್ಣು. ಚನಿಯ, ಗುರುವ, ನೀಲ, ಕಾಳರು ಗಂಡುಮಕ್ಕಳಾದರೆ, ಬೆಳ್ಳಿ ಹೆಣ್ಣುಮಗಳು. ಬೆಳ್ಳಿ ಎಂದರೆ ಚೋಮನಿಗೆ ಪ್ರಾಣ. ಆತನ ಮನೆಯಲ್ಲಿ ಒಂದು 'ಬಾಡು' ನಾಯಿ ಮತ್ತು ಒಂದು ಜೊತೆ ಕಾಡಿನಲ್ಲಿ ಸಿಕ್ಕ ಕರುಗಳು. ಈಗ ಅವು ಎತ್ತುಗಳಾಗಿವೆ. ಚೋಮ ಸಂಕಪ್ಪಯ್ಯನವರ ಮನೆಯಲ್ಲಿ ಅವರ ಮೂಲದ ಆಳು.

ಚೋಮನಿಗೆ ವಯಸ್ಸೆಷ್ಟು ಎಂದೂ ತಿಳಿಯದ ಅಜ್ಞಾನ. ತಿನ್ನಲು ಏನೂ ಇಲ್ಲದ ಬಡತನ. ಆತನಿಗೆ ಹೆಂಡತಿ ಸತ್ತು ಬಹಳದಿನಗಳಾಗಿವೆ. ಆದರೆ ಚೋಮನ ಕುಟುಂಬದಲ್ಲಿ ಒಂದು ಹೂವಿನ ಎಸಳುಗಳಲ್ಲಿರುವ ಅನ್ಯೋನ್ಯವಿದೆ. ಮೊದಲ ಅಧ್ಯಾಯದಲ್ಲಿ ಚೋಮನ ವ್ಯಕ್ತಿತ್ವದ ಅನಾವರಣ ಶಕ್ತವಾಗಿ ಬಂದಿದೆ. ಜಡ ಪ್ರಪಂಚವಾದ ಭೋಗನಹಳ್ಳಿಯ ಪಕ್ಕದ ಪಂಜದಲ್ಲಿ ನಡೆಯುವ ವಿಜೃಂಭಣೆಯ ಜಾತ್ರೆಗೆ ಹೋಗಿ ತಿನ್ನಲು, ಕುಡಿಯಲು, ದುಡ್ಡಿಲ್ಲದೇ ಚೋಮ ಅರ್ಧದಲ್ಲಿ ಮನೆಗೆ ವಾಪಸ್ಸು ಬಂದಿದ್ದಾನೆ. ಆ ನೋವಿನಲ್ಲಿ ದುಡಿ ಬಾರಿಸುತ್ತಾನೆ. ಈತ ಬಾರಿಸುವ ದುಡಿಯ ಶಬ್ದದಿಂದ ಜಾತ್ರೆ ಮುಗಿಸಿಕೊಂಡು ಬರುವ ಭೋಗನಹಳ್ಳಿಯ ಜಮೀನ್ದಾರರಾದ ಉಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾದ ಸಂಕಪ್ಪಯ್ಯ ಒಮ್ಮೆಗೆ ನಿಂತುಬಿಡುತ್ತಾರೆ. ನಂತರ ಅದು ಚೋಮನದುಡಿ ಎಂದು ತಿಳಿದ ಮೇಲೆ ನಕ್ಕು ಮುಂದುವರೆಯುತ್ತಾರೆ. ಚೋಮನ ನೋವು ಸಂಕಪ್ಪಯ್ಯನವರಿಗೆ ನಕ್ಕು ಮುಂದುವರೆಯುವ ಒಂದು ಸಂಗತಿಯಷ್ಟೆ.

ಚೆಮ್ಮೀನಿನಲ್ಲಿ ಚಂಪನ್‌ಕುಞ್ಞುವಿನ ಬದುಕಿನ ವಿಸ್ತೃತ ಪರಿಚಯವೇನೂ ಬರುವುದಿಲ್ಲ. ಇಂತಹ ಬದಲಾಗದ ಜಗತ್ತೇನು ಅಲ್ಲ ನೀರ್ಕುನ್ನಿ. ಅದೊಂದು ಕಡಲ ತೀರದ ಹಳ್ಳಿ, ಅದೊಂದು ವ್ಯವಸ್ಥಿತ ಪ್ರಪಂಚ. ಚೋಮನಂತೆ ಕೊಂಪೆಯಲ್ಲ. ಚಂಪನ್ ರಾಮನ್‌ಕುಞ್ಞುವಿನ ಹತ್ತಿರ ದೋಣಿ ನಡೆಸುವ ಬೆಸ್ತ. ಆತನಿಗೆ ಹೆಂಡತಿ ಚಕ್ಕಿ, ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಹಿರಿಯ ಮಗಳು ಕರುತ್ತಮ್ಮ, ಕಿರಿಯ ಮಗಳು ಪಂಚಮಿ. ಈತನ ಸ್ಥಿತಿ ಚೋಮನಷ್ಟು ಶೋಷಿತವಾದುದ್ದಲ್ಲಾ. ಆದರೆ ಅಷ್ಟು ಸ್ಥಿತಿವಂತನು ಅಲ್ಲ. ಚಂಪನ್ ಚೋಮನಂತೆ ತನ್ನ ವಯಸ್ಸನ್ನೇ ತಿಳಿಯದ ಅಜ್ಞಾನಿ ಅಲ್ಲ. ಈತನಿಗೆ ದುಃಖವಾದಾಗ ಹೆಂಡತಿ ಚಕ್ಕಿಯ ಹತ್ತಿರ ಹೇಳಿಕೊಳ್ಳುತ್ತಾನೆ. ಈತನಿಗೆ ಚೋಮನಿಗೆ ಇರುವಂತೆ ಸಾಂಸ್ಕೃತಿಕ ಸಾಧನವಾದ ದುಡಿಯ ಪ್ರತಿಮೆ ಇಲ್ಲ.

ಚೋಮನ ಮನೆಯವರೆಲ್ಲ ಸಂಕಪ್ಪಯ್ಯನವರ ಮನೆಯಲ್ಲಿ ದುಡಿದರೆ ಎರಡು ಪಾವು ಅಕ್ಕಿ ಐದು ಪಾವು ಭತ್ತ ಬರುತ್ತದೆ. ಅದರಲ್ಲಿ ತನ್ನ ಪಾಲಿನ ಎರಡು ಪಾವು ಅಕ್ಕಿಯನ್ನು ಚೋಮ ಬಿರುಮಪೂಜಾರಿಯ ಹೆಂಡದ ಅಂಗಡಿಗೆ ಕೊಟ್ಟು ದಿನನಿತ್ಯ ಕುಡಿಯುತ್ತಾನೆ. ಅವಕಾಶವಾದಾಗ ಮಗಳು ಬೆಳ್ಳಿ ಹೆಣೆದ ಬಿದಿರಿನ ಬುಟ್ಟಿಗಳನ್ನು ಮಾರಿ ಕುಡಿಯುವ ಹಂಬಲ ಚೋಮನದ್ದು. ಆದರೆ ಮಿಕ್ಕ ಹೊಲೆಯರಂತೆ ತನ್ನ ಮಕ್ಕಳನ್ನು ಹೆಂಡದ ಅಂಗಡಿಗೆ ಕರೆದುಕೊಂಡು ಹೋಗುವುದಿಲ್ಲ. ಅದಕ್ಕೆ ಕಾರಣ ತನ್ನಂತೆ ಅವರು ಕುಡಿದರೆ ಮನೆಗೆ ಕಾಳೇ ಬರುವುದಿಲ್ಲವೆಂಬ ಕಾರಣ. ಆದರೆ ಆತನಿಗೆ ಹೆಂಡ ಕುಡಿಯುವುದು ತಪ್ಪಲ್ಲ, ತನ್ನ ಆರ್ಥಿಕ ಸ್ಥಿತಿ ದುಸ್ಥಿತಿಯಲ್ಲಿದ್ದರೂ, ಮನೆಯಲ್ಲಿ ದೀಪ ಹೊತ್ತಿಸಲು ಸಾಧ್ಯವಾಗದ ಬಡತನವಿದ್ದರೂ ಆತನ ಮಕ್ಕಳು ಕುಡಿಯಬಾರದು ಎಂಬ ಧೋರಣೆಯನ್ನು ತನಗೆ ಮಾತ್ರ ಅನ್ವಯಿಸಿಕೊಳ್ಳುವುದಿಲ್ಲ.

ಆದರೆ ಚಂಪನ್‌ಕುಞ್ಞ ಇದಕ್ಕಿಂತ ಭಿನ್ನ. ತನ್ನ ಸಂಪಾದನೆಯನ್ನೆಲ್ಲ ಜೋಪಾನ ಮಾಡಿ ಮನೆಯಲ್ಲಿ ಸಂಗ್ರಹಿಸುತ್ತಾನೆ. ಆತನೂ ಆಗಾಗ ಕುಡಿಯುತ್ತಾನೆ. ಆದರೆ ಅದು ಅವನ ಮೂಲ ಆದಾಯಕ್ಕೆ, ಆಸೆಗೆ ಚ್ಯುತಿ ಬರದಂತೆ. ಆತ ತನ್ನ ಆರ್ಥಿಕ ಸ್ಥಿತಿ ಸುಧಾರಿಸಲು ಪರೀಕುಟ್ಟಿಯಂತಹ ಹುಡುಗನ ಅನ್ಯಕಾರಣ ನಿಮಿತ್ತ ಕೊಡುವ ಹಣವನ್ನು ಪರಿಶೀಲಿಸದೇ ಪಡೆಯುವ ವ್ಯಕ್ತಿತ್ವ ಅವನದು. ಜೊತೆಗೆ ಹೆಂಡತಿ ಚಕ್ಕಿ, ಮೀನನ್ನು ಹೊತ್ತು ಪಡುವಲ ದಿಕ್ಕಿಗೆ ಕೊಂಡು ಮಾರಿ ಬರುವ ಹಣವನ್ನು ಗಂಡ ಹೆಂಡತಿ ಇಬ್ಬರೂ ಎಚ್ಚರಿಕೆಯಿಂದ ಸಂಗ್ರಹಿಸುತ್ತಾರೆ. ಚೋಮನದುಡಿಯಲ್ಲಿ ಬೆಳ್ಳಿ ಮಾತ್ರ ಆ ಮನೆಯ ಸ್ಥಿತಿಯ ಬಗ್ಗೆ ತಲೆ ಕೆಡಿಸಿಕೊಳ್ಳುವವಳು.

ಚೋಮನಿಗೆ ಕಳಸದಲ್ಲಿ ಕಾಫಿ ತೋಟದಲ್ಲಿ ಮಾಡಿರುವ ಸಾಲ ಮರೆತು ಹೋಗಿರುತ್ತದೆ. ಅದನ್ನು ಬಿಟ್ಟರೆ ಆತ ಸಾಲಗಾರನಲ್ಲ. ಸಾಲ ಕೊಡಲು ಯಾರೂ ಸಿದ್ಧರಿಲ್ಲ. ಆತನನ್ನು ನೋಡಿ ಯಾರು ಸಾಲ ಕೊಡುತ್ತಾರೆ? ಆದರೆ ಮುಂದೆ ಸೇರೆಗಾರ ಮನ್ವೇಲ ಬಂದು ಜ್ಞಾಪಿಸಿದ ಮೇಲೆ ಅದರ ಬಗ್ಗೆ ಚಿಂತಿಸುತ್ತಾನೆ. ಅದೇ ಅವನ ಬದುಕಿನ ವಿಪ್ಲವಕ್ಕೆ ಕಾರಣವಾಗುತ್ತದೆ. ಇತ್ತ ಚಂಪನ್‌ಗೆ ಸಾಲ ಪಡೆಯುವ ಚೈತನ್ಯವಿದೆ. ಯಾರ ಬಳಿ ಸಾಲಪಡೆಯಬೇಕು ಎಂಬ ಎಚ್ಚರವಿದೆ. ಪರೀಕುಟ್ಟಿಯಿಂದ ಸಾಲದ ರೂಪದ ಸಹಾಯವನ್ನು ಪಡೆಯುತ್ತಾನೆ. ಆದರೆ ಗೊತ್ತಿದ್ದರೂ ಅದನ್ನು ಹಿಂದಿರುಗಿಸಲು ಇಚ್ಛಿಸುವುದಿಲ್ಲ. ಅಷ್ಟು ಆಸೆಬುರುಕು ವ್ಯಕ್ತಿತ್ವ ಚಂಪನ್‌ಕುಞ್ಞವಿನದು. ಆದರೆ ಚೋಮನಿಗೆ ಅಂತಹ ಯಾವ ಆಲೋಚನೆಯೂ ಇಲ್ಲ.

ಚೋಮನಿಗೆ ಅವನ ಜೀವನದ ಮಹತ್ವದ ಬಯಕೆಯೊಂದಿದೆ. ಅದು ಅವನ ಕುತ್ತಿಗೆಯವರೆವಿಗೂ ಇದೆ. ತಾನು ನೆಲವನ್ನು ಉತ್ತು ಬೆಳೆಯಬೇಕೆಂಬುದು. ಆದರೆ ಆತನ ಜಾತಿಯವರು ಹಾಗೆ ಭೂಮಿಯನ್ನು ಉಳುಮೆ ಮಾಡಿದ ಪ್ರಸಂಗವಿಲ್ಲ. ಆ ಹಳ್ಳಿಯಲ್ಲಿ, ಆದರೆ ಪಕ್ಕದ ಹಳ್ಳಿಯ ಆತನ ಜಾತಿಗೆ ಸೇರಿದ ರೈತನೊಬ್ಬ ಸರ್ಕಾರಿ ದರಕಾಸು ಭೂಮಿಯನ್ನು ಪಡೆದು ಬೇಸಾಯ ಮಾಡುತ್ತಿರುವುದು ಅವನ ಆಸೆಯನ್ನು ಚಿಗುರಿಸಿದೆ. ಜೊತೆಗೆ ಕಾಡಿನಲ್ಲಿ ಸಿಕ್ಕಿರುವ, ಅವನ ಕಣ್ಣ ಮುಂದೆ ಬೆಳೆದಿರುವ ಎತ್ತುಗಳು ಹಾಗೂ ಅವನ

ಕಣ್ಣ ಮುಂದೆ ಕಾಣಿಸುವ ನೇಗಿಲ ಚಿತ್ರ ಅವನನ್ನು ಬೇಸಾಯಗಾರನಾಗುವಂತೆ ಒತ್ತಾಸೆಯನ್ನು ನೀಡುತ್ತವೆ. ಅವನ ಬಯಕೆಯನ್ನು ಹೆಚ್ಚಿಸುತ್ತವೆ.

ಚಂಪನ್‌ಕುಞ್ಞಗೆ ದೋಣಿ ಬಲೆ ಅವೆರಡು ಅವನ ಜೀವಿತದ ಪರಮೋದ್ದೇಶಗಳು, ಅವನ ಬಹುಸಂವತ್ಸರಗಳ ಹೊಂಗನಸು[೧]. ದಿನ ನಿತ್ಯ ಅವನ ಕಣ್ಣ ಮುಂದೆ ಕಾಣುವ ಸಮುದ್ರ ಹಾಗೂ ದೋಣಿ ಬಲೆಗಳು ಅವನ ಪರಮೋದ್ದೇಶಗಳನ್ನು ಪ್ರಚೋದಿಸುತ್ತವೆ. ಇವನ ಈ ಬಯಕೆ ಇವನ ಜಾತಿ ಅಂತಸ್ತಿಗೆ ಮೀರಿದ ಬಯಕೆ. ಆದರೆ ದೋಣಿ, ಬಲೆ ಕೊಂಡ ಕೆಲವು ಉದಾಹರಣೆಗಳು ಆತನನ್ನು ಮಹತ್ವಾಕಾಂಕ್ಷೆಗೆ ಒಳಪಡಿಸುತ್ತವೆ.

ಚೋಮನಿಗೆ ತನ್ನ ಭೂಮಿ ಉಳುವ ಆಸೆಯನ್ನು ಯಾರ ಹತ್ತಿರವಾದರೂ ಯಾಕೆ, ಸಂಕಪ್ಪಯ್ಯನವರ ಹತ್ತಿರ ಭೂಮಿಯನ್ನು ಕೇಳುವ ಸಾಹಸವಿಲ್ಲ. ಅವನ ಈ ಬಯಕೆಯನ್ನು ಮಕ್ಕಳ ಮುಂದೆ ಹೇಳಿಕೊಂಡಾಗ ಅವರು "ನೀನು ಧನಿಯರೊಂದಿಗೆ ಬಾಯಿ ತೆರೆದು ಮರ್ಯಾದೆ ಕಳೆದುಕೊಳ್ಳಬೇಡ" ಎಂದರೆ ಚೋಮ ಸಿಟ್ಟಿನಿಂದ ಅಳುತ್ತಾನೆ. "ಹೊಲತಿ ಇರುವಾಗಲೆ, ನೇಗಿಲು ಹಿಡಿಯಬೇಕೆಂಬ ಆಸೆ ಮಾಡಿದ್ದೆ.... ನೀನೆ ನನ್ನ ಆಸೆಗೆ ಕಲ್ಲು ಹಾಕುತ್ತೀಯಲ್ಲ" ಎಂದು ಬೆಳ್ಳಿಯ ಮುಂದೆ ಗೋಳುಗರೆಯುತ್ತಾನೆ. ಆತನಿಗೆ ಭೂಮಿ ಉಳುವ ಬಯಕೆ ಅದಮ್ಯವಾದುದ್ದು. ಮಗಳ ಮಾತಿನಿಂದ ನೊಂದ ಚೋಮ ದುಡಿ ಬಾರಿಸತೊಡಗುತ್ತಾನೆ.

ಆದರೆ ಚಂಪನ್‌ಗೆ ದೋಣಿ ಕೊಂಡುಕೊಳ್ಳುವುದಕ್ಕೆ ಅವನ ಹೆಂಡತಿ ಚಕ್ಕಿ ಹಗಲು ರಾತ್ರಿ ದುಡಿಯುತ್ತಾಳೆ. ದೋಣಿ ಕೊಳ್ಳಲು ದುಡ್ಡು ಸಾಲದಾಗ ಚಂಪನ್‌ಕುಞ್ಞವಿನ ಮಗಳು ಕರುತ್ತಮ್ಮ ಪರೀಕುಟ್ಟಿಯ ಹತ್ತಿರ ಸಾಲ ಕೇಳುತ್ತಾಳೆ. ಆತ ಈಕೆಯ ಮೇಲೆ ಇದ್ದ ಪ್ರೇಮದಿಂದ ಸಹಾಯ ಮಾಡುತ್ತಾನೆ. ರಾತ್ರಿ ಹೊತ್ತು ಯಾರಿಗೂ ಕಾಣದಂತೆ ತನ್ನ ಗಂಡಂಗಿಂದ ಮೀನನ್ನು ಚಂಪನ್‌ಕುಞ್ಞವಿನ ಮನೆಗೆ ಸಾಗಿಸುತ್ತಾನೆ. ಬಹಿರಂಗವಾಗಿ ನಡೆಯುವ ವ್ಯವಹಾರವಲ್ಲ ಇದು. ಆದುದರಿಂದಲೇ ಬಹಿರಂಗವಾಗಿ ಪರೀಕುಟ್ಟಿಯು ಸಾಲ ಕೇಳಲಾರ. ಈತನೂ ಕೊಟ್ಟರೆ ಆಯಿತೆಂದು ಉದಾಸೀನ ಮಾಡುತ್ತಾನೆ.

ಆದರೆ ಚೋಮನಿಗೆ ಕೊಟ್ಟ ಹಳೆಯ ಸಾಲವನ್ನು ವಸೂಲಿ ಮಾಡಲು ಸೇರೆಗಾರ ಮನ್ವೇಲ ಬರುತ್ತಾನೆ. ಇದು ಬಹಿರಂಗವಾಗಿ ನಡೆಯುವ ವ್ಯವಹಾರ. ಚೋಮ ತಾನು ಮಾಡಿದ್ದ ಸಾಲವನ್ನು ಮರೆತು ಹೋಗಿದ್ದರೂ ಅವನು ಬಂದ ನಂತರ ತೀರಿಸಲು ಯೋಚಿಸುತ್ತಾನೆ. ಏಕ ಕಾಲದಲ್ಲಿ ಭೂಮಿಯ ಬಯಕೆ ಹಾಗೂ ಸೇರೆಗಾರನ ಸಾಲಗಳು ಚೋಮನನ್ನು ಬಾಧಿಸುತ್ತವೆ. ಚಂಪನ್‌ಕುಞ್ಞವಿಗೆ ದೋಣಿ, ಬಲೆ ಕೊಳ್ಳುವ ಬಯಕೆಯೊಂದಿಗೆ ವಯಸ್ಸಿಗೆ ಬಂದ ಮಗಳು ಕರುತ್ತಮ್ಮಳನ್ನು ಮದುವೆ ಮಾಡಬೇಕಾಗುವ ಸಂಗತಿ ಬಾಧಿಸುತ್ತದೆ. ಕಡಲ ತೀರದಲ್ಲಿ ಹಾಗೆ ವಯಸ್ಸಿಗೆ ಬಂದ ಹೆಣ್ಣು ಮಗಳು ಮದುವೆಯಾಗದೆ ಇರುವುದು ನಿಷಿದ್ಧ. ಆದರೆ ಚಂಪನ್ ಅದಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ.

ಚೋಮನಿಗೆ ಆತನ ಮಕ್ಕಳು, ಸೇರೆಗಾರನು, ಎತ್ತುಗಳನ್ನು ಮಾರಿ ಸಾಲ ತೀರಿಸಲು ಕೇಳಿದರೆ ಆತ ಹೇಳುವುದಿಲ್ಲ. ಸ್ವತಃ ತಾನೇ ಹೋಗಿ ಬೇಕಾದರೆ ಕಳಸದಲ್ಲಿ ದುಡಿಯುತ್ತಾನೆ. ಆದರೆ ಒಮ್ಮೆ ಎತ್ತುಗಳನ್ನು

---

೧ ಕೆಂಪು ಮೀನು (ಚೆಮ್ಮೀನು) ಪುಟ ೧೦

ಮಾರಿದರೆ ತಾನು ಬೇಸಾಯಗಾರನಾಗಬೇಕೆಂಬ ಬಯಕೆ ಸತ್ತಂತೆ ಎಂದು ತಿಳಿಯುತ್ತಾನೆ ಚೋಮ. ಚಂಪನ್‌ಗೆ ಮಗಳ ಮದುವೆ ಮಾಡುವಂತೆ ಚಕ್ಕಿ ಪರಿ ಪರಿಯಾಗಿ ಹೇಳುತ್ತಾಳೆ. ಆಕೆಗೆ ಆ ಕಡಲ ತಡಿಯ ನಂಬಿಕೆಗೆ ವಿರುದ್ಧವಾಗಿ ಘಟಿಸಿರುವ ಕರುತ್ತಮ್ಮ ಹಾಗೂ ಪರೀಕುಟ್ಟಿಯ ಸಂಬಂಧದ ಅರಿವಿದೆ. ಮುಂದೆ ಅದರಿಂದ ಸಂಭವಿಸಬಹುದಾದ ದುರಂತದ ಮುನ್ಸೂಚನೆ ಆಕೆಗೆ ಗೊತ್ತಿದೆ. ಆದರೆ ನಿಜ ಸಂಗತಿಯನ್ನು ಬಾಯಿ ಬಿಟ್ಟು ಹೇಳಲಾರಳು, ಆದರೆ ಚಂಪನ್‌ಕುಞ್ಞಿಗೆ ಅರ್ಥವಾಗುವುದಿಲ್ಲ. "ನೋಡು! ಆ ಗಂಟಿನಿಂದ ಮಾತ್ರ ಏನೇ ಬಂದರು ಒಂದು ಬಿಡಿಗಾಸನ್ನು ನಾನು ಹೊರಗೆ ತೆಗೆಯುವುದಿಲ್ಲ ಆ ಯೋಚನೆ ಬಿಟ್ಟುಬಿಡು" ಎನ್ನುತ್ತಾನೆ ಚಂಪನ್. "ಆದರೆ ಚೋಮನಿಗೆ ಇಂತಹ ಯಾವ ಸಂಗತಿಗಳು ಗೊತ್ತಿಲ್ಲ. ವಯಸ್ಸಿಗೆ ಬಂದ ಮಕ್ಕಳಿಗೆ ಮದುವೆ ಮಾಡಬಾರದೆಂಬ ಈ ಇಬ್ಬರು ನಾಯಕರ ನಿಲುವೇ ಸಮಸ್ಯೆಗೆ ಕಾರಣವಾಗುತ್ತದೆ. ಚೋಮ ಕಾಫೀ ತೋಟದಿಂದ ಬಂದ ಮೇಲೆ ಚನಿಯನಿಗೆ ಮದುವೆ ಮಾಡಲು ನಿರ್ಧರಿಸುತ್ತಾನೆ. ಅಂತೆಯೇ ಚಂಪನ್ ಕೂಡ ದೋಣಿ, ಬಲೆ ಕೊಂಡ ಮೇಲೆ ಮದುವೆ ಮಾಡಲು ನಿರ್ಧರಿಸುತ್ತಾನೆ.

ಚೋಮನಿಗೆ ಅವನ ಜಾತಿಯ ಕಾರಣದಿಂದ ಭೂಮಿಯನ್ನು ಪಡೆಯಲು ಸಾಧ್ಯವಿಲ್ಲ. ಕಾದಂಬರಿಯಲ್ಲಿ ಮೂರು ಬಾರಿ ಸಂಕಪ್ಪಯ್ಯನವರ ಹತ್ತಿರ ಭೂಮಿಯನ್ನು ಗೇಣಿ ಕೇಳುತ್ತಾನೆ, ಆದರೆ ಸಂಕಪ್ಪಯ್ಯನ ತಾಯಿ ಒಪ್ಪುವುದಿಲ್ಲ. ಆಕೆಯ ಸಂಪ್ರದಾಯ, ನಂಬಿಕೆಗಳ ಜೊತೆಗೆ ಸುತ್ತಲಿನ ಸಮಾಜ ಕೂಡ ಒಪ್ಪುವುದಿಲ್ಲ ಎಂಬ ನಂಬಿಕೆ ಅವರದ್ದು.

ಆದರೆ ಕಾದಂಬರಿಯಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕು. ಚೋಮನಿಗೆ ಸರ್ಕಾರಿ ಅಧಿಕಾರಿ ಬಂದು ದರಕಾಸು ಜಮೀನು ಕೊಡಿಸುವ ಮಾತನಾಡುತ್ತಾನೆ. ಆದರೆ ಚೋಮ ಅದರ ಬಗ್ಗೆ ಅನಾಸಕ್ತನಾಗಿದ್ದಾನೆ. ಕ್ರೈಸ್ತ ಪಾದ್ರಿ ಜಮೀನು ಕೊಡುತ್ತೇನೆ ತಮ್ಮ ಮತಕ್ಕೆ ಮತಾಂತರವಾಗು ಎನ್ನುತ್ತಾನೆ. ಆದರೆ ಅದು ಚೋಮನ ಪರಂಪರಾಗತವಾದ ನಂಬಿಕೆಗೆ ವಿರುದ್ಧವಾದದ್ದು. ತಾನೇ ಸ್ವತಃ ಜಮೀನನ್ನು ಸರ್ಕಾರದಿಂದ ಪಡೆದರೂ ಸಮಾಜದಿಂದ ಹೊರತಾಗಿ ನಿಲ್ಲಬೇಕಾಗುತ್ತದೆ ಎಂಬ ಹೆದರಿಕೆ. ಸಂಕಪ್ಪಯ್ಯನವರಿಂದ ಪಡೆದರೆ ಎಲ್ಲವೂ ಸರಿಯಾಗುತ್ತದೆ ಎಂಬ ವಿಶ್ವಾಸ ಅವನದ್ದು. ಚೋಮನ ಪ್ರತಿಸಾರಿಯ ಬೇಡಿಕೆಯು ಸಂಕಪ್ಪಯ್ಯನವರನ್ನು ಮೃದುಗೊಳಿಸುತ್ತದೆ. ಅವರು "ನಮ್ಮ ಅಮ್ಮ ಸಾಯುವವರೆಗೆ ಈ ಆಸೆ ಬಿಡು" ಎನ್ನುತ್ತಾರೆ. ಪ್ರತಿ ಬಾರಿ ಭೂಮಿ ಕೊಡಲು ಸಂಕಪ್ಪಯ್ಯ ನಿರಾಕರಿಸಿದಾಗ ಚೋಮ ಸಿಟ್ಟಿಗೇಳುತ್ತಾನೆ. ಶ್ರೀಯುತ ಆರ್.ವಿ. ಭಂಡಾರಿಯವರು ಗುರುತಿಸುವ "ಧನಿಗಳಿಂದ ಎಷ್ಟೆಷ್ಟು ನಿರಾಸೆ ಹೊಂದಿದನೋ, ಅಷ್ಟಷ್ಟು ಪ್ರತಿಭಟನೆ ತೋರಿಸುತ್ತಾನೆ, ರೊಚ್ಚಿಗೇಳುತ್ತಾನೆ. ಇದನ್ನು ಒಂದು ಆರೋಹಣ ಕರ್ಮದಲ್ಲಿ ಲೇಖಕರು ತೋರಿಸಿದ್ದಾರೆ"[೧]. ಸಂಗತಿ ಸರಿಯಾಗಿದೆ. ಆತ ಸಂಕಪ್ಪಯ್ಯನವರಿಗೆ ತೋರಿಸುವ ಅನಾಸಕ್ತಿ, ಎಂದೂ ಮಾತನಾಡದ ಚೋಮ, "ಹೂಃ, ನೀವು ನನಗೆ ಕೈತುಂಬಾ ಸಂಬಳ ಕೊಡುವಾಗ ಬೆಳಿಗ್ಗೇನೂ, ಸಂಜೆಗೇನೂ" ಎಂಬ ವ್ಯಂಗ್ಯದ ಮಾತು, ತಿರಸ್ಕಾರದ ನಗು, ಸಂಕಪ್ಪಯ್ಯನವರ ಮೇಲಿನ ಸಿಟ್ಟಿನಿಂದ ಎತ್ತುಗಳ ಕಾಲು ಕುಂಟುವಂತೆ

---

೧ ದಲಿತ ಮಾರ್ಗ, ಆರ್. ವಿ. ಭಂಡಾರಿ, ಪುಟ – ೩೨ ಸಂ. ಅರವಿಂದ ಮಾಲಗತ್ತಿ

[illegible]

ಮಾಡುವುದು, ದುಡಿ ಬಾರಿಸುವುದು ಈ ಮೂಲಕ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಅದೂ ಅವ್ಯಕ್ತವಾಗಿ. ಸ್ವತಃ ಸಂಕಪ್ಪಯ್ಯನವರು ಚೋಮನ ಮನೆ ಮುಂದೆ ನಿಂತು ಕೂಗಿದರೆ "ಚೋಮನ ಕ್ರಾಂತಿಯ ಅಬ್ಬರ ಧನಿಯರ ಆ ಒಂದು ಸ್ವರವನ್ನು ಕೇಳಿದಾಗ ಗೊಬ್ಬರವಾಯಿತು" ಎನ್ನುವಂಥ ದಾರುಣ ವಿಷಮ ಸ್ಥಿತಿ ಆತನದು.

ಚಂಪನ್ ಸ್ಥಿತಿವಂತನಾದ್ದರಿಂದ ಯಾರನ್ನೂ ಹೇಳದೆ ಕೇಳದೆ ದೋಣಿಯ ಬಲೆಯನ್ನು ತರುತ್ತಾನೆ. ಊರಿನ ಜನ ಆಕ್ಷೇಪಿಸಿ ಆರಯ್ಯನ ಹತ್ತಿರ ದೂರು ಕೊಟ್ಟಾಗ ಆತನಿಗೆ ಹಣವನ್ನು ಕೊಟ್ಟು ಸರಿಪಡಿಸಿಕೊಳ್ಳುತ್ತಾನೆ. ಆರಯ್ಯನೆ ಸ್ವತಃ ಮುಂದೆ ನಿಂತು ದೋಣಿಗೆ ಜನರನ್ನು ಗೊತ್ತುಪಡಿಸುವಂತೆ ಮಾಡುತ್ತಾನೆ. ಯಾರು ಈತನ ವಿರುದ್ಧ ದೂರು ಕೊಟ್ಟಿದ್ದರೋ ಅವರೇ ಆತನ ದೋಣಿಗೆ ಪೂಜೆ ಮಾಡಿ ಕಡಲಲ್ಲಿ ಕಳುಹಿಸುತ್ತಾರೆ. ಇದು ಆತನಿಗೆ ಸಾಧ್ಯವಾದದ್ದು ಜಾತಿ ಮೀರಿ ತನ್ನ ಆಸೆಯನ್ನು ಈಡೇರಿಸಿಕೊಂಡದ್ದು ಆತನ ಹಣದಿಂದ. ಆದರೆ ಚೋಮನಿಗೆ ಬಡತನ, ದೀಪದ ಬೆಳಕನ್ನು ಕಾಣದೆ ವಾಸಮಾಡುವ ಬಡತನ. ಆದರೆ ಚಂಪನ್‌ನ ಸ್ಥಿತಿವಂತಿಕೆಯೇ ಮುಂದೆ ಅವನನ್ನು ಭೋಗಜೀವಿಯನ್ನಾಗಿಸುತ್ತದೆ. ಈತನ ಹೆಂಡತಿ ಸತ್ತ ನಂತರ ಇನ್ನೊಂದು ಹೆಣ್ಣಿಲ್ಲದೆ ಇರಲಾರ. ಆದರೆ ಚೋಮ ಇರಬಲ್ಲ. ಅದು ಆತನಿಗೆ ಸಾಧ್ಯವಾದದ್ದು, ಆತನ ಬಳಿ ಇದ್ದ ಸಾಂಸ್ಕೃತಿಕ ಸಾಧನ ದುಡಿಯಿಂದ. ಚಂಪನ್ **ಚೆಮ್ಮೀನಿನಲ್ಲಿ** ಎರಡನೇ ಮದುವೆ ಮಾಡಿಕೊಳ್ಳುವುದರ ಮೂಲಕ ಇನ್ನೊಂದು ಮಹತ್ವದ ಅಂಶವನ್ನು ಕಾದಂಬರಿ ನಮಗೆ ಹೇಳುತ್ತದೆ. ಒಂದು, ಜಾತಿ ವ್ಯವಸ್ಥೆಯಲ್ಲಿ ಮೇಲಿನ ಸ್ತರದಲ್ಲಿರುವ ಆರಯ್ಯ ಸ್ತ್ರೀ ಪಾಪ್ಪಿಕುಞ್ಞವನ್ನು ಮದುವೆ ಮಾಡಿಕೊಳ್ಳುವ ಮೂಲಕ ಜಾತಿಯ ಒಳಪಂಗಡವನ್ನು ಮುರಿಯುವುದು. ಇದು ಸಾಧ್ಯವಾದದ್ದು, ಆತನ ಆರ್ಥಿಕ ಕಾರಣದಿಂದ. ಇನ್ನೊಂದು ದೃಷ್ಟಿಕೋನವೆಂದರೆ, ಕಾದಂಬರಿಯ ಒಟ್ಟು ಐತಿಹ್ಯಕ್ಕೆ ಅದು ತೋರುವ ವಿರೋಧ. ಕಡಲ ತೀರದಲ್ಲಿ, ಬೆಸ್ತರ ತೀರದಲ್ಲಿ ತನ್ನ ಗಂಡನನ್ನು ಮಾತ್ರ ನೆನೆಯಬೇಕು ಅದು ಸ್ತ್ರೀ ಧರ್ಮ, ಆದರೆ ಇನ್ನೊಬ್ಬರ ಹೆಂಡತಿಯನ್ನು ಆತ ಸತ್ತ ನಂತರ ಮದುವೆಯಾಗುವ ಮೂಲಕ ಇಂತಹ ನಂಬಿಕೆಯನ್ನು ಮುರಿಯುತ್ತಾರೆ. ಪಾಪ್ಪಿಕುಞ್ಞವಿನ ಮನಸ್ಸಿನಲ್ಲಿ ತನ್ನ ಹಳೆಯ ಗಂಡನ ನೆನಪು ಇದ್ದವೆಂದು ಕಾದಂಬರಿಯಲ್ಲಿ ಕಾಣಸಿಗುತ್ತವೆ. ಆದರೆ ಕೊನೆಯಲ್ಲಿ ನಡೆಯುವ ದುರಂತ ಕೇವಲ ಐತಿಹ್ಯವಲ್ಲ. ಅದೊಂದು ಮನೋವಿಜ್ಞಾನದಲ್ಲಿ ವ್ಯಾಖ್ಯಾನಗೊಳ್ಳಬೇಕಾದ ಪ್ರತಿಮೆಯಾಗಿದೆ. ಚಂಪನ್‌ಗೆ ಕಾದಂಬರಿಯ ಕೊನೆಯಲ್ಲಿ ಕರುತ್ತಮ್ಮ ಮತ್ತು ಪರೀಕುಟ್ಟಿಯ ಸಂಬಂಧ ತಿಳಿದು ತನ್ನ ತಳವೊಡೆದ ದೋಣಿಯಲ್ಲಿ ಮಲಗಿ ಹುಚ್ಚನಾಗುತ್ತಾನೆ. ಪರೀಕುಟ್ಟಿಗೆ ಆತನ ಸಾಲ ತೀರಿಸಿ ಆತ ಮಾಡಿರುವ ಕೃತ್ಯವನ್ನು ಜ್ಞಾಪಿಸುತ್ತಾನೆ. ಇದು ಐತಿಹ್ಯಕ್ಕೆ ಅನುಗುಣವಾಗಿ ಬಂದಿದೆ. ಎಂದರೆ ಒಟ್ಟು ಭಾರತೀಯ ಕಲ್ಪನೆಯಲ್ಲಿ ಸ್ತ್ರೀಯನ್ನು ಕುರಿತ ಚಿಂತನೆ ಹಾಗೂ ಜಾತಿಯ ಒಳಪಂಗಡಗಳನ್ನು ಮುರಿಯುವಂತೆ ಹೊರಗಿನ ಧರ್ಮವನ್ನು ಮುರಿಯಲು ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತದೆ.

ಚೋಮನದುಡಿಯಲ್ಲಿ ಚೋಮ ತನ್ನ ಮಗ ಗುರುವ ಕ್ರೈಸ್ತ ಹುಡುಗಿಯನ್ನು ಮದುವೆ ಮಾಡಿಕೊಂಡ ಮೇಲೆ, ಚೆನಿಯ, ನೀಲರು ಸತ್ತ ನಂತರ, ಭೂಮಿ ಸಿಗದಿದ್ದಾಗ ಈ ಸಮಾಜದ, ಜಾತಿಯ ಬಗ್ಗೆ ಆಕ್ರೋಶಗೊಂಡು ಬೆಳ್ಳಿಯ ಒತ್ತಾಸೆಯಿಂದ ಕ್ರೈಸ್ತ ಮತಕ್ಕೆ ಮತಾಂತವಾಗಲು ಹೋಗಿ ಪೆಂಜೂರ್ಲಿ ಗುಡಿಯಿಂದ ಹಿಂದಿರುಗುತ್ತಾನೆ. ಆಗ ಆತನಿಗೆ ಅವನ ಬಹುಕಾಲದ ನಂಬಿಕೆ ಕೆಲಸ ಮಾಡುತ್ತದೆ. ಮನೆಗೆ ಬಂದ ಮೇಲೆ ಬೆಳ್ಳಿ ಮತ್ತು ಮನ್ವೇಲರನ್ನು ಒಟ್ಟಿಗೆ ನೋಡಿ ಆಕ್ರೋಶಗೊಳ್ಳುತ್ತಾನೆ. ಆತನಿಗೆ ಬೆಳ್ಳಿಯ ಈ ನಡವಳಿಕೆ ಒಟ್ಟು ಭಾರತೀಯ ಸ್ತ್ರೀಯನ್ನು ಕುರಿತ ಚಿಂತನೆಯ ಹಿನ್ನೆಲೆಯಲ್ಲೇ ರೂಪುಗೊಂಡ ನಂಬಿಕೆ ಕೆಲಸ ಮಾಡುತ್ತದೆ. ಆತ ಬೆಳ್ಳಿಯನ್ನು ಮನೆಯಿಂದ ಹೊರಕ್ಕೆ ಹಾಕಿ ಎತ್ತುಗಳಿಂದ "ಸಂಕಪ್ಪಯ್ಯನವರ ಗದ್ದೆಯನ್ನು ನಾಲ್ಕು ಸುತ್ತು ಚೆನ್ನಾಗಿ ಉತ್ತು ತಿರುಗಿ ಎತ್ತುಗಳನ್ನು ಮನೆಗೆ ತಂದು ನೇಗಿಲನ್ನು ಬಿಚ್ಚಿ ಅವನ್ನು ತೊಳೆದು, ಮೇಯಿಸಿ ಎತ್ತುಗಳು ಎಲ್ಲಿ ಸಿಕ್ಕಿದ್ದವೋ ಆ ಕಾಡಿನಲ್ಲೇ ಬಿಟ್ಟುಬಂದು, ತನ್ನ ಕಣ್ಣ ಮುಂದೆ ಯಾವಾಗಲೂ ಅವನ ಆಸೆಯ ಸಂಕೇತವಾಗಿದ್ದ ನೇಗಿಲನ್ನು ಕುಟ್ಟಿ ಮುರಿದು ಅಂಗಳದಲ್ಲಿ ರಾಶಿ ಹಾಕಿ, ಬೆಂಕಿ ಹಾಕಿ ಉರಿಸಿ, ದುಡಿ ಬಾರಿಸುತ್ತಾ ಹಿಂದೆಂದೂ ಬಾರಿಸಿಯೇ ಇರಲಿಲ್ಲವೆನೋ ಎನ್ನುವ ಹಾಗೆ ಬಾರಿಸುತ್ತಾ ಪ್ರಾಣ ಬಿಡುತ್ತಾನೆ. ಚಂಪನ್‌ಕುಞ್ಞುವಿನ ಸ್ಥಿತಿಗಿಂತ ಚೋಮನ ಗಂಭೀರ ಭೀಕರ ಸ್ಥಿತಿ ಒಟ್ಟು ಶೋಷಿತ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ.

ಬೆಳ್ಳಿ ಮತ್ತು ಕರುತ್ತಮ್ಮ :

ಚೋಮನ ದುಡಿ ಹಾಗೂ **ಚೆಮ್ಮೀನು** ಕಾದಂಬರಿಯ ಮುಖ್ಯ ಘಟನೆಗೆ ತೀವ್ರತೆ ಬರುವುದೇ ಈ ಪಾತ್ರಗಳಿಂದ. ಚೋಮನದುಡಿಯಲ್ಲಿ ಬೆಳ್ಳಿಯದೂ ಒಂದು ಶಕ್ತಿಯುತ ಪಾತ್ರ. ಹೆಣ್ಣು ದಿಕ್ಕೇ ಇಲ್ಲದೆ, ಹೆಂಡತಿಯನ್ನು ಕಳೆದುಕೊಂಡಿರುವ ಚೋಮನ ಇಡೀ ಸಂಸಾರನ್ನು ತುಂಬಾ ಜವಾಬ್ದಾರಿಯಿಂದ ತೂಗಿಸಿಕೊಂಡು ಹೋಗುವ ಧೈರ್ಯವಂತ ಪಾತ್ರ ಬೆಳ್ಳಿಯದು. ಜಾತ್ರೆಯನ್ನು ಅರ್ಧದಲ್ಲೇ ಮುಗಿಸಿ ಹಿಂದಿರುಗುವ ಚೋಮನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು, ಚೋಮ ದುಡಿ ಬಾರಿಸುತ್ತಿದ್ದರೆ, ಈಕೆ ಲೇ.. ಲೇ... ಹಾಡುತ್ತಾ ಹೆಜ್ಜೆ ಹಾಕುತ್ತಾಳೆ. "ಮನೆಯಿಂದ ಹೊರಗೆ ನಿತ್ಯವೂ ಕೆಲಸಕ್ಕೆ ಹೋಗುತ್ತಾಳೆ. ಆದರೆ ಸಂಜೆಯ ತನಕ ಮನೆಯನ್ನು ಬಿಟ್ಟಿರಲು ಅವಳಿಗೆ ಸಾಧ್ಯವಿಲ್ಲ. ಅಡುಗೆ ಕೆಲಸ, ಮಕ್ಕಳ ಆರೈಕೆ, ಎಲ್ಲವೂ ಅವಳಿಂದಲೇ ಸಾಗಬೇಕು. ಆದುದರಿಂದ ಅವಳು ಬೇಗ ಎದ್ದು ಕಾಡಿಗೆ ಹೋಗಿ ಒಂದು ಹೊರೆ ಸೊಪ್ಪನ್ನು ತಂದು ತನ್ನ ಧನಿಗಳ ಮನೆಯ ಅಂಗಳದಲ್ಲಿ ಕೆಡವಿದಾಳದರೆ ಮುಖ್ಯ ಕೆಲಸ ಮುಗಿಯಿತೆಂದು ತಿಳಿಯುತ್ತಾಳೆ". ಜೊತೆಗೆ ಬಿಡುವಿದ್ದಾಗ ಬಿದಿರಿನ ಬುಟ್ಟಿಯನ್ನು ಹೆಣೆಯುತ್ತಾಳೆ. ಮಳೆಗಾಲದಲ್ಲಿ ಅಕ್ಕಿ ಇಲ್ಲದ ದಿನಗಳನ್ನು ಕಳೆಯಲು ಗೆಣಸು ನೆಡುತ್ತಾಳೆ". ತಾನು ದುಡಿಯುವುದರಲ್ಲೇ ಸ್ವಲ್ಪ ಅಕ್ಕಿಯನ್ನು ಧನಿಗಳ ಮನೆಯಲ್ಲಿ ಉಳಿಸುವಷ್ಟು ಜಾಗ್ರತೆಯಿರುವವಳು ಬೆಳ್ಳಿ. ಒಂದರ್ಥಕ್ಕೆ ಇಡೀ ಚೋಮನ ಮನೆ ಸುವ್ಯವಸ್ಥೆಯಿಂದ ನಡೆಯುವುದು ಬೆಳ್ಳಿಯಿಂದ. ತಂದೆ ಭೂಮಿಯನ್ನು ಗೇಣಿ ಮಾಡುವ ಆಸೆಯನ್ನು ಬೆಳ್ಳಿಯ ಹತ್ತಿರ ಹೇಳಿದಾಗ ಮಿಕ್ಕ ಮಕ್ಕಳು ಪ್ರತಿಯಾಡಲು ಹಿಂಜರಿದಾಗ ಬೆಳ್ಳಿ ಮಾತ್ರ "ನೀನು ಧನಿಯರೊಂದಿಗೆ ಬಾಯಿ ತೆರೆದು

ಮರ್ಯಾದೆಯನ್ನು ಕಳೆದುಕೊಳ್ಳಬೇಡ" ಎನ್ನುತ್ತಾಳೆ. ಚೋಮ ಮಗಳು ಹೀಗೆಂದುದರಿಂದ ಅತ್ತರೆ, ಬೆಳ್ಳಿ ಆತನ ಮನಸ್ಥಿತಿ ತಿಳಿದು ಸುಮ್ಮನಾಗುತ್ತಾಳೆ.

ಚೆಮ್ಮೀನಿನ ಕರುತ್ತಮ್ಮ ಇಂತಹ ಕಷ್ಟ ಸಹಿಷ್ಣುತೆಯ ಪಾತ್ರವೇನಲ್ಲ. ಆಕೆಯ ಪರಿಚಯ ಕಾದಂಬರಿಯಲ್ಲಿ ಆಗುವುದು ಕಡಲ ತೀರದಲ್ಲಿ ಪರೀಕುಟ್ಟಿಯೊಡನೆ ಲಲ್ಲೆಗರೆಯುತ್ತಾ ಇರುವಾಗ. ಚಿಕ್ಕ ವಯಸ್ಸಿನಲ್ಲಿ ಕಡಲ ತೀರದಲ್ಲಿ ಪರಿಚಯವಾದ ಪರೀಕುಟ್ಟಿ ಮತ್ತು ಕರುತ್ತಮ್ಮನ ಸ್ನೇಹ ಬೆಳೆದು ದೊಡ್ಡದಾಗಿದೆ. ಆಕೆಗೆ ಆತನ ಜೊತೆ ಮಾತನಾಡುವುದೆಂದರೆ ಎಲ್ಲಿಲ್ಲಜ ಆನಂದ. ಮನೆಯಲ್ಲೇ ಇರು, ಎಲ್ಲೂ ಹೋಗಬಾರದೆಂದು ಚಂಪನ್ ನೇಮಿಸಿದ್ದರೂ ತಂಗಿ ಪಂಚಮಿಯನ್ನು ಇರಿಸಿ, ಕರುತ್ತಮ್ಮ ಪರೀಕುಟ್ಟಿಯೊಡನೆ ಕಡಲ ತೀರದಲ್ಲಿ ಹರಟುತ್ತಿರುತ್ತಾಳೆ. ತನ್ನ ತಂದೆ ದೋಣಿ ತರುವ ವಿಷಯ ಪ್ರಸ್ತಾಪಿಸಿ ಅದಕ್ಕೆ ಸ್ವಲ್ಪ ಹಣ ಸಾಲುವುದಿಲ್ಲ, ಕೊಡು ಎಂದು ಕೇಳುತ್ತಾಳೆ. ಆತ ಕಡಲಲ್ಲಿ ಮೀನು ಹಿಡಿದ ಮೇಲೆ ನಮಗೇ ಮೀನು ಮಾರಬೇಕೆಂದು ಹೇಳುತ್ತಾನೆ. ಹೀಗೆ ಸಂಭಾಷಣೆಯ ಮಧ್ಯೆ ಆತ ಆಕೆಯನ್ನು ನೋಡುತ್ತಾನೆ. ರೋಮಾಂಚನವೂ, ನಾಚಿಕೆಯೂ ಆಗಿ ಆಕೆ ಹುಸಿ ಮುನಿಸು ತೋರಿ ಪರೀಕುಟ್ಟಿಯನ್ನು ರೇಗಿ ಮನೆಗೆ ಓಡುತ್ತಾಳೆ. ಆಕೆ ಗಂಭೀರವಾಗಿಯೇನು ಪರೀಕುಟ್ಟಿಯನ್ನು ಸಾಲ ಕೇಳುವುದಿಲ್ಲ. ಕರುತ್ತಮ್ಮ ಸಾಧಾರಣವಾದ ಹೆಣ್ಣೊಂದು ಸಾಮಾನ್ಯವಾಗಿ ವರ್ತಿಸುವ ಹಾಗೆ ವರ್ತಿಸುತ್ತಾಳೆ. ಆದರೆ ಬೆಳ್ಳಿಯ ನಡೆ ಗಂಭೀರವಾದುದ್ದು. ಆದರೆ ಅದು ಆಕೆಗೆ ಸಾಧ್ಯವಾದುದ್ದು, ಇಡೀ ಸಂಸಾರದ ಭಾರವನ್ನು ಹೊತ್ತುದ್ದರಿಂದ.

ಕಳಸದ ಸೇರೆಗಾರ ತನ್ನ ಹಳೆಯ ಸಾಲ ವಸೂಲಿಗೆ ಬಂದಾಗ ತಂದೆಗೆ ತಮ್ಮ ಎತ್ತುಗಳನ್ನು ಮಾರುವಂತೆ ಅಥವಾ ಧನಿಗಳಿಗೆ ಇರಿಸಿ ಸಾಲ ತರುವಂತೆ ಹೇಳುತ್ತಾಳೆ. ಆತ ಒಪ್ಪದೇ ತಾನೇ ದುಡಿಯಲು ಕಳಸಕ್ಕೆ ಹೋಗುತ್ತೇನೆ ಅಂದಾಗ ವಯಸ್ಸಾದ ತಂದೆಯನ್ನು ಹಾಗೆ ಘಟ್ಟದ ಕೆಳಗೆ ಕೆಲಸಕ್ಕೆ ಕಳುಹಿಸಲು ಒಪ್ಪದೆ ಚನಿಯ ಮತ್ತು ಗುರುವರನ್ನು ಕಳುಹಿಸುತ್ತಾಳೆ. ಇತ್ತ ಮನೆಯ ಇಡೀ ಜವಾಬ್ದಾರಿಯನ್ನು ತಾನೊಬ್ಬಳೇ ಹೊರಲು ನಿರ್ಧರಿಸುತ್ತಾಳೆ. ವಯಸ್ಸಿಗೆ ಬಂದ ಮಗಳನ್ನು ಮದುವೆ ಮಾಡಲು ಚೋಮ ಹಿಂದು ಮುಂದು ನೋಡುತ್ತಾನೆ. ಮಗಳು ಬೆಳ್ಳಿ, ಅಳಿಯನೊಡನೆ ಹೊರಟುಹೋಗುತ್ತಾಳೆ ಎಂಬ ಭಯ ಆತನಿಗೆ. ಮೊದಲ ಬಾರಿಗೆ ಚೋಮ ಸಂಕಪ್ಪಯ್ಯನವರ ಬಳಿ ಭೂಮಿ ಕೇಳಿ ಇಲ್ಲವೆನಿಸಿಕೊಂಡು, ಬಿರುಮ ಪೂಜಾರಿಯ ಅಂಗಡಿಯಲ್ಲಿ ಕುಡಿದು ರಾತ್ರಿ ಬಂದು ದುಡಿ ಹಿಡಿದು ಬಡಿಯತೊಡಗಿದಾಗ ಮಕ್ಕಳು ನಿದ್ರೆ ಮಾಡುವುದನ್ನು ಹಾಳು ಮಾಡುವ ರೀತಿಯನ್ನು ಕಂಡು ಅಪ್ಪನನ್ನು ಗದರಿಸಿಕೊಳ್ಳುತ್ತಾಳೆ "ಅಪೂರ್ವ ಧೈರ್ಯ ಅವಳದು".

ಕರುತ್ತಮ್ಮನದು ಒಂದು ಅಪೂರ್ವವಾದ ಧೈರ್ಯವೇ. ಕಡಲ ತೀರದಲ್ಲಿ ಪರೀಕುಟ್ಟಿಯ ಜೊತೆ ಮಾತನಾಡುವ ಸಂಗತಿಯನ್ನು ಪಂಚಮಿ ತಾಯಿ ಚಕ್ಕಿಗೆ ತಿಳಿಸುತ್ತಾಳೆ. ಆಗ ತಾಯಿ ಚಕ್ಕಿ ಮಗಳಿಗೆ ಕಡಲ ತೀರದ ನಂಬಿಕೆ, ಪರಂಪರೆಯ ಬಗ್ಗೆ ವಿವೇಕ ಹೇಳುತ್ತಾಳೆ. ಅವಳಿಗೆ ಕರುತ್ತಮ್ಮನ ಮನಸ್ಥಿತಿ ಅರ್ಥವಾಗಿದೆ.

ಆಕೆಯ ಎಲ್ಲಾ ನಂಬಿಕೆಯನ್ನು ಮೀರಿ ಪರೀಕುಟ್ಟಿಯನ್ನು ಪ್ರೀತಿಸುತ್ತಾಳೆ. ಕಡಲ ತೀರದಲ್ಲಿನ ಪರೀಕುಟ್ಟಿಯ ವಿರಹದ ಹಾಡು ಈಕೆಯಲ್ಲಿ ಎದೆ ಬಿರಿಯುವಂತೆ ಮಾಡುತ್ತದೆ. ಕರುತ್ತಮ್ಮ ತನ್ನ ಸಂಪ್ರದಾಯ ಹಾಗೂ ಸಹಜ ಪ್ರೇಮದ ನಡುವೆ ಸಿಕ್ಕು ಒದ್ದಾಡುವ ಸ್ತ್ರೀಯಾಗಿದ್ದಾಳೆ. ಕರುತ್ತಮ್ಮನ ಮೇಲಿನ ಮೋಹದಿಂದ ಚಂಪಸ್‌ಗೆ ದೋಣಿ, ಬಲೆ ತೆಗೆದುಕೊಳ್ಳಲು ಪರೀಕುಟ್ಟಿ ಸಹಾಯ ಮಾಡುತ್ತಾನೆ. ನಂತರ ಕರುತ್ತಮ್ಮ ತಾಯಿಗೆ ಪರೀಕುಟ್ಟಿ ನನ್ನನ್ನು ನೋಡಿ ಸಾಲ ಕೊಟ್ಟದ್ದು, ಆದ್ದರಿಂದ ತೀರಿಸಿ ಎಂದು ಒತ್ತಾಯಿಸುತ್ತಾಳೆ. ತಾಯಿಗೆ ಮಗಳ ಅಂತರಂಗದ ಭಾವನೆ ಅರ್ಥವಾಗುತ್ತದೆ. ಆದರೆ ಅವಳು ಚಂಪಸ್‌ನ ಹಠಮಾರಿತನದ ಮುಂದೆ ನಿಸ್ಸಹಾಯಕಳು ಸುತ್ತಲಿನ ಜನ ಚಂಪಸ್ ದೋಣಿ ಬಲೆ ತಂದ ಮೇಲೆ ಕರುತ್ತಮ್ಮ ಪರೀಕುಟ್ಟಿಯ ಸಂಬಂಧವನ್ನು ಕುರಿತು ಮಾತನಾಡುತ್ತಾರೆ. ಇದರಿಂದ ಹೆದರಿದ ಚಕ್ಕಿ ತಾವು ಮುಸ್ಲಿಂ ಮತಕ್ಕೆ ಮತಾಂತರವಾಗುತ್ತೇವೆ ಎನ್ನುತ್ತಾಳೆ. ಇದರಿಂದ ಕರುತ್ತಮ್ಮನ ಮನಸ್ಸಿನಲ್ಲಿ ಪರೀಕುಟ್ಟಿಯೊಡಗಿನ ತನ್ನ ಸಂಬಂಧದ ಸುಮಧುರ ಕನಸುಗಳು ಸುಳಿಯತೊಡಗುತ್ತದೆ. ದೇವರ ಹತ್ತಿರ ತನ್ನ ತಾಯಿಯ ಮನಸ್ಸು ಬದಲಾಗದಂತೆ ಪ್ರಾರ್ಥಿಸುತ್ತಾಳೆ. ಬೆಳ್ಳಿ ಮತ್ತು ಕರುತ್ತಮ್ಮನ ಪಾತ್ರಗಳು ವಾಸ್ತವಿಕ ನೆಲೆಗಟ್ಟಿನ ಮೇಲೆ ಕಾದಂಬರಿಯಲ್ಲಿ ಚಿತ್ರಿತಗೊಂಡಿವೆ. ಮುಖ್ಯವಾಗಿ ಇವೆರಡು ಪಾತ್ರಗಳಲ್ಲಿ ವಿಮರ್ಶಕರ ಗಮನ ಸೆಳೆದಿರುವ ಸಂಗತಿಯೆಂದರೆ ಬೆಳ್ಳಿ, ಕಳಸದ ಕಾಫೀ ತೋಟದಲ್ಲಿ ನಡೆದುಕೊಳ್ಳುವ ರೀತಿ ಅಂತೆಯೇ ಕರುತ್ತಮ್ಮ ನೀರ್ಕುನ್ನಿ ಕಡಲ ತೀರದಿಂದ ತೃಕುನ್ನಪೊಳೆಗೆ ಗಂಡನ ಮನೆಗೆ ಹೋದಾಗ ನಡೆದುಕೊಳ್ಳುವ ರೀತಿ. ಒಂದರ್ಥದಲ್ಲಿ ಅಗ್ನಿ ಪ್ರವೇಶದ ಸಂದರ್ಭಗಳು ಇವು. ಚೋಮನ ದುಡಿ ಕಾದಂಬರಿಯಲ್ಲಿ ಅಷ್ಟು ಸದೃಢವಾಗಿ ಕಾಣುವ ಬೆಳ್ಳಿಯ ಪಾತ್ರ ಕಳಸದಲ್ಲಿ ಮಾತ್ರ ವಿವೇಕ ಶೂನ್ಯವಾಗುವಂತೆ ತೋರುತ್ತದೆ. ಆದರೆ ಈ ಪಾತ್ರದ ನಡವಳಿಕೆಗೆ ಆಕೆಯ ವಯೋದೌರ್ಬಲ್ಯದ ಕಾರಣವೆಂದು ತೋರಿದರೂ, ಏಕ ಕಾಲದಲ್ಲಿ ಮನ್ವೇಲ ಮತ್ತು ಮಂಗೇಲರೊಡನೆ ಯಾವುದೇ ಮಾನಸಿಕ ಜಿಜ್ಞಾಸೆಯೂ ಇಲ್ಲದೆ ದೈಹಿಕವಾಗಿ ಸಂಬಂಧ ಹೊಂದುವ ಈ ಪಾತ್ರದ ರೀತಿ ಒಪ್ಪುವಂಥದ್ದಲ್ಲ. ಮನ್ವೇಲನ ಜೊತೆ ಸಂಬಂಧ ಹೊಂದುವಾಗ ಆಕೆಗೆ ತಂದೆಯ ಸಾಲ ತೀರಿಸಲು ಸಹಾಯವಾಗುತ್ತಿದೆ ಎಂಬ ಮಾತು ಆ ಪಾತ್ರದ ಒಳಗೆ ವಯೋದೌರ್ಬಲ್ಯದೊಡನೆ ಗುಪ್ತವಾಗಿ, ಜಾಗೃತವಾಗಿರುವ ವಾಸ್ತವಿಕ ತಿಳುವಳಿಕೆಯನ್ನು ತೋರಿಸುತ್ತದೆ. ಶೋಷಿತರಲ್ಲಿ ಸ್ತ್ರೀ ಇನ್ನಷ್ಟು ಶೋಷಿತಳು. ಪುರುಷ ಶೋಷಿತರು ಕೇವಲ ದೈಹಿಕವಾಗಿ ಶೋಷಿತವಾದರೆ ಸ್ತ್ರೀ ದೈಹಿಕ ಮತ್ತು ಲೈಂಗಿಕ ಶೋಷಣೆ ಎರಡಕ್ಕೂ ಒಳಗಾಗುವುದು ದುರಂತ. ಬೆಳ್ಳಿಯಂತಹ ಬಡತನದ ಮೂಸೆಯಲ್ಲಿ ಬೆಳೆದ ಹುಡುಗಿ ಅನಿವಾರ್ಯವಾಗಿ ತನ್ನ ಸ್ತ್ರೀತ್ವವನ್ನು ಪಣಕ್ಕಿಟ್ಟು ಬದುಕಬೇಕಾದ ದುರ್ಬರತೆ ಇದು.

ಈ ಸಂಗತಿಯನ್ನು ತುಂಬಾ ಸೂಕ್ಷ್ಮವಾಗಿ ನೋಡಿದಾಗ ಎರಡು ವಿಚಾರಗಳು ಹೊಳೆಯುತ್ತವೆ. ಬೆಳ್ಳಿಯ ಈ ನಡವಳಿಕೆ ಅನೈತಿಕವಾದದ್ದು ಎಂದು ಸುಲಭವಾಗಿ ಕರೆಯಲು ಬರುವುದಿಲ್ಲ. ಯಾಕೆಂದರೆ ನೈತಿಕ ಮತ್ತು ಅನೈತಿಕ ಎಂಬುದನ್ನು ನಾವು ಕೇವಲ ಬೆಳ್ಳಿಗೆ ಮಾತ್ರ ಆರೋಪಿಸಿ ಇವತ್ತಿನವರೆಗೂ

ನೋಡುತ್ತಿದ್ದೇವೆ. ಲೈಂಗಿಕತೆಯ ಅನೈತಿಕ ಎಂಬ ಸಂಗತಿ ಕೇವಲ ಸ್ತ್ರೀಯರಿಗೆ ಮಾತ್ರ ಸೀಮಿತ ಎಂಬ ಪ್ರಜ್ಞೆಯಿಂದ ಹುಟ್ಟಿದ್ದು ಇದು. ಈ ಸಂಗತಿಯನ್ನು ಫುಕೋನ, ಡಿಸ್ ಕೋರ್ಸ್ ಸಿದ್ಧಾಂತದ ಮೂಲಕ ವಿವರಿಸುವ, ಹೊಸದಾಗಿ ನೋಡುವ ಅಗತ್ಯವಿದೆ ಎನಿಸುತ್ತದೆ. ಕಾದಂಬರಿಯಲ್ಲಿ ಮುಂದೆ ಬೆಳ್ಳಿ ಕಳಸದ ಮೂಲದಲ್ಲಿ ಜನ ಆಡಿಕೊಳ್ಳುವುದನ್ನು ಕೇಳಿ ತನ್ನ ಸುಪ್ತ ಪ್ರಜ್ಞೆಯ ಒಳಗಿದ್ದ ತಂದೆಯ ಮತ್ತು ಆತನ ಸ್ವಭಾವ ಜ್ಞಾಪಕಕ್ಕೆ ಬಂದು ಆಕೆ ವಾಪಸ್ಸು ಕೊಪ್ಪಕ್ಕೆ ಬರುತ್ತಾಳೆ. ಆದರೆ ಒಮ್ಮೆ ದೇಹದ ರುಚಿ ಹತ್ತಿದ ಬೆಳ್ಳಿಗೆ ಮತ್ತೆ ಅದರ ಬಗೆಗಿನ ಆಸಕ್ತಿ ಗುಪ್ತವಾಗಿಯೇ ಇರುತ್ತದೆ. ಅದು ಜಾಗೃತಗೊಳ್ಳಲು ಕಾಯುತ್ತಿರುತ್ತದೆ. ತಂದೆ ಕ್ರೈಸ್ತ ಧರ್ಮಕ್ಕೆ ಸೇರುವ ಮಾತಾಡಿದಾಗ ಉತ್ತೇಜಿತಳಾಗುತ್ತಾಳೆ. ಆಕೆಯ ಮನಸ್ಸಿನಲ್ಲಿ ಮನ್ವೇಲನ ಜೊತೆ ಸಂಸಾರ ಹೂಡಬಹುದೆಂಬ ಆಲೋಚನೆ ಬರುತ್ತದೆ. ಆದರೆ ಮನ್ವೇಲನಿಗೆ ಈ ಅಭಿಲಾಷೆ ಇಲ್ಲ. ಆತ ಬೆಳ್ಳಿಯನ್ನು ಕಳಸದಿಂದ ಕಳುಹಿಸುವುದು, ತನ್ನ ಹೆಂಡತಿ ತಿರುಗಿ ಮನೆಗೆ ಬರುತ್ತಾಳೆ ಎಂಬುದರಿಂದ. ಆದರೆ ಈ ಸಂಗತಿ ಬೆಳ್ಳಿಗೆ ಗೊತ್ತಿರಲಿಲ್ಲವೇ? ಕಾದಂಬರಿಯಲ್ಲಿ ಆಧಾರವಿಲ್ಲ. ಮಂಗೇಲನ ಜೊತೆ ಸಂಬಂಧವನ್ನು ಏರ್ಪಡಿಸುವವನೇ ಮನ್ವೇಲ. ಹಾಗಿರಬೇಕಾದರೆ ಆತ ಈಕೆಯನ್ನು ಹೆಂಡತಿಯೆಂದು ಒಪ್ಪಿಕೊಳ್ಳುತ್ತಾನೆಯೇ? ಎಂಬ ಪ್ರಜ್ಞೆ ಆಕೆಗೆ ಇದ್ದಂತೆ ಕಾಣುವುದಿಲ್ಲ. ಕಾದಂಬರಿಯಲ್ಲಿ ಒಮ್ಮೆ ಮನ್ವೇಲ ಕಳಸಕ್ಕೆ ಕೆಲಸಕ್ಕೆ ಕರೆಯಲು ಬಂದಾಗ ಗುರುವ ಕ್ರೈಸ್ತ ಧರ್ಮಕ್ಕೆ ಸೇರಿ ಭೂಮಿಯನ್ನು ಹೊಂದಿರುವುದಾಗಿ ಹೇಳಿದಾಗ ಬೆಳ್ಳಿ "ಜಾತಿಗೆಟ್ಟವರ ಮನೆಗೆ ನಾವೇಕೆ ಹೋಗುತ್ತೇವೆ?" ಎನ್ನುತ್ತಾಳೆ. ಈ ಮಾತು ಮನ್ವೇಲನನ್ನು ನೋಯಿಸಿತು ಎಂದು ಕಾದಂಬರಿಯಲ್ಲಿಯೇ ಇದೆ. ಕಾದಂಬರಿಯಲ್ಲಿನ ಆತನ ನಡವಳಿಕೆಯನ್ನು ಗಮನಿಸಿದರೆ ಪ್ಯಾನಾನ್ ಹೇಳುವ ಪರಕೀಯ ಪ್ರಜ್ಞೆಯ ಮಾದರಿ ಕೆಲಸ ಮಾಡಿರಬಹುದೆಂದೆನಿಸುತ್ತದೆ. ಒಟ್ಟಾರೆ ಕೊನೆಗೆ ಬೆಳ್ಳಿ ತನ್ನ ತಂದೆಯ ಸಾವಿನ ದುರಂತಕ್ಕೆ ತನ್ಮೂಲಕ ಆತನ ಎಲ್ಲಾ ಪ್ರತಿಭಟನೆಯ ಸ್ವರೂಪ ಅಂತ್ಯವಾಗಲು ಕಾರಣವಾಗುತ್ತಾಳೆ.

ಚೆಮ್ಮೀನಿನಲ್ಲಿ ಕರುತ್ತಮ್ಮ ತಂದೆ ತಾಯಿಯರು ತೋರಿಸಿದ ಅನಾಥ ಪಳನಿಯನ್ನು ಮದುವೆಯಾಗುತ್ತಾಳೆ. ಮಾನಸಿಕವಾಗಿ ಆಕೆ ಈಗಲೂ ಪರೀಕುಟ್ಟಿಯನ್ನು ಪ್ರೀತಿಸುತ್ತಾಳೆ. ಮದುವೆಯ ಹಿಂದಿನ ರಾತ್ರಿ ಅವರ ಸಂಭಾಷಣೆಯಿಂದ ಅದು ವ್ಯಕ್ತವಾಗುತ್ತದೆ. ಆದರೆ ಮದುವೆಯ ಮನೆಯಲ್ಲಿ ಪಪ್ಪು ಕರುತ್ತಮ್ಮಳ ಅನೈತಿಕತೆಯನ್ನು ಕುರಿತು ಆಡುತ್ತಾನೆ. ಅದರಿಂದ ಗಾಬರಿಗೊಂಡ ತಾಯಿ ಚಕ್ಕಿ ಈ ಕಡಲ ತೀರವನ್ನು ಬಿಟ್ಟು ಕರುತ್ತಮ್ಮಳನ್ನು ಗಂಡನ ಮನೆಗೆ ಕಳುಹಿಸುತ್ತಾಳೆ. ಹಾಗೆ ಹೋಗಿದ್ದರಿಂದ ಕೋಪಗೊಂಡ ಚಂಪನ್ ತನ್ನ ಮಗಳು ತನ್ನ ಜೀವನದಲ್ಲಿ ಸತ್ತಳೆಂದು ಭಾವಿಸುತ್ತಾನೆ. ಮುಂದೆ ಕರುತ್ತಮ್ಮ ತನ್ನ ಗಂಡನ ಮನೆ ತೃಕ್ಕನ್ನಪೊಳೆಯಲ್ಲಿ ಆರಂಭದಲ್ಲಿ ತನ್ನ ಗಂಡ ತನ್ನನ್ನು ಪ್ರೀತಿಸುತ್ತಾನೆಯೇ? ಎಂಬ ಜಿಜ್ಞಾಸೆಗೆ ಒಳಗಾಗುತ್ತಾಳೆ. ಆದರೆ ಮೊದಲ ದಿನವೇ ಅವರಿಬ್ಬರ ದೈಹಿಕ ಸಮಾಗಮವಾಗುತ್ತದೆ. ಕರುತ್ತಮ್ಮ ಕೂಡ ಆಗ ಸಹಜವಾಗಿಯೇ ವರ್ತಿಸುತ್ತಾಳೆ. ಮುಂದೆ ಗಂಡನ ಸಹಜವಾದ (ಸಮಾಜ ಹುಟ್ಟು ಹಾಕಿದ) ಕೆಲವು ಅನಗತ್ಯ ಅನುಮಾನಗಳಿಂದ ಕರುತ್ತಮ್ಮ ಮತ್ತು ಪಳನಿಯ ಸಂಸಾರದಲ್ಲಿ ಏರು ಪೇರುಗಳಾಗುತ್ತವೆ.

ಪ್ರತಿಬಾರಿಯು ತನ್ನ ಪರಿಶುದ್ಧತೆಯನ್ನು ತೋರಿಸಬೇಕಾದ ಅನಿವಾರ್ಯತೆ ಕರುತ್ತಮ್ಮನದು. ಆಕೆ ದೈಹಿಕವಾಗಿ ಈಗಲೂ ಪರಿಶುದ್ಧಳು. ಮಾನಸಿಕವಾಗಿ ಪರಿಕುಟ್ಟಿಯ ಆಸೆ ಕನಸಾಗಿ ಹೋಗಿದೆ. ತನ್ನ ಗಂಡನ ಬಾಳು ಸುಗಮವಾಗಲು ಆಕೆ ದುಡಿಯುತ್ತಾಳೆ. ಆದರೆ ಆಕೆಯನ್ನು ಪಳನಿಯಂಥ ಅನಾಥನಿಗೆ ಕೊಟ್ಟ ವಿಚಾರ ಮತ್ತೆ ಮತ್ತೆ ಈಕೆಯ ಬಗ್ಗೆ ಸಂಶಯ ಮೂಡಿಸುತ್ತದೆ. ನೀರ್ಕುನ್ನಿಯಲ್ಲಿ ಸ್ಥಿತಿವಂತನಲ್ಲದ ಚಂಪನ್ ದೋಣಿ ಕೊಂಡಾಗಲೂ ಇಂತಹ ಅನುಮಾನಗಳು ಬಂದಿದ್ದವು ಎಂಬುದನ್ನು ಗಮನಿಸಬೇಕು.

ಆ ಕಡಲ ತೀರದಲ್ಲಿ ಯಾರೂ ಮಾನಸಿಕವಾಗಿ ಪ್ರೀತಿಸಿರಲಿಲ್ಲವೇ, ಎಂಬ ಮಾತೇ ಭ್ರಮೆಯದ್ದು ಎಂದು ಕಾದಂಬರಿಯ ನಿರೂಪಣೆಯಲ್ಲಿ ಗೋಚರವಾಗುತ್ತದೆ. ಕೊನೆಯಲ್ಲಿ ಪಂಚಮಿ ಮತ್ತು ಕರುತ್ತಮ್ಮ ಮಾತನಾಡುವಾಗ ಸಹಜವಾಗಿಯೇ ಪಂಚಮಿ ಪರೀಕುಟ್ಟಿಯ ಬಗ್ಗೆ ವಿವರಿಸುತ್ತಾಳೆ. ಆಗ ಅಲ್ಲಿಯೇ ಪಳನಿ ಇರುವುದು ಆಕೆಗೆ ತಿಳಿಯುವುದಿಲ್ಲ. ಇದರಿಂದಾಗಿ ಆಕೆಯ ಸಂಸಾರದಲ್ಲಿ ಬಿರುಗಾಳಿ ಬೀಸುತ್ತದೆ. ಕೊನೆಯಲ್ಲಿ ಕರುತ್ತಮ್ಮ ಪರೀಕುಟ್ಟಿಯೊಡನೆ ದೈಹಿಕವಾಗಿ ಸಂಧಿಸಿ ಸಾಯುತ್ತಾಳೆ. ಕರುತ್ತಮ್ಮಳ ಈ ನಡವಳಿಕೆಯನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ನೋಡಬಹುದು. ಕರುತ್ತಮಳಿಗೆ ಪರೀಕುಟ್ಟಿಯ ಬಗ್ಗೆ ಪ್ರೇಮವಿದ್ದರೂ ಆಕೆ ಅದನ್ನು ಈಡೇರಿಸಿಕೊಳ್ಳಲು ಅಶಕ್ತಳು. ಆಕೆಯ ಸುತ್ತಲೂ ಇರುವ ಸಾಮಾಜಿಕ, ಕೌಟುಂಬಿಕ, ಧಾರ್ಮಿಕ ಪರಿಸರ ಈ ಭಾವನೆಗಳನ್ನು ಬೆಳೆಯಗೊಡುವುದಿಲ್ಲ. ಇದರಿಂದ ಪರೀಕುಟ್ಟಿಯ ಬಗೆಗಿನ ಪ್ರೇಮ ಆಕೆಯ ಸುಪ್ತ ಚೇತನಕ್ಕೆ ತಳ್ಳಲ್ಪಟ್ಟಿರುತ್ತದೆ. ಇದು ಆಕೆ ವಾಸಿಸುವ ಸಾಮಾಜದ ದೃಷ್ಟಿಯಿಂದ ಸುಸಂಸ್ಕೃತವಲ್ಲ. ಅನೈತಿಕವಾದದ್ದು, ಆದರೆ ಶೈಶವದಲ್ಲಿಯೇ ಬೆಳೆದ ಈ ಬಯಕೆ ಸುಪ್ತ ಚೇತನಕ್ಕೆ ಸೇರಿ ಅಲ್ಲಿ ಶಕ್ತಿಯುತವಾಗಿ ಉಳಿದ್ದಿದ್ದು ಹೊರಬರಲು ಅವಕಾಶವನ್ನು ನಿರೀಕ್ಷಿಸುತ್ತಿರುತ್ತದೆ. ಆದರೆ ಜಾಗೃತ ಮನಸ್ಸು ಅದನ್ನು ನಿಯಂತ್ರಿಸುತ್ತಿರುತ್ತದೆ. ಮಾನಸಿಕವಾಗಿ ಜಾಗೃತ ಸ್ಥಿತಿ ದುರ್ಬಲವಾದಗ ಸಹಜವಾಗಿ ಸುಪ್ತ ಚೇತನ ತನ್ನ ಕ್ರಿಯೆಯಲ್ಲಿ ವಿಜಯಿಯಾಗುತ್ತದೆ. ಫ್ರಾಯ್ಡ್‌ನ ಮಾನಸಿಕ ಸ್ಥಿತಿಯ ಸಿದ್ಧಾಂತದ ಹಿನ್ನೆಲೆಯಲ್ಲಿ ಇದು ತುಂಬಾ ಮಹತ್ವವಾದದ್ದು. ಕರುತ್ತಮ್ಮನ ನಡವಳಿಕೆ ಈ ರೀತಿಯದ್ದು. ಕೊನೆಯಲ್ಲಿ ಕರುತ್ತಮ್ಮ ಪರೀಕುಟ್ಟಿ ದೈಹಿಕವಾಗಿ ಒಂದಾದ ಮೇಲೆ, ಮತ್ತೆ ಜಾಗೃತಗೊಂಡ ಅವರ ಪ್ರಜ್ಞೆ ಹೊರ ವಾಸ್ತವಿಕ ಪ್ರಪಂಚಕ್ಕೆ ಹೆದರಿ ಅನಿವಾರ್ಯವಾಗಿ ಸಾವಿಗೆ ಶರಣಾಗಬೇಕಾಗುತ್ತದೆ.

ಸಂಕಪ್ಪಯ್ಯ ಮತ್ತು ಆರಯ್ಯ

ಚೋಮನದುಡಿಯಲ್ಲಿ ತುಂಬಾ ಚರ್ಚಿತ ಪಾತ್ರಗಳಲ್ಲಿ ಸಂಕಪ್ಪಯ್ಯನವರದ್ದೂ ಒಂದು. ಕಾದಂಬರಿಯಲ್ಲಿ ಸಂಕಪ್ಪಯ್ಯನವರು ಕಾದಂಬರಿಯ ಒಟ್ಟು ಆಶಯದ ಹಿನ್ನೆಲೆಯಲ್ಲಿಯೇ ವಿಶಿಷ್ಟ ರೀತಿಯಲ್ಲಿ ಪರಿಚಿತರಾಗುತ್ತಾರೆ. ಪಂಜದ ಜಾತ್ರೆಯಿಂದ ಹಿಂದಿರುಗುವ ಮೊದಲ ತಂಡದಲ್ಲಿ ಅವರಿದ್ದಾರೆ. "ಅವರ ಮುಂದಿದ್ದವನು ಹಳ್ಳಿಯ ಒಬ್ಬ ಬಡ ರೈತ, ಅವನ ಹಿಂದಿರುವವರು ಸಂಕಪ್ಪಯ್ಯನವರು. ಅವರ ಮುಖವು ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಅವರಿಗಿಂತ ಹಿಂದಿನ ಹತ್ತೆಂಟು ಜನ ಗಂಡಸು ಮತ್ತು ಹೆಂಗಸರ ಮುಖ ಕಾಣಿಸುವುದಿಲ್ಲ. ಸಂಕಪ್ಪಯ್ಯನವರು ಊರಿನ ಜಮೀನ್ದಾರರಲ್ಲಿ ಒಬ್ಬರು. ಅವರೂ ಸೂಡಿಯ ಬೆಳಕಿಗೆ ಕಾಲುಗಳನ್ನು ಮುಂದಕ್ಕೆ ತಳ್ಳುತ್ತಾ ನಡೆಯುತ್ತಿದ್ದಾರೆ. ಅವರಿಗೂ ತುಂಬಾ

[illegible]

ಆಯಾಸವಾಗುತ್ತಿದೆ” ಇಡೀ ಕಾದಂಬರಿಯಲ್ಲಿ ಸಂಕಪ್ಪಯ್ಯನವರದ್ದು. ತುಂಬಾ ಸಂರ್ಕೀವಾದ ಪಾತ್ರ ಅದು ಈ ಮೇಲಿನ ಸನ್ನಿವೇಶದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಬಡರೈತ ಹಿಡಿದ ಸೂಡಿನ ಬೆಳಕಿನಲ್ಲಿ ಸಂಕಪ್ಪಯ್ಯನವರ ಮುಖ ಮಾತ್ರ ಸ್ಪಷ್ಟವಾಗಿ ಕಾಣುತ್ತಿರುವುದು. ಭಾರತೀಯ ಸ್ಥಿತಿಯೊಳಗೆ ಕೇವಲ ಉಳ್ಳವರ ಮುಖಮಾತ್ರ ಕಾಣುವುದನ್ನು ಇದು ಸೂಚಿಸುತ್ತದೆ.

ಚೆಮ್ಮೀನಿನಲ್ಲಿ ಆರಯ್ಯನ ಪರಿಚಯವಾಗುವುದು. ಚಂಪನ್ ದೋಣಿ ತಂದಾಗ, ಜನರು ಅವನ ಹತ್ತಿರ ಹೋಗಿ ಚಂಪನ್ ತನ್ನ ಮಗಳ ಮದುವೆಯನ್ನು ಮಾಡದೆ, ಜಾತಿಗೆ ಮೀರಿ ದೋಣಿಯನ್ನು ಕೊಳ್ಳುತ್ತಿದ್ದಾನೆ. ಎಂದು ದೂರಿದಾಗ. “ನನ್ನ ನಿತ್ಯದ ಬಾಕಿ ಬರಬೇಕು” ಎಂದು ಎಚ್ಚರಿಸುವಷ್ಟು ಮಾತ್ರ ಅವನ ಕೆಲಸ. ಪರಂಪರೆಯನ್ನು, ಜಾತಿ ವ್ಯವಸ್ಥೆಯನ್ನು ಪ್ರತಿನಿಧಿಸುವ ಆರಯ್ಯ ದುಡ್ಡಿನ ಆಸೆಗೋಸ್ಕರ ತನ್ನ ಧಾಂಬಿಕ ನಿಯಮವನ್ನು ಸಡಿಲಿಸುತ್ತಾನೆ.

ಸಂಕಪ್ಪಯ್ಯ ತಾನು ಪ್ರತಿನಿಧಿಸುವ ವ್ಯವಸ್ಥೆಯನ್ನು ವಿರೋಧಿಸಿ ಸರಿಯಾದ ನಿಲುವನ್ನು ಪ್ರಕಟಿಸಲು ಅಶಕ್ತ, ಅವರು ಚೋಮ ಪ್ರತಿಬಾರಿ ಭೂಮಿಯನ್ನು ಕೇಳಿಕೊಂಡು ಬಂದಾಗಲೂ ಸಹಾನುಭೂತಿಯಿಂದ ಅನುಕಂಪದಿಂದ ವರ್ತಿಸಬಲ್ಲರೇ, ಹೊರತು ಅದನ್ನು ಮೀರಿ ಹೋಗಲಾರರು. ಅವರು ಚೋಮ ಕೆಲಸಕ್ಕೆ ಬಾರದೆ ಇದ್ದರೂ ಕೂಲಿ ಕೊಡಬಲ್ಲರು; ಅವನ ಮಕ್ಕಳ ಸಾವಿನಲ್ಲಿ ಕನಿಕರ ಪಡಬಲ್ಲರು, ಚೋಮನಿಗೋಸ್ಕರ ತಾಯಿಯ ಬಳಿ ಒಂದಲ್ಲ ಮೂರು ಬಾರಿ ಭೂಮಿಯನ್ನು ಕೇಳಬಲ್ಲರು ಅಷ್ಟೇ. ಶ್ರೀಯುತ ಆರ್.ವಿ. ಭಂಡಾರಿಯವರು ಸಂಕಪ್ಪಯ್ಯನವರ ಪಾತ್ರದ ಕುರಿತು ಬರೆಯುತ್ತಾ “ಸಂಕಪ್ಪಯ್ಯನ ಮನಸ್ಸಿನಲ್ಲಿ ತಮಗೆ ಇಷ್ಟೊಂದು ಬಂಜರು ಬಿದ್ದ ಭೂಮಿ ಇದೆ. ಒಂದು ತುಂಡು ಯಾಕೆ ಕೊಡಬಾರದು ಎಂದು ಅನಿಸುತ್ತದೆ. ಆದರೆ ಅದು ಅವರ ಮಾನವೀಯ ಕಳಕಳಿಯಲ್ಲ. ಬದಲಾಗಿ ಬಂಜರು ಭೂಮಿಯಲ್ಲಿ ಬೆಳೆಯಾದರೆ ಲಾಭವಲ್ಲವೆ. ಎನ್ನುವ ಬುದ್ಧಿವಂತಿಕೆಯದು”[೧] ಎನ್ನುತ್ತಾರೆ. ಆದರೆ ಇದಕ್ಕೆ ಕಾದಂಬರಿಯಲ್ಲಿ ಯಾವ ಆಧಾರವೂ ಇಲ್ಲ. ಬರಗೂರು ರಾಮಚಂದ್ರಪ್ಪನವರ, ಈ ಹೇಳಿಕೆಯನ್ನು “ಊಳಿಗಮಾನ್ಯ ಪದ್ಧತಿಯ ಪ್ರತಿನಿಧಿಯಾದ ಸಂಕಪ್ಪಯ್ಯ ಅದರ ಎಲ್ಲಾ ಸೂಕ್ಷ್ಮಗಳನ್ನು ಪ್ರಕಟಿಸುವ ಪಾತ್ರವಾಗುವುದಿಲ್ಲ”[೨] ಒಪ್ಪಬಹುದು. ಆದರೆ ಅದು ಮಾನವೀಯತೆಯ ಪಾತ್ರವಲ್ಲ ಎಂದು ಹೇಳಲು ಬರುವುದಿಲ್ಲ.

ಅವರು ವಾಸ ಮಾಡುವ ಸಮಾಜ, ಕುಟುಂಬದ ಆಚೆ ಹೋಗಿ ಬದಲಾವಣೆಯನ್ನು ಬಯಸಲಾರ ಅಷ್ಟೆ. ಅವರ ಸಹಾನೂಭೂತಿ ನಮ್ಮ ಅಮ್ಮ ಸಾಯುವವರೆಗೆ ಈ ಮಾತು ಬೇಡ ಎನ್ನುವಷ್ಟು ಮುಂದುವರೆಯುತ್ತದೆ. ಆದರೆ ಜಮೀನು ಕೊಡಲು ಸಾಮಾಜಿಕ ಅಡ್ಡಿಯಿದೆ. ಆದರೂ ಕೂಡ “ತಮ್ಮ ಮೂಲದ” ಆಳಾದ ಚೋಮನನ್ನು ಮೊದಲ ಬಾರಿ ಕಳಸಕ್ಕೆ ಕೆಲಸಕ್ಕೆ ಕಳುಹಿಸಿದ್ದು ಯಾಕೆ? ಅವರು ಒಮ್ಮೆ “ ತೋಟದ ಸಾಲ ಉಳಿದಿಲ್ಲವಷ್ಟೆ ಎಂದು ಕೇಳಿದರೆ ಹೊರತು ಸಾಲ ತೀರಲಿಲ್ಲವೆಂದಾಗ ಯಾಕೆ ಸಾಲ ತೀರಿಸಿ ತಮ್ಮ ಮೂಲದ ಆಳನ್ನು ಉಳಿಸಿಕೊಳ್ಳಲಿಲ್ಲ. ಹಣ ಕೊಡುವುದಕ್ಕೂ ಅವರಿಗೆ ಸಾಮಾಜಿಕ ಅಡ್ಡಿ ಇತ್ತೇ? ಆದರೆ ಚೋಮನ ಎತ್ತುಗಳನ್ನು ಕೊಟ್ಟರೆ ದುಡ್ಡು ಕೊಡಲು ಸಿದ್ಧರು, ಅಥವಾ ಅಡವಿಟ್ಟರೆ ಹಣ ಕೊಡಬಲ್ಲರು. ಹಾಗೆಯೇ ಹಣದ ಸಹಾಯ ಮಾಡಲಾರದಷ್ಟು ಒಳ್ಳೆಯವರು.

---

೧ ದಲಿತಮಾರ್ಗ, ಆರ್.ವಿ. ಭಂಡಾರಿ ; ಪುಟ–೩೨೩ ಸಂ. ಅರವಿಂದ ಮಾಲಗತ್ತಿ

೨. ಸಂಸ್ಕೃತಿ:ಶ್ರಮ ಮತ್ತು ಸೃಜನ ಶೀಲತೆ, ಬರಗೂರು ರಾಮಚಂದ್ರಪ್ಪ ; ಪುಟ–೨೮೮

ಚೆಮ್ಮೀನಿನಲ್ಲಿ ಆರಯ್ಯ ಕರುತ್ತಮ್ಮನ ಮಗಳ ಮದುವೆಯ ಸಂದರ್ಭದಲ್ಲಿ ತನಗೆ ಬರಬೇಕಾದ ಹಣಕ್ಕಾಗಿ ಹಠವಿಡಿದು ಚಕ್ಕಿಯ ದುರಂತಕ್ಕೆ ಕಾರಣನಾಗುತ್ತಾನೆ. ನಂತರ ಕರುತ್ತಮನ ಪರವಾಗಿ ಮಾತನಾಡುವಷ್ಟು ಒಳ್ಳೆಯವನು ಅಷ್ಟೇ. ಅದು ಸಂದರ್ಭದಿಂದ ರೂಪಿತವಾದ ಅವನ ನಡವಳಿಕೆಯೇ ಹೊರತು ಅದು ಆತನ ಸ್ಥಾಯೀಭಾವವಲ್ಲ. ನೀರ್ಕುನ್ನಿ ಮತ್ತು ತೀರ್ಕುನ್ನಿ ಕಡಲ ತಡಿಯ ಜನಗಳಲ್ಲಿ ಜಗಳವಾದರೆ ತನ್ನ ಊರಿನವರನ್ನು ಪೊಲೀಸಿನವರಿಂದ ಬಿಡಿಸುತ್ತಾನೆ. ಆದರೆ ಅದೂ ಆತನ ಸಾಮರ್ಥ್ಯವನ್ನು ತೋರಿಸುವ ಒಂದು ನಿಲುವು ಅಷ್ಟೇ. ಎಲ್ಲರೂ ತನಗೆ ಕಾಣಿಕೆ ಕೊಟ್ಟು ವೇಲಾಯುಧನ್ ಕೊಡಲು ನಿರಾಕರಿಸಿದಾಗ ಆತನನ್ನು ಜೈಲಿಗೆ ಕಳುಹಿಸುತ್ತಾನೆ. ಮುಂದೆ ಚಂಪನ್ ಆರಯ್ಯ ಸ್ತ್ರೀಯನ್ನು ಮದುವೆ ಮಾಡಿಕೊಂಡಾಗ ಅದನ್ನು ವಿರೋಧಿಸುತ್ತಾನೆ. ಚಂಪನ್‌ನ್ನು ಕರೆಸಿ ವಿಚಾರಿಸುತ್ತಾನೆ. ಚಂಪನ್ ಆತನನ್ನು ತಿರಸ್ಕರಿಸಿದಾಗ ಏನೂ ಮಾಡಲಾರದ ಅಸಹಾಯಕ ಸ್ಥಿತಿ ಆರಯ್ಯನದು. ಸಂಕಪ್ಪಯ್ಯನವರು ಸಮಾಜದ ಚೌಕಟ್ಟನ್ನು ಮೀರಿ ವರ್ತಿಸಲಾಗದೆ ಅದರೊಳಗೆ ಸಾಧ್ಯವಾಗುವ ಮಾನವೀಯತೆಯನ್ನು ಪ್ರಕಟಿಸಿದರೆ, ಆರಯ್ಯ ಸಮಾಜದ ಅಂತಹ ಚೌಕಟ್ಟೇ ತನ್ನ ಅಸ್ತಿತ್ವವನ್ನು ಕಳೆದುಕೊಂಡರೂ ಅದರ ನೆಪದಲ್ಲಿ ತನ್ನ ಅಸ್ತಿತ್ವ ಸ್ಥಾಪಿಸಲು ಹೆಣಗುವ ಪಾತ್ರವಾಗಿದೆ.

ಮನ್ವೇಲ ಮತ್ತು ಪರೀಕುಟ್ಟಿ

ಈ ಎರಡೂ ಪಾತ್ರಗಳಲ್ಲಿ ಯಾವುದೇ ಸಾಮ್ಯತೆ ಇಲ್ಲ. ಆದರೆ ಈ ಪಾತ್ರಗಳ ವೈದೃಶ್ಯವು ಕಾದಂಬರಿಯಲ್ಲಿ ಮತ್ತು ತೌಲನಿಕ ಅಧ್ಯಯನದಲ್ಲಿ ತುಂಬಾ ಮುಖ್ಯವಾಗಿದೆ. ಮನ್ವೇಲ ಒಬ್ಬ ಶೋಷಕ. ಬಡವರನ್ನು, ದಲಿತರನ್ನು ಬೇರೆ ಬೇರೆಯ ಊರುಗಳಿಂದ ಕಳಸಕ್ಕೆ ಕರೆ ತಂದು ಅಮಾನವೀಯವಾಗಿ ಕೊಟ್ಟಿಗೆಯಲ್ಲಿ ಕೂಡಿ ಹಾಕಿ ಅವರಿಗೆ ಬರಬೇಕಾದ ಭತ್ಯಕ್ಕೆ ಹಂಚು ತರುವ ಸೇರೆಗಾರ ಈತ. ಒಂದಕ್ಕೆ ನಾಲ್ಕು ಲೆಕ್ಕ ಹೇಳುವ ಆಸಾಮಿ. ಇವನ ಈ ಶೋಷಕ ಪ್ರವೃತ್ತಿ, ದುಡಿಮೆಗೆ ಮಾತ್ರ ಸೀಮಿತಗೊಳ್ಳುವುದಿಲ್ಲ. ಈತ ಕೆಲಸಕ್ಕೆ ಬಂದ ಬೆಳ್ಳಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಾನೆ. ಮಂಗೇಲನಿಗೆ ಆಕೆಯನ್ನು ಕರೆದುಕೊಂಡು ಹೋಗಿ ಒಪ್ಪಿಸುತ್ತಾನೆ. ಆಧುನಿಕ ಕಾಲದ ವ್ಯಭಿಚಾರಿಯ ಪಾತ್ರದಂತೆ ತೋರುತ್ತಾನೆ. ಆತನಿಗೆ ಬೆಳ್ಳಿಯ ದೇಹ ಬೇಕಾಗಿದೆಯೇ ಹೊರತು ಆಕೆಯ ಪ್ರೀತಿ ಅಲ್ಲ. ಮಂಗೇಲನ ಜೊತೆ ಇದ್ದು ಬಂದು, ಬೆದರಿದ ಬೆಳ್ಳಿ, ಮನೆಗೆ ಹೋಗುತ್ತೇನೆಂದರೆ ಮನ್ವೇಲ ತನ್ನ ಹೆಂಡತಿ ಕೆಲವೇ ದಿನದಲ್ಲಿ ವಾಪಸ್ಸು ಬರುತ್ತಾಳೆ ಎಂದು ಎಣಿಸಿ ಬೆಳ್ಳಿ ಹೋಗಲು ಒಪ್ಪುತ್ತಾನೆ. ದೇಹದ ರುಚಿ ಬಯಸಿ ಮತ್ತೆ ಬೆಳ್ಳಿಯನ್ನು ಹುಡುಕಿಕೊಂಡು ಮನೆಗೆ ಬರುತ್ತಾನೆ. ಈತನ ನಡವಳಿಕೆಯೇ ಚೋಮನ ದುರಂತಕ್ಕೆ ಕಾರಣವಾಗುತ್ತದೆ.

ಚೆಮ್ಮೀನಿನಲ್ಲಿ ಪರೀಕುಟ್ಟಿಯದು ಆರಂಭದಲ್ಲಿ ಶುದ್ಧ ಪ್ರೇಮವೇ. ಆದರೆ ಕರುತ್ತಮ್ಮಳ ಬಗ್ಗೆ ಆತನಿಗೆ ಇದ್ದದ್ದು ಒಂದು ಆಕರ್ಷಣೆಯೇ ಹೊರತು ಪ್ರಬುದ್ಧವಾದ ಪ್ರೇಮವೆಂದು ಕರೆಯಲು ಬರುವುದಿಲ್ಲ. ಪರೀಕುಟ್ಟಿಯ ತಂದೆ ಅಬ್ದುಲ್ ಅಷ್ಟು ಹೇಳಿದರು ಕೇಳಿಸಿಕೊಳ್ಳದೆ ತಂಗಿಯ ಮದುವೆಗಿಂತ ಕರುತ್ತಮ್ಮನಿಗೆ

ಸಹಾಯ ಮಾಡುವುದರಲ್ಲೇ ಸುಖ ಆತನಿಗೆ ಆರ್ಥಿಕ ನಷ್ಟವನ್ನು ಅನುಭವಿಸಿದರೂ ಪ್ರೀತಿಯ ಗುಂಗಿನಲ್ಲೇ ಕಡಲ ತೀರದಲ್ಲಿ ತಿರುಗುತ್ತಿರುತ್ತಾನೆ. ಈ ಪ್ರೇಮದ ಸೆಳೆತ ಬಲ್ಲ ಚಕ್ಕಿ ಪರೀಕುಟ್ಟಿಯಿಂದ ಭಾಷೆ ತೆಗೆದುಕೊಳ್ಳುತ್ತಾಳೆ. ನೀನು ಇನ್ನೂ ಮುಂದೆ ಆಕೆಗೆ ಅಣ್ಣ ಎಂದು ಪರಿಪರಿಯಾಗಿ ಹೇಳಿದರೂ ಅದು ಅವನ ಒಳಮನಸ್ಸಿಗೆ ಹೋಗುವುದೇ ಇಲ್ಲ. ಚಂಪನ್ ಆತನಿಂದ ಸೃಷ್ಟಿಯಾಗಿರುವ ದುರಂತದ ಗಂಭೀರತೆಯನ್ನು ಹೇಳಿದ ಮೇಲೂ ಆತ ಕರುತ್ತಮ್ಮನನ್ನು ಹಿಂಬಾಲಿಸಿ ಆಕೆಯೊಡನೆ ಕೂಡುತ್ತಾನೆ. ಚಕ್ಕಿ ಅನೇಕ ಬಾರಿ ವಿವೇಕ ಹೇಳಿದ್ದನ್ನು ಮರೆಯುತ್ತಾನೆ. ಪರೀಕುಟ್ಟಿಗೆ ಕರುತ್ತಮ್ಮ ಸುಖ, ಶಾಂತಿಗಿಂತ ತನಗೆ ಕರುತ್ತಮ್ಮ ಸಿಗಬೇಕೆಂಬ ಭಾವವಿದ್ದಂತೆ ಕಾಣುತ್ತದೆ. ಇದೂ ಪುರುಷನೊಬ್ಬನ ಲೈಂಗಾಸಕ್ತಿ ಮೀರಿದ ಪಾತ್ರವಾಗಿ ಕೊನೆಯಲ್ಲಿ ಕಾಣಿಸುವುದಿಲ್ಲ.

ಚೋಮನ ದುಡಿಗಿಂತ ಚೆಮ್ಮೀನು ಕಾದಂಬರಿಯ ಹರವು ದೊಡ್ಡದಾದುದರಿಂದ ಅನೇಕ ಪಾತ್ರಗಳೂ ಸೃಷ್ಟಿಗೊಂಡಿವೆ. ಚೆಮ್ಮೀನಿನಲ್ಲಿ ಅತ್ಯಂತ ಶಕ್ತಿಯುತ ಪಾತ್ರಗಳಲ್ಲಿ ಚಕ್ಕಿಯದ್ದು ಒಂದು. ಅದೇ ತರಹವ್ರೂ ಪಳನಿಯ ಪಾತ್ರವು ತುಂಬಾ ಮುಖ್ಯವಾದದ್ದು. ಕಾದಂಬರಿಯ ಅಂತ್ಯದಲ್ಲಿ ಸಮುದ್ರದ ಒಳಗೆ ಪಳನಿಗೆ ಸಂಭವಿಸುವ ಸಾವು ಮನೋವಿಜ್ಞಾನದ ದೃಷ್ಟಿಯಿಂದ ತುಂಬಾ ಮನೋಜ್ಞವಾದದ್ದು. ಅಂತೆಯೇ ಚಮೀನಿನಲ್ಲಿ ಅಚ್ಚಕುಞ್ಞ, ನಲ್ಲಪೆಣ್ಣು, ಕೊಚ್ಚುವೇಲು, ವೇಲಾಯುಧನ್ ಮುಂತಾದ ಅನೇಕ ಶಕ್ತಿಯುತ ಪಾತ್ರಗಳಿವೆ. ಚೋಮನದುಡಿಯಲ್ಲಿ ಚನಿಯ, ಗುರುವ ಅಜಿಲ ಚಿನ್ನ, ಬಿರುಮ ಪೂಜಾರಿ, ಕಾರ್ಕಳದ ಪೊಮ್ಮ ಮುಂತಾದ ಅನೇಕ ಪಾತ್ರಗಳಿವೆ. ಆದರೆ ಈ ನಿಬಂಧದ ವ್ಯಾಪ್ತಿಯಲ್ಲಿ ಅಷ್ಟೆಲ್ಲವನ್ನು ಚರ್ಚಿಸಲು ಸಾಧ್ಯವಿಲ್ಲದ್ದರಿಂದ ಪ್ರಮುಖ ಪಾತ್ರಗಳ ಸಾದೃಶ್ಯ ಮತ್ತು ವೈದೃಶ್ಯವನ್ನಷ್ಟೇ ನೋಡಲಾಗಿದೆ.

✦✦✦✦✦✦✦

ಅಧ್ಯಾಯ – ೭

ತೌಲನಿಕ ಅಭಿವ್ಯಕ್ತಿ ವಿಧಾನ

ಕಾದಂಬರಿ ಪ್ರಕಾರದಲ್ಲಿ ಅಭಿವ್ಯಕ್ತಿ ವಿಧಾನ ಅತ್ಯಂತ ಮುಖ್ಯವಾದುದು. ಅಭಿವ್ಯಕ್ತಿ ವಿಧಾನವು ಕಾದಂಬರಿಯ ಭಾಷೆ ಮತ್ತು ತಂತ್ರವನ್ನು ಒಳಗೊಂಡಿರುತ್ತವೆ. ಕಾದಂಬರಿಯ ವಸ್ತುವೇ ಬಹುತೇಕ ಬಾರಿ ಕಾದಂಬರಿಯ ಭಾಷೆಯನ್ನು ನಿರ್ಧರಿಸುತ್ತದೆ. ವಸ್ತು ಗಹನವೂ ಮಹತ್ತರವೂ ಆಗಿದ್ದರೆ ಅದಕ್ಕೆ ಸೂಕ್ತವಾದ ಭಾಷೆಯಲ್ಲಿ ಅದು ಅಭಿವ್ಯಕ್ತಗೊಳ್ಳುತ್ತದೆ. ವಸ್ತು ಸರಳವಾಗಿದ್ದು ಗಂಭೀರವಾದ ಭಾಷೆಯಲ್ಲಿ ಅಭಿವ್ಯಕ್ತಗೊಂಡರೆ ಆಗ ವಸ್ತು ಮತ್ತು ಭಾಷೆಯ ನಡುವೆ ಬಿರುಕು ಕಾಣಿಸಿಕೊಳ್ಳುತದೆ. ಕೆಲವೊಮ್ಮೆ ವಸ್ತು ಗಹನವಾಗಿದ್ದು ಭಾಷೆ ಸರಳವಾಗಿದ್ದರೂ, ಅಪಾಯ. ಇಂಥ ಸೂಕ್ಷ್ಮತೆಯ ಹಿನ್ನೆಲೆಯಲ್ಲಿಯೇ ಕೃತಿಯ ಶ್ರೇಷ್ಠತೆ ನಿಂತಿರುತ್ತದೆ. ಕಾದಂಬರಿ ಮಿಕ್ಕ ಸಾಹಿತ್ಯ ಪ್ರಕಾರಕ್ಕಿಂತ ಭಿನ್ನವಾಗಿ ವೈಚಾರಿಕತೆಗೆ ಹತ್ತಿರವಾದ ಬರಹವಾದುದರಿಂದ, ಅದು ಗದ್ಯದ ಭಾಷೆಯನ್ನು ಆಯ್ಕೆಮಾಡಿಕೊಂಡಿದೆ. ಜೊತೆಗೆ ಈ ಭಾಷೆಯ ಬಳಕೆ ಗದ್ಯವೆಂದ ಮಾತ್ರಕ್ಕೆ ಅದು ಯಥಾವತ್ತಾದ ಆಡು ಮಾತಲ್ಲ ಅದೊಂದು ರೂಪಾಂತರಗೊಂಡ ಭಾಷೆ.

ಇದೇ ಸಂದರ್ಭದಲ್ಲಿ ಅತ್ಯಂತ ಮುಖ್ಯವಾದ ಇನ್ನೊಂದು ಸಂಗತಿಯನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಅದೇನೆಂದರೆ ಕಾದಂಬರಿಯ ಸಂರಚನೆಗೂ ಸಮಾಜದ ಸಂರಚನೆಗೂ ಮತ್ತು ವೈಚಾರಿಕತೆಗೂ ಭಿನ್ನತೆ ಇದೆಯೆ? ಎಂಬುದು. ಖ್ಯಾತ ಚಿಂತಕ ಬಾಕ್ತಿನ್ ಕಾದಂಬರಿಂದರೇನು ಎಂದು ವ್ಯಾಖ್ಯಾನಿಸುತ್ತ ಕಾದಂಬರಿ ಸಾಮಾಜಿಕ ಭಾಷಾ ಪ್ರಕಾರಗಳ ವೈವಿಧ್ಯ ಕಲಾತ್ಮಕವಾಗಿ ಸಂಘಟಿಸಿವೆ, ವೈಯಕ್ತಿಕ ಧ್ವನಿಗಳ ವೈವಿದ್ಯ. ಈ ಹೇಳಿಕೆಯನ್ನು ಗಮನಿಸಿದರೆ ಭಾಷೆ ಒಂದು ಸಾಮಾಜಿಕ ಉತ್ಪನ್ನ. ಅಂತಹ ಭಾಷೆ ಸಮಾಜದ ಅನೇಕ ಗೃಹೀತಗಳನ್ನು ಒಳಗೊಂಡಿರುತ್ತದೆ. ಅಂತಹ ಭಾಷೆ ನೇರವಾಗಿ ಸಾಹಿತ್ಯದಲ್ಲಿ ಬಳಕೆಗೊಳ್ಳದೆ ರೂಪಾಂತರವಾಗಿ ಬಳಕೆಗೊಳ್ಳುತ್ತದೆ. ಇದೇ ಭಾಷೆಯ ಕಲಾತ್ಮಕತೆಯಾಗಿರುತ್ತದೆ. ಒಂದು ಕಾದಂಬರಿಯ ಭಾಷೆ ಕಲಾತ್ಮಕವಾಗಿ ಶ್ರೇಷ್ಠವಾಗಿದೆ ಎಂದು ತೋರುತ್ತಿದ್ದಂತೆ, ಅದು ಶ್ರೇಷ್ಠವೆಂದು ಪರಿಗಣಿಸಬೇಕಾಗಿಲ್ಲ. ಆ ಕಲಾತ್ಮಕತೆಯ ಒಳಗೆ ಪ್ರತಿಪಾದಿತವಾಗುತ್ತಿರುವ ಸಮಾಜದ ಗೃಹೀತಗಳೇನು ಎಂಬುದನ್ನು ನೋಡಬೇಕಾಗುತ್ತದೆ. ಕೆಲವೊಮ್ಮೆ ಕವಿತೆಗಳು ಕಲಾತ್ಮಕತೆಯ ಸೋಗಿನಲ್ಲಿ ಬಹುಜನ ವಿರೋಧಿ ನಿಲುವನ್ನು ತಾಳುತ್ತವೆ. ಈ ಕಾರಣದಿಂದಲೇ ಕುವೆಂಪುವಂತಹ ಮಹತ್ವದ ಲೇಖಕರು ಅನೇಕ ಪ್ರತಿಭಟನೆಯ ಕವನಗಳನ್ನು ತೀರ ಸರಳವಾಗಿ ಬರೆದರು. ಕುವೆಂಪುರವರಿಗೆ ಇದ್ದ ಭಾಷೆಯ ಬಗೆಗಿನ ಎಚ್ಚರವಿದು.

ಒಂದು ಕಾದಂಬರಿಯ ಭಾಷೆಯನ್ನು ಮೊದಲೇ ಹೇಳಿದಂತೆ ಕೃತಿಯ ವಸ್ತುವು ನಿರ್ಧರಿಸುತ್ತದೆ. ಜೊತೆಗೆ ಕಾದಂಬರಿಯ ಹೊರಸಂಗತಿಗಳೂ ಕೂಡ ಕಾದಂಬರಿಯ ಭಾಷೆಯನ್ನು ಅದರೊಡನೆ ಒಟ್ಟು

ಆಲೋಚನೆಯನ್ನು ನಿಯಂತ್ರಿಸುತ್ತದೆ. ಕಾದಂಬರಿಯ ವಸ್ತು ತನ್ನೊಳಗಿನ ಅಗತ್ಯಕ್ಕೆ ತಕ್ಕಂತೆ ಸರಳ ಹಾಗೂ ಕಲಾತ್ಮಕವಾಗಿ ಭಾಷೆಯನ್ನು ಬಳಸಿಕೊಳ್ಳುತ್ತದೆ. ಆದರೆ ಸರಳತೆ ಕಾದಂಬರಿಯ ವಸ್ತುವಿನ ಅಭಿವ್ಯಕ್ತಿಯ ಅವಗುಣವಾಗಬೇಕಾಗಿಲ್ಲವೆಂಬ **"ರಾಗೌ"** ರವರ ಮಾತು ಒಪ್ಪಿತವಾದದ್ದು. ಅಂತೆಯೇ ಕಾದಂಬರಿಯ ಹೊರಗಿನ ಸಂಗತಿಗಳು ಕೂಡ ಕಾದಂಬರಿಯ ಭಾಷೆಯನ್ನು ಮೂರು ತರಹ ಒಳಗೊಳ್ಳುತ್ತವೆ ಅವುಗಳಂದರೆ

- ಕಾದಂಬರಿಯ ಪಾತ್ರ ಹಾಗೂ ನಿರೂಪಕನ ಬಳಕೆಯ ಭಾಷೆಗಳಲ್ಲಿ ಅಬೇಧ.
- ಕಾದಂಬರಿಯ ನಿರೂಪಕನ ಭಾಷೆ ಗ್ರಾಂಥಿಕವೂ, ಪಾತ್ರದ ಭಾಷೆ ಪ್ರಾದೇಶಿಕವೂ ಆಗುವುದು.
- ಕಾದಂಬರಿಯ ನಿರೂಪಕ ಹಾಗೂ ಪಾತ್ರವೆರಡರ ಭಾಷೆಯೂ ಪ್ರಾದೇಶಿಕವಾಗುವುದು.

ಈ ಮೇಲಿನ ಸಂಗತಿಗಳು ಚಾರಿತ್ರಿಕ ಒತ್ತಡದಿಂದ ನಿರ್ಮಾಣವಾಗುತ್ತದೆ. ಎಂಬುದು ಗಮನಿಸಬೇಕಾದ ಸಂಗತಿ. ಈ ಎಲ್ಲಾ ಹಿನ್ನೆಲೆಯಲ್ಲಿ ಚೋಮನದುಡಿ ಹಾಗೂ ಚೆಮ್ಮೀನು ಕಾದಂಬರಿಗಳನ್ನು ನೋಡಬಹುದು. ಆದರೆ ನಾನು ಮೊದಲೆ ಒಂದು ಸಂಗತಿಯನ್ನು ಸ್ಪಷ್ಟಪಡಿಸುತ್ತೇನೆ. ಚೆಮ್ಮೀನು ಮೂಲಕೃತಿಯನ್ನು ನಾನು ಓದಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಚೆಮ್ಮಿನು ಕುರಿತ ನನ್ನ ಮಾತುಗಳು ಊಹನಾತ್ಮಕ ಸಿದ್ಧಾಂತದ ಮೇಲೆ ನಿಂತಿದೆ.

ಮೊದಲಿಗೆ ಈ ಎರಡು ಕಾದಂಬರಿಗಳು ನಿರೂಪಕ ಹಾಗೂ ಪಾತ್ರಗಳ ಭಾಷೆಯನ್ನು ಗ್ರಾಂಥಿಕವಾಗಿಯೇ ಬಳಸುತ್ತವೆ. ಚೋಮ ಇತರ ಪಾತ್ರಗಳೊಡನೆ ಆಡುವಾಗ ಹಾಗೂ ನಿರೂಪಕ ಸನ್ನಿವೇಶವನ್ನು ನಿರೂಪಿಸುವಾಗ ಯಾವುದೇ ಅಂತರವಿಲ್ಲ. ಇದೇ ಮಾತು ಚೆಮ್ಮೀನಿಗೂ ಅನ್ವಯಿಸುತ್ತದೆ. ಇದು ಈ ಕಾದಂಬರಿಗಳಲ್ಲಿ ಸಾಧಿತವಾಗಿರುವುದು, ಚಾರಿತ್ರಿಕ ಒತ್ತಡದಿಂದ. ನವೋದಯ ಕಾಲದ ಆರಂಭದ ಬಹುತೇಕ ಕಾದಂಬರಿಗಳು ಈ ರೀತಿಯಾಗಿಯೇ ರಚನೆಯಾದವು. ಇದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಅವುಗಳೆಂದರೆ –

- ಆ ಕಾಲದಲ್ಲಿ ಓದುವ ವರ್ಗ ಕೇವಲ ಮಧ್ಯಮ ಉನ್ನತ ವರ್ಗವಾಗಿತ್ತು. ಆದ್ದರಿಂದ ಅವರಿಗೆ ಗ್ರಾಂಥಿಕ ಭಾಷೆಯಲ್ಲಿಯೇ ಬರೆಯಬೇಕಾಯಿತು.
- ಆ ಕಾಲದ ಎಲ್ಲಾ ಕೃತಿಗಳ ಅಂತರ್ಯದಲ್ಲಿ ಜಾಗೃತವಾಗಿದ್ದ ರಾಷ್ಟ್ರೀಯ ಕಲ್ಪನೆ ಹಾಗೂ ಕರ್ನಾಟಕ ಏಕೀಕರಣದ ಚಿಂತನೆ. ಈ ಚಿಂತನೆಯ ಹಿಂದೆ ಒಂದು ಕ್ರಮವಿತ್ತು. ಅವೆಂದರೆ ಭಾರತದಂತಹ ದೇಶದಲ್ಲಿರುವ ಎಲ್ಲಾ ಸಂಸ್ಕೃತಿ ಪ್ರಾಪ್ತವಾದದ್ದು ಈ ಭಾರತವೆಂಬ ಏಕ ಸಂಸ್ಕೃತಿಯಿಂದ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಆದ್ದರಿಂದ ಅಂತಹ ಭಾರತೀಯ ರಾಷ್ಟ್ರೀಯ ಕಲ್ಪನೆ. ನಾವೆಲ್ಲ ಒಂದೇ ಎಂಬ ಚಿಂತನೆ, ಇಂತಹ ಬರವಣಿಗೆಯನ್ನು ಸೃಷ್ಟಿಸಿತ್ತು. ಇನ್ನೂ ಸೂಕ್ಷ್ಮವಾಗಿ ಈ ವಿಂಗಡನೆಯನ್ನು ನೋಡಿದರೆ ಈ ಮಧ್ಯಮ ಉನ್ನತವರ್ಗದ ಸಂಸ್ಕೃತಿಯೇ ದೇಶದ ಕೇಂದ್ರ ಸಂಸ್ಕೃತಿ ಎಂದು, ಬಹುಸಂಖ್ಯಾತ ಜನರ ಅಂಚಿನ ಸಂಸ್ಕೃತಿ

ಇದರಿಂದ ಬಂದಿದೆ. ಈ ಕೇಂದ್ರ ಸಂಸ್ಕೃತಿಯ ಅಲ್ಪಸಂಖ್ಯಾತದಿಂದ ಎಂಬುದು, ಆ ಕಾಲದ ಎಲ್ಲಾ ಲೇಖಕರಲ್ಲೂ ಪ್ರಜ್ಞಾಪೂರ್ವಕವಾಗಿಯೇ ಕೆಲಸಮಾಡಿದೆ. ಕುವೆಂಪು ಮಾತ್ರ ಪ್ರಜ್ಞಾನಪೂರ್ವಕವಾಗಿಯೆ ಇದರೊಳಗೆ ಬೇಧ ಕಾಣಿಸಿದರೂ, ಆ ಕಾರಣದಿಂದಲೇ ಕುವೆಂಪು ಈ ಕಾಲದ ಮುಖ್ಯ ಲೇಖಕರಾಗುವುದು.

ಭಾಷೆಯ ಇನ್ನೊಂದು ಮುಖ್ಯ ಸಂಗತಿಯನ್ನು ಇದೇ ಸಂದರ್ಭದಲ್ಲಿ ಗಮನಿಸಬೇಕು. ಕನ್ನಡದ ನವೋದಯ ಕಾದಂಬರಿಕಾರರಲ್ಲಿ ಈ ಮಧ್ಯಮ ಉನ್ನತವರ್ಗದಿಂದ ಬಂದವರು ಎಂಬುದು. ಇದು ಕಾಕತಾಳಿಯವಿರಬಹುದು. ಆದರೆ ಗಮನೀಯ, ಇದರಿಂದ ಹೊಳೆಯುವ ಸಂಗತಿಯೆಂದರೆ ಕಾದಂಬರಿಯಲ್ಲಿ ಬಳಕೆಗೊಳ್ಳುವ ಭಾಷೆ ಸುತ್ತಲಿನ ಸಮಾಜದ ಸಂರಚನೆಯೊಂದಿಗೆ ಸಂಬಂಧ ಹೊಂದಿದೆ ಎಂಬುದು.

ಇಂತಹ ಲೇಖಕರು ಸಮಕಾಲೀನ ವೈಜ್ಞಾನಿಕ ಸಂಗತಿಗಳ ಮೇಲೆ ಹುಟ್ಟಿಕೊಂಡ ವೈಚಾರಿಕತೆಗಳನ್ನು ಒಪ್ಪಿಕೊಂಡ ಲೇಖಕರು. ಅಂತಹ ವೈಚಾರಿಕತೆಯನ್ನು ಬಿಂಬಿಸುವ ಭಾಷೆಯ ಮೂಲಕ ತನಗೆ ಹೊರತಾದ ವಸ್ತುವನ್ನು ನೋಡುವಾಗ ಸಹಜವಾಗಿಯೇ ಅದರೊಳಗೆ ಒಂದು ರೀತಿಯ ನಿರ್ಲಿಪ್ತತೆ ಕಾಣಿಸಿಕೊಳ್ಳುತ್ತದೆ. ಸಮಕಾಲೀನ ವೈಚಾರಿಕತೆಯಿಂದ ಪ್ರಭಾವಿತರಾದ ಲೇಖಕರು ಕೆಳವರ್ಗದವರ ಶೋಷಣೆಯಂತಹ ವಸ್ತುವನ್ನು ನಿರ್ವಹಿಸುವಾಗ ಅಖಂಡವಾಗಿ ಗ್ರಹಿಸಲಾರರು ಮತ್ತು ಅದೊಂದು ರಮ್ಯ ಕಥೆ ಆಗಿಬಿಡುವ ಸಾಧ್ಯತೆ ಇರುತ್ತದೆ. ಈ ಕಾರಣದ ಹಿನ್ನೆಲೆಯಲ್ಲಿ ದಲಿತ ಲೇಖಕರ ಸಾಹಿತ್ಯವನ್ನು ಅವರ ಅಭಿವ್ಯಕ್ತಿ ವಿಧಾನವನ್ನು ನೋಡಬೇಕು. ಅವರು ನಿರೂಪಕ ಹಾಗೂ ಪಾತ್ರವೆಂಬ ಒಂದೇ ಭಾಷೆಯಲ್ಲಿ ಮಾತನಾಡುತ್ತಾರೆ. ಆದುದರಿಂದಲೇ ಅವರು ಪ್ರಾದೇಶಿಕ ಭಾಷೆಯಲ್ಲಿ ಕೃತಿ ರಚಿಸಿದರು. ಅವರ ವಸ್ತು ಮತ್ತು ವೈಚಾರಿಕತೆಯ ನಡುವೆ ಯಾವ ಅಂತರವೂ ಇಲ್ಲ.

ಕಾರಂತರ **ಚೋಮನದುಡಿ** ಹಾಗೂ ತಕಳೀಯವರ **ಚೆಮ್ಮೀನು** ಕೃತಿಗಳು ಗ್ರಾಂಥಿಕ ಭಾಷೆಯನ್ನು ಬಳಸಿಕೊಂಡಿವೆ. ಅವು ಚಾರಿತ್ರಿಕ ಸಂದರ್ಭದ ಒತ್ತಡದಲ್ಲಿ ಹುಟ್ಟಿದ್ದು ಎಂಬುದನ್ನು ಗಮನಿಸಬೇಕು. ಕಾರಂತರನ್ನು ಈ ಬಗ್ಗೆ ಪ್ರಶ್ನಿಸಿದಾಗ ಚೋಮ ತುಳುವಿನಲ್ಲಿ ಮಾತನಾಡುತ್ತಾನೆ. ನಾನು ಕನ್ನಡಿಗರಿಗೆ ಕಾದಂಬರಿ ಬರೆಯುತ್ತಿರುವುದು ಆದುದರಿಂದ ಕನ್ನಡದಲ್ಲಿ ಚೋಮ ಮಾತನಾಡುತ್ತಾನೆ ಎಂದು ಹೇಳಿದ್ದಾರೆ. ಈ ಮಾತೇ ವಿಷಯವನ್ನು ಮೇಲ್ಪದರದಲ್ಲಿ ವಿವರಿಸುತ್ತಿರುವುದನ್ನು ತೋರಿಸುತ್ತದೆ. ಆದರೆ ಕಾರಂತರು ಕಾದಂಬರಿಯಲ್ಲಿನ ಒಳಗಡೆಯ ವಸ್ತುವಿನ ಅಭಿವ್ಯಕ್ತಿಗೆ ಅಪಚಾರವಾಗದಂತೆ ಭಾಷೆಯನ್ನು ಬಳಸಿದ್ದಾರೆ. ಭಾಷೆಯ ಕಲಾತ್ಮಕತೆಯ ಸಂದಿನಲ್ಲಿ ವಾಸ್ತವ ಸಂಗತಿಗಳು ಜಾರುವುದು, ಕಣ್ಮರೆಯಾಗುವುದು ಇಲ್ಲ ಎಂಬುದನ್ನು ಗಮನಿಸಬೇಕು. ಆದರೆ ವಾಸ್ತವವನ್ನು ಮೀರಲಾರದೆ ಯಥಾಸ್ಥಿತಿಯಲ್ಲೇ ಲೇಖಕ ನಿಂತನೆಂದರೆ ಆತನ ಸೃಜನಶೀಲ ದ್ಯಾನದಲ್ಲೇ ಏನೊ ಲೋಪವಾಗಿದೆ ಎಂದು ಅರ್ಥ. ಕಾರಂತರು ಚೋಮನ ಮೂಲಕ ತೋರಿಸುವ ಕುರುಡ ಸಮಾಜವು ಕಲೆಯ ಚೌಕಟ್ಟಿನಲ್ಲಿ ಸುಂದರವಾಗಿದೆ. ಅದರ ಸೌದರ್ಯವೇ ಸಾಮಾಜಿಕ ವಾಸ್ತವವಲ್ಲ ಎಂಬ ಡಾ. ಮೊಗಳ್ಳಿಗಣೇಶ್[೧] ಅವರ ಮಾತು ಸರಿಯಾದದ್ದು. ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯ ಮಾನವೀಯ ಸಾಧ್ಯತೆಗಳನ್ನು ತೋರಿಸುತ್ತಾ,

೧ ದಲಿತ ಕಥನ ; ಪುಟ–೧೭

ಅವರ ಜೊತೆ ಕಳಸದ ಕ್ರೈಸ್ತ (ಆಗ ದಲಿತರು ಮತಾಂತರವಾಗುತ್ತಿದ್ದರೂ ಚೋಮ ಅದನ್ನು ಬಯಸಿದ ಎಂಬುದನ್ನು ಗ್ರಹಿಸಿ) ಧರ್ಮದ ಶೋಷಣೆ ಇದಕ್ಕಿಂತ ಭೀಕರವಾದದು ಎನ್ನುತ್ತಾರೆ. ಈ ಸಮಾಜ ನಿಧಾನಗತಿಯ ಬದಲಾವಣೆಗೆ ಅಡ್ಡಿ ತೋರಿಸುತ್ತಾರೆಯೇ ಹೊರತು ಕಾರಂತರು ಈ ಶೋಷಣೆಯ ಕ್ರೂರತೆ ನಮಗೆ ಅದರ ಸರ್ವ ವ್ಯಾಪ್ತಿಯಲ್ಲಿ ತೆರೆದುಕೊಳ್ಳುವುದಿಲ್ಲ. ಇದೊಂದು ಚೋಮನಂತಹ ವಾಸ್ತವವನ್ನು ಮೀರಿ ಆಸೆಪಟ್ಟ ಮನುಷ್ಯನ ದುರಂತವಾಗಿ ಬಿಡುತ್ತದೆ.

ಆದರೂ ಕೂಡ **ಚೋಮನದುಡಿ** ಮತ್ತು **ಚೆಮ್ಮೀನು** ಮಿತಿಯೊಳಗೆ ಉನ್ನತಿಯನ್ನು ಸಾಧಿಸಿದ ಕೃತಿಯೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಚೋಮನ ದುಡಿಯ ಆರಂಭದ ಅಧ್ಯಾಯದಲ್ಲಿ ಭೋಗನಹಳ್ಳಿಯನ್ನು ಪರಿಚಯಿಸುವ ರೀತಿ ಕಲಾತ್ಮಕ ಭಾಷೆಯಲ್ಲಿ ತುಂಬ ಶಕ್ತವಾಗಿಯೇ ಅಭಿವ್ಯಕ್ತಗೊಂಡಿದೆ. ಕಲಾತ್ಮಕತೆ ಎಂದರೆ ಕೇವಲ ಸುಂದರವೆಂದಷ್ಟೆ ಅಲ್ಲ, ಅನಂತವನ್ನು ಒಳಗೊಂಡದ್ದು ಎಂದು ಅರ್ಥ. "ಕತ್ತಲೆಂದರೆ ಕತ್ತಲು! ಕಣ್ಣಿಗೆ ಕಣ್ಣು ತಾಗಿಸಿದರೂ ಏನೂ ಕಾಣುವ ಹಾಗಿಲ್ಲ." ಚಂದ್ರನು ಮೂಡುವುದಕ್ಕೆ ಇನ್ನು ಎರಡು ಗಳಿಗೆಗಳು ಇರಬಹುದು. ಬಿದಿರಿನ ದಿಂಡುಗಳು ಒಂದು ಇನ್ನೊಂದನ್ನು ತಿಕ್ಕಿ ಚಿರೀಂ ಎಂಬ ಸಚೇತನ ಪ್ರಾಣಿಗಳ ಕಿರುಚಾಟವನ್ನು ಅಣಕಿಸುತ್ತಲೂ ಇಲ್ಲ. ಈ ಊರಿನ ಹೆಸರು ಭೋಗನಹಳ್ಳಿ.[೧] ಹೊಸ ಗಾಳಿಗೆ, ಬದಲಾವಣೆಗೆ ತನ್ನನ್ನು ತಾನು ತೆರೆದುಕೊಳ್ಳದೆ ಇರುವ ಭೋಗನಹಳ್ಳಿಯನ್ನು ಕುರಿತಾದ ವರ್ಣನೆ ಕಾದಂಬರಿಯ ಎಲ್ಲಾ ಆಶಯಗಳೊಂದಿಗೆ ಶಕ್ತಿಯುಕ್ತವಾಗಿಯೇ ಅಭಿವ್ಯಕ್ತಗೊಂಡಿದೆ. ಮುಂದೆ ಈ ಭೋಗನಹಳ್ಳಿಯು ಹೋದರೇನು, ಇದ್ದರೇನು ಎಂಬ ವಾಕ್ಯವನ್ನು ಗಮನಿಸಿ, ಇಲ್ಲಿ ಭೋಗನಹಳ್ಳಿಗೆ ಎಂದು ಇಲ್ಲ. ಭೋಗನ ಹಳ್ಳಿಯು ಎಂದು ಇದೆ. ಅಂತಹ ಹಳ್ಳಿಯೇ ನಾಶವಾದರೂ ತಾನೇ ಏನು ಎಂದು ಅದರ ಭಾಷೆ ಸೂಚಿಸುತ್ತದೆ. ಅಂತೆಯೇ ಚೋಮನ ದುಡಿಯ ಸದ್ದನ್ನು ವರ್ಣಿಸುವ ಈ ಮಾತುಗಳು ಒಮ್ಮೆ "ಈ ಸ್ವರಗಳ ಆವೇಗ ಜೋರಾಗುತ್ತ ಸರಿಯುತ್ತ ಧಾವಿಸಿ ಪ್ರಾಣ ಬಿಡಲಿಸುವ ಪ್ರಾಣಿಯಾಂದರ ಎದೆಯ ಮಿಡತೆಗಳಂತೆ ಕೇಳುತ್ತವೆ. ಕೆಲವು ಬಾರಿ ಅದು ಮಂದಗತಿಯಿಂದ ಸರಿಯುವಾಗ ಚಂಬುಕುಟಿಗನೊಬ್ಬನ ಲಯಬದ್ಧವಾದ ಸುತ್ತಿಗೆಯ ಏಟುಗಳಂತೆ ಕೇಳಿಸುತ್ತದೆ. ಮರುಧ್ವನಿಯೊಂದಿಗೆ ಅದು ಮುರಿದು ಬಿದ್ದರೆ ಪ್ರಳಯಕ್ಕೆ ಇನ್ನು ಒಂದು ಗಳಿಗೆ ಉಳಿದಿಲ್ಲವೆನಿಸುತ್ತದೆ.[೨] ದುಡಿಯ ಹಿಂದಿರುವ ಶಕ್ತಿ ಮತ್ತು ಅವರ ನೋವನ್ನು ತುಂಬ ಸೊಗಸಾಗಿಯೇ ಈ ಸಾಲುಗಳು ಅಭಿವ್ಯಕ್ತಿಸಿವೆ. ಮುಂದೆ ಇದೇ ಅಧ್ಯಾಯದಲ್ಲಿ ಜಾತ್ರೆಯ ವರ್ಣನೆ, ದೇವರು ದೇವಸ್ಥಾನ, ಪುರೋಹಿತರ ವರ್ಣನೆ ಅದರ ಧ್ವನಿಪೂರ್ಣ ವಿಮರ್ಶೆಯೊಡನೆ ಬಂದಿರುವುದನ್ನು ಗಮನಿಸಬೇಕು. ಚೆಮ್ಮೀನಿನಲ್ಲಿ ಕರುತ್ತಮ್ಮ "ನನ್ನ ಕುರಿತು ಕಡಲ ತೀರದಲ್ಲಿ ಪರೀಕುಟ್ಟಿ ಹಾಡು ಹಾಡುತ್ತಿರಬೇಕಾದರೆ, ಮನೆಯಲ್ಲಿದ್ದ ಕರುತ್ತಮ್ಮನ ಸ್ಥಿತಿಯನ್ನು ಕುರಿತ "ಕರುತ್ತಮ್ಮ ಅತ್ತೇ ಬಿಟ್ಟಳು" ಆ ಕೋಣೆ ಬಾಗಿಲು ಬರಿಯ ತಡಕೆ, ಬೇಗ ತೆರೆಯಬಹುದು. ಅಥವಾ ತಾನಾಗಿಯೇ ತೆರೆಯಬಹುದು ಆದರೆ ಭೇಧಿಸಲಸಾಧ್ಯವಾದ ಒಂದು ಬಗೆಯ ಗೋಡೆಯೊಳಗೆ ಇದೆ ಅವಳ ವಾಸ ಕಡಲಮ್ಮನ ಮಕ್ಕಳು ಶತ ಶತಮಾನಗಳಿಂದ ಉಳಿಸಿ ಭದ್ರಪಡಿಸಿರುವ ಜೀವಿತ ವೇದಾಂತದ ಘನವಾದ, ಎತ್ತರವಾದ ಗೋಡೆ ಅದಕ್ಕೆ ಬಾಗಿಲಿಲ್ಲ, ಕಿಟಕಿಯಿಲ್ಲ,[೩] ಕಾದಂಬರಿಯ ಒಟ್ಟು ಐತಿಹ್ಯದ ಆಶಯಕ್ಕೆ ಅನುಗುಣವಾಗಿಯೇ ಅದೆಲ್ಲದರ ಸಾಧ್ಯತೆಯೊಡನೆ ಈ ಸಾಲುಗಳು ಅಭಿವ್ಯಕ್ತಗೊಂಡಿವೆ.

---

೧ ಚೊಮನದುಡಿ ; ಪುಟ–೧ ೩. ಕೆಂಪು ಮೀನು (ಚೆಮ್ಮೀನು) : ಪುಟ – ೭

೨. ಚೊಮನದುಡಿ ; ಪುಟ–೨

[illegible]

ಬಹಳ ದಿನಗಳವರೆಗೆ ಚೆಮ್ಮೀನು ಒಂದು ಪ್ರೇಮಕಾದಂಬರಿಯೆಂದೇ ಪ್ರಸಿದ್ಧಿಪಡೆದಿದ್ದು ಈ ಕಾರಣದಿಂದ. ವಸ್ತು ಅದರ ಭಾಷೆ ಮತ್ತು ತಂತ್ರವನ್ನು ಅದೇ ಕಂಡುಕೊಳ್ಳುತ್ತದೆ. ಈ ಕಾದಂಬರಿಯಲ್ಲೂ ಎಂದರೆ ಅದು ಆ ವಸ್ತುವಿನ ಮಿತಿಯೂ ಹೌದು ಬಳಸಿ ಭದ್ರಪಡಿಸಿರುವ ಜೀವಿತ ವೇದಾಂತದ ಘನವಾದ ಎತ್ತರವಾದ ಗೋಡೆ ಅದಕ್ಕೆ ಬಾಗಿಲಿಲ್ಲ, ಕಿಟಕಿ ಇಲ್ಲ, ಕಾದಂಬರಿಯ ಒಟ್ಟು ಐತಿಹ್ಯದ ಆಶಯಕ್ಕೆ ಅನುಗುಣವಾಗಿಯೇ ಅವರೆಲ್ಲ ಸಾಧ್ಯತೆಯೊಡನೆ ಈ ಸಾಲುಗಳು ಅಭಿವ್ಯಕ್ತಗೊಂಡಿವೆ.

ಚೋಮನ ದುಡಿಯ ಪ್ರತಿಮೆ ಅನೇಕ ಕಡೆ ಭಾಷೆ ಮಾಡಬಹುದನ್ನು ಶಕ್ತವಾಗಿ ಮಾಡಿದೆ. ಭಾಷೆಯ ಮಿತಿಯಲ್ಲಿ ಚೋಮನ ನೋವುಗಳನ್ನು ವರ್ಣಿಸುವ ಬದಲು ದುಡಿಯ ಪ್ರತಿಮೆಯ ಮೂಲಕ ಕಾರಂತರು ತೀವ್ರವಾಗಿಯೇ ಅಭಿವ್ಯಕ್ತಿಸಿದ್ದಾರೆ. ಇಡೀ ಕಾದಂಬರಿಯಲ್ಲಿ ಸರಳವಾಗಿಯೇ ಎಲ್ಲಾ ಸಂಗತಿಗಳನ್ನು ಕಾರಂತರು ಹೊರಡಿಸುತ್ತಾರೆ. ಆರಂಭದ ಅಧ್ಯಾಯದಂತೆ ಮಿಕ್ಕ ಕಡೆ ಭಾಷೆ ತನ್ನ ಅನಂತ ಸಾಧ್ಯತೆಗಳನ್ನು ಸಾಧಿಸುವುದಿಲ್ಲ. ಆದರೆ ಕೃತಿ ನಮ್ಮನ್ನು ಕಾಡುವುದಂತೂ ಸತ್ಯ ಸಂಗತಿ ಚೆಮ್ಮೀನಲ್ಲಿಯೂ ಕಥೆಯ ನೇರ ನಿರೂಪಣೆ ಇದ್ದ ಭಾಷೆಯು ಸರಳವಾಗಿ ಅಭಿವ್ಯಕ್ತಗೊಂಡಿರುವುದರಿಂದ ಅದಕ್ಕೂ ಮೇಲಿನ ಮಾತುಗಳು ಅನ್ವಯಿಸುತ್ತವೆ.

ತಂತ್ರ : ಚೋಮನದುಡಿ ಹಾಗೂ **ಚೆಮ್ಮೀನು** ಸರಳವಾದ ಅನುಕ್ರಮಣಿಕೆಯ ತಂತ್ರದಲ್ಲಿ ರಚಿತವಾದ ಕೃತಿಗಳು. ಕಥೆ ಆರಂಭದಿಂದ ಅಂತ್ಯದವರೆಗೆ ನೇರವಾಗಿ ಏರುಮುಖದಲ್ಲಿ ಕಥೆಯ ಘಟನೆಗಳು ನಡೆಯುತ್ತವೆ. ಜೊತೆಗೆ ನಿರೂಪಕ ಕೇಂದ್ರಿತಪ್ರಜ್ಞೆ ಕಾದಂಬರಿಯಲ್ಲಿ ಕೆಲಸ ಮಾಡುತ್ತದೆ. ಎಲ್ಲಾ ಪಾತ್ರ ಸ್ವಭಾವಗಳು ನಿರೂಪಕನ ಪ್ರಜ್ಞೆಯ ಹಿನ್ನೆಲೆಯಲ್ಲಿ ನಡೆಯುವುದನ್ನು ನೋಡಬಹುದು. ಈ ತಂತ್ರವೇ ಕಾದಂಬರಿಗೆ ಇರುವ ಅನಂತ ಸಾಧ್ಯತೆಯನ್ನು ಮೊಟಕುಗೊಳಿಸುತ್ತದೆ. ಇನ್ನೊಂದು ಅರ್ಥಕ್ಕೆ ಈ ತಂತ್ರ ಲೇಖಕನ ದೃಷ್ಟಿ ಕೋನವನ್ನು ತೆರೆದು ತೋರಿಸುತ್ತದೆ.

ಚೋಮನದುಡಿಯಲ್ಲಿ ಚೋಮನ ಬದುಕು ವರ್ಣಿತವಾದಂತೆ ಮಿಕ್ಕ ಪಾತ್ರಗಳ ಅಂತರಂಗ ಅಭಿವ್ಯಕ್ತಗೊಳ್ಳುವುದಿಲ್ಲ. ಅಂದರೆ ಒಂದು ಕೇಂದ್ರದ ಸುತ್ತ ಮಿಕ್ಕ ಪಾತ್ರಗಳು ಪೋಷಕವಾಗಿ ಆನುಷಂಗಿಕವಾಗಿ ಬರುತ್ತವೆ. ಅದು ಆ ವಸ್ತು ಕೇಂದ್ರದ ತೀವ್ರತೆಯನ್ನು ಹೆಚ್ಚಿಸುವುದಕ್ಕೆ ಮತ್ತು ಅದರ ಆತ್ಯಂತಿಕ ಸ್ಥಿತಿಯನ್ನು ಕಂಡುಕೊಳ್ಳುವುದಕ್ಕೆ ಸಾಧನವಾಗುತ್ತದೆ ಅಷ್ಟೆ. ಕುವೆಂಪುರವರ **ಮಲೆಗಳಲ್ಲಿ ಮದುಮಗಳು** ಹಾಗೂ ಇತ್ತೀಚಿನ ಕುಂವೀಯವರ **ಅರಮನೆ** ಕೃತಿಗಳಲ್ಲಿ ಇರುವ ಲೇಖಕನ ಸರ್ವಕೇಂದ್ರಿತ ಪ್ರಜ್ಞೆ ಸೃಷ್ಟಿಸುವ ಸಂಕೀರ್ಣತೆಯನ್ನು ಈ ಕಾದಂಬರಿಯಲ್ಲಿ ಕಾಣಲು ಸಾಧ್ಯವಿಲ್ಲ. ಚೋಮನ ಭಾವಪ್ರಪಂಚವನ್ನು ವರ್ಣಿಸುವಂತೆ ಬೆಳ್ಳಿಯ ಭಾವ ಪ್ರಪಂಚ ಸಂಕಪ್ಪಯ್ಯನ ಭಾವ ಪ್ರಪಂಚ ಅದರ ಎಲ್ಲಾ ಸಂಕೀರ್ಣತೆಗಳೊಡನೆ ತೆರೆದುಕೊಳ್ಳುವುದಿಲ್ಲ.

ಚೋಮನದುಡಿ ಕಾದಂಬರಿಯ ಈ ತಂತ್ರ ಲೇಖಕರು ವಸ್ತುವನ್ನು ಗ್ರಹಿಸುವ ಮಿತಿಯನ್ನು ತೋರಿಸುತ್ತದೆ. ಚೋಮನ ಶೋಷಣೆ ಅವನೊಬ್ಬನ ವೈಯಕ್ತಿಕ ಶೋಷಣೆಯಾಗಿ ತೋರುತ್ತದೆಯೇ ಹೊರತು ಬೇರೇನೂ ಅಲ್ಲ. ಹಾಗೆ ತೋರಿಸುವ ಲೇಖಕರ ಮನೋಭಾವಕ್ಕೆ ಈ ರೀತಿಯ ತಂತ್ರಕ್ಕೆ ಮೊರೆಹೋಗಿರಬಹುದು. ಆದರೆ ಕಾರಂತರು ತಂತ್ರಕ್ಕಾಗಿ ತಲೆ ಕೆಡಿಸಿಕೊಂಡವರಲ್ಲ. ಅವರ **ಅಳಿದ ಮೇಲೆ** ಬಿಟ್ಟರೆ ತಂತ್ರದ ದೃಷ್ಟಿಯಿಂದ ಅಂತಹ ಸಿದ್ಧಿ ಪಡೆದ ಕೃತಿಗಳಿಲ್ಲ. ಕೇವಲ ತಂತ್ರಕ್ಕಾಗಿ ತಂತ್ರ ಬಂದರೆ ಅದು ದೋಷವೇ ಆದರೆ **ಚೋಮನ ದುಡಿಯಂತ** ವಸ್ತುವಿಗೆ ಇದು ಶಕ್ತವಾದ ತಂತ್ರವಲ್ಲವೆನಿಸುತ್ತದೆ. ಈ ಕಾರಣದಿಂದಲೇ ಕನ್ನಡ ವಿಮರ್ಶಾಲೋಕದಲ್ಲಿ ಚೋಮ ಮತ್ತು **ಮಲೆಗಳಲ್ಲಿ ಮದುಮಗಳಲ್ಲಿನ** ನಾಯಿಗುತ್ತಿ ಇವರಲ್ಲಿ ಯಾರು ಶ್ರೇಷ್ಠರು ಎಂಬ ಚರ್ಚೆ ಶುರುವಾಗಿದ್ದು; ಮತ್ತು ನಾಯಿಗುತ್ತಿ ಶ್ರೇಷ್ಠವೆಂದು ಹೆಚ್ಚು ಜನ ವಿಮರ್ಶಕರು ಒಪ್ಪಿದ್ದಾರೆ.

ಚೆಮ್ಮೀನು ಕೃತಿಯಲ್ಲಿ ತಗಳೀಶಿವಶಂಕರಪಿಳ್ಳೆಯವರು ಕಾದಂಬರಿಯಲ್ಲಿ ಘಟಿಸಬಹುದಾದ ಅನಾಹುತಕ್ಕೆ ಬೇಕಾದಂತೆ ಕಥೆಯನ್ನು ನಡೆಸುತ್ತಾರೆ ಎನಿಸುತ್ತದೆ. ಕಾದಂಬರಿಕಾರರಿಗೆ ಕಾದಂಬರಿಯ ಹಿನ್ನೆಲೆಗಿರುವ "ಮಿಥ್'ನ್ನು ನಿಜವಾಗಿಸುವುದು ಮುಖ್ಯವಾದಂತೆ ತೋರುತ್ತದೆ. ಆದರೆ ಕಾದಂಬರಿ ಅಂತರಾಳದಲ್ಲಿ ತುಂಬ ರೆಬೆಲ್ ಆಗಿದ್ದರೂ. ಅದರ ಸರಳ ನಿರೂಪಣಾ ವಿಧಾನ ಕೃತಿಯನ್ನು ಬೇರೆ ತರಹ ಗ್ರಹಿಸುವಂತೆ ಮಾಡುತ್ತದೆ. ಕರುತ್ತಮನ ಪಾತ್ರ ಅಭಿವ್ಯಕ್ತಗೊಂಡಂತೆ ಪರೀಕುಟ್ಟಿಯ ಪಾತ್ರ ಅಭಿವ್ಯಕ್ತಗೊಂಡಿಲ್ಲ. ಕರುತ್ತಮ್ಮನ ಪಾತ್ರ ಕಾದಂಬರಿಯ 'ಮಿಥ್' ವೊಂದರ (ಮಾನವ ಶಾಸ್ತ್ರೀಯ ಹಾಗೂ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ತಗಳೀಯವರು ಗಹನವಾಗಿ ಅಭ್ಯಾಸ ಮಾಡಿದ್ದಾರೆ) ತೆರೆದು ತೋರಿಸಲು ಸೃಷ್ಟಿಗೊಂಡಂತೆ ಹಾಗೂ ಪರೀಕುಟ್ಟಿಯ ಪಾತ್ರ ಅದಕ್ಕೆ ಪೋಷಕವಾಗಿ ಬಂದಿದೆ. ನಿರೂಪಕನ ನಿರೂಪಣೆಯ ಭಾಗಗಳು ಇಂತಹ ವೈಚಾರಿಕ ಹಿನ್ನೆಲೆಯಲ್ಲಿಯೇ ಕೆಲಸ ಮಾಡಿವೆ.

ಆದರೆ ಎರಡೂ ಕಾದಂಬರಿಗಳಲ್ಲೂ ಸಂರಚನೆಯ ಕೊರತೆಯೇನು ಇಲ್ಲ. ಈ ಸರಳತೆ ಸಂರಚನೆಗೆ ಯಾವ ಅಡ್ಡಿಯನ್ನೂ ಉಂಟು ಮಾಡಿಲ್ಲ. ಇಬ್ಬರೂ ಕಾದಂಬರಿಕಾರರು ತಮ್ಮ ವೈಚಾರಿಕ ನಿಲುವಿನಿಂದ ತಮಗೆ ಹೊರತಾದ ವಸ್ತುವನ್ನು ನಿರ್ವಹಿಸಲು ಹೊರಟಿರುವುದೇ ಇಂತಹ ಕೆಲವು ಮಿತಿಗಳಿಗೆ ಕಾರಣವಾಗಿದೆ.

✦✦✦✦✦✦✦

ಅಧ್ಯಾಯ – ೮

ತೌಲನಿಕ ಧೋರಣೆ

ಸಾಹಿತ್ಯ ರಚನೆಯಾಗುವಾಗ ಅದು ಒಂದು ವಸ್ತುವನ್ನು ಒಳಗೊಂಡಿರುತ್ತದೆ. ಆ ವಸ್ತು ಎರಡು ರೀತಿ ಇರುತ್ತದೆ. ಒಂದು ಅದು ಪುರಾಣಕ್ಕೆ, ಚರಿತ್ರೆಗೆ ಸಂಬಂಧಿಸಿದ್ದು ಇರಬಹುದು. ಅಥವಾ ಪ್ರಚಲಿತ ಬದುಕಿಗೆ ಸಂಬಂಧಿಸಿದ್ದಿರಬಹುದು. ಒಂದು ಪರಿ. ಈ ಎರಡು ಕೃತಿಗಳನ್ನು ನಿರ್ವಹಿಸುವಾಗ ಲೇಖಕ ಈ ಕಾಲದ ಸಂಗತಿಗಳ ಮೂಲಕವೇ ಕೃತಿಯನ್ನು ನೋಡುವುದು. ಇನ್ನೊಂದು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಯಾಕೆಂದರೆ ಪ್ರತಿಗಾಮಿತನ ಅದರ ಅರಿವಿಗೆ ಬರದೆ ಕೃತಿಯಲ್ಲಿ ಸ್ಥಾನಪಡೆದಿರಬಹುದು. ಆದುದರಿಂದಲೇ ಅನೇಕರು ಪುರಾಣ ಚರಿತ್ರೆಗಳನ್ನು ಕೃತಿಗಳಲ್ಲಿ ಬಳಸಿಕೊಳ್ಳಲು ಹಿಂಜರಿಯುತ್ತಾರೆ. ಹಾಗೆ ಬಳಸಿಕೊಂಡರೆ ಕೆಲವರು ತಮ್ಮ ಪ್ರತಿಗಾಮಿತನಕ್ಕೆ ಅನುಗುಣವಾಗಿಯೇ ಬಳಸಿಕೊಳ್ಳುತ್ತಾರೆ. ಆದರೆ ಕುವೆಂಪು, ಕಾರ್ನಾಡರಂತಹವರು ಮಾತ್ರ ಅದನ್ನು ಮೀರುತ್ತಾರೆ.

ಪ್ರತಿಯೊಬ್ಬ ಸಾಹಿತಿಯ ಕೃತಿ ರಚನೆಯ ಸಂದರ್ಭದಲ್ಲಿ ಎರಡು ಮುಖ್ಯ ಸಂಗತಿಗಳನ್ನು ನಿರ್ಧರಿಸಿಕೊಂಡಿರುತ್ತಾನೆ.

೧) ಕೃತಿಯ ವಸ್ತು ೨) ಅಭಿವ್ಯಕ್ತಿ.

ಅಭಿವ್ಯಕ್ತಿ ಕಲಾತ್ಮಕವಾಗಿರಬೇಕು ಎಂಬುದು ಎಲ್ಲಾ ಲೇಖಕರ ಅಭಿಮತವಾಗಿರುತ್ತದೆ. ಅದನ್ನು ಈ ಹಿಂದೆಯೇ ನೋಡಿದ್ದೇವೆ. ಆದರೆ ಕೃತಿಯ ವಸ್ತು ಕ್ರಾಂತಿಕಾರಕ ನಿಲುವನ್ನು ಪ್ರಕಟಿಸುತ್ತದೆ. ಕೃತಿಕಾರ ತನ್ನ ನಿಲುವನ್ನು ಪ್ರಕಟಿಸಲು ತಾನೇ ಅದಕ್ಕೆ ಅನುಗುಣವಾದ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಪ್ರಚಲಿತ ವಿದ್ಯಮಾನದ ಯಾವುದೋ ಸಂಗತಿ ಅದನ್ನು ಬಾಧಿಸುತ್ತದೆ. ಅದನ್ನು ನೋಡಿ ಅದರ ಬಗ್ಗೆ ತನ್ನದೇ ಆದ ಅಭಿಪ್ರಾಯಕ್ಕೆ ಲೇಖಕ ಬರುತ್ತಾನೆ. ನಂತರ ಅದರ ಅಭಿವ್ಯಕ್ತಿಗೆ ಒಂದು ವಸ್ತುವನ್ನು ಆಯ್ದುಕೊಳ್ಳುತ್ತಾನೆ. ನಂತರ ಆ ವಸ್ತುವನ್ನು ಕಲಾತ್ಮಕಗೊಳಿಸುತ್ತಾನೆ. ಇಲ್ಲಿ ಗಮನಿಸಬೇಕಾದದ್ದು. 'ವಸ್ತು' ಯಾವುದು ಎಂಬುದು. ವಸ್ತುವಿನಲ್ಲಿ ಎರಡು ಅಂಶಗಳಿರುತ್ತದೆ. ಒಂದು ವಾಸ್ತವವಾದಕ್ಕೆ ಸಂಬಂಧಿಸಿದ್ದು; ಇನ್ನೊಂದು ಕಲ್ಪನೆಗೆ ಸಂಬಂಧಿಸಿದ್ದು "ವಾಸ್ತವಿಕತೆ ಧೋರಣೆಯಾಗಬಹುದಾಗಿದೆಯೇ ಹೊರತು ಧೋರಣೆ ವಾಸ್ತವವಾಗಲಾರದು." ಎಂಬ ರಾಗೌರವರ ಮಾತು ಸರಿಯಾದದ್ದು.

ಆದರೆ ಯಾವುದು ವಾಸ್ತವ? ಸಮಾಜದಲ್ಲಿ ಮೇಲ್ನೋಟಕ್ಕೆ ಕಾಣುವ ಸಂಗತಿಗಳೋ ಅಥವಾ ಇಂತಹ ಪ್ರಚಲಿತ ಸಂಗತಿಗಳ ವಾಸ್ತವತೆಯ ಹಿಂದೆ ಇದ್ದಿರುವ ಚಾರಿತ್ರಿಕ ಸಂಗತಿಗಳೋ ಇದು ಇಂದು ವಿಮರ್ಶೆ ಮಾಡುವಾಗ ಕೇಳಿಕೊಳ್ಳಬೇಕಾದ ಮುಖ್ಯ ಪ್ರಶ್ನೆ. ಕೃತಿಯಲ್ಲಿ ಯಾರ ಪರವಾಗಿ ಮಾತನಾಡುತ್ತಾರೆ ಎಂಬುದು ಮುಖ್ಯ. ಇದೇ ಒಂದು ಕೃತಿಯ ಲೇಖಕನ ಧೋರಣೆ. ಹಲವೊಮ್ಮೆ ಭಾಷೆಯ ಕಲಾತ್ಮಕತೆಯಲ್ಲಿ

ಬಹುಸಂಖ್ಯೆ ವಿರೋಧಿ ನಿಲುವು ಸುಂದರ ಮೈರೂಪ ತಾಳಿ ವಂಚಿಸಿಬಿಡಬಹುದು. ಆದುದರಿಂದ ಲೇಖಕನೊಬ್ಬ ಬದುಕಿನ ಬಗ್ಗೆ ಗಂಭೀರ ಕಾಳಜಿಯನ್ನು ಒಳಗೊಂಡ ಒಂದು ಧೋರಣೆಯನ್ನು ರೂಪಿಸಿಕೊಂಡಿರುತ್ತಾನೆ. ಅಥವಾ ಅನುಭವ ಅಧ್ಯಯನಗಳಿಂದ ರೂಪಿಸಿಕೊಂಡ ಧೋರಣೆಯ ಮುಖಾಂತರ ಬದುಕನ್ನು ಅಳೆಯುತ್ತಾನೆ. ಹೀಗಾಗಿ ಸಾಹಿತ್ಯದ ರಚನೆಯಲ್ಲಿ ಧೋರಣೆ ಅದರ ಅವಿಭಾಜ್ಯ ಅಂಗವಾಗಿರುತ್ತದೆ. ಅದರ ಜೊತೆಗೆ ಅವನು ಒಂದು ವರ್ಗದ ಆಶಯವನ್ನು ಪ್ರತಿನಿಧಿಸುತ್ತಾನೆ. ಆ ವರ್ಗ ಯಾವುದು ಎನ್ನುವುದೇ ಮುಖ್ಯ.

ಚೋಮನದುಡಿ ಮತ್ತು **ಚೆಮ್ಮೀನಿನಲ್ಲಿ** ಇರುವ ಇಂತಹ ಧೋರಣೆಯನ್ನು ನಾವು ಈ ಅಧ್ಯಾಯದಲ್ಲಿ ನೋಡಬಹುದಾಗಿದೆ. ಚೋಮನ ದುಡಿಯ ಆರಂಭದ ಅಧ್ಯಾಯ ಕ್ರಾಂತಿಕಾರ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ನಿರುತ್ಸಾಹ ಚಿನ್ಹೆಗಳನ್ನು ಹೊಂದಿರುವ ಭೋಗನಹಳ್ಳಿಯಲ್ಲಿ ಯಾವ ಬದಲಾವಣೆಯ ಗಾಳಿಯೂ ಬೀಸುವುದಿಲ್ಲ. ಸ್ವತಂತ್ರ ಪೂರ್ವದ ಈ ಕಾದಂಬರಿಯಲ್ಲಿ ಇರುವ ಒಂದು ಸಾಲು ಸ್ವಾತಂತ್ರ್ಯ ಬಂದ ನಂತರ ಶೋಷಿತ ಬದುಕು ಸುಧಾರಿಸಬಹುದು ಎಂಬುದನ್ನು ಸೂಚಿಸುತ್ತದೆ. "ಚಂದ್ರನು ಮೂಡುವುದಕ್ಕೆ ಇನ್ನು ಎರಡೇ ಗಳಿಗೆಗಳು ಇರಬಹುದು". ಕಾದಂಬರಿಕಾರನಿಗೆ ಈ ಹೊತ್ತು ಮಾತ್ರ ಆ ಕಾಡಿನಲ್ಲಿ ಒಂದು ಪ್ರಾಣಿಯ ಸದ್ದೂ ಕೇಳಿಸುತ್ತಿಲ್ಲವೆನಿಸುತ್ತದೆ. ಈ ಹೊತ್ತು ಎನ್ನುವುದು ಬ್ರಿಟೀಷರ ಆಗಮನದ ಹೊತ್ತಾಗಿರಬಹುದು. ಅವರು ಬಂದುದರಿಂದಲೇ ರೂಪಿತವಾದ ಈ ಬಗೆಯ ನೋಡುವ ನೋಟಕ್ಕೆ ಈಗ ಇಡೀ ಭೋಗನಹಳ್ಳಿ ಒಳಗಾಗಿದೆ. ಇಂತಹ ಜಡತೆಯನ್ನು ಅಲ್ಲಾಡಿಸುವ ಒಂದು ಅದ್ಭುತ ಶಕ್ತಿ. ಆ ಕಾಡು ಪ್ರದೇಶದಲ್ಲಿ ಗೋಚರಿಸುತ್ತದೆ. ಅದು ಭೋಗನಹಳ್ಳಿಯ ಹೊರಗೆ ಇರುವ ಕೊಪ್ಪಯಿಂದ ಬರುವ ಸದ್ದು. ಆದರೆ ನೀವು ಆ ಕೊಪ್ಪವನ್ನು ಊರು ಎಂದು ಕರೆಯುವಂತಿಲ್ಲ. ಒಂದೇ ಒಂದು ಮನೆ ಮಾತ್ರವಿದೆ. ಅಲ್ಲಿ ಕಾದಂಬರಿಯ ಒಟ್ಟು ವಿನ್ಯಾಸದಲ್ಲಿ ಈ ಸಂಗತಿಯನ್ನು ನೋಡಬೇಕು. ಹೊರಗಿನ ಎಲ್ಲರೂ ಇವರ ಶೋಷಣೆಗೆ ಕಾರಣರಾಗುತ್ತಾರೆ. ಯಾರೊಬ್ಬರೂ ಇವರ ಕಷ್ಟದಲ್ಲಿ ಸಹಾಯಕ್ಕೆ ಬರುವುದಿಲ್ಲ, ನಂಟರು ಕೂಡ. ಅವರು ಸುಮ್ಮನೆ ಬಂದು ಉಂಡು ಇನ್ನಷ್ಟು ಬಡತನವನ್ನು ಉಂಟುಮಾಡಿ ಹೋಗುತ್ತಾರೆಯೇ ಹೊರತು ಬೇರೇನೂ ಅವರಿಂದ ಸಂಭವಿಸುವುದಿಲ್ಲ ಅವರು ಚೋಮನ ಆಸೆಗೆ ಒತ್ತಾಸೆಯೂ ಆಗುವುದಿಲ್ಲ.

ಚೋಮನದುಡಿಯೊಂದು ಮಾತ್ರ ಆ ಕಾಡಿನಲ್ಲಿ ನೀರವ ಮೌನವನ್ನು ಕದಡುವ ಕೆಲಸ ಮಾಡುತ್ತದೆ. ಒಂದೇ ಒಂದು ಮನೆಯಿರುವ ಕೊಪ್ಪದಲ್ಲಿ ಅವನು ವಾಸಿಸುತ್ತಾನೆ. ಅವನೊಬ್ಬನಿಗೆ ಮಾತ್ರ ಭೂಮಿಯ ಗೇಣಿ ಮಾಡಬೇಕೆಂಬ ಆಸೆ. ಸ್ವತಃ ಅವನ ಮನೆಯ ಸದಸ್ಯರಿಗೆ ಅದು ಒಪ್ಪಿತವಲ್ಲದ ಬೇಡದ ವಿಚಾರ. ಇನ್ನು ಸಾಮಾಜಿಕವಾಗಿ ಕುಡಾ ಅದು ಒಪ್ಪಿತವಲ್ಲದ ಸಂಗತಿ.

"ಕೊಪ್ಪ" ಒಂದು ಅಸಂಘಟಿತ, ಊರ ಹೊರಗೆ ವಾಸಿಸುವ ದಲಿತರನ್ನು ಕುರಿತು ಸೂಚಿಸುತ್ತಿರಬಹುದು. ಆದರೆ ಕಾದಂಬರಿಯಲ್ಲಿ ಎಲ್ಲಿಯೂ ಇಂತಹ ಅಸಂಘಟಿತ ಸಮುದಾಯ ಒಂದಾಗಬೇಕೆಂದು ಸೂಚಿತವಾಗುವುದೇ ಇಲ್ಲ. ಕಾದಂಬರಿ ಚೋಮನ ಬಡತನ, ಅವನ ಜಾತಿ ಸಮಸ್ಯೆ, ಜಾತಿಯನ್ನು ಮೀರಿದ ಅವನ ಬಯಕೆ ಎಲ್ಲವನ್ನು ಹೃದಯಂಗಮವಾಗಿ ವಿವರಿಸುತ್ತದೆ. ಆದರೆ ಈ ಹೃದಯಂಗಮತೆ ಚೋಮನೊಬ್ಬನ ಶೋಷಣೆಯಾಗಿ ಕಾಣುವಂತೆ ಆತ ಪ್ರತಿನಿಧಿಸುವ ಇಡೀ ಸಮುದಾಯವನ್ನು ಅದು ವ್ಯಾಪಿಸುವುದಿಲ್ಲ. ಚೋಮ ಸಂಕಪ್ಪಯ್ಯನವರ ಹತ್ತಿರ ಪ್ರತಿಬಾರಿ ಭೂಮಿ ಕೇಳಿದಾಗಲೂ ರೆಬೆಲ್ ಆಗುತ್ತಾನೆ ನಿಜ. ಕಾದಂಬರಿಕಾರ ಅವನನ್ನು ದುಡಿಯೊಂದಿಗೆ ಪರಿಚಯಿಸುತ್ತಾನೆ. "ಕೇವಲ ಜಡ ಪ್ರಪಂಚದ ನಿಯಮಕ್ಕೆ ಆಳಾಗಿ ನಲಿಯುವ ಸದ್ದಾಗಿರದು." ಎಂದು ಆ ರೆಬೆಲ್‌ನೇಷನ್ನೂ ಸೂಚಿಸುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ ಚೋಮನಿಗೆ ಭೂಮಿ ಸಿಗುವುದರ ಬಗ್ಗೆ ಕೃತಿಕಾರನಿಗೆ ತಕರಾರಿದೆ ಎನ್ನಿಸುತ್ತದೆ. ಅದರ ಅರ್ಥ ಚೋಮನಿಗೆ ಭೂಮಿ ಸಿಕ್ಕಿ ಬಿಡಬೇಕಾಗಿತ್ತು ಎಂಬುದಲ್ಲ, ಬದಲಿಗೆ ಅದರ ರಚನೆಯಲ್ಲಿ ಗೋಚರವಾಗುವ ಅಂಶವಿದು. ಕೃತಿಯೊಳಗಿನ ವೈರಧ್ಯವನ್ನು ಗಮನಿಸಿ

೧) ಸಂಕಪ್ಪಯ್ಯನ ತಾಯಿ ಹಳೆಯ ಅಂಧಶ್ರದ್ಧೆಗೆ ಒಳಗಾದವಳು, ಆಕೆ ಬದಲಾವಣೆಯನ್ನು ಬಯಸುವುದಿಲ್ಲ. "ಅಬ್ಬಾ ಈ ಹೊಲೆಯರಿಗೆ ಬಂದ ಸೊಕ್ಕೇ ಎನ್ನುತ್ತಾಳೆ." ಆದರೆ ಸಂಕಪ್ಪಯ್ಯ ಪ್ರತಿಬಾರಿ ಚೋಮ ಭೂಮಿ ಕೇಳಿದಾಗಲೂ ಅವನ ಪರ ತಾಯಿ ಹತ್ತಿರ ಮಾತನಾಡುತ್ತಾನೆ. ಇಲ್ಲಿ ಕಾರಂತರು ಸಂಕಪ್ಪಯ್ಯನ ಮುಖಾಂತರ ಬದಲಾಗುತ್ತಿರುವ ಕಾಲವನ್ನು, ಅದರ ಮಾನವೀಯ ಮುಖವನ್ನು ತೋರಿಸುತ್ತಿದ್ದಾರೆ. ಇದನ್ನು ಎಲ್ಲಾ ವಿಮರ್ಶಕರು ಗುರುತಿಸಿದ್ದಾರೆ.

೨) ನೀಲ ನೀರಿಗೆ ಬಿದ್ದಾಗ ಸತ್ತ ನಂತರ ಬ್ರಾಹ್ಮಣ ಹುಡುಗ ಹೆಣ ತೆಗೆಯುತ್ತಾನೆ. ಇದು ಮುಟ್ಟಿಸಿಕೊಳ್ಳದೆ ಇದ್ದವರು ಮುಟ್ಟಿಸಿಕೊಳ್ಳುವುದನ್ನು ಸೂಚಿಸುತ್ತಿವೆ.

೩) ಆದರೆ ಚೋಮನ ಭೂಮಿಯ ಬಗೆಗಿನ ಆಸೆಯನ್ನು ಅವನ ಮಕ್ಕಳು ಉತ್ತೇಜಿಸುವ ಬದಲು ನಿಸ್ತೇಜಿಸುತ್ತಾರೆ. ಮೇಲುವರ್ಗದ ಹೊಸ ತಲೆ ಮಾರಿನಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದರೆ, ದಲಿತ ಹೊಸ ತಲೆ ಮಾರಿನ ಸಂಕೇತವಾದ ಚೋಮನ ಮಕ್ಕಳು ಹಳೆಯ ನಂಬಿಕೆಗೆ ಒತ್ತು ಕೊಟ್ಟಿರುತ್ತಾರೆ. "ನೀನು ಧನಿಗಳೊಂದಿಗೆ ಬಾಯಿ ತೆರೆದು ಮರ್ಯಾದೆ ಕಳೆದುಕೊಳ್ಳಬೇಡ. ನಾವು ಹೊಲಗದ್ದೆ ಪಡೆಯಬೇಕಾದರೆ ಬ್ರಾಹ್ಮಣರಾಗಿಯೋ, ಒಕ್ಕಲಿಗರಾಗಿಯೋ, ಹುಟ್ಟಬೇಡವೇ." ಎನ್ನುವ ಬೆಳ್ಳಿಯ ಮಾತು ಮೇಲಿನ ಹೇಳಿಕೆಯನ್ನು ಪೋಷಿಸುತ್ತದೆ.

ಮುಂದೆ ಸರ್ಕಾರಿ ದರಕಾಸು ಜಮೀನು ಕೊಡುವುದಾಗಿ ಸರ್ಕಾರಿ ಆಫೀಸರೊಬ್ಬರ ವಿಚಾರ ಬರುತ್ತದೆ. ಆಗ ನಿರೂಪಕ "ಯಾರೋ ಒಬ್ಬ ಆಫೀಸರು ಬಂದು ಅವನನ್ನು ಕರೆಯಿಸಿ ಉದ್ಧಾರ ಮಾಡುವೆನಾಗಿ ಹೇಳಿದ್ದರು" ಎಂಬುದು ಸರ್ಕಾರದ ಅಸಮರ್ಪಕತೆಯನ್ನು ಟೀಕಿಸುತ್ತದೆ. ಉದ್ಧಾರ ಎಂಬ ಪದ ದರಕಾಸು ಜಮೀನು

[illegible]

[illegible]

[illegible]

[illegible]

[illegible]

ಪಡೆದರೆ ಉದ್ಧಾರ ಸಾಧ್ಯವಿಲ್ಲವೆಂಬುದನ್ನು ಹೇಳುತ್ತಿದ್ದೆ ಅದು. ಮುಂದೆ ಇಡೀ ಹಳ್ಳಿಯ ರೈತರ ಮೇಲೆಯೇ ಅವನಿಗೆ ಮತ್ಸರ ಬಂದಿದೆ. ಅದು ಒಂದೇ ಕಾರಣದಿಂದ ತನ್ನನ್ನು ಜೀವಿತದ ಕೂಲಿಯಾಗಿರಿಸಿ ತಾವು ಬೇಸಾಯಗಾರರಾದದ್ದಕ್ಕೆ. ಬೇಸಾಯದಿಂದ ಉಳಿದವರಿಗೆ ಸಿಗುವ ಸ್ವರ್ಗವಾವುದೆಂಬ ಯೋಚನೆ ಅವನಿಗಿಲ್ಲ. ಅದು ಸ್ವರ್ಗವೇ ಇರಲಿ, ನರಕವೇ ಇರಲಿ, ತನಗೂ ಅದು ಸಿಕ್ಕಬಾರದೇಕೆ ಎಂಬುದು ಅವನ ವಾದ. ನಿರೂಪಕನ ಈ ಮಾತುಗಳನ್ನು ಗಮನಿಸಿ, ಭೂಮಿಯನ್ನು ಗೇಣಿಗೆ ಪಡೆಯಬೇಕೆಂಬ ಚೋಮನ ಬಯಕೆ ಸರಿಯಾದುದೇನು ಅಲ್ಲ. ವಾಸ್ತವಿಕವಾಗಿ ಬೇಸಾಯ ಲಾಭದಾಯಕವಲ್ಲ. ಆದುದರಿಂದ ಆತನಿಗೆ ಅದು ಅಗತ್ಯವಿಲ್ಲವೆಂಬುದು ನಿರೂಪಕರ ಧೋರಣೆ ಈ ಧೋರಣೆ. ಕಾದಂಬರಿಕಾರರದ್ದು ಅಲ್ಲವೇ ?

ಕಾದಂಬರಿಯಲ್ಲಿ ಚೋಮನ ಜಾತಿಯೇ ಅವನೆಲ್ಲಾ ಕಷ್ಟಗಳಿಗೆ ಕಾರಣವೆಂದು ಗೋಚರಿಸುತ್ತದೆ ನಿಜ. ಆತ ಭೂಮಿಯನ್ನು ಪಡೆಯಲು, ಆತನ ಮಗ ನೀಲನ ಸಾವು ಎರಡಕ್ಕೂ ಜಾತಿ ಕಾರಣ. ಆದರೆ ಕಾದಂಬರಿಯಲ್ಲಿ ಇನ್ನೊಂದು ಸತ್ಯವೂ ಇದೆ ಅಲ್ಲವೇ? ಚೋಮ ತನ್ನ ಜಾತಿಗೆ ಮೀರಿದ ಆಸೆಯಿಂದಲೇ ಕಳಸದ ಕಾಫಿತೋಟದ ಸಾಲ ತೀರಿಸದೆ ಚನಿಯನ ಸಾವು, ಗುರುವನ ಮತಾಂತರ, ಬೆಳ್ಳಿಯ ಶೀಲಹರಣ ಕೊನೆಗೆ ತನ್ನ ಸಾವಿಗೆ ಕಾರಣವೆಂದು ತೋರಿಸುತ್ತದೆ. ಅಲ್ಲವೇ. ಜೊತೆಗೆ ಚೋಮನಿಗೆ ಭೂಮಿಯನ್ನು ಗೇಣಿ ಪಡೆಯುವ ಆಸೆ ಬಂದದ್ದು ಅವನ ಅಂತರಂಗದಿಂದಲ್ಲ ಎಲ್ಲೋ ಕಾಡಿನಲ್ಲಿ ಸಿಕ್ಕ ಕರುಗಳು ಬೆಳೆದು ದೊಡ್ಡವಾದಾಗ ಅವುಗಳನ್ನು ನೋಡಿ, ಪಕ್ಕದ ಹಳ್ಳಿಯ ಅವನ ಜಾತಿಯ ಒಬ್ಬ ರೈತನಾದುದನ್ನು ಕೇಳಿ.

ಇನ್ನೊಂದು ಸಂಗತಿಯನ್ನು ಚರ್ಚಿಸಿ ಕಾರಂತರ ಒಟ್ಟು ಕೃತಿಯ ಧೋರಣೆಯನ್ನು ಹೇಳಲು ಬಯಸುತ್ತೇನೆ. ಕಾದಂಬರಿಯಲ್ಲಿ ಎರಡು ಪ್ರಪಂಚಗಳಿವೆ. ಒಂದು ಭೋಗನಹಳ್ಳಿಯ ಊಳಿಗಮಾನ್ಯ ಪದ್ಧತಿಯ ಸಂಕೇತ ಇಲ್ಲಿ ಸಂಕಪ್ಪಯ್ಯನವರಂತಹ ಕರುಣೆಯುಳ್ಳವರು ಇದ್ದಾರೆ. ಕೂಲಿಮಾಡದಿದ್ದರೂ ಕೂಲಿ ಕೊಡುವಷ್ಟು ಧಾರಾಳಿಗರು, ಇದೊಂದು ಎಷ್ಟೇ ಶೋಷಣೆಯಿದ್ದರೂ ಜೀವಿಸಬಹುದಾದ ವ್ಯವಸ್ಥೆ. ಆದರೆ ಕಳಸ ಅದೊಂದು ಅವ್ಯವಸ್ಥೆ. ಕೇವಲ ಶೋಷಣೆ ಮಾಡುವುದೊಂದೆ ಅಲ್ಲಿನ ಕ್ರಿಯೆ. ಜನರನ್ನು ಕೊಟ್ಟಿಗೆಯಲ್ಲಿ ಕೂಡಿ ಹಾಕುತ್ತಿದ್ದು, ತಮಗೆ ವಯಸ್ಸಾಯಿತು ಬದುಕಿಗೆ ಆಧಾರವಾಗಿರಲಿ ಎಂದು ತಮ್ಮ ಮಗಳು ಮೇರಿಗೂ ಗುರುವನೊಂದಿಗೆ ಸಂಬಂಧವೇರ್ಪಡಿಸುವರು. ಚನಿಯನಿಗೆ ರೋಗ ಬರುವುದು, ಬೆಳ್ಳಿ ಶೀಲ ಕಳೆದುಕೊಳ್ಳುವುದು ಇದೆಲ್ಲಾ ಕಳಸದ ಶೋಷಕದ ಪ್ರಪಂಚದ ಸ್ಥಿತಿ. ಇಡೀ ಕಾದಂಬರಿಯಲ್ಲಿ ಎಲ್ಲಿಯೂ ಕಾಣಿಸಿಕೊಳ್ಳದ ಪೆಂಜುರ್ಲಿ ಭೂತ, ಆತನ ಮತಾಂತರದ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತದೆ. *(ರಾಗೌರವರ ಈ ಸಂದರ್ಭದ ವಿಶ್ಲೇಷಣೆ ಸರಿ)* ಆದರೆ ಆಗ ಮಾತ್ರ ಏಕೆ ಕಾಣಿಸಿಕೊಂಡಿತು. ಅವನು ಒಮ್ಮೆ ಪಕ್ಕದೂರಿಗೆ ಹೋಗುವ ಸನ್ನಿವೇಶವಿತ್ತಲ್ಲ ಆಗಲೇ ಯಾಕೆ ಈ ಸಂಗತಿಯನ್ನು ಸೂಚಿಸಿರಲಿಲ್ಲ ? ಇಂತಹ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ.

ಒಟ್ಟಾರೆ ಕಾರಂತರ ಈ ಕಾದಂಬರಿಯ ಹಿನ್ನೆಲೆಯಲ್ಲಿನ ಧೋರಣೆಯೆಂದರೆ ಜಾತಿ, ಬಡತನ, ಮೌಢ್ಯವನ್ನು ಹೇಳುತ್ತಲೇ. ಹಿಂದೂ ಸಮಾಜದ ಊಳಿಗಮಾನ್ಯ ಪದ್ಧತಿಯನ್ನು ಮಾನ್ಯ ಮಾಡಿಬಿಡುತ್ತಾರೆ. ಅವರಿಗೆ ಜಾತಿಯ ಈ ಶೋಷಣೆ ಮುಖ್ಯವಾಗಿ ಕಾಡುವುದಿಲ್ಲ. ಅವರಿಗೆ ಸಂಕಪ್ಪಯ್ಯನವರ ಮಾನವೀಯತೆ ದೊಡ್ಡದಾಗುತ್ತದೆ. ಚೋಮ ಹೇಗೆ ತನ್ನ ಸಮುದಾಯವನ್ನು ಪ್ರತಿನಿಧಿಸಲಾರನೋ ಹಾಗೆ ಸಂಕಪ್ಪಯ್ಯನು ಪ್ರತಿನಿಧಿಸಲಾರ. ಕಾರಂತರ ಈ ಕೃತಿಯಲ್ಲಿ ಅನೇಕ ದ್ವಂದ್ವಗಳಿವೆ. ಆದರೆ ಆರೋಗ್ಯಕರವಾದ ಇಂತಹ ದ್ವಂದ್ವಗಳೆ ಸೃಜನಶೀಲ ಜಾಗೃತ ಲೇಖಕನ ಗುಣವೂ ಹೌದು. ಕೊನೆಯಲ್ಲಿ ಇಡೀ ಕೃತಿಯನ್ನು ಓದಿದರೆ ನಮಗೆ ಈ ಯಾವ ಸೂಕ್ಷ್ಮಗಳು ಗೊತ್ತಿಲ್ಲದೆ ಹೋದರೂ ನಾವು ಚೋಮನ ಪರವಾಗಿ ನಿಲ್ಲುತ್ತೇವೆ. ಇದು ಈ ಕೃತಿ ನಿರ್ಮಿಸಿದ ಸಿದ್ಧಿ.

ಚೆಮ್ಮೀನು ಕೃತಿಯಲ್ಲಿನ ಆರಂಭದಲ್ಲಿಯೇ ಸ್ತ್ರೀಯೊಬ್ಬಳು ಪಾಲಿಸಬೇಕಾದ ನಿಯಮ ಹಾಗೂ ಕಾಪಾಡಿಕೊಳ್ಳಬೇಕಾದ ಚಾರಿತ್ರ್ಯದ ಬಗ್ಗೆ. ಅದರ ಮಹತ್ವದ ಬಗ್ಗೆ ಲೇಖಕರು ಹೇಳುತ್ತಾರೆ. ಅದು ಆ ಕಡಲ ತೀರದಲ್ಲಿ ತಲೆಮಾರಿನಿಂದ ಬಂದ ಒಂದು ನಂಬಿಕೆ. ಆದರೆ ಈ ಚಾರಿತ್ರ್ಯ ಶುದ್ಧತೆ ಕೇವಲ ಹೆಣ್ಣಿಗೆ ಮಾತ್ರವೆಂದು ಇಡೀ ಕಾದಂಬರಿ ಪ್ರತಿಪಾದಿಸುವುದರಿಂದ ಇದು ಒಟ್ಟು ಭಾರತೀಯ ಪುರುಷಕೇಂದ್ರಿತ ಪರಿಕಲ್ಪನೆಯನ್ನು ಮೀರಿ ಆಚೆಗೆ ಜಿಗಿಯಲಾರದೆ ಹೋಗುತ್ತದೆ.

ಕೃತಿಯಲ್ಲಿ ಹೀಗೆ ಹೆಣ್ಣಿನ ಪರಿಶುದ್ಧ ಚಾರಿತ್ರ್ಯದ ಬಗ್ಗೆ ಇರುವ ಐತಿಹ್ಯ ನಂಬಿಕೆಯನ್ನು ಕಾದಂಬರಿ ತನ್ನ ರಚನಾಂತರ್ಯದಲ್ಲಿ ಮುರಿಯುತ್ತದೆ. ಚೆಂಪನ್ ಜಾತಿಗೆ ಮಿರಿದ ತನ್ನ ಆಸೆಯಾದ ದೋಣಿ ಬಲೆಯನ್ನು ಕೊಂಡು ಕೊಳ್ಳುವುದನ್ನು ನೆರವೇರಿಸಿಕೊಳ್ಳುತ್ತಾನೆ. ಅದು ಆತನಿಗೆ ಸಾಧ್ಯವಾದದ್ದು. ಆತನ ಆರ್ಥಿಕ ಸ್ಥಿತಿಯಿಂದ. ತನ್ಮೂಲಕ ಕಾದಂಬರಿ ಆರ್ಥಿಕ ತಾರತಮ್ಯವೇ ಶ್ರೇಣೀಕೃತ ಸಮಾಜಕ್ಕೆ ಬುನಾದಿ ಎಂದು ತಿಳಿಸುತ್ತದೆ. ಆರ್ಥಿಕ ಸದೃಢತೆಯಿಂದ ಅದನ್ನು ಮುರಿಯಬಹುದೆಂದು ತೋರಿಸುತ್ತದೆ. ಮುಂದೆ ಚಂಪನ್ ಎರಡನೆ ಮದುವೆಯಾಗುವುದು ಅದು ತನ್ನ ಜಾತಿಯಲ್ಲಿನ ಉನ್ನತ ಸ್ಥಾನದಲ್ಲಿರುವ ಆರಯ್ಯ ಸ್ತ್ರೀಯನ್ನು. ಅದು ಸಾಧ್ಯವಾದದ್ದು ಈ ಆರ್ಥಿಕ ಸದೃಢ ಸ್ಥಿತಿಯಿಂದಲೇ. ಆದರೆ ಈ ಜಾತಿ ಮೀರುವ ಕ್ರಿಯೇ ಧರ್ಮ ಮೀರುವ ಕ್ರಿಯೆಗೆ ಜಿಗಿಯಲಾರದು. ನಿರೂಪಕ ಕಾದಂಬರಿಯಲ್ಲಿ ಕರುತ್ತಮ್ಮ ಮತ್ತು ಪರೀಕುಟ್ಟಿ ಶುದ್ಧ ಪ್ರೇಮದ ಬಗ್ಗೆ ಆಸ್ಥೆ ವಹಿಸುತ್ತಾನೆ. ಕಡಲ ತೀರದಲ್ಲಿ ಈ ತರಹ ಬೇರೆ ಬೇರೆ ಧರ್ಮದವರೊಂದಿಗೆ ಸಂಬಂಧ ಇಟ್ಟುಕೊಂಡವರ ಸಂಗತಿ ಚಕ್ಕಿ ಮತ್ತು ಕಾಳಿಕುಞ್ಞ ಜಗಳದ ಸಂದರ್ಭದಲ್ಲಿ ಬೆಳಕಿಗೆ ಬರುತ್ತದೆ. ಕರುತ್ತಮ್ಮ ಅನುಭವಿಸಿದ ಸ್ಥಿತಿಯನ್ನು ಅಲ್ಲಿನ ಅನೇಕ ಜನರು ಅನುಭವಿಸಿದ್ದರು ಎಂಬುದು ಗೊತ್ತಾಗುತ್ತದೆ. ಹಾಗದರೆ ಕಾದಂಬರಿಕಾರನ ಧೋರಣೆ ಏನು? ಇದು ಚೆಮ್ಮೀನಲ್ಲಿ ಸುಲಭವಾಗಿ ಗ್ರಹಿಸಲಾಗುವುದಿಲ್ಲ.

ಕಾರಣವೆಂದರೆ ಈ ನಿರೂಪಕ ಒಂದು ವಿಧಕ್ಕೆ ಸರ್ವಕೇಂದ್ರಿತ ಪ್ರಜ್ಞೆಯ ಹಿನ್ನೆಲೆಯಲ್ಲಿ ವಸ್ತುವನ್ನು ನಿರ್ವಹಿಸುವುದರಿಂದ.

ತಕಳೀಶಿವಶಂಕರಪಿಳ್ಳೆಯವರು ಮಾರ್ಕ್ಸ್‌ವಾದ ಹಾಗೂ ಅದರಿಂದ ರೂಪಿತವಾದ ವೈಚಾರಿಕತೆ, ಹಾಗೂ ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಕೃತಿಯನ್ನು ಒಂದು ಪ್ರತಿಮಾತ್ಮಕವಾಗಿ ನಡೆಸಿದ್ದಾರೆ. ಆದ್ದರಿಂದಲೇ ಒಂದು ಐತಿಹ್ಯದ ಹಿನ್ನೆಲೆಯಲ್ಲಿ ಕಥೆಯನ್ನು ತೆಗೆದುಕೊಂಡಿದ್ದಾರೆ. ಇದರ ಒಂದು ನಂಬಿಕೆ. ಹೆಂಡತಿ ಪರಿಶುದ್ಧಳಾಗಿರಬೇಕು ಎಂಬುದು. ಇದರ ಹಿಂದೆ ಸಮುದ್ರಕ್ಕೆ ಮೀನಿಗಾಗಿ ಹೋಗಿರುವ ಗಂಡ ಸುರಕ್ಷಿತವಾಗಿ ಸಮುದ್ರದಿಂದ ಹೊರಬಂದು, ಕೆಟ್ಟ ಚಾಳಿಯ ಜನರ ಗೆಳೆತನಕ್ಕೆ ಬಿದ್ದು ಹಣ ಹಾಳು ಮಾಡಿಕೊಳ್ಳದೆ, ಮನೆಯ ಪ್ರೀತಿ, ನೆಮ್ಮದಿಗೆ ಹಿಂದಿರುಗಬೇಕಾದರೆ ಹೆಂಡತಿಯಾದವಳು ನಿಯತ್ತಿನವಳೂ, ವಿಶ್ವಾಸರ್ಹಳೂ ಆಗಿರಬೇಕು. ಆಕೆ ಚಂಚಲಗೊಂಡರೆ ಬೆಸ್ತನ ಸಮುದ್ರ ಜೀವನ ಅಲ್ಲಾಡ ತೊಡಗುತ್ತದೆ ಎಂಬ ಸಮಾಜ ಶಾಸ್ತ್ರೀಯವಾದ ಸಾಮಾನ್ಯ ನಂಬಿಕೆಯ ಜೊತೆಗೆ ಕಾದಂಬರಿಯ ಕೊನೆಯಲ್ಲಿ ಪಳನಿ ಸಮುದ್ರದಲ್ಲಿ ಮುಳುಗಿ ಸಾಯುವುದು ಮನೋವಿಜ್ಞಾನದ ಹಿನ್ನೆಲೆಯಲ್ಲಿ ಅದ್ಭುತವಾದ ಪ್ರತಿಮೆಯಾಗಿದೆ.

ಕುವೆಂಪು **ಕಾನೂರು ಹೆಗ್ಗಡತಿ** ಕಾದಂಬರಿಯಲ್ಲಿ ಹೂವಯ್ಯನ ಮನಸ್ಥಿತಿಯನ್ನು ಕುರಿತು ಹೇಳುವ ಈ ಮಾತು ನೋಡಿ "ಮನುಷ್ಯನ ಅಂತಃಚ್ಚಿತ್ತ ಸಮುದ್ರದಂತೆ ಗಂಭೀರವಾಗಿದೆ, ಅಪಾರವಾಗಿದೆ. ಅಲ್ಲಿ ನಡೆಯುವ ವ್ಯಾಪಾರಗಳು ನಮಗೆ ಅಗೋಚರವೆಂದು ಹೇಳಬಹುದು. ಈ ಮಾತು ಪಳನಿಯ ಕೊನೆಯ ಸಮುದ್ರಯಾನ ಹಾಗೂ ಆತನ ಸಾವಿನ ಸಂದರ್ಭದಲ್ಲಿನ ನಡವಳಿಕೆಯನ್ನು ಸೂಚಿಸುತ್ತದೆ. ಅಂದರೆ ಹೆಂಡತಿಯಾದವಳು ಪರಿಶುದ್ಧಳಾಗಿರಬೇಕು ಎಂಬುದು ಒಬ್ಬರಿಗೆ ಸೀಮಿತವಾಗಿರಬೇಕೆಂಬುದು ಲೇಖಕರ ಧೋರಣೆಯಾಗಿದೆ. ಇದಕ್ಕೆ ಆನುಶಂಗಿಕವಾಗಿ ಚಂಪನ್‌ಕುಞ್ಞ ಎರಡನೆಯ ಮದುವೆ ಮಾಡಿಕೊಂಡ ಮೇಲೆ ಪಪ್ಪಿಕುಞ್ಞ ಕೂಡುವಾಗ ಬರುವ ವರ್ಣನೆಯನ್ನು ನೋಡಿ "ಚುಂಬನಕ್ಕೆ ಕಾವು ಕಡಿಮೆ! ಬಂಧ ಬಿಗಿಯುಗುತ್ತಿಲ್ಲ. ಅವನ ಕೈಗಳಿಗೆ ಉದ್ದ ಸಾಲದ್ದು, ಅಲ್ಲದೆ ಆ ಆವೇಶದಲ್ಲಿ ಅವನು "ನನ್ನ ಚಕ್ಕಿ" ಎಂದು ಒದರಿಬಿಟ್ಟ. ಅವನು ಆಗ ಬೇರೊಂದು ಹೆಸರನ್ನು ಅರ್ಧ ಉಚ್ಚರಿಸಿ ಮೂಕಳಾದಳು ಕಂಡನ್‌ಕೋರ್‌ನನ್ನು ಅವಳು ಮುದ್ದಾಗಿ ಕರೆಯುತ್ತಿದ್ದ ಹೆಸರಿರಬಹುದು ಅದು ಈ ಸಂದರ್ಭದ ಮೂಲಕ ಎರಡು ಸಂಗತಿಗಳನ್ನು ಕಾದಂಬರಿಕಾರ ಹೇಳುತ್ತಾನೆ. ೧) ವಯಸ್ಸಾದ ಮೇಲೆ ಮದುವೆಯಾದರೆ ಸಾಧ್ಯವಾಗದ ಲೈಂಗಿಕ ಕ್ರಿಯೆ ೨) ಅವಳ ಮನಸ್ಸಿನಲ್ಲಿ ಈಗಾಗಲೇ ಒಬ್ಬರು ಬಂದು ಕುಳಿತಿದ್ದಾರೆ. ಅವರನ್ನು ಬಿಟ್ಟು ದೈಹಿಕವಾಗಿ ಒಂದಾಗುವುದು ಅಸಾಧ್ಯವಾಗುತ್ತದೆ, ಇದೆ ಅವರ ಸಂಬಂಧ ಮುರಿಯಲು ಕಾರಣವಾಗುತ್ತದೆ.

ಒಟ್ಟಾರೆ ಕೃತಿಯ ಹಿನ್ನೆಲೆಯಲ್ಲಿ ರೂಪಿತಗೊಂಡಿರುವ ಲೇಖಕರ ಧೋರಣೆಯೆಂದರೆ ಸ್ತ್ರೀಯನ್ನು ಕುರಿತ ಪುರುಷಕೇಂದ್ರಿತ ಪರಿಕಲ್ಪನೆ ಆರ್ಥಿಕ ಸದೃಢತೆಯಿಂದ ಜಾತಿಯ ಶ್ರೇಣೀಕರಣವನ್ನು ಜಿಗಿಯಲು ಸಾಧ್ಯವಾಗುತ್ತದೆ. ಆದರೆ ಅನ್ಯ ಧರ್ಮವನ್ನು ಜಿಗಿಯಲು ಅದು ಸಾಧ್ಯವಿಲ್ಲ. ಹಾಗೇನಾದರೂ ಮಾಡಿದರೆ

ಪರಿಸರವನ್ನು ಎದುರಿಸಲು ಸಾಧ್ಯವಿಲ್ಲ. ಆದುದರಿಂದ ಪ್ರಚಲಿತ ಸಮಾಜವನ್ನು ಒಪ್ಪಿಕೊಳ್ಳಬೇಕು. ಜೊತೆಗೆ ಬದುಕಿನಲ್ಲಿ ಸ್ಥಿತಿವಂತಿಕೆಯ ಬಗ್ಗೆ ಯೋಚಿಸುತ್ತಲೇ ಕುಟುಂಬದ ಘಟಕದ ಬಗ್ಗೆಯೂ ಯೋಚಿಸಬೇಕು ಎಂಬ ಎಲ್ಲ ಸಮಗತಿಯನ್ನು ವೈಚಾರಿಕ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ.

ಈ ಎರಡು ಕಾದಂಬರಿಗಳು ಇಂದು ಅನೇಕ ಪ್ರಶ್ನೆಗಳನ್ನು ನಮ್ಮ ಮುಂದೆ ಉದ್ಭವಿಸುವ ಹಾಗೆ ಮಾಡುತ್ತಲೇ ನಮ್ಮನ್ನು ಸದಾ ಕಾಡುತ್ತವೆ. ಚೋಮ ಹಾಗೂ ಚಂಪನ್‌ಕುಞ್ಞವಿನ ಆ ಸ್ಥಿತಿಯನ್ನು ಅವರೇ ಬಲ್ಲರು. "ನೊಂದವರ ನೋವ ನೋಯದವರೆತ್ತಬಲ್ಲರೊ".

✧✧✧✧✧✧✧

ಅಧ್ಯಾಯ – ೯

ತೌಲನಿಕ ಅಧ್ಯಯನದ ಫಲಿತಗಳು

ಆಧುನಿಕ ಭಾರತೀಯ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನಪಡೆದಿರುವ ಇಬ್ಬರು ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಕಾರಂತರ ಚೋಮನದುಡಿ ಹಾಗೂ ತಕಳೀಶಿವಶಂಕರಪಿಳ್ಳೆಯವರ ಚೆಮ್ಮೀನು ಮಹತ್ವದ ಕೃತಿಗಳು. ಈ ಕೃತಿಗಳ ತೌಲನಿಕ ಅಧ್ಯಯನದಿಂದ ಈ ನಿಬಂಧದಲ್ಲಿ ಈ ಕೆಳಕಂಡ ಫಲಿತಗಳು ವ್ಯಕ್ತಗೊಂಡಿವೆ.

ನಿಬಂಧದ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತಂತಿದೆ. ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಪ್ರಾಂತೀಯ ಹಿನ್ನೆಲೆಯಲ್ಲಿ ಕಾರಣಗಳನ್ನು ಹೇಳಲಾಗಿದೆ. ಜೊತೆಗೆ ಈ ನಿಬಂಧದ ವಿಷಯ ವ್ಯಾಪ್ತಿಯನ್ನು ಈ ಅಧ್ಯಾಯ ಒಳಗೊಂಡಿದೆ.

ಇಬ್ಬರು ಲೇಖಕರ ಜೀವನ, ಅವರ ಸಾಹಿತ್ಯದ ಬೆಳವಣಿಗೆ, ಬರವಣಿಗೆಯ ಮೇಲೆ ಆದ ಪ್ರಭಾವ, ಅವರ ಪ್ರಮುಖ ಕೃತಿಗಳನ್ನು ಕುರಿತು ಪರಿಚಯ ಮಾಡಿಕೊಡಲಾಗಿದೆ.

ಚೋಮನದುಡಿ ಮತ್ತು **ಚೆಮ್ಮೀನು (ಕೆಂಪುಮೀನು)** ಕಾದಂಬರಿಯ ಕಥಾವಸ್ತುವನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಗಿದೆ.

ತೌಲನಿಕವಾಗಿ ಎರಡು ಕಾದಂಬರಿಗಳ ಕಥಾವಸ್ತುವನ್ನು ಕುರಿತು ಚರ್ಚಿಸಲಾಗಿದೆ. ಎರಡು ಕಾದಂಬರಿಗಳಲ್ಲಿನ ವಸ್ತು, ಜಾತಿ ಸಮಾಜದ ಕಲ್ಪನೆ, ನಂಬಿಕೆ, ಬಡತನ, ಮೂಢನಂಬಿಕೆ, ವಾಸ್ತವವನ್ನು ಮೀರಿದ ಬಯಕೆಗಳು, ಒಟ್ಟು ಭಾರತೀಯ ಪರಿಕಲ್ಪನೆಯ ಒಳಗೆ ರೂಪಿತವಾಗಿರುವ ಗ್ರಹಿಕೆಗಳನ್ನು ಈ ಕಾದಂಬರಿಗಳು ಶಕ್ತವಾಗಿ ಒಳಗೊಂಡಿವೆ. ಅದು ಕಾದಂಬರಿಯಲ್ಲಿ ಪಡೆದುಕೊಂಡಿರುವ ವಿವಿಧ ಆಯಾಮವನ್ನು ನೋಡಲಾಗಿದೆ. ಜೊತೆಗೆ ಈ ಎರಡು ಕಾದಂಬರಿಗಳು ಒಂದು ಸ್ವಾತಂತ್ರ ಪೂರ್ವ, ಇನ್ನೊಂದು ಸ್ವಾತಂತ್ರ್ಯ ನಂತರ ರಚನೆಯಾಗಿದೆ. ಅದು ಕಾದಂಬರಿಯ ವಸ್ತುವಿನಲ್ಲಿ ಉಂಟು ಮಾಡಿರುವ ಬದಲಾವಣೆಯನ್ನು ನಿಬಂಧದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ಎರಡು ಕಾದಂಬರಿಗಳ ಸನ್ನಿವೇಶಗಳನ್ನು ಕುರಿತು ಚರ್ಚಿಸಲಾಗಿದೆ. ಸನ್ನಿವೇಶವೆಂದರೆ ಒಂದು ದೇಶ ಕಾಲ ಬದ್ಧವಾದ ಒಂದು ಪ್ರಮಾಣ. ಅದು ಕಾದಂಬರಿಗಳಲ್ಲಿ ಹೇಗೆ ಪ್ರಕಟಗೊಂಡಿದೆ ಎಂಬುದನ್ನು ವಿವರಿಸಲಾಗಿದೆ. ಕಾದಂಬರಿ ರಚನೆಗೊಳ್ಳುವ ಕಾಲದ, ದೇಶದ, ಸಮಾಜದ ಸನ್ನಿವೇಶ ಹಾಗೂ ಕಾದಂಬರಿಯ ಒಳಗೆ ಕಥಾ ವಸ್ತುವು ಸೃಷ್ಟಿಗೊಂಡಿರುವ ಸನ್ನಿವೇಶ, ಇವೆರಡರ ಘರ್ಷಣೆ ಮತ್ತು ಅವುಗಳನ್ನು ಮೀರುವ ಕ್ರಿಯೆ, ಹೀಗೆ ಬೇರೆ ಬೇರೆ ಎರಡು ಕಾದಂಬರಿಗಳನ್ನು ತೌಲನಿಕವಾಗಿ ನೋಡಲಾಗಿದೆ.

ಎರಡು ಕಾದಂಬರಿಯ ಪಾತ್ರಗಳ ತೌಲನಿಕ ವಿಷಯವನ್ನು ಒಳಗೊಂಡಿದೆ. ಪಾತ್ರಗಳ ಅಧ್ಯಯನದ ಮೂಲಕ ಅವುಗಳ ಬೆಳವಣಿಗೆಯೊಡನೆ ಕಾದಂಬರಿಯ ಸ್ವರೂಪವನ್ನು ತಿಳಿದುಕೊಳ್ಳಲು ಯತ್ನಿಸಲಾಗಿದೆ. ಎರಡು ಕಾದಂಬರಿಗಳ ಮಹತ್ವಾಕಾಂಕ್ಷೆಯ ಪಾತ್ರಗಳಾದ ಚೋಮ ಮತ್ತು ಚಂಪನ್‌ಕುಞ್ಞ, ಬೆಳ್ಳಿ ಮತ್ತು ಕರುತ್ತಮ್ಮ, ಮನ್ವೇಲ ಹಾಗೂ ಪರೀಕುಟ್ಟಿ, ಸಂಕಪ್ಪಯ್ಯ ಹಾಗೂ ಆರಯ್ಯ ಹೀಗೆ ಒಂದೇ ಸ್ವಭಾವವನ್ನೂ ಬಿಂಬಿಸುವ ಪಾತ್ರಗಳ ಸಾಮ್ಯ ವೈಷಮ್ಯವನ್ನು ಗುರುತಿಸಲಾಗಿದೆ,

ಕಾದಂಬರಿಯ ಅಭಿವ್ಯಕ್ತಿ ವಿಧಾನವನ್ನು ಚರ್ಚಿಸಲಾಗಿದೆ. ಅಭಿವ್ಯಕ್ತಿಯ ಮುಖ್ಯ ಸಂಗತಿಗಳಾದ ಭಾಷೆ ಮತ್ತು ತಂತ್ರಗಳು ಹೇಗೆ ಅಭಿವ್ಯಕ್ತಗೊಂಡಿವೆ ಎಂಬುದನ್ನು ತೌಲನಿಕವಾಗಿ ನೋಡಲಾಗಿದೆ. ಯಾಕೆ ಎರಡು ಕಾದಂಬರಿಗಳು ಗ್ರಾಂಥಿಕ ಭಾಷೆಯಲ್ಲಿ ರೂಪಿತಗೊಂಡವು, ಸರಳ ಅನುಕ್ರಮಣಿಕೆಯ ತಂತ್ರವನ್ನು ಯಾಕೆ ಒಳಗೊಂಡಿವೆ, ಅವುಗಳ ಇತಿಮಿತಿಯನ್ನು ಈ ಅಧ್ಯಾಯದಲ್ಲಿ ನೋಡಲಾಗಿದೆ.

ಲೇಖಕರ ಧೋರಣೆಯನ್ನು ಕುರಿತ ವಿಷಯವನ್ನು ಒಳಗೊಂಡಿದೆ. ಎರಡು ಕಾದಂಬರಿಗಳಲ್ಲಿ ಚೋಮನದುಡಿ ವಾಸ್ತವವಾದಿ ಕಾದಂಬರಿಯಾದರೆ ಚೆಮ್ಮೀನು ರಮ್ಯ ವರ್ಗದ ಕಾದಂಬರಿಯಾಗಿದೆ. ಅದರೊಳಗೆ ಅಂತರ್ಗತವಾಗಿರುವ ಸಾಮಾಜಿಕ ಗೃಹೀತಗಳು ಮಾತ್ರ ಒಂದೇ ಆಗಿವೆ. ಎರಡು ಕಾದಂಬರಿಕಾರರ ಪ್ರಗತಿಪರತೆ ಮತ್ತು ವೈಚಾರಿಕತೆಯ ಹಿನ್ನೆಲೆಯಲ್ಲಿ ರೂಪಿತವಾಗುವ ಧೋರಣೆ ಹೇಗೆ ಕಾದಂಬರಿಗಳಲ್ಲಿ ವ್ಯಕ್ತಗೊಂಡಿದೆ ಎಂಬುದನ್ನು ಪರಿಶೀಲಿಸಲಾಗಿದೆ.

ಕಾರಂತರ ಚೋಮನದುಡಿ ಚಿಕ್ಕ ಕೃತಿಯಾದರೂ ಅದು "ದಲಿತ ಮಹಾಭಾರತ"ವೆಂಬ ರಾಗೌ ಅವರ ಹೇಳಿಕೆ ಸಮಂಜಸವಾಗಿದೆ. ಬದಲಾದ ಕಾಲಗತಿಯಲ್ಲಿ ಇಂದು ಅದರಲ್ಲಿ ಅನೇಕ ಲೋಪಗಳನ್ನು ಗುರುತಿಸಬಹುದಾದರೂ ಅಪೂರ್ವವಾದ ಕೃತಿಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅಂತೆಯೇ ತಕಳ್ಳಿಯವರ ಚೆಮ್ಮೀನು ವಿಶಾಲ ಹರಹನ್ನು ಅನೇಕ ಪಾತ್ರಗಳೊಡನೆ ಬಿತ್ತರಗೊಂಡ ಮಹತ್ವದ ಕೃತಿ. ಬೆಸ್ತರ ಜೀವನ ಸಂಗತಿಗಳನ್ನು ಮಿಥ್‌ಗಳೊಡನೆ ಮಿಕ್ಸ್‌ಮಾಡಿ ವೈಚಾರಿಕ ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡುವ ಕ್ರಮ ಮನೋಜ್ಞವಾದದ್ದು. ಈ ಕೃತಿಗಳ ಆಳವಾದ ಅಧ್ಯಯನ ಈ ನಿಬಂಧದಲ್ಲಿ ಸಾಧ್ಯವಾಗಿಲ್ಲ. ಇದರ ಬಗ್ಗೆ ಆಳವಾದ ವಿಸ್ತೃತವಾದ ತೌಲನಿಕ ಅಧ್ಯಯನದ ಅಗತ್ಯ ಇದೆ ಎಂದೆನಿಸುತ್ತದೆ.

✦✦✦✦✦✦✦

ಗ್ರಂಥಋಣ

೧) **ಕತ್ತಿಯಂಚಿನ ದಾರಿ**: ರಹಮತ್ ತರೀಕೆರೆ, ಅಭಿನವ ಪ್ರಕಾಶನ : ಬೆಂಗಳೂರು ೨೦೦೬.

೨) **ಕನ್ನಡ ಕಥನ ಸಾಹಿತ್ಯ: ಕಾದಂಬರಿ**: ಡಾ. ಜಿ.ಎಸ್. ಅಮೂರ : ಸಪ್ನ ಬುಕ್‌ಹೌಸ್: ಬೆಂಗಳೂರು ೨೦೦೬

೩) **ಚೋಮನದುಡಿ**: ಡಾ. ಶಿವರಾಮಕಾರಂತ : ಸಪ್ನ ಬುಕ್‌ಹೌಸ್: ಬೆಂಗಳೂರು ೨೦೦೭

೪) **ಕೆಂಪುಮೀನು (ಚೆಮ್ಮೀನು)** : ಅನುವಾದ : ನಾ.ಕಸ್ತೂರಿ: ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೮

೫) **ದಲಿತ ಕಥನ**: ಡಾ. ಮೊಗಳ್ಳಿ ಗಣೇಶ್: ಪ್ರಸಾರಂಗ: ಕನ್ನಡ ವಿಶ್ವವಿದ್ಯಾಲಯ:ಹಂಪಿ ೨೦೦೬

೬) **ದಲಿತ ಮಾರ್ಗ**: ಸಂಪಾದಕರು: ಅರವಿಂದ ಮಾಲಗತ್ತಿ: ಕನ್ನಡ ಪುಸ್ತಕ ಪ್ರಾಧಿಕಾರ: ಬೆಂಗಳೂರು ೨೦೦೨

೭) **ಭಾರತೀಯ ಜ್ಞಾನಪೀಠ ಸಾಹಿತ್ಯ ಪ್ರಶಸ್ತಿ ಪುರಸ್ಕೃತರು**: ಸಂಪಾದಕರು ಡಾ. ಸಾ.ಶಿ. ಮರುಳಯ್ಯ: ಸಾಹಿತ್ಯ ಅಕಾಡೆಮಿ: ಬೆಂಗಳೂರು ೨೦೦೬.

೮) **ಷಷ್ಟಿ ಸಂಪದ**: ಡಾ. ರಾಮೇಗೌಡ: ಸಂವಹನ ಪ್ರಕಾಶನ: ಮೈಸೂರು ೨೦೦೫.

೯) **ಶಿವರಾಮ ಕಾರಂತ**: ಸಂ. ಮಾಲಿನಿಮಲ್ಯ: ನವ ಕರ್ನಾಟಕ ಸಾಹಿತ್ಯ ಸಂಪದ: ಬೆಂಗಳೂರು ೨೦೦೧.

೧೦) **ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ**: ಬರಗೂರು ರಾಮಚಂದ್ರಪ್ಪ: ಪ್ರಕಾಶಕರು: ಅಂಕಿತ ಪುಸ್ತಕ: ಬೆಂಗಳೂರು–೨೦೦೧.